1. ಹೆಸರು:-.....
   ವಿಳಾಸ
   ಇ-ಮೇಲ್ ಐಡಿ
   ಸಹಿ.....ಅಥವಾ ಸದರಿಯವರಿಗೆ ಸಾಧ್ಯವಾಗದಿದ್ದಲ್ಲಿ
2. ಹೆಸರು:-.....
   ವಿಳಾಸ
   ಇ-ಮೇಲ್ ಐಡಿ
   ಸಹಿ.....

   ನನ್ನ/ ನಮ್ಮ ಪ್ರಾಕ್ಸಿಯಾಗಿ ಗುರುವಾರ, 15ನೇ ಅಕ್ಟೋಬರ್, 2020ರಂದು ಅಪರಾಹ್ನ 3.30ಕ್ಕೆ ನಿಗಮ ಕಛೇರಿ, ಬೆಳಕು ಭವನ, ಬೆಸ್ಕಾಂ, ಕೆ.ಆರ್ ವೃತ್ತ, ಬೆಂಗಳೂರು-560001 ರಲ್ಲಿ ಅಥವಾ ಮುಂದೂಡಲ್ಪಟ್ಟ ದಿನಗಳಲ್ಲಿ ಜರುಗಲಿರುವ ಕಂಪನಿಯ 15ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ನನ್ನ/ ನಮ್ಮ ಪರವಾಗಿ ಭಾಗವಹಿಸಿ ಈ ಕೆಳಗಿನ ನಿರ್ಣಯಗಳಿಗೆ ಮತ (ಚುನಾವಣೆಯಲ್ಲಿ) ಹಾಕಲು ನೇಮಕ ಮಾಡಿದ್ದೇವೆ.

ನಿರ್ಣಯ ಸಂಖ್ಯೆ.

1. 2019-20 ನೇ ಸಾಲಿನ ಆರ್ಥಿಕ ನಿರೂಪಣಾ ಪಟ್ಟಿಗಳು ಮತ್ತು ನಿರ್ದೇಶಕ ಮಂಡಳಿ ಹಾಗೂ ಲೆಕ್ಕ ಪರಿಶೋಧಕರ ವರದಿಯನ್ನು ಅನುಮೋದಿಸುವುದು.
2. ಶಾಸನಬದ್ಧ ಲೆಕ್ಕಪರಿಶೋಧಕರ ಸಂಭಾವನೆಯನ್ನು ನಿಗಧಿಪಡಿಸುವುದು.

3. ವೆಚ್ಚ ಪರಿಶೋಧಕರ ನೇಮಕಾತಿ ಮತ್ತು ಸಂಭಾವನೆಗಳಿಗೆ ಘಟನೋತ್ತರ ಅನುಮೋದನೆ ಪಡೆಯುವುದು.
4. ಅಧಿಕೃತ ಷೇರು ಬಂಡವಾಳವನ್ನು ₹1000.00 ಕೋಟಿಗಳಿಂದ ₹ 1250.00 ಕೋಟಿಗಳಿಗೆ ಹೆಚ್ಚಳಗೊಳಿಸುವ ಬಗ್ಗೆ.

ರೆವಿನ್ಯೂ ಸ್ಟ್ಯಾಂಪ್ ಲಗತ್ತಿಸುವುದು

ಸಹಿ ಮಾಡಿರುವ ದಿನಾಂಕ.....

ಷೇರುದಾರರ ಸಹಿ

ಪ್ರಾಕ್ಸಿದಾರರ ಸಹಿ

ಟಿಪ್ಪಣಿ: ಪ್ರಾಕ್ಸಿ ನಮೂನೆಯನ್ನು ಮಾನ್ಯ ಮಾಡಬೇಕಿದ್ದಲ್ಲಿ ನಮೂನೆಯನ್ನು ಸಂಪೂರ್ಣವಾಗಿ ಭರ್ತಿ ಮಾಡಿ ಕಂಪನಿಯ ನೋಂದಾಯಿತ ಕಛೇರಿಗೆ ಸಭೆ ಜರುಗುವ ಪೂರ್ವದಲ್ಲಿ ಸಲ್ಲಿಸಬೇಕು.

ಚಾ.ವಿ.ಸ.ನಿ.ನಿ.ಯ ಪಕ್ಷಿನೋಟ

ಸರ್ಕಾರದ ಆದೇಶ ಸಂಖ್ಯೆ ಇಎನ್ 98 ಪಿಎಸ್‌ಆರ್ 2004 ಬೆಂಗಳೂರು ದಿನಾಂಕ: 19.08.2004ರ ಅನ್ವಯ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತವನ್ನು ಮೈಸೂರಿನ ಕೇಂದ್ರ ಸ್ಥಾನವನ್ನಾಗಿಸಿ ಕಂಪನಿಯ ಕಾಯಿದೆ 1956ರ ಅನ್ವಯ ಅಸ್ತಿತ್ವಕ್ಕೆ ತರಲಾಗಿದೆ. ಹಿಂದಿನ ಮೆಸ್ಕಾಂ ಕಂಪನಿಯ ಆಡಳಿತದಲ್ಲಿದ್ದ 4 ಜಿಲ್ಲೆಗಳು ಅಂದರೆ ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ಹಾಸನದಲ್ಲಿನ ಗ್ರಾಹಕರಿಗೆ ವಿದ್ಯುತ್ ಸರಬರಾಜು ನೀಡಲು ಈ ಜಿಲ್ಲೆಗಳನ್ನು ಚಾ.ವಿ.ಸ.ನಿ.ನಿ.ಗೆ ವರ್ಗಾಯಿಸಲಾಗಿದೆ. ತದನಂತರದಲ್ಲಿ ಮಡಿಕೇರಿ ಜಿಲ್ಲೆಯನ್ನು ಸಹಾ ದಿನಾಂಕ:01.04.2006 ರಿಂದ ಅನ್ವಯವಾಗುವಂತೆ ಚಾ.ವಿ.ಸ.ನಿ.ನಿ ಆಡಳಿತದ ವ್ಯಾಪ್ತಿಗೆ ಒಳಪಡಿಸಿ ಸರ್ಕಾರವು ಆದೇಶ ಸಂಖ್ಯೆ ಇಎನ್ 95 ಪಿಎಸ್‌ಆರ್ 2005 ಬೆಂಗಳೂರು ದಿನಾಂಕ:29.03.2006 ರಂದು ಆದೇಶ ಹೊರಡಿಸಿದೆ.

ನಿಗಮವು ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದ್ದು ಇದರ ಆಡಳಿತ ಮಂಡಳಿಯ ನಿರ್ದೇಶಕರು ಸರ್ಕಾರದಿಂದ ನಾಮಕರಣಗೊಂಡಿರುತ್ತಾರೆ. ನಿಗಮದ ಕಾರ್ಯ ನಿರ್ವಹಣಾ ವ್ಯಾಪ್ತಿಯು 27772.82 ಚ.ಕಿ.ಮೀ ವಿಸ್ತೀರ್ಣ ಹೊಂದಿದ್ದು ₹81.55 ಲಕ್ಷಕ್ಕೂ ಹೆಚ್ಚಿನ ಜನಸಂಖ್ಯೆಗೆ ಸೇವೆ ಒದಗಿಸಲಾಗುತ್ತಿದೆ.

ಚಾ.ವಿ.ಸ.ನಿ.ನಿ.ಯು ದಿನಾಂಕ:01.06.2005 ರಿಂದ ವಿದ್ಯುತ್ ಸರಬರಾಜು ನಿಗಮವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಕರ್ನಾಟಕ ವಿದ್ಯುತ್ ಸುಧಾರಣಾ ಕಾಯಿದೆ 1999ರ ಅನ್ವಯ 33 ಕೆ.ವಿ. ಮತ್ತು ಅದರ ಕೆಳಗಿನ ಸಾಮರ್ಥ್ಯದ ಲೈನ್‌ಗಳು ಮತ್ತು ಸ್ಟೇಷನ್‌ಗಳು ಇದರ ವ್ಯಾಪ್ತಿಗೆ ಒಳಪಡುತ್ತವೆ.

ಕಂಪನಿಯ ಆಡಳಿತ ಮತ್ತು ನಿರ್ವಹಣಾ ವ್ಯವಸ್ಥೆ:

ನಿಗಮದ ವ್ಯಾಪ್ತಿಯಲ್ಲಿ 2 ವಲಯ, 4 ವೃತ್ತಗಳು, 18 ಕಾರ್ಯ ಮತ್ತು ಪಾಲನಾ ವಿಭಾಗಗಳು, 62 ಉಪ-ವಿಭಾಗಗಳು, 265 ಕಾರ್ಯ ಮತ್ತು ಪಾಲನಾ ಘಟಕಗಳು ಇರುತ್ತವೆ.

1. ಮೈಸೂರು ಕಾರ್ಯ ಮತ್ತು ಪಾಲನಾ ವೃತ್ತ ಕಛೇರಿಗೆ ಮೈಸೂರು ಕೇಂದ್ರ ಸ್ಥಾನವಾಗಿದ್ದು, ಈ ವೃತ್ತದ ಆಡಳಿತ ವ್ಯಾಪ್ತಿಗೆ ಎನ್.ಆರ್. ಮೊಹಲ್ಲಾ, ವಿ.ವಿ. ಮೊಹಲ್ಲಾ, ನಂಜನಗೂಡು, ಹುಣಸೂರು ಮತ್ತು ಕೆ.ಆರ್.ನಗರ ವಿಭಾಗಗಳು ಒಳಪಡುತ್ತವೆ.

2. ಚಾಮರಾಜನಗರ-ಕೊಡಗು ಕಾರ್ಯ ಮತ್ತು ಪಾಲನಾ ವೃತ್ತ ಕಛೇರಿಗೆ ಮೈಸೂರು ಕೇಂದ್ರ ಸ್ಥಾನವಾಗಿದ್ದು, ಈ ವೃತ್ತದ ಆಡಳಿತ ವ್ಯಾಪ್ತಿಗೆ ಚಾಮರಾಜನಗರ, ಕೊಳ್ಳೇಗಾಲ ಮತ್ತು ಮಡಿಕೇರಿ ವಿಭಾಗಗಳು ಒಳಪಡುತ್ತವೆ.

3. ಮಂಡ್ಯ ಕಾರ್ಯ ಮತ್ತು ಪಾಲನಾ ವೃತ್ತವು ಮಂಡ್ಯ ನಗರದಲ್ಲಿ ಸ್ಥಾಪಿತವಾಗಿದ್ದು ಈ ವೃತ್ತದ ಆಡಳಿತ ವ್ಯಾಪ್ತಿಗೆ ಮಂಡ್ಯ, ಮದ್ದೂರು, ಪಾಂಡವಪುರ, ನಾಗಮಂಗಲ ಮತ್ತು ಕೆ.ಆರ್.ಪೇಟೆ ವಿಭಾಗಗಳು ಒಳಪಡುತ್ತವೆ.

4. ಹಾಸನ ಕಾರ್ಯ ಮತ್ತು ಪಾಲನಾ ವೃತ್ತ ಕಛೇರಿಯ ಕೇಂದ್ರ ಸ್ಥಾನವು ಹಾಸನ ನಗರದಲ್ಲಿದ್ದು, ಈ ವೃತ್ತದ ಆಡಳಿತ ವ್ಯಾಪ್ತಿಗೆ ಹಾಸನ, ಚನ್ನರಾಯಪಟ್ಟಣ, ಹೊಳೆನರಸೀಪುರ, ಅರಸೀಕೆರೆ ಮತ್ತು ಸಕಲೇಶಪುರ ವಿಭಾಗಗಳು ಒಳಪಟ್ಟಿರುತ್ತವೆ.

5. ಕಾರ್ಯ ಮತ್ತು ಪಾಲನಾ ವಲಯ ಕಛೇರಿಯು ಮೈಸೂರು ನಗರದಲ್ಲಿದ್ದು ಮುಖ್ಯ ಇಂಜಿನಿಯರ್ ರವರು ವಲಯದ ಮುಖ್ಯಸ್ಥರಾಗಿರುತ್ತಾರೆ.

   ಈ ವಲಯದ ಆಡಳಿತ ವ್ಯಾಪ್ತಿಗೆ ನಿಗಮದ 3 ಕಾರ್ಯ ಮತ್ತು ಪಾಲನಾ ವೃತ್ತಗಳು ಅಂದರೆ ಮೈಸೂರು ವೃತ, ಚಾಮರಾಜನಗರ-ಕೊಡಗು ವೃತ್ತ, ಮಂಡ್ಯ ವೃತ್ತ ಒಳಪಟ್ಟಿರುತ್ತವೆ.

6. ಕಾರ್ಯ ಮತ್ತು ಪಾಲನಾ ವಲಯ ಕಛೇರಿಯು ಹಾಸನ ನಗರದಲ್ಲಿದ್ದು ಮುಖ್ಯ ಇಂಜಿನಿಯರ್ ರವರು ವಲಯದ ಮುಖ್ಯಸ್ಥರಾಗಿರುತ್ತಾರೆ.

ಈ ವಲಯದ ಆಡಳಿತ ವ್ಯಾಪ್ತಿಗೆ ನಿಗಮದ 1 ಕಾರ್ಯ ಮತ್ತು ಪಾಲನಾ ವೃತ್ತ ಅಂದರೆ ಹಾಸನ ವೃತ್ತ ಒಳಪಟ್ಟಿರುತ್ತವೆ.

ಎಲ್ಲಾ ಶಾಖೆ/ಉಪ ವಿಭಾಗ/ವಿಭಾಗ ಮತ್ತು ವೃತ್ತಗಳು ಮತ್ತು ವಲಯ ಕಛೇರಿಯು ನಿಗಮ ಕಛೇರಿಯ ಆಡಳಿತ ನಿರ್ವಹಣೆಗೆ ಒಳಪಟ್ಟಿದ್ದು ವ್ಯವಸ್ಥಾಪಕ ನಿರ್ದೇಶಕರು ಇದರ ಮುಖ್ಯಸ್ಥರಾಗಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರಿಗೆ–ನಿರ್ದೇಶಕರು (ತಾಂತ್ರಿಕ) ರವರು, ಮುಖ್ಯ ಆರ್ಥಿಕ ಅಧಿಕಾರಿ ರವರು, ದೈನಂದಿನ ಕಾರ್ಯನಿರ್ವಹಣೆಯಲ್ಲಿ ಸಹಾಯಕರಾಗಿರುತ್ತಾರೆ.

ನಿಗಮವು ವಿದ್ಯುತ್ ಸರಬರಾಜು ಕಾರ್ಯಕ್ಕೆ ಸಮರ್ಪಿತವಾಗಿದ್ದು ಅನೇಕ ಸುಧಾರಣ ಕಾರ್ಯಗಳನ್ನು ಈ ದಿಶೆಯಲ್ಲಿ ಕೈಗೊಂಡಿರುತ್ತದೆ. ವಿದ್ಯುತ್ ವಿತರಣಾ ನಷ್ಟವನ್ನು ಲೆಕ್ಕೀಕರಿಸಿ ಎನರ್ಜಿ ಆಡಿಟ್ ಮೂಲಕ ಮಾಡಲಾಗುತ್ತದೆ. ಅಲ್ಲದೆ ಪ್ರತಿ ಸ್ಥಾವರಕ್ಕೆ ವಿದ್ಯುತ್ ಮೀಟರ್ ಅಳವಡಿಸುವ ಕಾರ್ಯ ಪ್ರಗತಿಯಲ್ಲಿದೆ. ಈ ಕ್ರಮಕ್ಕೆ ಹಲವಾರು ಗ್ರಾಹಕರಿಂದ ವಿರೋಧ ವ್ಯಕ್ತವಾಗಿದ್ದಾಗ್ಯೂ ನಿಗಮವು ಈ ದಿಶೆಯಲ್ಲಿ ತನ್ನ ಗುರಿ ಸಾಧಿಸಲು ಕಾರ್ಯೋನ್ಮುಖವಾಗಿದೆ.

2019-20ನೇ ಸಾಲಿನ ನಿರ್ದೇಶಕರುಗಳ ವರದಿ

ಸದಸ್ಯರೇ,

1. ದಿನಾಂಕ 31ನೇ ಮಾರ್ಚ್ 2020ಕ್ಕೆ ಅಂತ್ಯಗೊಂಡಿರುವ ವರ್ಷದ ನಿಗಮದ ವ್ಯವಹಾರ ಮತ್ತು ಕಾರ್ಯಾಚರಣೆಗಳ 15ನೇ ವಾರ್ಷಿಕ ವರದಿಯನ್ನು ಮುಂದಿಡಲು ನಿರ್ದೇಶಕರುಗಳ ಮಂಡಳಿಗೆ ತುಂಬಾ ಸಂತೋಷವಾಗುತ್ತಿದೆ.

2. ನಿಗಮವು ವಿದ್ಯುತ್ ವಿತರಣಾ ಕ್ಷೇತ್ರದಲ್ಲಿ ಯಶಸ್ವಿಯಾಗಿ ಹದಿನೈದನೆಯ ವರ್ಷ ಪೂರೈಸಿದೆ. ನಿಗಮದ ಕೇಂದ್ರ ಸ್ಥಾನವು ಮೈಸೂರಿನಲ್ಲಿದ್ದು, ಮೈಸೂರು, ಹಾಸನ, ಮಂಡ್ಯ, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ.

3. **31.3.2020 ರ ಅಂತ್ಯಕ್ಕೆ ನಿಗಮದ ಸ್ಥಿತಿಗತಿಯ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.**

ವಿತರಣಾ ಮತ್ತು ಸರಬರಾಜಿನ ವಿಸ್ತೀರ್ಣ(ಚದರ ಕಿ.ಮೀ)	27772.82
ಜಿಲ್ಲೆಗಳು	05
ಒಟ್ಟು ಜನಸಂಖ್ಯೆ (2011 ರ ಜನಗಣತಿಯ ಪ್ರಕಾರ)	8155369
ಕ.ವಿ.ಪ್ರ.ನಿ.ನಿ ಗೆ ಒಳಪಡುವ 220 ಕೆ.ವಿ, 110 ಕೆ.ವಿ, 66 ಕೆ.ವಿ ಸಬ್ ಸ್ಟೇಷನ್‌ಗಳ ಸಂಖ್ಯೆ	241
33 ಕೆ.ವಿ. ಸಬ್ ಸ್ಟೇಷನ್‌ಗಳ ಸಂಖ್ಯೆ	04
ವಿತರಣ ಟ್ರಾನ್ಸ್‌ಫಾರ್ಮರ್‌ಗಳು	139942
ಎಲ್.ಟಿ. ಲೈನ್ಸ್‌ಗಳ ಉದ್ದ (ಸಿ.ಕಿ.ಮೀ)	354360.31
11 ಕೆ.ವಿ. ಲೈನ್ಸ್‌ಗಳ ಉದ್ದ (ಸಿ.ಕಿ.ಮೀ)	186681.97
33 ಕೆ.ವಿ ಲೈನ್ಸ್‌ಗಳ ಉದ್ದ (ಸಿ.ಕಿ.ಮೀ)	80.45

4. ಆರ್ಥಿಕ ಸಾಧನೆ

ವಿವರಗಳು	31.03.2020 ರ ಅಂತ್ಯಕ್ಕೆ (ರೂ. ಕೋಟಿಗಳಲ್ಲಿ)	31.03.2019 ರ ಅಂತ್ಯಕ್ಕೆ (ರೂ. ಕೋಟಿಗಳಲ್ಲಿ)
ಆದಾಯ		
ವಿದ್ಯುತ್ ಮಾರಾಟದಿಂದ ಬಂದಿರುವ ಆದಾಯ	4,296.79	4103.78
ಇತರೆ ಆದಾಯ	204.85	171.63
ಒಟ್ಟು ಆದಾಯ	**4,501.64**	**4275.41**
ವೆಚ್ಚ		
ವಿದ್ಯುತ್ ಖರೀದಿ	3,083.40	3067.79
ಸಿಬ್ಬಂದಿ ವೆಚ್ಚ	569.09	528.54
ಹಣಕಾಸು ವೆಚ್ಚಗಳು	159.88	184.19

ವಿವರಗಳು	31.03.2020ಕ್ಕೆ ಅಂತ್ಯವಾಗುವ ವರ್ಷ (₹ಕೋಟಿಗಳಲ್ಲಿ)	31.03.2019ಕ್ಕೆ ಅಂತ್ಯವಾಗುವ ವರ್ಷ (₹ಕೋಟಿಗಳಲ್ಲಿ)
ಸವಕಳಿ	234.38	206.01
ಇತರೆ ವೆಚ್ಚಗಳು	314.34	244.65
ಒಟ್ಟು ವೆಚ್ಚಗಳು	**4,361.09**	**4231.19**
ತೆರಿಗೆ ಪೂರ್ವ ಲಾಭ/ನಷ್ಟ ಮತ್ತು ನಿಯಂತ್ರಿತ ಸ್ವತ್ತುಗಳು	**140.55**	**44.23**
ಕಳೆಯುವುದು: ನಿಯಂತ್ರಿತ ಆದಾಯ	(506.00)	(353.68)
ತೆರಿಗೆ ಪೂರ್ವ ಲಾಭ (ನಷ್ಟ)	(365.44)	(309.45)
ಕಳೆಯುವುದು: ತೆರಿಗೆ ವಿಧಿಸಲು ಅವಕಾಶ	0.14	100.23
ವರ್ಷದ ನಿವ್ವಳ ಲಾಭ / ನಷ್ಟ	**(365.59)**	**(209.22)**
ಇತರ ಸಮಗ್ರ ಆದಾಯ	(1.04)	(0.13)
ವರ್ಷದ ಒಟ್ಟು ಸಮಗ್ರ ಆದಾಯ	**(366.63)**	**(209.35)**

5. ಲಾಭಾಂಶ

31.03.2020 ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಯಾವುದೇ ಲಾಭಾಂಶವನ್ನು ಮಂಡಳಿಯು ಪ್ರಸ್ತಾಪಿಸಿರುವುದಿಲ್ಲ.

ವಿದ್ಯುತ್ ಖರೀದಿ ವೆಚ್ಚ

ವಿದ್ಯುತ್ ಖರೀದಿ ವೆಚ್ಚವು ಹಿಂದಿನ ಸಾಲಿಗಿಂತ 2019-20 ರಲ್ಲಿ 0.51% (₹1560.70 ಲಕ್ಷಗಳಷ್ಟು) ಹೆಚ್ಚಾಗಿರುತ್ತದೆ. ಇದಕ್ಕೆ ಕೆಪಿಸಿಎಲ್ ಹೈಡಲ್ಸ್ ಪವರ್, ಆರ್ ಟಿ ಪಿ ಎಸ್ 1-7, ಯು.ಪಿ.ಸಿ.ಎಲ್ ಮತ್ತು ಎನ್‌ಸಿಇ ಸೌರಶಕ್ತಿ ಮೂಲಗಳಿಂದ ಖರೀದಿಸಲ್ಪಡುವ ವಿದ್ಯುತ್‌ನ ಹಂಚಿಕೆಯು ಹೆಚ್ಚಾಗಿರುವುದು ಕಾರಣವಾಗಿರುತ್ತದೆ.

ವಿದ್ಯುತ್ ಖರೀದಿ

2019-20ನೇ ಸಾಲಿನಲ್ಲಿ ₹3083.40 ಕೋಟಿ ವೆಚ್ಚದಲ್ಲಿ 7733.95 ಎಂ.ಯು ವಿದ್ಯುತ್‌ನ್ನು ಖರೀದಿಸಲಾಗಿದೆ.

ವಿದ್ಯುತ್ ಖರೀದಿ ವಿವರಗಳು

ಎ) ಚಾವಿಸನಿನಿಯು ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಇಎನ್ 131 ಪಿಎಸ್‌ಆರ್ 2003 ದಿನಾಂಕ: 10.05.2005 ರನ್ವಯ ಕೆಳಕಂಡ ವಿದ್ಯುತ್ ಉತ್ಪಾದಕರಿಂದ ವಿದ್ಯುತ್ ಖರೀದಿಸಿದೆ.

- ಕೇಂದ್ರ ಉತ್ಪಾದನಾ ಸ್ಟೇಷನ್‌ಗಳಾದ ಎನ್.ಟಿ.ಪಿ.ಸಿ, ಎನ್.ಟಿ.ಪಿ.ಸಿ ವಿ.ವಿ.ಎನ್.ಎಲ್, ಎನ್.ಎಲ್.ಸಿ, ಎನ್.ಪಿ.ಸಿ.ಐ.ಎಲ್, ಎನ್.ಟಿ.ಇ.ಸಿ.ಎಲ್, ಎನ್.ಟಿ.ಪಿ.ಎಲ್ ಮತ್ತು ಎನ್.ಟಿ.ಪಿ.ಸಿ ಎನ್. ಎಸ್.ಎಮ್ (ಬಂಡಲ್ಡ್ ಸೌರಶಕ್ತಿ).
- ರಾಜ್ಯ ಉತ್ಪಾದನಾ ಸ್ಟೇಷನ್‌ಗಳಾದ

  ಅ) ಕೆ.ಪಿ.ಸಿ.ಎಲ್-ಹೈಡಲ್, ಥರ್ಮಲ್

  ಆ) ರಾಯಚೂರು ಪವರ್ ಕಾರ್ಪೊರೇಷನ್ ಲಿ. - ಥರ್ಮಲ್

- ಪ್ರಮುಖ ಸ್ವತಂತ್ರ ವಿದ್ಯುತ್ ಉತ್ಪಾದಕರು- ಉಡುಪಿ ಪವರ್ ಕಂಪನಿ ಲಿಮಿಟೆಡ್
- ಸಾಂಪ್ರದಾಯಕವಲ್ಲದ ಮೂಲಗಳಾದ ಗಾಳಿ ಸೌರಶಕ್ತಿ ಮತ್ತು ಸಣ್ಣ ಜಲ ವಿದ್ಯುತ್‌ಗಳ ಸ್ವತಂತ್ರ ವಿದ್ಯುತ್ ಉತ್ಪಾದಕರು.
- ತೆಲಂಗಾಣ ಸ್ಟೇಟ್ ಪವರ್ ಜನರೇಷನ್ ಕಾರ್ಪೊರೇಷನ್ ಲಿಮಿಟೆಡ್ (ಪ್ರಿಯದರ್ಶಿನಿ ಜುರಾಲ)
- ದಾಮೋದರ ವ್ಯಾಲಿ ಕಾರ್ಪೊರೇಷನ್ ಲಿಮಿಟೆಡ್
- ಶಾರ್ಟ್ ಟರ್ಮ್ ಮತ್ತು ಮೀಡಿಯಂ ಟರ್ಮ್ (ಕೋ ಜೆನ್).

ಬಿ) ರಾಜ್ಯ ಸರ್ಕಾರವು ವಿವಿಧ ಮೂಲಗಳಿಂದ ದೊರಕುವ ವಿದ್ಯುತ್‌ನ್ನು ಎಸ್ಕಾಂಗಳ ನಡುವೆ ಹಂಚಿಕೆ ಮಾಡುವ ಬಗ್ಗೆ ಆದೇಶ ಹೊರಡಿಸುತ್ತದೆ. ಆದೇಶ ಸಂಖ್ಯೆ: ಇಎನ್ 84 ಪಿಎಸ್‌ಆರ್ 2019, ಬೆಂಗಳೂರು ದಿನಾಂಕ: 05.03.2019 ರನ್ವಯ ಆರ್ಥಿಕ ವರ್ಷ 2019-20ನೇ ಸಾಲಿಗೆ ಈ ಕೆಳಗಿನಂತೆ ವಿದ್ಯುತ್ ಹಂಚಿಕೆಯಾಗಿರುತ್ತದೆ.

ಕ್ರಮ ಸಂಖ್ಯೆ	ಮೂಲ	% ಪಾಲು ಹಂಚಿಕೆ	ವಿದ್ಯುತ್ ಖರೀದಿಯ ಸರಾಸರಿ ದರ ಪ್ರತಿ ಯುನಿಟ್‌ಗೆ ಪೈಸೆಯಲ್ಲಿ
1	**ಕೆಪಿಸಿಎಲ್**		
A	**ಕೆಪಿಸಿಎಲ್ ಹೈಡಲ್ ಸ್ಟೇಷನ್‌ಗಳು**		
i	ಶರಾವತಿ ವ್ಯಾಲಿ ಪ್ರಾಜೆಕ್ಟ್	21.9995%	51
ii	ಎಮ್ ಜಿ ಹೆಚ್ ಇ	29.9600%	146
iii	ಗೇರುಸೊಪ್ಪ	29.9600%	183
iv	ಕಾಳಿ ವ್ಯಾಲಿ ಪ್ರಾಜೆಕ್ಟ್	27.9600%	79
v	ವರಾಹಿ ವ್ಯಾಲಿ ಪ್ರಾಜೆಕ್ಟ್	29.9600%	100
vi	ಆಲಮಟ್ಟಿ ಡ್ಯಾಮ್	29.9600%	186
vii	ಭದ್ರ ಪವರ್ ಹೌಸ್	29.9600%	525
viii	ಕದ್ರ ಪವರ್ ಹೌಸ್	29.9600%	242
ix	ಕೊಡಸಳ್ಳಿ ಡ್ಯಾಮ್	29.9600%	164
x	ಘಟಪ್ರಭ ಡ್ಯಾಮ್	29.9600%	275
xi	ಶಿವನಸಮುದ್ರಂ	29.9600%	131
xii	ಮುನಿರಾಬಾದ್ ಪವರ್ ಹೌಸ್	29.9600%	107
B	**ಕೆಪಿಸಿಎಲ್ ಥರ್ಮಲ್ ಸ್ಟೇಷನ್‌ಗಳು**		
i	ಆರ್ ಟಿ ಪಿ ಎಸ್ ಯುನಿಟ್ 1 ರಿಂದ 7	2.7305%	477
ii	ಆರ್ ಟಿ ಪಿ ಎಸ್ ಯುನಿಟ್ 8	6.3500%	517
iii	ಬಿ ಟಿ ಪಿ ಎಸ್ ಯುನಿಟ್ 1	6.3500%	588
iv	ಬಿ ಟಿ ಪಿ ಎಸ್ ಯುನಿಟ್ 2	6.3500%	727
v	ಬಿ ಟಿ ಪಿ ಎಸ್ ಯುನಿಟ್ 3	6.3500%	782
vi	ಯರ್‌ಮರಸ್ ಟಿ ಪಿ ಎಸ್	6.3500%	780

ಕ್ರಮ ಸಂಖ್ಯೆ	ಮೂಲ	% ಪಾಲು ಹಂಚಿಕೆ	ವಿದ್ಯುತ್ ಖರೀದಿಯ ಸರಾಸರಿ ದರ ಪ್ರತಿ ಯುನಿಟ್‌ಗೆ ಪೈಸೆಯಲ್ಲಿ
2	**ಕೇಂದ್ರ ಉತ್ಪಾದನಾ ಸ್ಟೇಷನ್‌ಗಳು**		
a	ಎನ್.ಟಿ.ಪಿ.ಸಿ ಆರ್ ಎಸ್ ಟಿ ಪಿ-I & II	8.8500%	318
b	ಎನ್.ಟಿ.ಪಿ.ಸಿ ಆರ್ ಎಸ್ ಟಿ ಪಿ III	8.8500%	305
c	ಎನ್.ಟಿ.ಪಿ.ಸಿ-ತಲಚೆರ್	8.8500%	239
d	ಎನ್.ಟಿ.ಪಿ.ಸಿ- ಸಿಂಹಾದ್ರಿ ಟಿ ಪಿ ಎಸ್	8.8500%	441
e	ವಲ್ಲೂರ್	8.8500%	529
f	ಎನ್‌ಎಲ್‌ಸಿ - ಟಿ ಪಿ ಎಸ್ 2- ಸ್ಟೇಜ್ 1	8.8500%	332
g	ಎನ್‌ಎಲ್‌ಸಿ-ಟಿ ಪಿ ಎಸ್ 2- ಸ್ಟೇಜ್ 2	8.8500%	334
h	ಎನ್‌ಎಲ್‌ಸಿ - ಟಿ ಪಿ ಎಸ್ 1- ಎಕ್ಸ್‌ಪ್ಯಾನ್‌ಷನ್	8.8500%	348
i	ಎನ್‌ಎಲ್‌ಸಿ - ಟಿ ಪಿ ಎಸ್ 2- ಎಕ್ಸ್‌ಪ್ಯಾನ್‌ಷನ್	8.8500%	484
j	ಎನ್ ಟಿ ಪಿ ಎಲ್	8.8500%	405
k	ಮ್ಯಾಪ್ಸ್	8.8500%	225
l	ಕೈಗಾ ಯುನಿಟ್ 1&2	8.8500%	375
m	ಕೈಗಾ ಯುನಿಟ್ 3&4	8.8500%	375
n	ಕೂಡನ್ ಕೂಲಂ ಯುನಿಟ್ 1	8.8500%	420
o	ಕೂಡನ್ ಕೂಲಂ ಯುನಿಟ್ 2	8.8500%	420
p	ಡಿ ವಿ ಸಿ ಮೇಜ ಟಿ ಪಿ ಎಸ್	8.8500%	421
q	ಡಿವಿಸಿ ಕೋಡರ್ಮ ಟಿ ಪಿ ಎಸ್	8.8500%	411
r	ಕೂಡಿಗಿ	8.8500%	558
3. ಪ್ರಮುಖ ಸ್ವತಂತ್ರ ವಿದ್ಯುತ್ ಉತ್ಪಾದಕರು			
a	ಯುಪಿಸಿಎಲ್	10.0503%	616
4	**ಸಣ್ಣ ಸ್ವತಂತ್ರ ವಿದ್ಯುತ್ ಉತ್ಪಾದಕರು**		
a	ಕೋ ಜೆನರೇಷನ್	100% (ನೇರ ಖರೀದಿ)	516
b	ಬಯೋಮಾಸ್	100% (ನೇರ ಖರೀದಿ)	525
c	ಮಿನಿ ಹೈಡಲ್	100% (ನೇರ ಖರೀದಿ)	317
d	ವಿಂಡ್ ಮಿಲ್ಸ್	100% (ನೇರ ಖರೀದಿ)	356
e	ಸೋಲಾರ್ ಪಿ ವಿ ಪ್ಲಾಂಟ್ಸ್	100% (ನೇರ ಖರೀದಿ)	547

ಕ್ರಮ ಸಂಖ್ಯೆ	ಮೂಲ	% ಪಾಲು ಹಂಚಿಕೆ	ವಿದ್ಯುತ್ ಖರೀದಿಯ ಸರಾಸರಿ ದರ ಪ್ರತಿ ಯುನಿಟ್‌ಗೆ ಪೈಸೆಯಲ್ಲಿ
f	ಸೋಲಾರ್ ಎಸ್ ಇ ಸಿ ಐ	100% (ನೇರ ಖರೀದಿ)	450
5	**ಬಂಡಲ್ಡ್ ಪವರ್**		
	ಎನ್.ಟಿ.ಪಿ.ಸಿ - ವಿ ವಿ ಎನ್ ಎಲ್ ಸೌರಶಕ್ತಿ	11.5021%	1053
	ಎನ್.ಟಿ.ಪಿ.ಸಿ-ವಿ ವಿ ಎನ್ ಎಲ್- ಕಲ್ಲಿದ್ದಲು	11.5021%	404
a	ಎನ್.ಟಿ.ಪಿ.ಸಿ-ಎನ್ ಎಸ್ಎಮ್ - ಸೌರಶಕ್ತಿ	11.6000%	475
	ಎನ್.ಟಿ.ಪಿ.ಸಿ-ಎನ್ ಎಸ್ಎಮ್- ಕಲ್ಲಿದ್ದಲು	11.6000%	296
6	**ಮೀಡಿಯಂ ಟರ್ಮ್**		
ಚಿ	ಮೀಡಿಯಂ ಟರ್ಮ್	11.3968%	469
7	**ಹೊರ ರಾಜ್ಯಗಳು (ಹೈಡ್ರೊ)**		
ಚಿ	ಪ್ರಿಯದರ್ಶಿನಿ ಜುರಾಲ	8.8500%	647
ಛ	ಟಿ ಬಿ ಹೆಚ್ ಇ	8.8500%	90

ಆರ್ಥಿಕ ವರ್ಷ 2019-20 ಮತ್ತು 2018-19 ರ ಮೂಲವಾರು ವಿದ್ಯುತ್ ಖರೀದಿ ವೆಚ್ಚಗಳ ಹೋಲಿಕೆ ಪಟ್ಟಿ						
ಮೂಲ	2019-20			2018-19		
	ವಿದ್ಯುತ್ ಪ್ರಮಾಣ (ಎಮ್.ಯು)	ವೆಚ್ಚ ರೂ. (ಲಕ್ಷಗಳಲ್ಲಿ)	ಸರಾಸರಿ/ ಯುನಿಟ್‌ಗೆ (ರೂ.ಗಳಲ್ಲಿ)	ವಿದ್ಯುತ್ ಪ್ರಮಾಣ (ಎಮ್.ಯು)	ವೆಚ್ಚ ರೂ. (ಲಕ್ಷಗಳಲ್ಲಿ)	ಸರಾಸರಿ/ ಯುನಿಟ್‌ಗೆ (ರೂ.ಗಳಲ್ಲಿ)
1) ಕೆಪಿಸಿಎಲ್-ಹೈಡಲ್	3568.44	30992.76	0.87	2733.32	17159.00	0.63
2) ಕೆಪಿಸಿಎಲ್-ಥರ್ಮಲ್ (ಆರ್.ಪಿ. ಸಿ. ಎಲ್ ಒಳಗೊಂಡಂತೆ)	525.11	32852.15	6.26	780.93	47798.72	6.12
3) ಸಿ.ಜಿ.ಎಸ್ (ಎಸ್ ಡಬ್ಲ್ಯು ಆರ್ ಒಳಗೊಂಡಂತೆ)	1723.82	84332.74	4.89	2321.08	101373.72	4.37
4) ಐಪಿಪಿಗಳು (ಯು ಪಿ ಸಿ ಎಲ್)	304.47	22556.74	7.41	244.19	15165.63	6.21
5) ಎನ್.ಸಿ.ಇ	1339.60	53449.32	3.99	1174.72	49945.69	4.25
6) ಮಧ್ಯಮ ಮತ್ತು ಅಲ್ಪಾವಧಿ ವಿದ್ಯುತ್ ಖರೀದಿ (ಕೋ ಜೆನ್)	185.64	9037.77	4.87	312.41	13835.32	4.43
7) ಐ.ಇ.ಎಕ್ಸ್ /ಎ ಪಿ ಪಿ ಸಿ ಎಲ್	-157.92	-4815.35	3.05	-90.21	-4116.21	4.56

ಆರ್ಥಿಕ ವರ್ಷ 2019-20 ಮತ್ತು 2018-19 ರ ಮೂಲವಾರು ವಿದ್ಯುತ್ ಖರೀದಿ ವೆಚ್ಚಗಳ ಹೋಲಿಕೆ ಪಟ್ಟಿ						
ಮೂಲ	2019-20			2018-19		
	ವಿದ್ಯುತ್ ಪ್ರಮಾಣ (ಎಮ್.ಯು)	ವೆಚ್ಚ ರೂ. (ಲಕ್ಷಗಳಲ್ಲಿ)	ಸರಾಸರಿ/ ಯುನಿಟ್‌ಗೆ (ರೂ.ಗಳಲ್ಲಿ)	ವಿದ್ಯುತ್ ಪ್ರಮಾಣ (ಎಮ್.ಯು)	ವೆಚ್ಚ ರೂ. (ಲಕ್ಷಗಳಲ್ಲಿ)	ಸರಾಸರಿ/ ಯುನಿಟ್‌ಗೆ (ರೂ.ಗಳಲ್ಲಿ)
8) ಬಂಡಲ್ಡ್ ಪವರ್						
ಅ) ಎನ್.ಟಿ.ಪಿ.ಸಿ. ಎನ್ ಎಸ್ ಎಂ	332.68	14221.02	4.27	391.44	15229.55	3.89
ಆ) ಎನ್.ಟಿ.ಪಿ.ಸಿ. ವಿ.ವಿ.ಎನ್.ಎಲ್	49.89	3154.02	6.32	58.01	3384.71	5.83
9) ಕ್ಯಾಪ್ಟಿವ್ ಪವರ್ (ಕೆ.ಎಸ್.ಇ.ಬಿ.)	0.82	62.94	7.66	0.72	51.22	7.11
10) ಕೆಪಿಟಿಸಿಎಲ್ ಪ್ರಸರಣ ವೆಚ್ಚಗಳು	0.00	38842.29	0.00	0.00	31534.35	0.00
11) ಪಿಜಿಸಿಐಎಲ್ ಪ್ರಸರಣ ವೆಚ್ಚಗಳು	0.00	25592.02	0.00	0.00	21466.90	0.00
12) ಯುಐ ವೆಚ್ಚಗಳು	-3.31	185.86	-5.62	-5.33	3091.07	-57.99
13) ಇತರೆ ವೆಚ್ಚಗಳು	0.00	2999.57	0.00			
14) ಇತರೆ ರಾಜ್ಯ						
ಅ) ಪ್ರಿಯದರ್ಶಿನಿ ಜುರಾಲಾ	13.87	529.32	3.82	4.73	683.60	14.45
ಆ) ಟಿ.ಬಿ.ಹೆಚ್.ಇ.	2.82	71.21	2.52	3.15	0.00	0.00
15) ಎಸ್.ಎಲ್.ಡಿ.ಸಿ ವೆಚ್ಚಗಳು	0.00	171.00	0.00	0.00	301.00	0.00
16) ಸೋಲಾರ್ ರೂಫ್ ಟಾಪ್	13.39	376.70	2.81	10.23	369.08	3.61
17)ಅನಧಿಕೃತ ವಿದ್ಯುತ್ (ಎಮ್‌ಟಿಯಲ್ಲಿ ಕೋ-ಜೆನ್)	0.062	0.00	0.00	12.02	0.00	0.00
18) ಬ್ಯಾಂಕ್ಡ್ ಎನರ್ಜಿ	14.17	55.11	0.39	0.00	0.00	0.00
19) ಒಟ್ಟು	7913.56	314667.37	3.98	7951.41	317273.35	3.99
20) ವಿದ್ಯುತ್ ಬಾಕಿ ಹೊಂದಾಣಿಕೆ	-179.61	-6327.69	3.52	-297.224	-10494.37	3.53
21) ಉಪ ಮೊತ್ತ	7733.95	308339.68	3.99	7654.19	306778.98	4.01
22) ಹಿಂದಿನ ವರ್ಷಗಳ ಪ್ರಮಾಣ ಮತ್ತು ದರದ ಬದಲಾವಣೆ ಯಿಂದಾಗಿರುವ ವಿದ್ಯುತ್ ಬಾಕಿ ಹೊಂದಾಣಿಕೆ	0.00	0.00	0.00	0.00	0.00	0.00
23) ನಿವ್ವಳ ವಿದ್ಯುತ್ ಮತ್ತು ಮೊತ್ತ	7733.95	308339.68	3.99	7654.19	306778.98	4.01

ಸೌರ ಶಕ್ತಿಯಲ್ಲದ ನವೀಕರಿಸಬಹುದಾದ ಮೂಲಗಳಿಂದ ಪಡೆದ ಖರೀದಿಯ ಭಾಧ್ಯತೆ:

ಕ್ರಮ ಸಂಖ್ಯೆ	ವಿವರಗಳು	2019-20	2018-19
1	**ಒಟ್ಟು ವಿದ್ಯುತ್ ಖರೀದಿ ಪ್ರಮಾಣ ಎಂ.ಯು ಗಳಲ್ಲಿ**	**4177.77**	**4936.43**
2	ಸೌರ ಶಕ್ತಿಯಲ್ಲದ ನವೀಕರಿಸಬಹುದಾದ ಮೂಲಗಳಿಂದ ಪಿಪಿಎ ಅಡಿಯಲ್ಲಿ ಪಡೆದ ವಿದ್ಯುತ್ (ಎಮ್.ಯು)	496.808	552.314
3	ಸೌರ ಶಕ್ತಿಯಲ್ಲದ ನವೀಕರಿಸಬಹುದಾದ ಮೂಲಗಳಿಂದ ಪಿಪಿಎ ಅಡಿಯಲ್ಲಿ ಪಡೆದ ವಿದ್ಯುತ್ (ಎಮ್.ಯು) – ಎಪಿಪಿಸಿಯಲ್ಲಿ	6.320	5.541
4	ಸೌರ ಶಕ್ತಿಯಲ್ಲದ ನವೀಕರಿಸಬಹುದಾದ ಮೂಲಗಳಿಂದ ಅಲ್ಪಾವಧಿ/ ಮಧ್ಯಮಾವಧಿಗೆ ಪಡೆದ ವಿದ್ಯುತ್ (ಎಮ್.ಯು)	185.70	191.685
5	**RPO ಗುರಿಗೂ ಹೆಚ್ಚಾಗಿ ಖರೀದಿಸಿರುವ ಸೌರ ಶಕ್ತಿ ವಿದ್ಯುತ್**	**ಅನ್ವಯಿಸುವುದಿಲ್ಲ**	**ಅನ್ವಯಿಸುವುದಿಲ್ಲ**
6	**ಸೌರ ಶಕ್ತಿಯಲ್ಲದ ನವೀಕರಿಸಬಹುದಾದ ಮೂಲಗಳಿಂದ ವಿದ್ಯುತ್ ಖರೀದಿಯ ಬಾಧ್ಯತೆಯ ಪಾಲನೆ (%)**	**16.185 (ಟಿ-12%)**	**14.959 (ಟಿ-12%)**

ಇ) ಸೌರ ಶಕ್ತಿ ಖರೀದಿಯ ಭಾಧ್ಯತೆ

ಕ್ರಮ ಸಂಖ್ಯೆ	ವಿವರಗಳು	2019-20	2018-19
1	**ಒಟ್ಟು ವಿದ್ಯುತ್ ಖರೀದಿ ಪ್ರಮಾಣ (ಎಮ್.ಯು)**	**4177.77**	**4936.43**
2	ಪಿಪಿಎ ರಡಿ ಖರೀದಿಸಿದ ಸೌರ ವಿದ್ಯುತ್ ಶಕ್ತಿ (ಎಮ್.ಯು)	1019.338	296.185
3	ಎಸ್.ಆರ್.ಟಿ.ಪಿ.ವಿ. ಸ್ಥಾವರಗಳಿಂದ ಪಡೆದ ಸೌರ ವಿದ್ಯುತ್	13.388	10.233
4	**ಸೌರ ವಿದ್ಯುತ್ ಖರೀದಿ ಬಾಧ್ಯತೆಯ ಪಾಲನೆ (%)**	**24.719**	**16.436**
5	**ಪಿಪಿಎ ರಡಿ ಖರೀದಿಸಿದ ಸೌರ ವಿದ್ಯುತ್ ಶಕ್ತಿ (ಎಮ್.ಯು) ಮತ್ತು ಎಸ್.ಆರ್.ಟಿ.ಪಿ.ವಿ ಸೌರವಿದ್ಯುತ್‌ನ್ನು ಖರೀದಿ ಬಾಧ್ಯತೆಗೆ ಮಿತಗೊಳಿಸಿರುವುದು.**	**ಅನ್ವಯಿಸುವುದಿಲ್ಲ**	**ಅನ್ವಯಿಸುವುದಿಲ್ಲ**
6	ನವೀಕರಿಸಬಹುದಾದ ವಿದ್ಯುತ್ ಖರೀದಿ ಬಾಧ್ಯತೆಯನ್ನು ಮೀರಿ ಖರೀದಿಸಿದ ಸೌರ ವಿದ್ಯುತ್‌ನ್ನು ಸೌರಶಕ್ತಿಯಲ್ಲದ ಖರೀದಿ ಬಾಧ್ಯತೆಯಡಿ ಪರಿಗಣಿಸಿರುವುದು	ಅನ್ವಯಿಸುವುದಿಲ್ಲ	ಅನ್ವಯಿಸುವುದಿಲ್ಲ

ಟಿಪ್ಪಣಿ: ಒಟ್ಟು ವಿದ್ಯುತ್ ಅನ್ನು 5ನೇ ಅಮೆಂಡ್‌ಮೆಂಟ್ ರೆಗ್ಯುಲೇಷನ್ಸ್, 2018 ದಿನಾಂಕ: 15.02.2018 ರಂತೆ ಹೈಡಲ್ ಮೂಲದ ವಿದ್ಯುತ್ ಖರೀದಿಯನ್ನು ಹೊರತುಪಡಿಸಿ ಪರಿಗಣಿಸಲಾಗಿದೆ.

01.04.2019 ರಿಂದ ಅನ್ವಯವಾಗುವಂತೆ, ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಇಎನ್84 ಪಿಎಸ್ಆರ್ 2019, ಬೆಂಗಳೂರು, ದಿ: 05.03.2019 ರನ್ವಯ ಎಸ್ಕಾಂಗಳ ನಡುವೆ ವಿದ್ಯುತ್ ಹಂಚಿಕೆ ಮಾಡಲಾಗುತ್ತಿದೆ. ಆರ್ಥಿಕ ವರ್ಷದ ಅಂತ್ಯಕ್ಕೆ ಟ್ರಾನ್ಸ್‌ಮಿಷನ್ ಬಿಲ್ಲಿಂಗ್ ಸೆಂಟರ್, ಕೆಪಿಟಿಸಿಎಲ್‌ನಲ್ಲಿ ಜರುಗುವ ವಿದ್ಯುತ್ ಹೊಂದಾಣಿಕೆ ಸಭೆಯಲ್ಲಿ ವಾಸ್ತವಿಕ ವಿದ್ಯುತ್ ಪಡೆದಿರುವುದನ್ನು ಲೆಕ್ಕ ಹಾಕಿ ವಿದ್ಯುತ್ ಖರೀದಿ ವೆಚ್ಚವನ್ನು ಪಾವತಿಸಲಾಗುತ್ತದೆ.

ಆರ್ಥಿಕ ವರ್ಷ 2020ರ ಎಸ್ಕಾಂ ನಡುವಿನ ವಿದ್ಯುತ್ ಹೊಂದಾಣಿಕೆಗಳನ್ನು ಅಂತಿಮಗೊಳಿಸುವುದು ಬಾಕಿಯಿರುತ್ತದೆ. ಆದ ಕಾರಣ, ಮೇಲೆ ತಿಳಿಸಿರುವ ವಿವರಗಳು ತಾತ್ಕಾಲಿಕವಾಗಿರುತ್ತದೆ.

ತಾಂತ್ರಿಕ

ಅ) ಚಾವಿಸನಿನಿಯ ಕಾರ್ಯನಿರ್ವಹಣೆಯ ಚಿತ್ರಣ ಈ ಕೆಳಗಿನಂತಿವೆ.

ಕ್ರ ಸಂ	ವಿವರಗಳು	ಅಳತೆ	2019-20	2018-19
1	**ಸೇವಾ ಸಂಪರ್ಕಗಳು**			
ಅ	ಕುಡಿಯುವ ನೀರು ಪೂರೈಕೆ ಸ್ಥಾಪನೆಗಳು	ನಂ.	692	457
ಆ	ಗಂಗಾ ಕಲ್ಯಾಣ ಯೋಜನೆಗಳು	ನಂ.	2993	3081
2	**ಸಂಪರ್ಕಿತ ಪಂಪ್ ಸೆಟ್‌ಗಳು**			
ಅ	ಹೊಸ ಪಂಪ್ ಸೆಟ್‌ಗಳು	ನಂ.	18464	14682

ಆ) ಮಾರಾಟಗಾರರ ಅನುಮೋದನೆ:

ಐಎಸ್/ಸೆಸ್ಕ್ ನಿರ್ದಿಷ್ಟತೆಯಂತೆ ಇಲೆಕ್ಟ್ರಿಕಲ್ ಉಪಕರಣಗಳನ್ನು ಉತ್ಪಾದಿಸುವ ಸಂಸ್ಥೆಗಳಿಗೆ ಅನುಮೋದನೆ ನೀಡಲಾಗುತ್ತಿದೆ. ಚಾವಿಸನಿನಿಗೆ ಪೂರೈಕೆ ಮಾಡಿದ ಸಾಮಾಗ್ರಿಗಳ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು, ಸರಬರಾಜುದಾರರ ಅರ್ಹತೆಯನ್ನು ಕಂಡುಹಿಡಿಯುವುದು ಅವಶ್ಯಕವಾಗಿರುತ್ತದೆ. ಇಲ್ಲಿಯವರೆಗೆ ನಿಗಮದ ವತಿಯಿಂದ 125 ಸಂಸ್ಥೆಗಳಿಗೆ ಅನುಮೋದನೆ ನೀಡಲಾಗಿದೆ. ಅನುಮೋದಿತ ಮಾರಾಟಗಾರರ ಪಟ್ಟಿಯು ನಿಗಮದ ವೆಬ್‌ಸೈಟ್‌ನಲ್ಲಿ (www.cescmysore.karnataka.gov.in) ಲಭ್ಯವಿರುತ್ತದೆ.

ಇ) **ವಿದ್ಯುತ್ ಸ್ಥಗಿತದ ನಿಭಾವಣೆ :**

1. ಅನಿಯಮಿತ ವಿದ್ಯುತ್ ಸ್ಥಗಿತದ ಸಂದರ್ಭದಲ್ಲಿ ಸದರಿ ಅಪ್ಲಿಕೇಷನ್ 11 ಕೆ.ವಿ., ಫೀಡರ್ ನಿಲುಗಡೆ ಮಾಡುವ ಪ್ರಕ್ರಿಯೆಗೆ ನೆರವಾಗುತ್ತದೆ. ಅನಿಯಮಿತ ವಿದ್ಯುತ್ ವ್ಯತ್ಯಯವು ವಿದ್ಯುತ್ ಉತ್ಪಾದನಾ ಘಟಕಗಳ ಅಥವಾ ಪ್ರಮುಖ ವಿದ್ಯುತ್ ವಿತರಣಾ ಮಾರ್ಗಗಳ ವಿಫಲತೆಯಿಂದ ಉಂಟಾಗುತ್ತದೆ.

2. ರಾಜ್ಯದಲ್ಲಿ ಕೇಂದ್ರ ಸಂಸ್ಥೆಯಾಗಿರುವ ರಾಜ್ಯ ವಿದ್ಯುತ್ ರವಾನೆ ಕೇಂದ್ರವು (ಎಸ್ಎಲ್‌ಡಿಸಿ) ವಿದ್ಯುತ್ ಜಾಲದಲ್ಲಿನ ವಿದ್ಯುತ್ ಪೂರೈಕೆ ಮತ್ತು ವಿದ್ಯುತ್ ಒತ್ತಡವನ್ನು ಸರಿದೂಗಿಸುವ ಜವಾಬ್ದಾರಿಯನ್ನು ಹೊಂದಿರುತ್ತದೆ. ಇಂತಹ ಸಂದರ್ಭಗಳಲ್ಲಿ ರಾಜ್ಯ ವಿದ್ಯುತ್ ರವಾನೆ ಕೇಂದ್ರವು ವಿದ್ಯುತ್ ಉತ್ಪಾದನೆಯಲ್ಲಿ ಕೊರತೆ ಬಗ್ಗೆ ಮಾಹಿತಿ ನೀಡುವುದಲ್ಲದೆ ಉಳಿಕೆ ವಿದ್ಯುತ್ ಜಾಲದಲ್ಲಿ ಅಗತ್ಯವಿರುವ ವಿದ್ಯುತ್ ಒತ್ತಡದ ಬಗ್ಗೆ ಪರಿಹಾರ ಒದಗಿಸುತ್ತದೆ. ರಾಜ್ಯ ವಿದ್ಯುತ್ ರವಾನೆ ಕೇಂದ್ರವು ರಾಜ್ಯದಲ್ಲಿನ ಪ್ರತಿ ವಿದ್ಯುತ್ ವಿತರಣಾ ಕಂಪನಿಗಳಿಗೆ ಜಾಲದಲ್ಲಿನ ಹೆಚ್ಚಿನ ಒತ್ತಡವನ್ನು ನಿವಾರಿಸಲು ಮತ್ತು ಅಗತ್ಯವಿರುವ ವಿದ್ಯುತ್ ಒದಗಿಸುವ ಸಂಬಂಧ 11ಕೆ.ವಿ., ಫೀಡರ್‌ಗಳಿಗೆ ವಿದ್ಯುತ್ ಸ್ಥಗಿತಗೊಳಿಸಲು ಕೇಳುತ್ತದೆ.

3. ಕರ್ನಾಟಕದಲ್ಲಿನ 11 ಕೆ.ವಿ., ಫೀಡರ್ ಹಂತದವರೆಗಿನ ಇಡೀ ವಿದ್ಯುತ್ ವ್ಯವಸ್ಥೆಗೆ ಸ್ಕಾಡಾ ಸಿಸ್ಟಂನ್ನು ಅಳವಡಿಸಲಾಗಿದೆ. ಈ ಅಂಕಿಅಂಶಗಳನ್ನು 10 ಸೆಕೆಂಡ್ ಕಾಲದ ಅಂತರದಲ್ಲಿ ಸಂಗ್ರಹಿಸಲಾಗುವುದಲ್ಲದೆ ಅದನ್ನು ಪ್ರತಿ ನಿಮಿಷದ ಕಾಲಾಂತರದಲ್ಲಿ ಶೇಖರಿಸಲಾಗುತ್ತದೆ. ವಿದ್ಯುತ್ ಸ್ಥಗಿತದ ಕಾಲಾವಧಿ ಮತ್ತು ವಿದ್ಯುತ್ ವ್ಯತ್ಯಯದ ಸಂಖ್ಯೆ ಒಳಗೊಂಡಂತೆ ಫೀಡರ್‌ಗಳ ವಿದ್ಯುತ್ ಸ್ಥಗಿತದ ಇತಿಹಾಸವನ್ನು ಗಮನಿಸಿದ್ದಲ್ಲಿ, ಈ ಅಪ್ಲಿಕೇಷನ್ ಫೀಡರ್ಸ್‌ಗಳ ಆಯ್ಕೆ ಮಾಡುವುದಲ್ಲದೆ ಒಂದೇ ಕಾಲಾವಧಿಯಲ್ಲಿ ವಿದ್ಯುತ್ ಸ್ಥಗಿತಗೊಂಡಿರುವ ಫೀಡರ್‌ಗಳ ಮತ್ತು ಅದೇ ರೀತಿ ಪ್ರತಿ ಫೀಡರ್ ಹೊಂದಿರುವ ವಿದ್ಯುತ್ ವ್ಯತ್ಯಯದ ಸಂಖ್ಯೆಯನ್ನು ಸಹ ತಿಳಿಸುತ್ತದೆ.

4. ಅಲ್ಲದೆ ಮೇಲಿನ ಸಂದರ್ಭದಲ್ಲಿ, ರಾಜ್ಯ ವಿದ್ಯುತ್ ರವಾನೆ ಕೇಂದ್ರ ಮತ್ತು ವಿತರಣಾ ನಿಯಂತ್ರಣ ಕೇಂದ್ರ, ಚಾವಿಸನಿನಿ., ನಡುವೆ ವಿದ್ಯುತ್ ಜಾಲದ ಸ್ಥಿರತೆಗಾಗಿ ಅಲ್ಲದೆ ಗ್ರಿಡ್ ಕೋಡ್ ಪಾಲನೆಗಾಗಿ ಫೀಡರ್‌ಗಳ ಆಯ್ಕೆಯಲ್ಲಿ ಮತ್ತು ವಿದ್ಯುತ್ ಸ್ಥಗಿತಗೊಳಿಸುವಲ್ಲಿ ಉತ್ತಮ ಸಹಯೋಗದ ಅಗತ್ಯವಿರುತ್ತದೆ.

5. ಈ ಅಪ್ಲಿಕೇಷನ್ ಚಾವಿಸನಿನಿ.,ಯ ವ್ಯಾಪ್ತಿ ಪ್ರದೇಶದಲ್ಲಿ ಬರುವ ಎಲ್ಲಾ ಫೀಡರ್‌ಗಳನ್ನು ವ್ಯಾಪ್ತಿಗೊಳಪಡಿಸುವ ಸಾಮರ್ಥ್ಯ ಹೊಂದಿರಬೇಕು.

   i. ಚಾವಿಸನಿನಿ., ಯ ವ್ಯಾಪ್ತಿ ತೆರೆದಿಟ್ಟಿರುವ ಇಂಟರ್‌ಫೇಸ್ ಮುಖಾಂತರ ಅವರುಗಳು ಶಿಷ್ಟಾಚಾರದ ಬಗ್ಗೆ ತಿಳಿಯಲು ಮತ್ತು ಜೇಷ್ಠತಾ ಯಾದಿಯಲ್ಲಿ ಮಾರ್ಪಾಡು ಮಾಡಲು ಸಾಧ್ಯವಾಗುವುದಲ್ಲದೆ ವಿದ್ಯುತ್ ಸ್ಥಗಿತಕ್ಕೆ ಆಯ್ಕೆ ಮಾಡಲಾಗಿರುವ 11 ಕೆ.ವಿ., ಫೀಡರ್‌ಗಳ ವಿವೇಚನೆಯಿಲ್ಲದೆ ಆಯ್ಕೆ ಮಾಡುವಲ್ಲಿ ಉಪಯೋಗಿಸಲಾಗಿರುವ ತರ್ಕದ ಬಗ್ಗೆ ತಿಳಿಯಬಹುದಾಗಿರುತ್ತದೆ.

   ii. ಈ ಕಾರ್ಯಸೂಚಿಯು ಪ್ರಸ್ತುತ ಹೆಚ್ಚುವರಿ/ಕಡಿಮೆ ಪ್ರಮಾಣದ ವಿದ್ಯುತ್ ಪಡೆದಿರುವಿಕೆಯನ್ನು ಗಮನದಲ್ಲಿಟ್ಟುಕೊಂಡು ಚಾವಿಸನಿನಿ.,ಯು ಎಷ್ಟು ಪ್ರಮಾಣದ ವಿದ್ಯುತ್ತನ್ನು ಸ್ಥಗಿತಗೊಳಿಸಬೇಕು ಎಂಬುದನ್ನು ತಿಳಿಸುತ್ತದೆ.

   iii. ಪ್ರತಿ ಹೆಜ್ಜೆಯಲ್ಲಿಯೂ ಸಂಬಂಧಿಸಿದ ಮಧ್ಯಸ್ಥಗಾರರಿಗೆ ಎಸ್.ಎಂ.ಎಸ್.,ಮತ್ತು ಇ-ಮೇಲ್ ಮುಖಾಂತರ ಸಂಪರ್ಕಿಸುತ್ತದೆ.

   iv. ಚಾವಿಸನಿನಿಯು ತನ್ನ ವಿದ್ಯುತ್ ವಿತರಣಾ ಪ್ರದೇಶದಲ್ಲಿನ ಪ್ರತಿ 11 ಕೆ.ವಿ., ಫೀಡರ್‌ನಲ್ಲಿನ ಒಟ್ಟು ವಿದ್ಯುತ್ ಸ್ಥಗಿತದ ಕಾಲಾವಧಿ ಮತ್ತು ವಿದ್ಯುತ್ ವ್ಯತ್ಯಯದ ಸಂಖ್ಯೆಯ ಚಾರಿತ್ರಿಕ ಮಾಹಿತಿಯನ್ನು ಪಡೆದುಕೊಳ್ಳಲು ಸಾಧ್ಯವಿರುತ್ತದೆ.

   v. ಕಾಲ ಕಾಲಕ್ಕೆ ಚಾವಿಸನಿನಿಗೆ ಅಗತ್ಯವಿರುವ ವರದಿಗಳನ್ನು ರಚಿಸಿಕೊಡುತ್ತದೆ.

   vi. ಈ ಸಾಫ್ಟ್‌ವೇರ್ ರಚನೆಯ ಮೂರನೇ ಸಾಫ್ಟ್‌ವೇರ್ ಇಂಟಿಗ್ರೇಷನ್ ಸಂಸ್ಥೆಗಳಾದ ಟಿ.ಆರ್.ಎಂ, ಪಿ.ಜಿ.ಆರ್.ಎಸ್ ಮತ್ತು ಇತರೆ ಸಂಬಂಧಿತ ಸಿಸ್ಟಂಗಳಿಗೆ ಅಳವಡಿಸಲು ಅವಕಾಶವನ್ನು ಹೊಂದಿರುತ್ತದೆ.

ಈ) ನ್ಯಾಷನಲ್ ಪವರ್ ಪೋರ್ಟಲ್ (ಎನ್.ಪಿ.ಪಿ) ಮುಖಾಂತರ ಗ್ರಾಮೀಣ ಫೀಡರ್‌ಗಳ ಮೇಲ್ವಿಚಾರಣೆ :

ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುತ್ ಲಭ್ಯತೆ ಮತ್ತು ಗುಣಮಟ್ಟದ ವಿದ್ಯುತ್ ಪೂರೈಕೆ ಬಗ್ಗೆ ತಿಳಿಯಲು ಭಾರತ ಸರ್ಕಾರದ ಇಂಧನ ಸಚಿವಾಲಯವು ಅಂಕಿ ಅಂಶಗಳನ್ನು 11 ಕೆ.ವಿ., ಗ್ರಾಮಾಂತರ ಫೀಡರ್‌ಗಳಿಂದ ನ್ಯಾಷನಲ್ ಪವರ್ ಪೋರ್ಟಲ್‌ಗೆ ಪಡೆಯಲು ನಿರ್ಧರಿಸಿರುತ್ತದೆ. ಪ್ರಾಯೋಗಿಕ ಯೋಜನೆಯೆಂಬುದಾಗಿ, ಕರ್ನಾಟಕವೂ ಸೇರಿದಂತೆ ಯಾವ ರಾಜ್ಯಗಳಲ್ಲಿ ಈಗಾಗಲೇ ಕೇಂದ್ರ ಸ್ಥಳ (ಸ್ಕಾಡಾ) ಗಳಲ್ಲಿ ಅಂಕಿ ಅಂಶ ಸಂಗ್ರಹಿಸಲಾಗುತ್ತಿದೆಯೋ ಅಂತಹ ರಾಜ್ಯಗಳಲ್ಲಿ ಅಂಕಿ ಅಂಶಗಳನ್ನು ಕೂಡಲೇ ನ್ಯಾಷನಲ್ ಪವರ್ ಪೋರ್ಟಲ್‌ಗೆ ತರಲು ಪೈಲಟ್ ಯೋಜನೆ ಮುಖಾಂತರ ನಿರ್ಧರಿಸಲಾಗಿದೆ. ಇದನ್ನು

ಸಾಧಿಸಲು ಮಾಸ್ಟರ್ ಡಾಟಾವನ್ನು ಎನ್.ಐ.ಸಿ., ರವರಿಗೆ ಒದಗಿಸಲಾಗಿದ್ದು ಮತ್ತು ಅಂಗೀಕಾರದ ನಂತರ ಪ್ರತಿ ಮಾಹೆಯ ವ್ಯವಹಾರಿಕ ಅಂಕಿಅಂಶಗಳನ್ನು ಎನ್.ಪಿ.ಪಿ.ಗೆ ಸಾಗಿಸಲಾಗಿರುತ್ತದೆ.

ಉ) ಚಾವಿಸನಿನಿ,ಯಲ್ಲಿ ವಿದ್ಯುತ್ ಸ್ಥಗಿತದ ನಿಭಾವಣೆ ವ್ಯವಸ್ಥೆ (ಊರ್ಜಾ ಮಿತ್ರ) ಯನ್ನು ಕಾರ್ಯಗತಗೊಳಿಸುವ ಬಗ್ಗೆ

ಊರ್ಜಾ ಮಿತ್ರವು ಇಂಧನ ಸಚಿವಾಲಯ, ಭಾರತ ಸರ್ಕಾರದ ಒಂದು ಉಪಕ್ರಮವಾಗಿದ್ದು, ನಿಯಮಿತ ಮತ್ತು ಅನಿಯಮಿತ ವಿದ್ಯುತ್ ಸ್ಥಗಿತಗಳು ಹಾಗೂ ಸ್ಥಗಿತದ ಮಾಹಿತಿಗಳನ್ನು ಎಸ್.ಎಂ.ಎಸ್. ಸಹಾಯದಿಂದ ಗ್ರಾಹಕರಿಗೆ ಒದಗಿಸುವ ವೆಬ್ ಆಧಾರಿತ ಫ್ಲಾಟ್ ಫಾರಂ ಅನ್ನು ಒದಗಿಸುತ್ತದೆ. ಇದು ಕ್ಷೇತ್ರ ಸಿಬ್ಬಂದಿ ಮತ್ತು ಗ್ರಾಹಕರಿಗಾಗಿ ಮೊಬೈಲ್ ಅಪ್ಲಿಕೇಷನ್ ಸೌಲಭ್ಯ ಹೊಂದಿದ್ದು, ವಿದ್ಯುತ್ ಸ್ಥಗಿತದ ವಿವರಗಳು, ವಿಸ್ತರಣೆಗಳು, ರದ್ದುಗಳು (ಕ್ಷೇತ್ರದ ಕಡೆ) ಹಾಗೂ ಸ್ಥಗಿತದ ವರದಿ (ಗ್ರಾಹಕರಿಗಾಗಿ) ಗಳ ಸೌಲಭ್ಯವನ್ನು ಒದಗಿಸಿರುತ್ತದೆ. ಇದು ಕಾಲ್‌ಸೆಂಟರ್, ಸೆಸ್ಕ್ ಕ್ಷೇತ್ರ ಸಿಬ್ಬಂದಿ ಹಾಗೂ ಸೆಸ್ಕ್ ಗ್ರಾಹಕರ ನಡುವೆ ಕೊಂಡಿಯನ್ನು ನಿರ್ಮಿಸಿರುತ್ತದೆ.

ಊರ್ಜಾ ಮಿತ್ರವು ಆರ್.ಇ.ಸಿ., ಯಿಂದ ಅಭಿವೃದ್ಧಿ ಹೊಂದಿರುವ ಒಂದು ಏಕೈಕ ಪ್ಲಾಟ್‌ಫಾರಂ ಆಗಿದ್ದು ಗ್ರಾಮಾಂತರ ಮತ್ತು ನಗರ ಪ್ರದೇಶಗಳ ಎಲ್ಲಾ ವಿಧದ ವಿದ್ಯುತ್ ಸ್ಥಗಿತದ ಬಗ್ಗೆ ಪ್ರಸಾರ ಮಾಡುತ್ತದೆ.

ಚಾವಿಸನಿನಿ.ವು ಊರ್ಜಾ ಮಿತ್ರವನ್ನು ಕಾರ್ಯಗತಗೊಳಿಸಿದ್ದು, ವಿದ್ಯುತ್ ಸ್ಥಗಿತದ ಮಾಹಿತಿಯನ್ನು ಈ ಪೋರ್ಟಲ್ ಮುಖಾಂತರ ಪ್ರಸಾರ ಮಾಡುತ್ತಿದೆ..

ಊ) ಚಾವಿಸನಿನಿಯಲ್ಲಿ ಸಾರ್ವಜನಿಕರ ಕುಂದುಕೊರತೆಗಳ ನಿವಾರಣಾ ವ್ಯವಸ್ಥೆ (ಪಿ.ಜಿ.ಆರ್.ಎಸ್)

- ಚಾವಿಸನಿನಿ.,ಯ ಸಹಾಯವಾಣಿ "1912" ರ ಮುಖಾಂತರ 24X7 ಅವಧಿಯಲ್ಲಿಯೂ ಚಾವಿಸನಿನಿ.,ಯ ವಿದ್ಯುತ್ ಗ್ರಾಹಕರು ತಮ್ಮ ದೂರುಗಳನ್ನು ನೋಂದಾಯಿಸಿಕೊಳ್ಳಬಹುದು.
- ಅಂತರ್ಜಾಲ ಆಧಾರಿತ ಪಿಜಿಆರ್‌ಎಸ್ (ಸಾರ್ವಜನಿಕರ ಕುಂದುಕೊರತೆಗಳ ನಿವಾರಣಾ ವ್ಯವಸ್ಥೆ) ತಂತ್ರಾಂಶವನ್ನು ಯಶಸ್ವಿಯಾಗಿ ಅಳವಡಿಸಲಾಗಿದ್ದು ದಿನಾಂಕ: 22.09.2015 ರಿಂದ ತೃಪ್ತಿಕರವಾಗಿ ಕಾರ್ಯನಿರ್ವಹಿಸುತ್ತಿದ್ದು ಅದು ಗ್ರಾಹಕರ ಮೇಲ್ವಿಚಾರಣಾ ಕೇಂದ್ರಗಳಲ್ಲಿ ತ್ವರಿತ ದೂರು ನೋಂದಾವಣೆ ಮತ್ತು ನಿವಾರಣಾ ಕಾರ್ಯವನ್ನು ನಿರ್ವಹಿಸಲು ಸಹಕಾರಿಯಾಗಿದೆ.
- ಅಂತರ್ಜಾಲ ವಿಳಾಸ **https://cescmysorepgrs.com** ಆಗಿರುತ್ತದೆ. ಗ್ರಾಹಕರು ದೂರು ನೋಂದಾವಣೆಯನ್ನು ವಿವಿಧ ಮೂಲಗಳಿಂದ ಅಂದರೆ, ಸಹಾಯವಾಣಿ, ಎಸ್.ಎಂ.ಎಸ್., ಇ-ಮೇಲ್, ಅಂತರ್ಜಾಲ, ವ್ಯಾಟ್ಸಾಪ್, ಫೇಸ್‌ಬುಕ್, ಟ್ವೀಟರ್‌ನಲ್ಲಿ ಮಾಡಬಹುದಾಗಿರುತ್ತದೆ ಮತ್ತು ತಂತ್ರಾಂಶದಲ್ಲಿ ಗ್ರಾಹಕರ ಇತಿಹಾಸವನ್ನು ಶೇಖರಿಸಿಡುವ ಅವಕಾಶವನ್ನು ಕಲ್ಪಿಸಲಾಗಿರುತ್ತದೆ.
- ಗ್ರಾಹಕರ ಸ್ನೇಹಿ ಕೇಂದ್ರದಲ್ಲಿ ಸ್ವೀಕರಿಸಲಾಗುವ ದೂರನ್ನು ತಕ್ಷಣವೇ ತಂತ್ರಾಂಶದಲ್ಲಿ ನೋಂದಾಯಿಸಿಕೊಳ್ಳಲಾಗುವುದು ಮತ್ತು ಸಿಸ್ಟಂನಲ್ಲಿ ವಿಕಸನಗೊಳಿಸಲಾಗಿರುವ ಡಾಕೆಟ್ ಸಂಖ್ಯೆಗಳನ್ನು ಏಕಕಾಲದಲ್ಲಿ ಗ್ರಾಹಕರಿಗೆ, ಸಂಬಂಧಪಟ್ಟ ಉಪವಿಭಾಗಾಧಿಕಾರಿಗಳಿಗೆ/ ಶಾಖಾಧಿಕಾರಿಗಳಿಗೆ ಅಥವಾ ಸ್ಥಳಿಯ ಸೇವಾ ಕೇಂದ್ರಗಳಿಗೆ ಎಸ್.ಎಂ.ಎಸ್ ಮುಖಾಂತರ ಅವರುಗಳ ಮೊಬೈಲ್ ಸಂಖ್ಯೆಗಳಿಗೆ ಸ್ವಯಂಚಾಲಿತವಾಗಿ ತಿಳಿಸುತ್ತದೆ.
- ದೂರು ನಿವಾರಣೆಯಾದ ಕೂಡಲೇ, ದೂರಿನ ಸ್ಥಿತಿಗತಿಯನ್ನು ಸಂಬಂಧಪಟ್ಟ ಉಪ ವಿಭಾಗಾಧಿಕಾರಿ/ಶಾಖಾಧಿಕಾರಿ/ಸ್ಥಳಿಯ ಸೇವಾ ಕೇಂದ್ರ ಅಥವಾ ಗ್ರಾಹಕರ ಸ್ನೇಹಿ

ಕಾರ್ಯನಿರ್ವಾಹಕರು ದೂರನ್ನು ನೀಡಿದವರಿಂದ ಆ ಬಗ್ಗೆ ದೃಢಪಡಿಸಿಕೊಂಡು ಡಾಕೆಟ್ಟನ್ನು ಮುಕ್ತಾಯಗೊಳಿಸುತ್ತಾರೆ. ಅಂತರ್ ಜಾಲದಲ್ಲಿ ಗ್ರಾಹಕರು ತಮ್ಮ ದೂರಿನ ಸ್ಥಿತಿಗತಿಯ ಬಗ್ಗೆ ತಿಳಿಯಬಹುದಾಗಿರುತ್ತದೆ.

- ದಿನಾಂಕ: 06.07.2016 ರಿಂದ ಚಾವಿಸನಿನಿ.,ಯ ಸಹಾಯ ದೂರವಾಣಿ ಸಂಖ್ಯೆ "1912" ಶುಲ್ಕ ರಹಿತವಾಗಿರುತ್ತದೆ.

ಯೋಜನೆಗಳು

ಚಾಲ್ತಿಯಲ್ಲಿರುವ ಕಾಮಗಾರಿಗಳು:

ಡಿ-ಸೆಂಟ್ರಲೈಸ್ಡ್ ಡಿಸ್ಟ್ರಿಬ್ಯೂಟೆಡ್ ಜನರೇಶನ್(ಡಿಡಿಜಿ):

ವಿದ್ಯುತ್ ಗ್ರಿಡ್ ಸಂಪರ್ಕವನ್ನು ಪರಿಣಾಮಕಾರಿ ವೆಚ್ಚದಲ್ಲಿ ನೀಡಲು ಸಾಧ್ಯವಾಗದ ಅರಣ್ಯ ಪ್ರದೇಶಗಳ ವ್ಯಾಪ್ತಿಯಲ್ಲಿರುವ ದೂರದ ಹಳ್ಳಿಗಳು / ವಾಸಸ್ಥಾನಗಳಿಗೆ ವಿದ್ಯುತ್ ಒದಗಿಸುವ ಉದ್ದೇಶದಿಂದ ಡಿಸೆಂಟ್ರಲೈಸ್ಡ್ ಡಿಸ್ಟ್ರಿಬ್ಯೂಟೆಡ್ ಜನರೇಶನ್ (ಡಿಡಿಜಿ)ಅನ್ನು ಡಿಡಿಯುಜಿಜೆವೈ (XI ಯೋಜನೆಯಡಿ ಹಿಂದಿನ ಯೋಜನೆಯಾದ ಆರ್‌ಜಿಜಿವಿವೈ ಯೋಜನೆ)ರಡಿ ವಿದ್ಯುತ್ ಸಚಿವಾಲಯ, ಭಾರತ ಸರ್ಕಾರವು ರೂಪಿಸಿರುತ್ತದೆ.

ರಾಷ್ಟ್ರೀಯ ವಿದ್ಯುತ್ ನೀತಿಯಡಿ ಮನೆ ದೀಪಗಳು, ಬೀದಿ ದೀಪಗಳು ಹಾಗೂ ಕುಡಿಯುವ ನೀರು ಸರಬರಾಜು ಸಂಪರ್ಕಗಳನ್ನು ಸೌರ ವಿದ್ಯುತ್ ಸ್ಥಾವರಗಳ ಮೂಲಕ ಒದಗಿಸಿ ಎಲ್ಲಾ ಮನೆಗಳಿಗೆ ವಿದ್ಯುತ್ ಒದಗಿಸುವ ಗುರಿಯನ್ನು ಸಾಧಿಸುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ. ವಿದ್ಯುದೀಕರಣವಾಗದ 6 ಹಳ್ಳಿಗಳ 2872 ಬಿಪಿಎಲ್ ಮನೆಗಳು ಸೇರಿ 66 ವಿದ್ಯುದೀಕರಣವಾಗದ ವಾಸಸ್ಥಾನಗಳನ್ನು ಚಾವಿಸನಿನಿಯು ಗುರುತಿಸಿದ್ದು ಆಫ್- ಗ್ರಿಡ್ ವಿದ್ಯುದೀಕರಣಕ್ಕಾಗಿ ಡಿಪಿಆರ್ ತಯಾರಿಸಿದೆ.

ಅವಾರ್ಡ್ ಮಾಡಲಾಗಿರುವ ಯೋಜನೆಯ ವೆಚ್ಚ : ರೂ. 27.65 ಕೋಟಿಗಳು.

ಯೋಜನೆಯ ಕಾಲಾವಧಿಯನ್ನು 31.12.2020 ರವರೆಗೆ ವಿಸ್ತರಿಸಲಾಗಿದೆ.

ಮಾರ್ಚ್ 2020 ರ ಅಂತ್ಯಕ್ಕಿದ್ದಂತೆ ಸ್ಥಿತಿ ಗತಿ:

ಆಫ್-ಗ್ರಿಡ್ (ಮೈಕ್ರೋಗ್ರಿಡ್) ಪಿವಿ ಸೋಲಾರ್ ಸಿಸ್ಟಂ

ಈ ಯೋಜನೆಯಡಿಯಲ್ಲಿ 29 ಸಂಖ್ಯೆಯ ವಾಸಸ್ಥಾನಗಳು ಒಳಗೊಂಡಂತೆ 04 ಸಂಖ್ಯೆಯ ವಿದ್ಯುತ್ ಸಂಪರ್ಕವಿಲ್ಲದ (UE) ಹಳ್ಳಿಗಳಲ್ಲಿನ ಒಟ್ಟು 1539 ಸಂಖ್ಯೆಯ ಬಿ.ಪಿ.ಎಲ್ ಮನೆಗಳಿಗೆ 04 ಪ್ಯಾಕೇಜ್‌ಗಳಲ್ಲಿ ಮೆ॥ ನವ್ಯ ಟೆಕ್ನಾಲಾಜಿಸ್, ಮುಂಬೈ ರವರಿಗೆ ದಿನಾಂಕ: 28.02.2018 ರಂದು ಕಾರ್ಯಾಪ್ರೇಷಣೆ ನೀಡಲಾಗಿದೆ. ಇದರ ಕಾಲಾವಧಿ 9 ತಿಂಗಳುಗಳಾಗಿರುತ್ತದೆ. ಈ ಯೋಜನೆಯ ಒಟ್ಟು ಮೊತ್ತವು ರೂ. 20.66 ಕೋಟಿಗಳು.

ವಿದ್ಯುತ್ ಸಂಪರ್ಕವಿಲ್ಲದ 4 ಸಂಖ್ಯೆಯ (UE) ಹಳ್ಳಿಗಳನ್ನೊಳಗೊಂಡ 17 ಸಂಖ್ಯೆಯ ಕುಗ್ರಾಮಗಳು ಮತ್ತು 1343 ಸಂಖ್ಯೆಯ ಬಿ.ಪಿ.ಎಲ್ ಮನೆಗಳು ಪೂರ್ಣಗೊಂಡಿರುತ್ತದೆ. ಬಾಕಿ ಉಳಿದ ಬಿ.ಪಿ.ಎಲ್ ಮನೆಗಳ ಕಾಮಗಾರಿಯು ಪ್ರಗತಿಯಲ್ಲಿದ್ದು, ಡಿಸೆಂಬರ್-2020ರ ಅಂತ್ಯಕ್ಕೆ ಪೂರ್ಣಗೊಳಿಸಲಾಗುವುದು. ಕೋವಿಡ್-19 ಸಾಂಕ್ರಾಮಿಕ ರೋಗದ ಕಾರಣ ಯೋಜನೆಯ ಕಾಲಾವಧಿಯನ್ನು 31.12.2020 ರವರೆಗೆ ವಿಸ್ತರಿಸಲು ಇಂಧನ ಸಚಿವಾಲಯ/ ಆರ್‌ಇಸಿ ರವರನ್ನು ಕೋರಲಾಗಿದೆ.

ಮಿನಿಗ್ರಿಡ್ ಯೋಜನೆ: ಮೆದಗಾನನೆ ಕುಗ್ರಾಮ

ಸ್ಟಾಂಡ್ ಎಲೋನ್ ಸೋಲಾರ್ ಪಿವಿ ಮಾಡ್ಯೂಲ್ ರೂಫ್‌ಟಾಪ್ ವ್ಯವಸ್ಥೆ

ಈ ಯೋಜನೆಯಡಿಯಲ್ಲಿ 37 ಸಂಖ್ಯೆಯ ವಾಸಸ್ಥಾನಗಳು ಒಳಗೊಂಡಂತೆ 02 ಸಂಖ್ಯೆಯ ವಿದ್ಯುತ್ ಸಂಪರ್ಕವಿಲ್ಲದ (UE) ಹಳ್ಳಿಗಳಲ್ಲಿನ ಒಟ್ಟು 1233 ಸಂಖ್ಯೆಯ ಬಿ.ಪಿ.ಎಲ್ ಮನೆಗಳಿಗೆ ಸ್ಟಾಂಡ್ ಎಲೋನ್ ಸೋಲಾರ್ ಪಿವಿ ಮಾಡ್ಯೂಲ್ ರೂಫ್‌ಟಾಪ್ ವ್ಯವಸ್ಥೆ ಮೂಲಕ ವಿದ್ಯುತ್ ಒದಗಿಸಲು ಮೆ॥ ದೀಪ ಸೋಲಾರ್ ಸಿಸ್ಟಮ್ ಪ್ರೈ.ಲಿ., ಬೆಂಗಳೂರು ರವರಿಗೆ ದಿನಾಂಕ: 21.01.2017 ರಂದು ಕಾರ್ಯಾಪ್ರೇಷಣೆ ನೀಡಲಾಗಿರುತ್ತದೆ. ಇದರ ಕಾಲಾವಧಿ 9 ತಿಂಗಳುಗಳಾಗಿರುತ್ತದೆ. ಈ ಯೋಜನೆಯ ಮೊತ್ತವು ರೂ. 6.99 ಕೋಟಿಗಳು. ವಿದ್ಯುತ್ ಸಂಪರ್ಕವಿಲ್ಲದ 2 (UE) ಹಳ್ಳಿಗಳನ್ನೊಳಗೊಂಡ 27 ಸಂಖ್ಯೆಯ ಕುಗ್ರಾಮಗಳು ಮತ್ತು 774 ಬಿ.ಪಿ.ಎಲ್ ಮನೆಗಳು ಪೂರ್ಣಗೊಂಡಿರುತ್ತದೆ. ಬಾಕಿ ಉಳಿದ ಬಿ.ಪಿ.ಎಲ್ ಮನೆಗಳ ಕಾಮಗಾರಿಯು ಪ್ರಗತಿಯಲ್ಲಿದೆ. ಡಿಸೆಂಬರ್-2020ರ ಅಂತ್ಯಕ್ಕೆ ಪೂರ್ಣಗೊಳಿಸಲಾಗುವುದು. ಕೋವಿಡ್-19 ಸಾಂಕ್ರಾಮಿಕ ರೋಗದ ಕಾರಣ ಕಾಮಗಾರಿಯ ಕಾಲಾವಧಿಯನ್ನು 31.12.2020ರವರೆಗೆ ವಿಸ್ತರಿಸಲಾಗಿದೆ.

ಇಂಟಿಗ್ರೇಟೆಡ್ ಪವರ್ ಡೆವಲಪ್‌ಮೆಂಟ್ ಯೋಜನೆ (ಐ.ಪಿ.ಡಿ.ಎಸ್) :

ಇಂಟಿಗ್ರೇಟೆಡ್ ಪವರ್ ಡೆವಲಪ್‌ಮೆಂಟ್ ಯೋಜನೆ (ಐ.ಪಿ.ಡಿ.ಎಸ್)ಯನ್ನು ಚಾವಿಸನಿನಿಯ ವ್ಯಾಪ್ತಿಯಲ್ಲಿನ ಮೈಸೂರು, ಚಾಮರಾಜನಗರ, ಕೊಡಗು, ಮಂಡ್ಯ ಮತ್ತು ಹಾಸನ ವೃತ್ತಗಳ 33 ಪಟ್ಟಣಗಳಲ್ಲಿ ಜಾರಿಗೊಳಿಸಲಾಗಿದೆ.

ಈ ಯೋಜನೆಯ ಉದ್ದೇಶಗಳು ಈ ಕೆಳಕಂಡಂತಿದೆ:

i. ಪರಿಣಾಮಕಾರಿ ರೀತಿಯಲ್ಲಿ ಪಟ್ಟಣ ಪ್ರದೇಶಗಳಿಗೆ ವಿಶ್ವಾಸಾರ್ಹ ಮತ್ತು ಗುಣಮಟ್ಟದ ವಿದ್ಯುತ್ ಸರಬರಾಜು ಮಾಡುವುದು.

ii. ಪಟ್ಟಣ ಪ್ರದೇಶಗಳ ವಿದ್ಯುತ್ ವಿತರಣಾ ಕ್ಷೇತ್ರದ ಸಮರ್ಥ ನಿರ್ವಹಣೆ.

iii. ಇಂಧನ ಸಚಿವಾಲಯವು ನಿಗಧಿಪಡಿಸಿದ ಗುರಿಯಂತೆ ಎಟಿ & ಸಿ ನಷ್ಟವನ್ನು ಕಡಿಮೆಗೊಳಿಸುವುದು.

iv. ಇಂಧನ ಸಚಿವಾಲಯ, ಭಾರತ ಸರ್ಕಾರವು ಐ.ಪಿ.ಡಿ.ಎಸ್ ಕಾಮಗಾರಿಯನ್ನು ಈ ಕೆಳಗಿನ ಪತ್ರಗಳಲ್ಲಿ ಮಂಜೂರು ಮಾಡಿರುತ್ತದೆ.

1. 26/1/2014-APDRP ದಿನಾಂಕ: 03.12.2014 ರಡಿ ಕೇಂದ್ರ ಸರ್ಕಾರದ ಯೋಜನೆ, ಡಿಪಿಆರ್ ವೆಚ್ಚ ರೂ. 170.03 ಕೋಟಿಗಳು.
2. ಹೆಚ್ಚುವರಿ ಡಿಪಿಆರ್‌ಅನ್ನು ಪತ್ರ ಸಂಖ್ಯೆ: 2016: ಕರ್ನಾಟಕ: ಸೆಸ್ಕ್/054060/01.02.2018 ರಲ್ಲಿ ರೂ. 8.14 ಕೋಟಿಗಳಿಗೆ ಮಂಜೂರು ಮಾಡಲಾಗಿದೆ.
3. ಇಆರ್‌ಪಿ ಜಾರಿಗೊಳಿಸಲು ಪತ್ರ ಸಂಖ್ಯೆ: ಐಪಿಡಿಎಸ್: ಸೆಸ್ಕ್: ಕರ್ನಾಟಕ/054072/ 01.02.2018 ರಲ್ಲಿ ಡಿಪಿಆರ್‌ನ್ನು ರೂ. 4.33 ಕೋಟಿ ಮೊತ್ತಕ್ಕೆ ಮಂಜೂರು ಮಾಡಲಾಗಿದೆ.

ಮೈಸೂರು, ನಂಜನಗೂಡು, ಟಿ.ನರಸೀಪುರ, ಬನ್ನೂರು, ಹುಣಸೂರು, ಕೆ.ಆರ್.ನಗರ, ಪಿರಿಯಾಪಟ್ಟಣ, ಹೆಚ್.ಡಿ.ಕೋಟೆ, ಸರಗೂರು, ಚಾಮರಾಜನಗರ, ಕೊಳ್ಳೇಗಾಲ, ಗುಂಡ್ಲುಪೇಟೆ, ಹನೂರು, ಯಳಂದೂರು, ಮಡಿಕೇರಿ, ಸೋಮವಾರಪೇಟೆ, ವಿರಾಜಪೇಟೆ, ಕುಶಾಲನಗರ, ಮಂಡ್ಯ, ಮದ್ದೂರು, ಮಳವಳ್ಳಿ,

ಪಾಂಡವಪುರ, ಶ್ರೀರಂಗಪಟ್ಟಣ, ಕೃಷ್ಣರಾಜಪೇಟೆ, ನಾಗಮಂಗಲ, ಹಾಸನ, ಅರಸೀಕೆರೆ, ಚನ್ನರಾಯಪಟ್ಟಣ, ಆಲೂರು, ಬೇಲೂರು, ಎಸ್.ಕೆ.ಪುರ, ಹೆಚ್.ಎನ್.ಪುರ, ಮತ್ತು ಅರಕಲಗೂಡು ಸೇರಿ ಒಟ್ಟು 33 ಪಟ್ಟಣಗಳನ್ನು ಈ ಯೋಜನೆಯು ಒಳಗೊಂಡಿರುತ್ತದೆ.

ವಿತರಿಸಲಾಗಿರುವ ವಿಸ್ತೃತ ಕಾರ್ಯಾಪ್ರೇಷಣೆ ವಿವರಗಳು ಈ ಕೆಳಗಿನಂತಿದೆ.

ವೃತ್ತದ ಹೆಸರು	ಕಾಮಗಾರಿಗಳ ಏಜೆನ್ಸಿಯ ಹೆಸರು	ಕಾರ್ಯಾದೇಶ ಮೊತ್ತ (ರೂ.ಕೋಟಿಗಳಲ್ಲಿ)	ಕಾರ್ಯಾದೇಶ ದಿನಾಂಕ/ಕಾಲಾವಧಿ
ಮೈಸೂರು	ಮೆ॥ ಸಂಗಮಿತ್ರ ಕನ್ಸ್ಟ್ರಕ್ಷನ್ಸ್ ಆಂಧ್ರಪ್ರದೇಶ	35.74	13.02.2017/ 12.02.2019
ಚಾಮರಾಜನಗರ-ಕೊಡಗು	ಮೆ॥ ಸಂಗಮಿತ್ರ ಕನ್ಸ್ಟ್ರಕ್ಷನ್ಸ್ ಆಂಧ್ರಪ್ರದೇಶ	39.08	13.04.2017/ 02.04.2019
ಮಂಡ್ಯ	ಮೆ॥ ಸ್ಕಿಲ್‌ಟೆಕ್ ಇಂಜಿನಿಯರ್ಸ್ & ಕಂಟ್ರಾಕ್ಟರ್ಸ್ ಪ್ರೈ.ಲಿ., ಮೈಸೂರು	37.94	09.03.2017/ 08.03.2019
ಹಾಸನ	ಮೆ॥ ಪಾವನಿ ಕಂಟ್ರೋಲ್ಸ್ & ಪ್ಯಾನಲ್ಸ್ ಲಿ., ತೆಲಂಗಾಣ	28.52	13.02.2017/ 12.02.2019
ಸೋಲಾರ್ ರೂಫ್‌ಟಾಪ್- ಚಾ.ವಿ.ಸ.ನಿ.ನಿ.,	ಮೆ॥ ನವ್ಯ ಟೆಕ್ನಾಲಾಜಿಸ್, ಮುಂಬಯಿ	15.14	09.03.2017/ 20.02.2018
ಮಾಪಕೀಕರಣ- ಚಾ.ವಿ.ಸ.ನಿ.ನಿ.,	ಮೆ॥ ಸಂತೋಷ್ ಎಲೆಕ್ಟ್ರಿಕಲ್ಸ್, ಮೈಸೂರು.	25.48	25.10.2017/ 24.10.2019
ಹೆಚ್ಚುವರಿ ಸೋಲಾರ್ ರೂಫ್‌ಟಾಪ್-ಚಾ.ವಿ.ಸ.ನಿ.ನಿ.,	ಮೆ॥ ನವ್ಯ ಟೆಕ್ನಾಲಾಜಿಸ್, ಮುಂಬಯಿ	8.28	24.05.2018/ 23.02.2019
ಇ.ಆರ್.ಪಿ (ಹೆಚ್.ಆರ್.ಎಮ್.ಎಸ್.)	ಮೆ॥ ಐಡಿಯಾ ಇನ್‌ಫಿನಿಟಿ ಐ ಟಿ ಸೊಲ್ಯೂಷನ್ಸ್	7.06	01.06.2018/ 31.05.2021
	ಒಟ್ಟು	**197.24**	

ಮಾರ್ಚ್ 2020 ರ ಅಂತ್ಯಕ್ಕಿದ್ದಂತೆ ಸ್ಥಿತಿ ಗತಿ :

ವಿತರಣಾ ವ್ಯವಸ್ಥೆಯ ಕಾಮಗಾರಿಗಳನ್ನು ಬಲಗೊಳಿಸಲು, ಸರ್ಕಾರಿ ಕಟ್ಟಡಗಳಿಗೆ ಸೋಲಾರ್ ರೂಫ್‌ಟಾಪ್ ಒದಗಿಸಲು ಹಾಗೂ ಮಾಪನದ ಕಾಮಗಾರಿಗಳಿಗಾಗಿ ಎಲ್ಲಾ ನಾಲ್ಕು ವೃತ್ತಗಳಿಗೆ ವಿಸ್ತೃತ ಕಾರ್ಯಾಪ್ರೇಷಣೆಯನ್ನು ನೀಡಲಾಗಿದೆ.

- **ವಿತರಣಾ ವ್ಯವಸ್ಥೆಯಜಾಲ ಬಲಪಡಿಸುವಿಕೆ** : ನಾಲ್ಕು ವೃತ್ತಗಳಲ್ಲಿ ಮೈಸೂರು, ಮಂಡ್ಯ ಮತ್ತು ಹಾಸನ ವೃತ್ತಗಳಲ್ಲಿ ಕಾಮಗಾರಿಗಳು ಮಾರ್ಚ್-2019ರಲ್ಲಿ ಪೂರ್ಣಗೊಂಡಿರುತ್ತದೆ ಹಾಗೂ ಚಾಮರಾಜನಗರ/ ಕೊಡಗು ವೃತ್ತದ ಕಾಮಗಾರಿಯು ಡಿಸೆಂಬರ್-2019ರಲ್ಲಿ ಪೂರ್ಣಗೊಂಡಿರುತ್ತದೆ.
- **ಸರ್ಕಾರಿ ಕಟ್ಟಡಗಳಿಗೆ ಸೋಲಾರ್ ರೂಫ್‌ಟಾಪ್ ಒದಗಿಸುವುದು** : ಅವಾರ್ಡ್ ಮಾಡಲಾದ ಎಲ್ಲಾ 343 ಸೈಟ್ಸ್ /1715 ಕೆಡಬ್ಲ್ಯೂಪಿಗಳಲ್ಲಿ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.
- **ಮಾಪಕೀಕರಣ ಕಾಮಗಾರಿಗಳು**: ಎಲ್ಲಾ ವೃತ್ತಗಳ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.
- **ಹೆಚ್ಚವರಿ ಐಪಿಡಿಎಸ್ ಸೋಲರ್ ರೂಫ್‌ಟಾಪ್** : ಅವಾರ್ಡ್ ಮಾಡಲಾದ ಎಲ್ಲಾ 431 ಸೈಟ್ಸ್ / 1091 ಕೆಡಬ್ಲ್ಯೂಪಿ ಕಾಮಗಾರಿಗಳು ಪೂರ್ಣಗೊಂಡಿವೆ.

ಇ.ಆರ್.ಪಿ (ಹೆಚ್.ಆರ್.ಎಮ್.ಎಸ್.):

- ಈ ಕಾಮಗಾರಿಯನ್ನು ಮೆ॥ ಐಡಿಯಾ ಇನ್‌ಫಿನೆಟಿ ಐಟಿ ಸೊಲ್ಯೂಷನ್ ಪ್ರೈ. ಲಿ., ಬೆಂಗಳೂರು ರವರಿಗೆ ರೂ. 7.08 ಕೋಟಿಗಳಿಗೆ ದಿನಾಂಕ: 01.06.2018 ರಂದು ಕಾರ್ಯಾಪ್ರೇಷಣೆ ನೀಡಲಾಗಿದೆ. ಇದರ ಕಾಲಾವಧಿ 3 ವರ್ಷ (31.05.2021) ಗಳಾಗಿರುತ್ತದೆ. ಚಾವಿಸನಿನಿಯಲ್ಲಿ ಹೆಚ್.ಆರ್.ಎಮ್.ಎಸ್. ತಂತ್ರಾಂಶವು ಅನುಷ್ಠಾನಗೊಂಡಿರುತ್ತದೆ.

ವಿದ್ಯುತ್ ಜಾಲ ಬಲಪಡಿಸುವಿಕೆ:

ಸೌರ ಮೇಲ್ಛಾವಣಿಯ ಮೇಲ್ಭಾಗ

ಮೀಟರಿಂಗ್

ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಜ್ಯೋತಿ ಯೋಜನೆ (ಡಿ.ಡಿ.ಯು.ಜಿ.ಜೆ.ವೈ.,):

ಭಾರತ ಸರ್ಕಾರವು ಗ್ರಾಮೀಣ ಪ್ರದೇಶಗಳಿಗೆ ಈ ಕೆಳಕಂಡ ಅಂಶಗಳೊಂದಿಗೆ ಡಿಡಿಯುಜಿಜೆವೈ ಯೋಜನೆಯನ್ನು ಹಮ್ಮಿಕೊಂಡಿರುತ್ತದೆ.

1. ಕೃಷಿ ಮತ್ತು ಕೃಷಿಯೇತರ ಫೀಡರ್‌ಗಳ ಬೇರ್ಪಡಿಸುವಿಕೆ.
2. ವಿದ್ಯುತ್ ಉಪಪ್ರಸರಣ ಹಾಗೂ ವಿತರಣ ವ್ಯವಸ್ಥೆಯ ಬಲವರ್ದನೆ.
3. ಗ್ರಾಮೀಣ ವಿದ್ಯುದೀಕರಣ (ಸಂಸದ್ ಆದರ್ಶ ಗ್ರಾಮ ಯೋಜನೆ-ಎಸ್.ಎ.ಜಿ.ವೈ ಸೇರಿದಂತೆ)
4. ಮಾಪಕೀಕರಣ.

ಭಾರತ ಸರ್ಕಾರದ ಇಂಧನ ಸಚಿವಾಲಯದಿಂದ ಹೊರಡಿಸಲಾದ ಮಾರ್ಗಸೂಚಿಯ ಪ್ರಕಾರ 5 ಜಿಲ್ಲೆಗಳಾದ ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಮತ್ತು ಹಾಸನ ಗಳಿಗೆ ಡಿ.ಪಿ.ಆರ್ ಮೊತ್ತ ರೂ. 278.89 ಕೋಟಿಗಳಿಗೆ ಮಂಜೂರಾತಿ ನೀಡಲಾಗಿದೆ.

ಜಿಲ್ಲಾವಾರು ಮತ್ತು ಚಟುವಟಿಕೆವಾರು ಮೊತ್ತದ ವಿವರಗಳು ಈ ಕೆಳಗಿನಂತಿವೆ.

(ರೂ. ಕೋಟಿಗಳಲ್ಲಿ)

ಜಿಲ್ಲೆ	ಸಂ.ಅ ಗ್ರಾ.ಯೋ	ಗ್ರಾಮೀಣ ಮನೆಗಳ ವಿದ್ಯುದ್ಧೀಕರಣ	ಫೀಡರ್ ಪ್ರತ್ಯೇಕಿಸುವಿಕೆ	ವ್ಯವಸ್ಥೆಯ ಬಲವರ್ಧನೆ	ಮೀಟರಿಂಗ್	ಒಟ್ಟು ವೆಚ್ಚ	ಪಿಎಂಎ ಶುಲ್ಕಗಳು	ಪಿಎಂಎ ಸೇರಿ ಒಟ್ಟು ವೆಚ್ಚ
ಮೈಸೂರು	2.83	3.30	27.59	0.71	25.50	59.93	0.30	60.23
ಕೊಡಗು	0	6.00	5.62	1.00	3.50	16.12	0.08	16.20
ಚಾಮರಾಜ ನಗರ	0	6.00	20.55	1.01	22.28	49.84	0.25	50.09
ಮಂಡ್ಯ	0	3.25	44.51	0.75	34.48	82.99	0.41	83.40
ಹಾಸನ	0.59	10.96	25.07	2.59	30.80	70.07	0.35	70.36
ಒಟ್ಟು	**3.42**	**29.51**	**123.34**	**6.06**	**116.56**	**278.89**	**1.39**	**280.29**

ವಿತರಿಸಲಾಗಿರುವ ವಿಸ್ತೃತ ಕಾರ್ಯಾಪ್ರೇಷಣೆಯ ವಿವರಗಳು ಈ ಕೆಳಗಿನಂತಿವೆ.

ಜಿಲ್ಲೆ	ಏಜೆನ್ಸಿಯ ಹೆಸರು	ಕಾರ್ಯಾದೇಶ ದಿನಾಂಕ/ಕಾಲಾವಧಿ	ಕಾರ್ಯಾದೇಶ ಮೊತ್ತ (ಕೋಟಿಗಳಲ್ಲಿ)
ಮೈಸೂರು	ಮೆ॥ ಬಜಾಜ್ ಎಲೆಕ್ಟ್ರಿಕಲ್ಸ್ ಲಿ., ಮುಂಬಯಿ	13.02.2017/ 12.02.2019	38.89
ಕೊಡಗು	ಮೆ॥ ಟಿ.ವಿ.ಸುಬ್ಬಯ್ಯ, ಹುಬ್ಬಳ್ಳಿ	13.03.2017/ 12.02.2019	13.89
ಚಾಮರಾಜನಗರ	ಮೆ॥ ಪಾವನಿ ಕಂಟ್ರೋಲ್ಸ್ & ಪ್ಯಾನಲ್ಸ್ ಲಿ. ಆಂಧ್ರಪ್ರದೇಶ	28.02.2017/ 27.02.2019	29.20
ಮಂಡ್ಯ	ಮೆ॥ ಸ್ಕಿಲ್‌ಟೆಕ್ ಇಂಜಿನಿಯರ್ಸ್ & ಕಂಟ್ರಾಕ್ಟರ್ಸ್ ಪ್ರೈ. ಲಿ., ಮೈಸೂರು	09.03.2017/ 08.03.2019	58.56
ಹಾಸನ	ಮೆ॥ ಬಜಾಜ್ ಎಲೆಕ್ಟ್ರಿಕಲ್ಸ್ ಲಿ., ಮುಂಬಯಿ	02.03.2017/ 01.02.2019	41.18
ಮಾಪಕೀಕರಣ ಎಲ್ಲಾ 5 ಜಿಲ್ಲೆಗಳಲ್ಲಿ	ಮೆ॥ ರಾಜಶ್ರೀ ಎಲೆಕ್ಟ್ರಿಕಲ್ಸ್, ದಾವಣಗೆರೆ.	27.11.2017/ 01/11/2019	109.82
	ಒಟ್ಟು ಕಾರ್ಯಾದೇಶ ಮೊತ್ತ		**291.54**

ಮಾರ್ಚ್ 2020ರ ಅಂತ್ಯಕ್ಕಿದ್ದಂತೆ ಸ್ಥಿತಿ ಗತಿ:

ವಿತರಣಾ ವ್ಯವಸ್ಥೆಯ ಕಾಮಗಾರಿಗಳ ಬಲಪಡಿಸುವಿಕೆ: ವಿದ್ಯುತ್ ಜಾಲ ಬಲಪಡಿಸುವಿಕೆ, ಫ್ರೀಡರ್ ಪ್ರತ್ಯೇಕಿಸುವುದು, ಗ್ರಾಮೀಣ ಮನೆಗಳ ವಿದ್ಯುದೀಕರಣಕ್ಕೆ ಸಂಬಂಧಿಸಿದ ಎಲ್ಲಾ ಕಾಮಗಾರಿಗಳು ಮಂಡ್ಯ ಮತ್ತು ಕೊಡಗು ಜಿಲ್ಲೆಗಳಲ್ಲಿ ಪೂರ್ಣಗೊಂಡಿರುತ್ತದೆ. ಮೈಸೂರು, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಫೀಡರ್ ಬೇರ್ಪಡಿಸುವಿಕೆ ಕಾಮಗಾರಿಗಳನ್ನು ಹೊರತು ಪಡಿಸಿ ಉಳಿದ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿವೆ. ಫ್ರೀಡರ್ ಬೇರ್ಪಡಿಸುವಿಕೆ ಕಾಮಗಾರಿಗಳನ್ನು ಡಿಸೆಂಬರ್, 2020ರ ಒಳಗಾಗಿ ಪೂರ್ಣಗೊಳಿಸಲಾಗುವುದು.

ಮಾಪಕೀಕರಣ ಕಾಮಗಾರಿಗಳು: ಈ ಯೋಜನೆಯಡಿಯಲ್ಲಿ ಡಿ.ಟಿ.ಸಿ.ಗಳ ಮಾಪಕೀಕರಣ, ಗ್ರಾಹಕರ ಸ್ಥಾವರಗಳಲ್ಲಿನ ಎಲೆಕ್ಟ್ರೋಮೆಕಾನಿಕಲ್ ಮೀಟರ್‌ಗಳನ್ನು ಸ್ಟಾಟಿಕ್ ಮೀಟರ್‌ಗಳಿಗೆ ಬದಲಿಸುವುದು ಮತ್ತು ಗ್ರಾಹಕರ ಮನೆಯ ಒಳಾಂಗಣದಿಂದ ಹೊರಾಂಗಣಕ್ಕೆ ಮಾಪಕಗಳನ್ನು ಸ್ಥಳಾಂತರಿಸುವ ಕಾಮಗಾರಿಗಳು ಒಳಗೊಂಡಿದ್ದು, ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ಇಂಧನ ಸಚಿವಾಲಯ/ಆರ್‌ಇಸಿಯು ಮುಕ್ತಾಯದ ಅವಧಿಯನ್ನು ಡಿಸೆಂಬರ್, 2020ಕ್ಕೆ ವಿಸ್ತರಿಸಿರುತ್ತದೆ.

ವಿದ್ಯುತ್ ಜಾಲ ಬಲಪಡಿಸುವಿಕೆ:

ಮಾಪಕೀಕರಣ

ಸೌಭಾಗ್ಯ :

"ಸರ್ವರಿಗೂ ವಿದ್ಯುತ್" ನೀಡುವ ಸಲುವಾಗಿ ವಿದ್ಯುತ್ ರಹಿತ ವಾಸದ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕೇಂದ್ರ ಸರ್ಕಾರ ಪುರಸ್ಕೃತ "ಸೌಭಾಗ್ಯ" (ಪ್ರಧಾನಮಂತ್ರಿ ಸಹಜ್ ಬಿಜಿಲಿ ಹರ್‌ಘರ್ ಯೋಜನಾ) ಯೋಜನೆಯನ್ನು ಚಾ.ವಿ.ಸ.ನಿ.ನಿಯಲ್ಲಿ ಪರಿಚಯಿಸಲಾಗಿದೆ.

ಯೋಜನೆಯ ವಿವರ:

ಅ) ವಿದ್ಯುತ್ ಜಾಲವನ್ನು ಕೊನೆ ಹಂತದವರೆಗೂ ವಿಸ್ತರಿಸುವುದು (Last mile connectivity) ಹಾಗೂ ಗ್ರಾಮೀಣ ಪ್ರದೇಶದ ವಿದ್ಯುತ್ ರಹಿತ ವಾಸದ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದು

ಆ) ಗ್ರಿಡ್ ಸಂಪರ್ಕವಿಲ್ಲದ ಗ್ರಾಮೀಣ ಪ್ರದೇಶಗಳಿಗೆ ಸೋಲಾರ್ ಫೋಟೋ ವೋಲ್ಟಾಯಿಕ್ ಮೂಲಕ ವಿದ್ಯುತ್ ಸಂಪರ್ಕ ಕಲ್ಪಿಸುವುದು.

ಇ) ವಿದ್ಯುತ್ ಜಾಲವನ್ನು ಕೊನೆ ಹಂತದವರೆಗೂ ವಿಸ್ತರಿಸುವುದು ಹಾಗೂ ನಗರ ಪ್ರದೇಶದ ಆರ್ಥಿಕವಾಗಿ ಹಿಂದುಳಿದ(BPL) ವಿದ್ಯುತ್ ರಹಿತ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದು.

"ಸೌಭಾಗ್ಯ" ಯೋಜನೆಯನ್ನು ಚಾ.ವಿ.ಸ.ನಿ.ನಿ ವ್ಯಾಪ್ತಿಯ ಕೊಡಗು ಜಿಲ್ಲೆಗೆ ಮಂಜೂರು ಮಾಡಿದ್ದು, ಮೊತ್ತ ರೂ. 16.98 ಕೋಟಿಗಳಿಗೆ ಕಾಯಾಪ್ರೇಷಣೆ ನೀಡಲಾಗಿದೆ.

ಮಾರ್ಚ್ 2020 ರ ಅಂತ್ಯಕ್ಕಿದ್ದಂತೆ ಸ್ಥಿತಿ ಗತಿ:

4138 ಮನೆಗಳ ಆಂತರಿಕ ವೈರಿಂಗ್ ಕಾಮಗಾರಿಯು ಪೂರ್ಣಗೊಂಡಿದೆ ಹಾಗೂ ಹೆಚ್ಚುವರಿ ಮೂಲಸೌಕರ್ಯ ಒದಗಿಸುವ ಕಾಮಗಾರಿಗಳು ಪ್ರಗತಿಯಲ್ಲಿದೆ.

ಮೆಟೀರಿಯಲ್ ಮ್ಯಾನೇಜ್‌ಮೆಂಟ್ ಹಾಗೂ ಇತರ ತಂತ್ರಾಂಶ ಮಾಡ್ಯೂಲ್‌ಗಳ ಜಾರಿಗೊಳಿಸುವಿಕೆ (ಎಮ್‌ಎಮ್‌ಎಸ್):

ಮೂರು ವರ್ಷಗಳವರೆಗೆ ತಂತ್ರಾಂಶ ಅಭಿವೃದ್ಧಿ, ಕಸ್ಟಮೈಸೆಷನ್, ನಿಯೋಜನೆ, ವೆಬ್ ಆಧಾರಿತ ಮೆಟೀರಿಯಲ್ ಮ್ಯಾನೇಜ್‌ಮೆಂಟ್ ಸಲ್ಯೂಷನ್ ಜಾರಿಗೊಳಿಸುವಿಕೆ ಮತ್ತು ಆಂಡ್ರಾಯ್ಡ್ ಆಧಾರಿತ ಮೊಬೈಲ್ ಅಪ್ಲಿಕೇಶನ್‌ನ ಜೊತೆಗೆ ಅಗತ್ಯವಿರುವ ಸಾಮಾಗ್ರಿಗಳು, ಮಾನವ ಶಕ್ತಿ, ಬೆಂಬಲ ಮತ್ತು ನಿರ್ವಹಣೆ ಮಾಡಲು

ಮೆ॥ ಐಡಿಯಾ ಇನ್ಫಿನಿಟಿ ಐ.ಟಿ. ಸಲ್ಯೂಷನ್ಸ್ ಪೈ. ಲಿ. ರವರಿಗೆ ರೂ. 9.96 ಕೋಟಿ ಯೋಜನಾ ವೆಚ್ಚದ ಕಾರ್ಯಾಪ್ರೇಷಣೆ ನೀಡಲಾಗಿರುತ್ತದೆ.

ಮಾರ್ಚ್ 2020 ರ ಅಂತ್ಯಕ್ಕಿದ್ದಂತೆ ಸ್ಥಿತಿ ಗತಿ:

ದಿನಾಂಕ: 28.09.2016 ರಲ್ಲಿ ಗೋ-ಲೈವ್ ಗೊಂಡಿರುತ್ತದೆ ಹಾಗೂ ಕಾರ್ಯನಿರ್ವಹಣಾ ಅವಧಿಯು ಚಾಲ್ತಿಯರುತ್ತದೆ.

ಹಣಕಾಸು ಲೆಕ್ಕಪತ್ರ ನಿರ್ವಹಣೆ ಹಾಗೂ ಇತರೆ ತಂತ್ರಾಂಶ ಮಾಡ್ಯೂಲ್‌ಗಳ ಜಾರಿಗೊಳಿಸುವಿಕೆ (ಎಫ್.ಎ. ಎಮ್. ಎಸ್):

ವೆಬ್ ಆಧಾರಿತ ಹಣಕಾಸು ಲೆಕ್ಕ ಪತ್ರ ಸಾಫ್ಟ್‌ವೇರ್‌ನ ಅಭಿವೃದ್ಧಿ, ಕಸ್ಟಮೈಸೆಷನ್, ನಿಯೋಜನೆ, ಏಕೀಕರಣ, ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಸಾಫ್ಟ್‌ವೇರ್ ಹಾಗೂ ಆಂಡ್ರಾಯಿಡ್ ಆಧಾರಿತ ಮೊಬೈಲ್ ಅಪ್ಲಿಕೇಷನ್ಸ್ ಜೊತೆಗೆ ಅಗತ್ಯವಿರುವ ವಿವಿಧ ಹಾರ್ಡ್‌ವೇರ್‌ಗಳು, ಮಾನವ ಶಕ್ತಿ, ಬೆಂಬಲ ಮತ್ತು ನಿರ್ವಹಣೆಗಳನ್ನು ಮೆ॥ ಇಂಡಿಯಾ ಇನ್ಫಿನಿಟಿ ರವರಿಗೆ ರೂ. 9.88 ಕೋಟಿ ಯೋಜನಾ ವೆಚ್ಚದಲ್ಲಿ ಅವಾರ್ಡ್ ಮಾಡಲಾಗಿದೆ.

ಮಾರ್ಚ್ 2020 ರ ಅಂತ್ಯಕ್ಕಿದ್ದಂತೆ ಸ್ಥಿತಿ ಗತಿ:

ದಿನಾಂಕ: 22.02.2018 ರಲ್ಲಿ ಗೋ-ಲೈವ್ ಗೊಂಡಿರುತ್ತದೆ ಹಾಗೂ ಕಾರ್ಯನಿರ್ವಹಣಾ ಅವಧಿಯು ಚಾಲ್ತಿಯರುತ್ತದೆ.

ಮಾದರಿ ಉಪ ವಿಭಾಗ ಕಾಮಗಾರಿಗಳು:

ಕೆ.ಇ.ಆರ್.ಸಿ ರವರು ಬಂಡವಾಳ ವೆಚ್ಚಗಳ ಅಡಿಯಲ್ಲಿ ರೂ. 340.00 ಕೋಟಿಗಳಿಗೆ ಮಾದರಿ ಉಪ-ವಿಭಾಗ ಯೋಜನೆಗಳ ಕಾಮಗಾರಿಗಳಿಗೆ ಅನುಮೋದನೆ ನೀಡಿರುತ್ತಾರೆ.

ಈ ಯೋಜನೆಯ ವ್ಯಾಪ್ತಿ:

- 1.11 ಕೆವಿ ಆಂಕ್ ಲೈನ್‌ಗಳು/ಹೊಸ ಫೀಡರ್‌ಗಳು
- ಓವರ್‌ಹೆಡ್ ಮಾರ್ಗಗಳನ್ನು ಭೂಗತ ಕೇಬಲ್‌ಗಳಿಗಾಗಿ ಬದಲಾಯಿಸುವುದು-11ಕೆವಿ ಫೀಡರ್‌ಗಳು/ಎಲ್‌ಟಿ ಲೈನ್‌ಗಳು/ ಸೇವೆಗಳು ಮೈನ್ಸ್
- ಆರ್.ಎಂ.ಯುಗಳಿಗೆ ಹೊಂದಬಲ್ಲ ಡಿಎಎಸ್‌ಗಳನ್ನು ಒದಗಿಸುವುದು.
- ಎಲ್.ಟಿ. ಎ.ಬಿ ಕೇಬಲ್‌ಗಳನ್ನು ಅಪಾಯಕಾರಿ ಸ್ಥಳಗಳಲ್ಲಿ ಅಳವಡಿಸುವುದು.
- ಹೆಚ್ಚುವರಿ ಟ್ರಾನ್ಸಫಾರ್ಮರ್‌ಗಳು ಮತ್ತು ಕಾಂಪ್ಯಾಕ್ಟ್ ಸಬ್‌ಸ್ಟೇಷನ್‌ಗಳನ್ನು ಒದಗಿಸುವುದು.

ಕಾರ್ಯಾಪ್ರೇಷಣೆ ವಿವರಗಳು ಈ ಕೆಳಗಿನಂತಿದೆ

ಪ್ಯಾಕೇಜ್	ಉಪ-ವಿಭಾಗ	ಏಜೆನ್ಸಿಯ ಹೆಸರು	ಕಾರ್ಯಾದೇಶ ಮೊತ್ತ (ಕೋಟಿಗಳಲ್ಲಿ)	ಕಾರ್ಯಾದೇಶ ದಿನಾಂಕ/ ಕಾಲಾವಧಿ
1	ಎನ್.ಆರ್. ಮೊಹಲ್ಲಾ ವಿಭಾಗದ ಸೆಂಟ್ರಲ್ ಜೋನ್ ಉಪ ವಿಭಾಗ, ಮೈಸೂರು	ಮೆ॥ ಏಷಿಯನ್ ಫ್ಯಾಬ್ ಟೆಕ್, ಬೆಂಗಳೂರು.	162.33	08.02.2018/ 07.02.2020
2	ಎನ್.ಆರ್. ಮೊಹಲ್ಲಾ/ ವಿ.ವಿ. ಮೊಹಲ್ಲಾ ವಿಭಾಗಗಳ ಎನ್.ಆರ್.ಮೊಹಲ್ಲಾ ಹೂಟಗಳ್ಳಿ	ಮೆ॥ ಎಲ್&ಟಿ, ಬೆಂಗಳೂರು.	159.81	08.02.2018/ 07.02.2020

ಪ್ಯಾಕೇಜ್	ಉಪ-ವಿಭಾಗ	ಏಜೆನ್ಸಿಯ ಹೆಸರು	ಕಾರ್ಯಾದೇಶ ಮೊತ್ತ (ಕೋಟಿಗಳಲ್ಲಿ)	ಕಾರ್ಯಾದೇಶ ದಿನಾಂಕ/ ಕಾಲಾವಧಿ
	ಮತ್ತು ಕುವೆಂಪು ನಗರ ಉಪ ವಿಭಾಗಗಳು, ಮೈಸೂರು			
3	ಹೆಚ್.ಆರ್.ಸಿ ಪ್ಯೂಸ್ ಸ್ವಿಚ್ ಆಧಾರಿತ ಎಲ್‌ಟಿ ಫೀಡರ್ ಪಿಲ್ಲರ್ ಬಾಕ್ಸ್‌ಗಳನ್ನು ಮೇಲಿನ ಮಾದರಿ ಉಪ ವಿಭಾಗ ಕಾಮಗಾರಿಗಳಿಗೆ ಸೆಸ್ಕ್‌ನಲ್ಲಿ ಸರಬರಾಜು ಮಾಡಿ ಅಳವಡಿಸುವುದು.	ಮೆ॥ ಸೀಲ್‌ವೆಲ್ ಕಾರ್ಪೋರೇಷನ್ ಪ್ರೈವೇಟ್ ಲಿಮಿಟೆಡ್, ಹೈದರಾಬಾದ್	47.31	28.02.2018/ 27.02.2020
	ಒಟ್ಟು		369.45	

ಮಾರ್ಚ್ 2020 ರ ಅಂತ್ಯಕ್ಕಿದ್ದಂತೆ ಸ್ಥಿತಿ ಗತಿ:

ಸೆಂಟ್ರಲ್ ಜೋನ್, ಎನ್.ಆರ್.ಮೊಹಲ್ಲಾ, ಹೂಟಗಳ್ಳಿ ಮತ್ತು ಕುವೆಂಪುನಗರ ಉಪ-ವಿಭಾಗಗಳಲ್ಲಿ ಕಾಮಗಾರಿಯು ಪ್ರಗತಿಯಲ್ಲಿದೆ. ಕಾಮಗಾರಿಯು ಶೇ.70 ರಷ್ಟು ಪೂರ್ಣಗೊಂಡಿರುತ್ತದೆ.

ಇಂಟಿಗ್ರೇಟೆಡ್ ಪವರ್ ಡೆವಲಪ್‌ಮೆಂಟ್ ಯೋಜನೆ (ಐ.ಪಿ.ಡಿ.ಎಸ್) ಐ.ಟಿ. ಹಂತ-2 :

ಇಂಟಿಗ್ರೇಟೆಡ್ ಪವರ್ ಡೆವಲಪ್‌ಮೆಂಟ್ ಸ್ಕೀಮ್ (ಐ.ಪಿ.ಡಿ.ಎಸ್) ಯೋಜನೆಯಡಿ 21 ಪಟ್ಟಣಗಳಲ್ಲಿ ಮಾಹಿತಿ ತಂತ್ರಜ್ಞಾನ (ಐ.ಟಿ.) ಸಕ್ರಿಯಗೊಳಿಸುವುವಿಕೆ, ಡಾಟಾ ಸೆಂಟರ್ (ಡಿ.ಸಿ), ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್‌ಗಳನ್ನು ರಿಫ್ರೆಶ್ ಮಾಡುವುದರ ಜೊತೆಗೆ ಅಪ್ಲಿಕೇಶನ್‌ಗಳ ಉನ್ನತೀಕರಣಗಳನ್ನು ನೋಡಲ್ ಏಜೆನ್ಸಿಯಾದ ಬೆಸ್ಕಾಂನ ಸಂಯೋಜನೆಯೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ.

ಇಂಧನ ಸಚಿವಾಲಯ (MoP) ಯವರು ಅಂತಿಮಗೊಳಿಸಿದ ಪಥದ ಪ್ರಕಾರ ಚಾವಿಸನಿನಿಯು ಸುಸ್ಥಿರ ಆಧಾರದ ಮೇಲೆ ನಿಖರ ಮತ್ತು ವಿಶ್ವಾಸಾರ್ಹ ಇಂಧನ ಲೆಕ್ಕವನ್ನು ಸಾಧಿಸಲು ಮತ್ತು ಎ.ಟಿ.&ಸಿ ನಷ್ಟಗಳನ್ನು ಕಡಿಮೆಗೊಳಿಸಲು ಐ.ಪಿ.ಡಿ.ಎಸ್. ಐ.ಟಿ. ಹಂತ-2 ಯೋಜನೆಯನ್ನು ಜಾರಿಗೊಳಿಸುತ್ತಿದೆ.

ಈ ಯೋಜನೆಯ ಮುಖ್ಯ ಉದ್ದೇಶಗಳು:

1. 5000 ಮತ್ತು ಅಧಿಕ ಜನಸಂಖ್ಯೆ ಹೊಂದಿರುವ ಪಟ್ಟಣಗಳಿಗೆ ಆರ್‌ಎಪಿಡಿಆರ್‌ಪಿ, ಭಾಗ-1 ರಡಿ ಮಾಹಿತಿ ತಂತ್ರಜ್ಞಾನ ಆಧಾರಿತ ವ್ಯವಸ್ಥೆ ಅಭಿವೃದ್ಧಿಯನ್ನು ವಿಸ್ತರಿಸುವುದು.
2. ಎಟಿ ಮತ್ತು ಸಿ ನಷ್ಟಗಳ ಅಳತೆಗೆ ವಿಶ್ವಾಸಾರ್ಹ ಕ್ರಮಗಳು
3. ಆರ್‌ಎಪಿಡಿಆರ್‌ಪಿ ಪಟ್ಟಣಗಳಿಗೆ ಮಾಹಿತಿ ತಂತ್ರಜ್ಞಾನ ಸೌಕರ್ಯಗಳನ್ನು ಒದಗಿಸುವುದು.
4. ಈಗಿರುವ ಆರ್‌ಎಪಿಡಿಆರ್‌ಪಿ ಸೌಕರ್ಯಗಳ ವರ್ಧನೆ
5. 11 ಕೆವಿ ವೋಲ್ಟೇಜ್ ಲೆವೆಲ್ ಹಾಗೂ ಕೆಳಗಿನ ಎಲ್ಲಾ ವಿತರಣಾ ಜಾಲಗಳ ಆಸ್ತಿಗಳ ಮ್ಯಾಪಿಂಗ್.
6. ಎಲ್ಲಾ ವಿತರಣಾ ಪರಿವರ್ತಕಗಳು ಹಾಗೂ ಫೀಡರ್‌ಗಳಿಗೆ ಸ್ವಯಂಚಾಲಿತ ಡೇಟಾ ಲಾಗಿಂಗ್‌ಗಳನ್ನು ಅಳವಡಿಸುವುದು.
7. ಮಾಪನ ಓದುವಿಕೆ, ಬಿಲ್ಲಿಂಗ್ ಮತ್ತು ಸಂಗ್ರಹಗಳಿಗೆ ಮಾಹಿತಿ ತಂತ್ರಜ್ಞಾನ ಅಪ್ಲಿಕೇಷನ್ ಅಳವಡಿಸುವುದು.

ಆರ್.ಎ.ಪಿ.ಡಿ.ಆರ್.ಪಿ. ಪಟ್ಟಣಗಳು ಮತ್ತು ಪ್ರಸ್ತಾಪಿತ ಐ.ಪಿ.ಡಿ.ಎಸ್. ಪಟ್ಟಣಗಳ ಪಟ್ಟಿ ಈ ಕೆಳಗಿನಂತಿದೆ:

ಜಿಲ್ಲೆ	ಆರ್.ಎ.ಪಿ.ಡಿ.ಆರ್.ಪಿ. ಪಟ್ಟಣಗಳ ಹೆಸರು	ಪ್ರಸ್ತಾಪಿತ ಐ.ಪಿ.ಡಿ.ಎಸ್. ಪಟ್ಟಣಗಳ ಹೆಸರು
ಮೈಸೂರು	ಮೈಸೂರು	ಟಿ.ನರಸೀಪುರ
	ನಂಜನಗೂಡು	ಬನ್ನೂರು
	ಹುಣಸೂರು	ಸರಗೂರು
	ಕೆ.ಆರ್.ನಗರ	ಹೆಚ್.ಡಿ.ಕೋಟೆ
	–	ಪಿರಿಯಾಪಟ್ಟಣ
ಚಾಮರಾಜನಗರ	ಚಾಮರಾಜನಗರ	ಗುಂಡ್ಲುಪೇಟೆ
	ಕೊಳ್ಳೇಗಾಲ	ಹನೂರು
	–	ಯಳಂದೂರು
ಕೊಡಗು	ಮಡಿಕೇರಿ	ಸೋಮವಾರಪೇಟೆ
	–	ವಿರಾಜಪೇಟೆ
	–	ಕುಶಾಲನಗರ
ಮಂಡ್ಯ	ಮಂಡ್ಯ	ನಾಗಮಂಗಲ
	ಮಳವಳ್ಳಿ	ಮದ್ದೂರು

ಜಿಲ್ಲೆ	ಆರ್.ಎ.ಪಿ.ಡಿ.ಆರ್.ಪಿ. ಪಟ್ಟಣಗಳ ಹೆಸರು	ಪ್ರಸ್ತಾಪಿತ ಐ.ಪಿ.ಡಿ.ಎಸ್. ಪಟ್ಟಣಗಳ ಹೆಸರು
	–	ಪಾಂಡವಪುರ
	–	ಕೆ.ಆರ್.ಪೇಟೆ
	–	ಶ್ರೀರಂಗಪಟ್ಟಣ
ಹಾಸನ	ಹಾಸನ	ಆಲೂರು
	ಚನ್ನರಾಯಪಟ್ಟಣ	ಬೇಲೂರು
	ಅರಸೀಕೆರೆ	ಸಕಲೇಶಪುರ
	–	ಹೊಳೆನರಸೀಪುರ
	–	ಅರಕಲಗೂಡು

ಐ.ಪಿ.ಡಿ.ಎಸ್. ಐ.ಟಿ. ಹಂತ–2 ಯೋಜನೆಯ ಪ್ರಮುಖ ಮಾಡ್ಯೂಲ್ಸ್‌ಗಳು ಈ ಕೆಳಗಿನಂತಿದೆ:

- ಮೀಟರ್ ಡೇಟಾ ಸ್ವಾಧೀನ
- ಎನರ್ಜಿ ಆಡಿಟ್
- ಹೊಸ ಸಂಪರ್ಕ
- ಸಂಪರ್ಕ ಕಡಿತ ಮತ್ತು ಕಳಚುವುದು
- ಗ್ರಾಹಕರ ವಾಣಿಜ್ಯ ಡಾಟಾ ಬೇಸ್‌ನ್ನು ಅಭಿವೃದ್ಧಿಪಡಿಸುವುದು.
- ಮಾಪಕೀಕರಣ
- ಬಿಲ್ಲಿಂಗ್
- ಸಂಗ್ರಹಣೆಗಳು
- ಕೇಂದ್ರೀಕೃತ ಗ್ರಾಹಕರ ಸೇವೆಗಳು
- ವೆಬ್ ಸೆಲ್ಫ್ ಸರ್ವಿಸ್
- ಆಸ್ತಿ ನಿರ್ವಹಣೆ
- ಮ್ಯಾನೇಜ್‌ಮೆಂಟ್ ನಿರ್ವಹಣೆ
- ಜಿ.ಐ.ಎಸ್. ಆಧಾರಿತ ಗ್ರಾಹಕರ ಸೂಚಿಕೆ ಮತ್ತು ಆಸ್ತಿ ಮ್ಯಾಪಿಂಗ್
- ಜಿ.ಐ.ಎಸ್. ಆಧಾರಿತ ಸಂಯೋಜಿತ ನೆಟ್‌ವರ್ಕ್ ವಿಶ್ಲೇಷಣೆ ಮಾಡ್ಯೂಲ್
- ನಿರ್ವಹಣಾ ಮಾಹಿತಿ ವ್ಯವಸ್ಥೆ
- ಸಿಸ್ಟಮ್ ಭದ್ರತಾ ಅವಶ್ಯಕತೆ
- ನಿರ್ವಹಣಾ ವ್ಯವಸ್ಥೆಯ ಗುರುತು ಮತ್ತು ಪ್ರವೇಶ

ಯೋಜನೆಯ ವಿವಿಧ ಪ್ಯಾಕೇಜ್‌ಗಳ ಸ್ಥಿತಿಗತಿ, ಚಾವಿಸನಿನಿಯ ಪಾಲಿನ ವೆಚ್ಚ / ಅನುದಾನದ ವಿವರಗಳು ಈ ಕೆಳಗಿನಂತಿದೆ:

ಕ್ರ. ಸಂ.	ಕಾಮಗಾರಿಯ ವಿವರ	ಅವಾರ್ಡ್ ನೀಡಲಾದ ಏಜೆನ್ಸಿ ಹೆಸರು	ಅವಾರ್ಡ್ ನೀಡಿದ ದಿನಾಂಕ ಮತ್ತು ಅವಧಿ	ಅವಾರ್ಡ್ ಮೊತ್ತ ರೂ. ಕೋಟಿಗಳಲ್ಲಿ	ಭಾರತ ಸರ್ಕಾರದ ಅನುದಾನ ರೂ. ಕೋಟಿಗಳಲ್ಲಿ
1	ಡಿ.ಸಿ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್‌ಗಳನ್ನು ರಿಫ್ರೆಶ್ ಮಾಡುವುದರ ಜೊತೆಗೆ ಅಪ್ಲಿಕೇಶನ್‌ಗಳ ಉನ್ನತೀಕರಣ ಮತ್ತು ಆರ್‌ಎಪಿಡಿಆರ್‌ಪಿ ಭಾಗ-ಎ ಮತ್ತು ಐಪಿಡಿಎಸ್ ಐಟಿ ಹಂತ-II ಪಟ್ಟಣಗಳ ಎಫ್‌ಎಮ್‌ಎಸ್ ಒಳಗೊಂಡ ಡೇಟಾಗಳ ವರ್ಗಾವಣೆ ಮತ್ತು ಹೋಸ್ಟಿಂಗ್ ಡಿಆರ್‌ಸಿ ಆನ್ ಕ್ಲೌಡ್	ಮೆ॥ ಇನ್ವಿನೇಟ್ ಕಂಪ್ಯೂಟರ್ ಸಲ್ಯೂಷನ್ಸ್ (ಇಂಡಿಯಾ) ಲಿಮಿಟೆಡ್. ಹರಿಯಾಣ	26.03.2020/ 24 ತಿಂಗಳು	25.19	4.09 ಅನುದಾನ ಮತ್ತು 0.03 ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಏಜೆನ್ಸಿ ವೆಚ್ಚ
2	ಸರಬರಾಜು, ಅನುಷ್ಠಾಪನೆ, ಸಲ್ಯೂಷನ್ಸ್ ಇಂಜಿನಿಯರಿಂಗ್, ಚಾಲನೆ ಮತ್ತು ಮೊಡೆಮ್‌ಗಳ ನಿರ್ವಹಣೆ-ಹೆಚ್.ಟಿ/ಬಿಎಂ/ ಡಿಟಿಸಿ/ಫೀಡರ್ ಸ್ಥಾಪನೆಗಳು (ಬೆಸ್ಕಾಂ ಹೊರತುಪಡಿಸಿ)	ಮೆ॥ ಅನಲಾಜಿಕ್ಸ್ ಟೆಕ್ ಇಂಡಿಯಾ ಲಿಮಿಟೆಡ್, ಹೈದರಾಬಾದ್	30.03.2020/ 30.12.2020	1.75	
3	ಐ.ಪಿ.ಡಿ.ಎಸ್. ಐ.ಟಿ. ಹಂತ-2 ಯೋಜನೆಯಡಿ ಜಿ.ಐ.ಎಸ್. ಆಧಾರಿತ ಆಸ್ತಿ ಮ್ಯಾಪಿಂಗ್, ಸರ್ವೆ ಮತ್ತು ಡಿಜಿಟಲೀಕರಣ ಮತ್ತು ಗ್ರಾಹಕ ಸೂಚಿಕೆ ಡಾಟಾಗಳ ಏಕೀಕರಣಗಳು	ಮೆ॥ ಸೈಬರ್ ಸ್ವಿಫ್ಟ್ ಇನ್ಫೋಟೆಕ್ ಪ್ರೈ ಲಿಮಿಟೆಡ್, ಕೊಲ್ಕತ್ತಾ	30.03.2020/ 30.09.2021	1.59	

ಈ ಕೆಳಗಿನ ಪ್ಯಾಕೇಜನ್ನು ಬೆಸ್ಕಾಂನ ವತಿಯಿಂದ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲಾಗುವುದು.

ಕ್ರ. ಸಂ.	ಕಾಮಗಾರಿಯ ವಿವರ	ಅವಾರ್ಡ್ ನೀಡಲಾದ ಏಜೆನ್ಸಿ ಹೆಸರು	ಅವಾರ್ಡ್ ನೀಡಿದ ದಿನಾಂಕ ಮತ್ತು ಅವಧಿ	ಡಿ.ಪಿ.ಆರ್. ಮೊತ್ತ ರೂ. ಕೋಟಿಗಳಲ್ಲಿ
1	ಐ.ಪಿ.ಡಿ.ಎಸ್. ಪಟ್ಟಣಗಳಲ್ಲಿ ಐ.ಟಿ ಮೂಲಭೂತ ಸೌಲಭ್ಯ (ಐ.ಟಿ. ಮೂಲಭೂತ ಸೌಲಭ್ಯಗಳ ಸರಬರಾಜು ಮತ್ತು ಅನುಷ್ಠಾನ ರೂಟರ್, ಸ್ವಿಚ್‌ಗಳು, ಪಿ.ಸಿ., ಪ್ರಿಂಟರ್ ಇತ್ಯಾದಿಗಳು)	ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ		4.83

ವಾಣಿಜ್ಯ

- ಪ್ರಸ್ತುತ ವಿದ್ಯುತ್ ಅಪಘಾತಗಳನ್ನು ತಡೆಗಟ್ಟಲು ಅನುಸರಿಸಬೇಕಾಗಿರುವ ಸುರಕ್ಷತಾ ಕ್ರಮಗಳನ್ನು ಕುರಿತಾಗಿ ನಿಗಮ ಕಛೇರಿಯಿಂದ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ. ಸುತ್ತೋಲೆ ಸಂಖ್ಯೆ: ಪ್ರವ್ಯ(ವಾ)/ಉಪ್ರವ್ಯ(ವಾ)/ಸಪ್ರವ್ಯ(ವಾ)/ಎಫ್-02/2020-21/ಸಿವೈಎಸ್-171 ದಿನಾಂಕ: 13.05.2020 ರನ್ನು ನಿಗಮ ಕಛೇರಿಯಿಂದ ಹೊರಡಿಸಲಾಗಿದೆ.

- ನಿಗಮದ ವ್ಯಾಪ್ತಿಯಲ್ಲಿ ವಿದ್ಯುತ್ ಅಪಘಾತಗಳ ಅಂಕಿ-ಅಂಶಗಳನ್ನು ಅವಲೋಕಿಸಿದಾಗ ಪರಿಮಾಣವು ಹೆಚ್ಚಾಗಿದ್ದು, ಈ ಹಿನ್ನಲೆಯಲ್ಲಿ ಅನುಸರಿಸಬೇಕಾದ ಸುರಕ್ಷತಾ ಕ್ರಮಗಳ ಬಗ್ಗೆ ಸದರಿ ಸುತ್ತೋಲೆಯಲ್ಲಿ ವಿವರವಾದ ನಿರ್ದೇಶನಗಳನ್ನು ನೀಡಲಾಗಿರುತ್ತದೆ. ಸದರಿ ಸುತ್ತೋಲೆಯ ಅಂಶಗಳನ್ನು ಅನುಪಾಲಿಸುವಂತೆ ನಿರ್ವಹಣಾ ಸಿಬ್ಬಂದಿಗಳಿಗೆ ತಿಳಿಸಲಾಗಿರುತ್ತದೆ.

- ಪವರ್ ಮ್ಯಾನ್ ಕೈಪಿಡಿಗಳಿಗೆ ಸಂಬಂದಿಸಿದಂತೆ ಪ್ರತಿ ಕಾರ್ಯ ಮತ್ತು ಪಾಲನಾ ವೃತ್ತವಾರು 10,000/- (ಹತ್ತುಸಾವಿರ) ಸಂಖ್ಯೆಯ ಪವರ್ ಮ್ಯಾನ್ ಕೈಪಿಡಿಗಳನ್ನು ನಿಗಮ ಕಛೇರಿಯಿಂದ ಅಚ್ಚು ಮಾಡಿಸಿ ನೀಡಲಾಗಿರುತ್ತದೆ ಹಾಗೂ ಈ ಪವರ್ ಮ್ಯಾನ್ ಕೈಪಿಡಿಗಳು ಅಗತ್ಯ ಪ್ರಮಾಣದ ಸಂಖ್ಯೆಯಲ್ಲಿ ದಾಸ್ತಾನು ಇರುವಂತೆ ಕ್ರಮವಹಿಸುವಂತೆ ಸಂಬಂಧಿಸಿದವರಿಗೆ ನಿಗಮ ಕಛೇರಿಯಿಂದ ನಿರ್ದೇಶನವನ್ನು ನೀಡಲಾಗಿರುತ್ತದೆ.

- ಸುರಕ್ಷತಾ ಉಪಕರಣಗಳಾದ ಹೆಚ್.ಟಿ / ಎಲ್.ಟಿ ಡಿಟೆಕ್ಟರ್, ರಬ್ಬರ್ ಕೈಚೀಲಗಳು, ಪವರಮ್ಯಾನ್ ರಬ್ಬರ್ ಷೂಗಳು, ಸೇಫ್ಟಿ ಬೆಲ್ಟ್, ಲೈನ್ ಟೆಸ್ಟರ್, ಹೆಲ್ಮೆಟ್, ಏಣಿ, ಭೂಸಂಪರ್ಕಗೊಳಿಸುವ ಸಾಧನಗಳನ್ನು ಕಡ್ಡಾಯವಾಗಿ ಉಪಯೋಗಿಸಿಕೊಂಡು ಕರ್ತವ್ಯ ನಿರ್ವಹಿಸುವಂತೆ ಹಾಗೂ ಈ ಸಾಮಾಗ್ರಿಗಳನ್ನು ತಪ್ಪದೆ ಸಂಬಂಧಿಸಿದ ಕಛೇರಿಗಳಲ್ಲಿ ಇರುವಂತೆ ಏರ್ಪಾಟು ಮಾಡಲಾಗಿರುತ್ತದೆ.

- ಸಂಬಂಧಿತ ಸಿಬ್ಬಂದಿಗಳಿಗೆ ಹಾಗೂ ಗ್ರಾಹಕ / ಸಾರ್ವಜನಿಕರಿಗೆ ವಿದ್ಯುತ್ ಅಪಘಾತ ತಪ್ಪಿಸಲು ಎಚ್ಚರಿಕೆ / ಸುರಕ್ಷತಾ ಕ್ರಮಗಳ ಬಗ್ಗೆ ಜಾಗೃತಿ ಮೂಡಿಸಲು ಸುತ್ತೋಲೆ ಹೊರಡಿಸಿರುವುದು ಅತ್ಯಾವಶ್ಯಕವಾಗಿರುತ್ತದೆ.

- ಪ್ರಸ್ತುತ ವಿದ್ಯುತ್ ಕ್ಷೇತ್ರದಲ್ಲಿ ಅವಗಡಗಳ ಪ್ರಮಾಣವು ಹೆಚ್ಚಾಗುತ್ತಿದ್ದು, ನಿಗಮದ ಪವರ್ ಮ್ಯಾನ್‌ಗಳು/ ಸಿಬ್ಬಂದಿಗಳು, ಸಾರ್ವಜನಿಕರು/ಗ್ರಾಹಕರು ಮತ್ತು ಜಾನುವಾರು/ಪ್ರಾಣಿಗಳಿಗೆ ಅಪಾಯ/ ಜೀವಹಾನಿಯಾಗುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಲಾಗಿದ್ದು, ಸದರಿ ವಿದ್ಯುತ್ ಅವಗಡ ವಿಶ್ಲೇಷಣೆಗಳಲ್ಲಿ ಕಂಡುಬಂದಂತೆ ಸಾಮಾನ್ಯವಾಗಿ ಸಿಬ್ಬಂದಿಗಳ/ಸಾರ್ವಜನಿಕರ ತುಸು ನಿರ್ಲಕ್ಷ್ಯತೆ, ಅಜಾಗರೂಕತೆ ಹಾಗೂ ವಿದ್ಯುತ್ ವಿತರಣಾ ಜಾಲದ ನಿಯತ ಸಮರ್ಪಕ ನಿರ್ವಹಣೆಯಲ್ಲಿನ ಲೋಪದೋಷಗಳಿಂದ ಮತ್ತು ನ್ಯೂನತೆಗಳಿಂದ ಅವಘಡಗಳಿಗೆ ಆಸ್ಪದವಾಗುತ್ತಿದೆ.

- ಸದರಿ ಸುತ್ತೋಲೆಯನ್ನು ಸಾರ್ವಜನಿಕರಿಗೆ ಅರಿವು ಮೂಡಿಸಲು ಹಾಗೂ ವಿದ್ಯುತ್ ಅವಘಡಗಳನ್ನು ತಪ್ಪಿಸಲು ಸಿಬ್ಬಂದಿಗಳು ಸುರಕ್ಷತಾ ಕ್ರಮ ಅನುಸರಿಸುವ ಸಲುವಾಗಿ ಹೊರಡಿಸಲಾಗಿದೆ.
- ಚಾವಿಸನಿನಿ ವ್ಯಾಪ್ತಿಯಲ್ಲಿ ಗ್ರಾಹಕರಿಗೆ ವಿತರಿಸುವ ಸಲುವಾಗಿ ಎಲ್ಲಾ ವಿಭಾಗಗಳಿಗೆ 800 ಸಂಖ್ಯೆಯ ಗ್ರಾಹಕರ ಕೈಪಿಡಿಗಳನ್ನು ವಿತರಿಸಲಾಗಿರುತ್ತದೆ.
- ಚಾವಿಸನಿನಿಯು ನವೆಂಬರ್ 2016ರಿಂದ ತನ್ನ ಕಾರ್ಯವ್ಯಾಪ್ತಿಯಲ್ಲಿ ಮುಕ್ತ ಪ್ರವೇಶ ಗ್ರಾಹಕರ ಮೇಲ್ವಿಚಾರಣೆಯನ್ನು ಪ್ರಾರಂಭಿಸಿತು. 15 ನಿಮಿಷಗಳ ಟೈಮ್ ಬ್ಲಾಕ್ ಬಿಲ್ಲಿಂಗ್ ವಿಧಾನವನ್ನು ಕೆಇಆರ್‌ಸಿ ಅಂಗೀಕರಿಸಿದ್ದು ಮತ್ತು ಇತರ ಎಸ್ಕಾಂಗಳೂ ಇದನ್ನು ಅಳವಡಿಸಿಕೊಂಡಿವೆ.
- ಐಇಎಕ್ಸ್ ನಿಂದ ಇಲ್ಲಿಯವರೆಗೆ ವಿದ್ಯುತ್ ಆಮದು ಮಾಡಿಕೊಳ್ಳುತ್ತಿರುವ ಚಾವಿಸನಿನಿ ವ್ಯಾಪ್ತಿಯಲ್ಲಿರುವ ಎಲ್ಲ ಮುಕ್ತ ಪ್ರವೇಶ ಗ್ರಾಹಕರಿಗೆ 15 ನಿಮಿಷಗಳ ಟೈಮ್ ಬ್ಲಾಕ್ ವೇಳಾ ಪಟ್ಟಿ ಮತ್ತು ಬಳಕೆಯ ಡೇಟಾವನ್ನು ಬಳಸಿಕೊಂಡು ಬಿಲ್ ಮಾಡಲಾಗಿದೆ.

ಆರ್ಥಿಕ ವರ್ಷ	ಒಟ್ಟು ಹೆಚ್‌ಟಿ ಮಾರಾಟ	ಕ್ಯಾಪ್ಟಿವ್ ಬಳಕೆ	ಗುಂಪು ಕ್ಯಾಪ್ಟಿವ್ ಬಳಕೆ	ನಾನ್ ಕ್ಯಾಪ್ಟಿವ್ ಬಳಕೆ	ಒಟ್ಟು ಡಬ್ಲ್ಯೂ ಮತ್ತು ಬಿ ಇಂಧನ ಬಳಕೆ	ಐಈಎಕ್ಸ್ ಬಳಕೆ	ಮುಕ್ತ ಪ್ರವೇಶದ ಒಟ್ಟು ಮಾರಾಟ	ಒಟ್ಟು ಹೆಚ್‌ಟಿ ಮಾರಾಟದಲ್ಲಿ ಮುಕ್ತ ಪ್ರವೇಶದ ಶೇಕಡಾವಾರು ಮಾರಾಟ
	ಎ	ಬಿ	ಸಿ	ಡಿ	ಇ=ಬಿ+ಸಿ+ಡಿ	ಎಫ್	ಜಿ=ಇ+ಎಫ್	ಹೆಚ್
ಆರ್ಥಿಕ ವರ್ಷ–15	1362.34	14.965	0.289	56.049	71.303	58.222	129.526	8.68
ಆರ್ಥಿಕ ವರ್ಷ–16	1413.37	11.732	26.130	34.629	72.491	186.086	258.577	18.30
ಆರ್ಥಿಕ ವರ್ಷ–17	1291.46	15.249	89.605	50.227	155.081	301.184	456.265	35.33
ಆರ್ಥಿಕ ವರ್ಷ–18	1342.74	19.293	151.793	70.72	241.806	254.999	496.805	37.00
ಆರ್ಥಿಕ ವರ್ಷ–19	1492.14	36.723	201.91	153.53	392.163	165.659	557.822	37.38
ಆರ್ಥಿಕ ವರ್ಷ–20	1567.23	58.30	243.92	206.04	508.264	132.80	641.067	40.90

- ಈ ವಿಧಾನದಲ್ಲಿ ಅಜಾಗರೂಕತೆಯಿಂದ ಬ್ಯಾಂಕ್ಡ್ ಆಗಿರುವ ರೂ. 14.105 ಕೋಟಿ ಮೊತ್ತಗಳ 21.035 ಎಂ.ಯು ವಿದ್ಯುತ್‌ನ್ನು (ನವೆಂಬರ್, 2016 ರಿಂದ ಮಾರ್ಚ್, 2020) ಮುಟ್ಟುಗೋಲು ಹಾಕಲಾಗಿದೆ. ಮುಂದುವರೆದು, ಆರ್ಥಿಕ ವರ್ಷ–2020ರಲ್ಲಿ ಸೆಸ್ಕ್ ಗ್ರಾಹಕರ ನಡುವಿನ ಐಇಎಕ್ಸ್ ಮಾರಾಟಗಳು 300 ಎಂ.ಯು (ಆರ್ಥಿಕ ವರ್ಷ 2017) ಗಳಿಂದ 130 ಎಂ.ಯು ಗಳಿಗೆ ಇಳಿದಿದೆ (57% ರಷ್ಟು ಇಳಿಕೆ).



- ನಿಗಮವು ಗ್ರೂಪ್ ಕ್ಯಾಪ್ಟಿವ್ ಷರತ್ತುಗಳ ಮೇಲ್ವಿಚಾರಣೆಯ ಪ್ರಕ್ರಿಯೆಯನ್ನು ಪ್ರಾರಂಭಿಸಿರುತ್ತದೆ ಮತ್ತು ಗ್ರೂಪ್ ಕ್ಯಾಪ್ಟಿವ್ ಜನರೇಟರ್‌ಗಳು ತೃಪ್ತಿಪಡಿಸಬೇಕಿರುವ ಷರತ್ತುಗಳನ್ನು ಮೇಲ್ವಿಚಾರಣೆ ಮಾಡಲು ಅನುಸರಿಸಬೇಕಾದ ಕಾರ್ಯವಿಧಾನವನ್ನು ವಿದ್ಯುತ್ ನಿಯಮಗಳು, 2005ರ ನಿಯಮ 3ರ ಪ್ರಕಾರ ಆರ್ಥಿಕ ವರ್ಷ 2018ಕ್ಕೆ ಮೇ-2018 ರಲ್ಲಿ ರೂಪಿಸಿರುತ್ತದೆ. ಇದನ್ನು ಕೆಇಆರ್‌ಸಿ ಅಂಗೀಕರಿಸಿರುತ್ತದೆ ಮತ್ತು ಕರ್ನಾಟಕದ ಇತರ ಎಸ್ಕಾಂಗಳು ಇದನ್ನು ಅನುಸರಿಸಲು ನಿರ್ದೇಶಿಸಿರುತ್ತದೆ.

- ಚಾವಿಸನಿನಿಯ, ಮೈಸೂರು ಇಲ್ಲಿ ಒಟ್ಟು 10 ಗ್ರೂಪ್ ಕ್ಯಾಪ್ಟಿವ್ ಜನರೇಟರ್ (ಜಿಸಿಜೆ) ರವರು ಗ್ರಾಹಕರಿಗೆ ವಿದ್ಯುತ್ ವ್ಹೀಲ್ ಮಾಡುತ್ತಿದ್ದು, 9 ಜಿಸಿಜೆಗಳು ವಿದ್ಯುತ್ ನಿಯಮಗಳಲ್ಲಿರುವ ಷರತ್ತುಗಳನ್ನು ಪಾಲಿಸಿರುವುದಿಲ್ಲ. ಆದ್ದರಿಂದ, ವ್ಹೀಲ್ ಮಾಡಲಾದ ವಿದ್ಯುತ್‌ನ್ನು ನಾನ್-ಕ್ಯಾಪ್ಟಿವ್ ವಿದ್ಯುತ್ ಎಂದು ಪರಿಗಣಿಸಲಾಗಿದೆ.

- ಡಿಫಾಲ್ಟ್ ಗ್ರೂಪ್ ಕ್ಯಾಪ್ಟಿವ್ ಜನರೇಟರ್‌ಗಳಿಂದ ವಿದ್ಯುತ್ ಸಂಗ್ರಹಿಸುವ ಗ್ರಾಹಕರು ಕ್ರಾಸ್ ಸಬ್ಸಿಡಿ ಸರ್ಚಾರ್ಜ್ ಮತ್ತು ವಿದ್ಯುತ್ ತೆರಿಗೆಯ ವ್ಯತ್ಯಾಸವನ್ನು ಪಾವತಿಸಲು ಹೊಣೆಗಾರರಾಗಿದ್ದಾರೆ. ಸಮಾಂಕಿತ ದಿನಾಂಕದವರೆಗೆ ಒಟ್ಟು ರೂ. 26.26 ಕೋಟಿ ಮೊತ್ತದ ಬೇಡಿಕೆ ಇಟ್ಟಿದ್ದು, ರೂ. 12,39 ಕೋಟಿಗಳನ್ನು ಸಂಗ್ರಹಿಸಲಾಗಿದೆ. ಹಾಗೂ ಉಳಿದ ಗ್ರಾಹಕರು ಕೆಇಆರ್‌ಸಿ ಮುಂದೆ ಅರ್ಜಿ ಸಲ್ಲಿಸಿದ್ದಾರೆ.

- ಪ್ರಸ್ತುತ ಸೆಸ್ಕ್, ಮೈಸೂರಿನಲ್ಲಿ ವಿದ್ಯುತ್ ಹೆಚ್ಚುವರಿಯಾಗಿದ್ದು, ನವೀಕರಿಸಬಹುದಾದ ವಿದ್ಯುತ್‌ಗಳನ್ನು ಕಡ್ಡಾಯವಾಗಿ ಖರೀದಿಸಬೇಕಿರುವ ಕಾರಣ ಹೆಚ್ಚುವರಿ ವಿದ್ಯುತ್‌ನ್ನು ನಿಗಮದ ಪರವಾಗಿ ಪಿಸಿಕೆಎಲ್ ಪವರ್ ಎಕ್ಸ್ಚೇಂಜ್ (ಐಇಎಕ್ಸ್)ನಲ್ಲಿ ಮಾರಾಟ ಮಾಡುತ್ತಿದೆ.

ವಿದ್ಯುತ್ ಅಪಘಾತಗಳು 2019-20

ಕ್ರ.ಸಂ	ವಿಭಾಗಗಳು	ವಿಭಾಗಗಳು		ಇಲಾಖೇತರ		ಪ್ರಾಣಿಗಳು	ಒಟ್ಟು
		ಮಾರಣಾಂತಿಕ	ಮಾರಣಾಂತಿಕ ವಲ್ಲದ	ಮಾರಣಾಂತಿಕ	ಮಾರಣಾಂತಿಕ ವಲ್ಲದ		
ಮೈಸೂರು ವೃತ್ತ							
1	ಎಸ್.ಆರ್.ಮೊಹಲ್ಲಾ	1	5	4	4	5	19
2	ವಿ.ವಿ. ಮೊಹಲ್ಲಾ	0	1	1	2	4	8
3	ನಂಜನಗೂಡು	0	6	7	2	10	25
4	ಹುಣಸೂರು	0	0	5	4	7	16

ಕ್ರ.ಸಂ	ವಿಭಾಗಗಳು	ವಿಭಾಗಗಳು		ಇಲಾಖೇತರ		ಪ್ರಾಣಿಗಳು	ಒಟ್ಟು
		ಮಾರಣಾಂತಿಕ	ಮಾರಣಾಂತಿಕ ವಲ್ಲದ	ಮಾರಣಾಂತಿಕ	ಮಾರಣಾಂತಿಕ ವಲ್ಲದ		
5	ಕೆ.ಆರ್. ನಗರ	0	1	3	0	5	9
ವೃತ್ತ ಒಟ್ಟು		1	13	20	12	31	77
ಚಾಮರಾಜನಗರ ಮತ್ತು ಕೊಡಗು ವೃತ್ತ							
6	ಚಾಮರಾಜನಗರ	0	1	5		6	12
7	ಕೊಳ್ಳೆಗಾಲ	0	0	3	4	2	9
8	ಮಡಿಕೇರಿ	1	3	6	3	11	24
ವೃತ್ತ ಒಟ್ಟು		1	4	14	7	19	45
ಮಂಡ್ಯ ವೃತ್ತ							
9	ಮಂಡ್ಯ	0	0	2	1	1	4
10	ಕೆ.ಆರ್. ಪೇಟೆ	0	0	3	0	2	5
11	ಮದ್ದೂರು	0	1	4	4	8	17
12	ಪಾಂಡವಪುರ	0	0	3	0	6	9
13	ನಾಗಮಂಗಲ	0	1	1	1	3	6
ವೃತ್ತ ಒಟ್ಟು		0	2	13	6	20	41
ಹಾಸನ ವೃತ್ತ							
14	ಹಾಸನ	0	0	4	1	5	10
15	ಸಕಲೇಶಪುರ	0	2	3	1	12	18
16	ಹೊಳೆನರಸೀಪುರ	0	2	2	2	5	11
17	ಚನ್ನರಾಯಪಟ್ಟಣ	0	0	1	0	2	3
18	ಅರಸೀಕೆರೆ	0	0	4	2	3	9
ವೃತ್ತ ಒಟ್ಟು		0	4	14	6	27	51
ಚಾವಿಸನಿನಿ ಒಟ್ಟು		2	23	61	31	97	214

ಸೆಸ್ಕ್ ಜಾಗೃತದಳದ ಚಟುವಟಿಕೆಗಳು:

2019-20 ನೇ ಆರ್ಥಿಕ ವರ್ಷದ ಜಾಗೃತದಳದ ಸಾಧನೆ ಈ ಕೆಳಗಿನಂತಿರುತ್ತದೆ: ಲೆವೆಲ್ 1,2,3 ಮತ್ತು 4 (ಸಿಓಜಿ ಕೇಸ್‌ಗಳು ಮಾತ್ರ)

ಕ್ರ. ಸಂ.	ವಿವರಗಳು	2019-20
1	**ಪರಿಶೀಲಿಸಿದ ಸ್ಥಾವರಗಳ ಸಂಖ್ಯೆ**	**35272**
2	ಕ್ರಿಮಿನಲ್ ಮೊಕದ್ದಮೆಗಳ ಸಂಖ್ಯೆ	712
3	ಕ್ರಿಮಿನಲ್ ಮೊಕದ್ದಮೆಗಳಲ್ಲಿ ಬಿಬಿಸಿ ಮೊತ್ತ ರೂ.ಗಳಲ್ಲಿ	6245585
4	**ಕ್ರಿಮಿನಲ್ ಮೊಕದ್ದಮೆಗಳಲ್ಲಿ ಸಂಗ್ರಹವಾದ ಬಿಬಿಸಿ ಮೊತ್ತ ರೂ.ಗಳಲ್ಲಿ**	5968031

ಕ್ರ. ಸಂ.	ವಿವರಗಳು	2019-20
5	ಬಾಕಿ (3-4)	277554
6	ಕಾಂಪೌಂಡಿಂಗ್ ಮಾಡಿರುವ ಮೊತ್ತ ರೂ.ಗಳಲ್ಲಿ	2781000
7	ಕಾಂಪೌಂಡಿಂಗ್ ಮೊತ್ತದ ವಸೂಲಾತಿ ರೂ.ಗಳಲ್ಲಿ	2750000
8	ಬಾಕಿ (6-7)	31000
9	ಇತರೆ ಮೊಕದ್ದಮೆಗಳ ಸಂಖ್ಯೆ	767
10	ಇತರೆ ಮೊಕದ್ದಮೆಗಳ ಬಿಬಿಸಿ ಮೊತ್ತ ರೂ.ಗಳಲ್ಲಿ	66768526
11	ಇತರೆ ಮೊಕದ್ದಮೆಗಳ ಬಿಬಿಸಿ ಮೊತ್ತ ವಸೂಲಾತಿ ರೂ.ಗಳಲ್ಲಿ	136122267
12	ಬಾಕಿ (10-11)	-69353741
13	ಕ್ರಿಮಿನಲ್ ಮೊಕದ್ದಮೆ, ಇತರೆ ಮೊಕದ್ದಮೆ, ಕಾಂಪೌಂಡಿಂಗ್‌ಗಳಲ್ಲಿ ಬಿಬಿಸಿ ಮೊತ್ತ ರೂ.ಗಳಲ್ಲಿ	75795111
14	ಕ್ರಿಮಿನಲ್ ಮೊಕದ್ದಮೆ, ಇತರೆ ಮೊಕದ್ದಮೆ, ಕಾಂಪೌಂಡಿಂಗ್‌ಗಳಲ್ಲಿ ಸಂಗ್ರಹವಾದ ಬಿಬಿಸಿ ಮೊತ್ತ ರೂ.ಗಳಲ್ಲಿ	144840298
15	ಕ್ರಿಮಿನಲ್ ಮೊಕದ್ದಮೆಗಳಲ್ಲಿ ಕಳುವಾದ ಯೂನಿಟ್‌ಗಳು	471327
16	ಇತರೆ ಪ್ರಕರಣಗಳಲ್ಲಿ ಕಳುವಾದ ಯೂನಿಟ್‌ಗಳು	5640341

ಸಾಂಸ್ಥಿಕ ಆಡಳಿತ:

ಕಂಪನಿಯ ಮಂಡಳಿಯು ಉನ್ನತ ಗುಣಮಟ್ಟದ ಕಾರ್ಪೊರೇಟ್ ಆಡಳಿತ ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದು, ನಿಗಮದ ಎಲ್ಲಾ ವ್ಯವಹಾರಗಳಲ್ಲಿ ಈ ತತ್ವಗಳನ್ನು ಪಾಲಿಸುವುದನ್ನು ಖಾತ್ರಿಪಡಿಸುತ್ತದೆ. ಎಲ್ಲಾ ನಿರ್ದೇಶಕರು ಮಂಡಳಿ ಹಾಗೂ ಉಪ ಸಮಿತಿ ಸಭೆಗಳಲ್ಲಿ ನಿರ್ಧಾರಗಳನ್ನು ತೆಗೆದು ಕೊಳ್ಳುವಲ್ಲಿ ಪರಿಣಾಮಕಾರಿಯಾಗಿ ಪಾಲ್ಗೊಳ್ಳುತ್ತಿದ್ದಾರೆ. ಕಾರ್ಯನಿರ್ವಾಹಕೇತರ ನಿರ್ದೇಶಕರು ಮಂಡಳಿ/ ಉಪ ಸಮಿತಿ ಸಭೆಗಳಲ್ಲಿ ಭಾಗವಹಿಸಲು ಸಭಾ ಶುಲ್ಕ ಪಡೆಯುತ್ತಾರೆ.

ನಿರ್ದೇಶಕರ ಮಂಡಳಿ ಸಭೆಗಳನ್ನು ಮುಂಚಿತವಾಗಿ ನಿಗದಿಪಡಿಸಿ, ಎಲ್ಲಾ ನಿರ್ದೇಶಕರಿಗೆ ಲಿಖಿತ ಸೂಚನಾ ಪತ್ರ ನೀಡಲಾಗುತ್ತದೆ. ಕಾರ್ಯಸೂಚಿ ಮತ್ತು ಇತರ ಸಂಬಂಧಿತ ಟಿಪ್ಪಣಿಗಳನ್ನು ನಿರ್ದೇಶಕರಿಗೆ ಮುಂಚಿತವಾಗಿ ವಿತರಿಸಲಾಗುತ್ತದೆ.

1) **ಪ್ರಸಕ್ತ ವರ್ಷದಲ್ಲಿ ನಿರ್ದೇಶಕರು ಅಥವಾ ಪ್ರಮುಖ ವ್ಯವಸ್ಥಾಪಕ ಅಧಿಕಾರಿಗಳ ಸಂಯೋಜನೆಯಲ್ಲಿ ಆಗಿರುವ ಬದಲಾವಣೆಗಳು:**

ಆರ್ಥಿಕ ವರ್ಷ 2019-20ರಲ್ಲಿ ಈ ಕೆಳಗಿನ ಬದಲಾವಣೆಗಳು ಜರುಗಿವೆ.

ಅ) ನಿರ್ದೇಶಕರು ಹಾಗೂ ಪ್ರಮುಖ ವ್ಯವಸ್ಥಾಪಕ ಅಧಿಕಾರಿಗಳ ನೇಮಕಾತಿ ವಿವರ:

ಕ್ರ. ಸಂ	ನಿರ್ದೇಶಕರ ಹೆಸರು	ಹುದ್ದೆ	ನೇಮಕಾತಿ ದಿನಾಂಕ
1	ಶ್ರೀ. ಮಹೇಂದ್ರ ಜೈನ್, ಭಾ.ಆ.ಸೇ.,	ಅಧ್ಯಕ್ಷರು	24.06.2019
2	ಶ್ರೀ. ಶಿವಪ್ರಕಾಶ್ ಟಿ.ಎಮ್	ನಿರ್ದೇಶಕರು	18.07.2019
3	ಶ್ರೀ. ಡಿ. ಕೋದಂಡ ಪಾಣಿ	ನಿರ್ದೇಶಕರು	25.07.2019
4	ಶ್ರೀ. ಪವನ್ ಕುಮಾರ್ ಮಾಲಪಾಟಿ ಭಾ.ಆ.ಸೇ.,	ನಿರ್ದೇಶಕರು	03.09.2019

ಕ್ರ. ಸಂ	ನಿರ್ದೇಶಕರ ಹೆಸರು	ಹುದ್ದೆ	ನೇಮಕಾತಿ ದಿನಾಂಕ
5	ಶ್ರೀ. ಪ್ರಕಾಶ್ ಜಿ.ಟಿ ನಿಟ್ಟಾಲಿ, ಕೆ.ಎ.ಎಸ್.,	ನಿರ್ದೇಶಕರು	03.09.2019
6	ಶ್ರೀ. ಎಂ.ಟಿ ಮಂಜುನಾಥ್	ನಿರ್ದೇಶಕರು (ತಾಂತ್ರಿಕ)	21.11.2019
7	ಶ್ರೀ. ಅಭಿರಾಮ್ ಜಿ. ಶಂಕರ್, ಭಾ.ಆ.ಸೇ.,	ನಿರ್ದೇಶಕರು	25.02.2020
8	ಡಾ॥ ಎಂ.ವಿ. ವೆಂಕಟೇಶ್, ಭಾ.ಆ.ಸೇ.,	ನಿರ್ದೇಶಕರು	25.02.2020
9	ಶ್ರೀ. ಕೆ. ಸಿದ್ದರಾಜು	ನಿರ್ದೇಶಕರು	25.02.2020
10	ಶ್ರೀಮತಿ ಲಕ್ಷ್ಮೀಪ್ರಿಯ ಭಾ.ಆ.ಸೇ.,	ನಿರ್ದೇಶಕರು	25.02.2020

ಆ) ಹುದ್ದೆಯಿಂದ ಬಿಡುಗಡೆಗೊಂಡ ನಿರ್ದೇಶಕರು ಹಾಗೂ ಪ್ರಮುಖ ವ್ಯವಸ್ಥಾಪಕ ಅಧಿಕಾರಿಗಳ ವಿವರ:

ಕ್ರ.ಸಂ	ನಿರ್ದೇಶಕರ ಹೆಸರು	ಹುದ್ದೆ	ಬಿಡುಗಡೆಯಾದ ದಿನಾಂಕ
1	ಶ್ರೀ. ಪಿ. ರವಿಕುಮಾರ್, ಭಾ.ಆ.ಸೇ.,	ಅಧ್ಯಕ್ಷರು	24.06.2019
2	ಶ್ರೀ. ಎ. ಎನ್. ಜಯರಾಜ್	ನಿರ್ದೇಶಕರು	18.07.2019
3	ಶ್ರೀ. ಕೆ. ಸಿ. ನಿತ್ಯಾನಂದ	ನಿರ್ದೇಶಕರು	25.07.2019
4	ಶ್ರೀ. ಅಫ್ತಾಬ್ ಅಹಮದ್	ನಿರ್ದೇಶಕರು (ತಾಂತ್ರಿಕ)	31.08.2019
5	ಶ್ರೀ. ಕೆ.ವಿ ಶಿವಕುಮಾರ್	ನಿರ್ದೇಶಕರು	30.11.2019
6	ಶ್ರೀ. ಚಂದ್ರಶೇಖರ್ ನಾಯಕ್, ಭಾ.ಆ.ಸೇ.,	ನಿರ್ದೇಶಕರು	25.02.2019
7	ಶ್ರೀಮತಿ ಮಂಜುಶ್ರೀ, ಭಾ.ಆ.ಸೇ.,	ನಿರ್ದೇಶಕರು	25.02.2019

ನಿರ್ದೇಶಕರು ನೀಡಿದ ಅಮೂಲ್ಯ ಮಾರ್ಗದರ್ಶನಕ್ಕಾಗಿ ನಿಗಮವು ಕೃತಜ್ಞತೆಯನ್ನು ಸಲ್ಲಿಸುತ್ತಿದೆ.

2. ಆರ್ಥಿಕ ವರ್ಷ 2019-20ನೇ ಸಾಲಿನಲ್ಲಿ 5 ಮಂಡಳಿ ಸಭೆಗಳು ಜರುಗಿದ್ದು, ವಿವರ ಈ ಕೆಳಗಿನಂತಿವೆ:

ಕ್ರ.ಸಂ	ಸಭೆಯ ಸಂಖ್ಯೆ	ಜರುಗಿದ ದಿನಾಂಕ
1	73ನೇ	17.05.2019
2	74ನೇ	07.08.2019
3	75ನೇ	11.09.2019
4	76ನೇ	18.09.2019
5	77ನೇ	16.01.2020

3. ಮಂಡಳಿಯ ಉಪಸಮಿತಿಗಳು:

ಮಂಡಳಿಯ ಉಪ ಸಮಿತಿಗಳನ್ನು ಪ್ರಮುಖ ಅಂಶಗಳ ಮೇಲೆ ಹೆಚ್ಚು ಒತ್ತು ಕೊಡಲು ರಚಿಸಲಾಗಿದೆ.

ಅ) ಖರೀದಿ ಸಮಿತಿ:

ಎಲ್ಲಾ ಯೋಜನೆಗಳಿಗೆ ಅಥವಾ ಸ್ಟೇಷನ್/ಮಾರ್ಗಗಳ ಅಥವಾ ಇನ್ಯಾವುದೇ ಕಾರ್ಯಗಳಿಗೆ ಸಂಬಂಧಿಸಿದ ಖರೀದಿಗಳನ್ನು ಚಾಲ್ತಿಯಲ್ಲಿರುವ ಹಣಕಾಸಿನ ಅಧಿಕಾರಗಳಿಗನುಗುಣವಾಗಿ ಪರಿಗಣಿಸಲು ಖರೀದಿ ಸಮಿತಿಯನ್ನು ರಚಿಸಲಾಗಿದೆ.

ವರದಿ ದಿನಾಂಕದಂದು ಖರೀದಿ ಸಮಿತಿಯ ಸಂಯೋಜನೆ ಈ ಕೆಳಗಿನಂತಿದೆ.

ಕ್ರ.ಸಂ	ಸದಸ್ಯರು	ಹುದ್ದೆ
1	ವ್ಯವಸ್ಥಾಪಕ ನಿರ್ದೇಶಕರು, ಚಾವಿಸನಿನಿ, ಮೈಸೂರು	ಅಧ್ಯಕ್ಷರು
2	ನಿರ್ದೇಶಕರು(ತಾಂತ್ರಿಕ), ಚಾವಿಸನಿನಿ, ಮೈಸೂರು	ಸದಸ್ಯರು
3	ಮುಖ್ಯ ಇಂಜಿನಿಯರ್(ವಿದ್ಯುತ್) ಕೆ.ಪಿ.ಟಿ.ಸಿ.ಎಲ್, ಮೈಸೂರು	ಸದಸ್ಯರು
4	ಕಂಪನಿ ಕಾರ್ಯದರ್ಶಿ	ಸಂಚಾಲಕರು

ಆರ್ಥಿಕ ವರ್ಷ 2019-20ರಲ್ಲಿ, ಈ ಕೆಳಕಂಡ ದಿನಾಂಕಗಳಲ್ಲಿ 5 ಖರೀದಿ ಸಮಿತಿ ಸಭೆಗಳು ಜರುಗಿರುತ್ತದೆ:

ಕ್ರ.ಸಂ	ಸಭೆಯ ಸಂಖ್ಯೆ	ಜರುಗಿದ ದಿನಾಂಕ
1	101ನೇ	14.05.2019
2	102ನೇ	31.08.2019
3	103ನೇ	30.11.2019
4	104ನೇ	02.01.2019
5	105ನೇ	14.01.2019

ಆ) ಲೆಕ್ಕ ಪರಿಶೋಧನಾ ಸಮಿತಿ:

ವರದಿ ದಿನಾಂಕದಂದು ಲೆಕ್ಕ ಪರಿಶೋಧನಾ ಸಮಿತಿಯ ಸಂಯೋಜನೆ ಈ ಕೆಳಗಿನಂತಿದೆ:

ಕ್ರ.ಸಂ	ಸದಸ್ಯರು	ಹುದ್ದೆ
1	ನಿರ್ದೇಶಕರು (ಪ್ರಸರಣ), ಕೆ.ಪಿ.ಟಿ.ಸಿ.ಎಲ್, ಬೆಂಗಳೂರು	ಅಧ್ಯಕ್ಷರು
2	ನಿರ್ದೇಶಕರು(ತಾಂತ್ರಿಕ), ಚಾವಿಸನಿನಿ, ಮೈಸೂರು	ಸದಸ್ಯರು
3	ಸರ್ಕಾರದ ಉಪ ಕಾರ್ಯದರ್ಶಿ (ಬಿ & ಆರ್) ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ	ಸದಸ್ಯರು
4	ಕಂಪನಿ ಕಾರ್ಯದರ್ಶಿ	ಸಂಚಾಲಕರು

ಕಂಪನಿ ಕಾಯ್ದೆಯಲ್ಲಿ ಉಲ್ಲೇಖಿಸಿರುವಂತೆ, ಪರಿಣಾಮಕಾರಿ ಪಾತ್ರ ನಿರ್ವಹಿಸಲು ಲೆಕ್ಕಪರಿಶೋಧನಾ ಸಮಿತಿಯು ಈ ಕೆಳಗಿನ ಅಧಿಕಾರ ಹಾಗೂ ಜವಾಬ್ದಾರಿಗಳನ್ನು ಹೊಂದಿರುತ್ತದೆ.

ಅ) ಆಂತರಿಕ ನಿಯಂತ್ರಣ ವ್ಯವಸ್ಥೆ ಹಾಗೂ ಲೆಕ್ಕಪರಿಶೋಧಕರ ಅಭಿಪ್ರಾಯಗಳನ್ನೊಳಗೊಂಡಂತೆ ಲೆಕ್ಕಪರಿಶೋಧನೆಯ ವ್ಯಾಪ್ತಿಯ ಬಗ್ಗೆ ನಿಯತಕಾಲಿಕವಾಗಿ ಲೆಕ್ಕ ಪರಿಶೋಧಕರೊಂದಿಗೆ ಚರ್ಚಿಸುವುದು.

ಆ) ವಾರ್ಷಿಕ ಲೆಕ್ಕಪತ್ರಗಳನ್ನು ಮಂಡಳಿಗೆ ಸಲ್ಲಿಸುವ ಮುನ್ನ ಪರಿಶೀಲಿಸುವುದು.

ಇ) ಆಂತರಿಕ ನಿಯಂತ್ರಣ ವ್ಯವಸ್ಥೆಯ ಪಾಲನೆಯ ಬಗ್ಗೆ ನಿಗಾ ವಹಿಸುವುದು.

ಈ) ಮಂಡಳಿಯು ಸೂಚಿಸಿದ ಯಾವುದೇ ವಿಷಯಗಳ ಬಗ್ಗೆ ತನಿಖೆ ನಡೆಸುವುದು.

ಉ) ಹಣಕಾಸು ಹಾಗೂ ಅಪಾಯ ನಿರ್ವಹಣಾ ಕಾರ್ಯ ನೀತಿಗಳು ಮತ್ತು ವಂಚನೆ ಮತ್ತು ಮೋಸಗಳ ಬಗ್ಗೆ ಪರಿಶೀಲಿಸುವುದು.

ಊ) ವಾರ್ಷಿಕ ಬಂಡವಾಳ, ಕಂದಾಯ ಹಾಗೂ ಉಗ್ರಾಣ ಆಯವ್ಯಯಗಳನ್ನು ಮಂಡಳಿ ಸಭೆಯ ಅನುಮೋದನೆ ಪಡೆಯುವ ಮೊದಲು ಪರಿಶೀಲಿಸುವುದು.

ಋ) ನಿಗದಿತ ಅವಧಿಯೊಳಗೆ ಲೆಕ್ಕಪರಿಶೋಧನೆಗಾಗಿ ವಾರ್ಷಿಕ ಲೆಕ್ಕಪತ್ರಗಳನ್ನು ಅಂತಿಮಗೊಳಿಸುವ ಯೋಜನೆಯನ್ನು ಪರಿಶೀಲಿಸಿ, ಅನುಮೋದಿಸುವುದು.

ಎ) ದಾಸ್ತಾನು ಹಾಗೂ ಬಂಡವಾಳ ಕಾರ್ಯಗಳ ಪೂರ್ಣಗೊಂಡ ವರದಿಗಳು, ಅವುಗಳ ವಿಶೇಷಣೆ, ಮಾನದಂಡಗಳನ್ನು ಪರಿಶೀಲಿಸುವ ಆಂತರಿಕ ನಿಯಂತ್ರಣಾ ವ್ಯವಸ್ಥೆಯ ಸಮರ್ಪಕತೆಯನ್ನು ವಿಮರ್ಶಿಸುವುದು.

ಏ) ಆಂತರಿಕ ಲೆಕ್ಕಪರಿಶೋಧನೆಯ ಕಂಡಿಕೆಗಳನ್ನು ವಿಮರ್ಶಿಸುವುದು.

ಐ) ಮಹಾಲೇಖಪಾಲರ ಕಂಡಿಕೆಗಳನ್ನು ವಿಮರ್ಶಿಸುವುದು.

ಒ) ಶಿಸ್ತು ಕ್ರಮದ ಪ್ರಕರಣಗಳನ್ನು ವಿಮರ್ಶಿಸುವುದು.

ಓ) ಜಾಗೃತದಳದ ಕಾರ್ಯಗಳು, ಎಮ್.ಆರ್.ಟಿ, ಟಿ.ಎ.ಕ್ಯೂ.ಸಿ.ವಿಂಗ್ ಹಾಗೂ ವಜಾಗೊಳಿಸುವ ಬಗ್ಗೆ ವಿಮರ್ಶಿಸುವುದು.

ಔ) ವಿದ್ಯುತ್ ಖರೀದಿ ವೆಚ್ಚಗಳ ವಿಮರ್ಶೆ

ಅಂ) ಸಾಲಗಳ ವಿಮರ್ಶೆ

ಅಃ) ಶಾಸನಬದ್ಧ ಹಾಗೂ ವೆಚ್ಚ ಲೆಕ್ಕಪರಿಶೋಧಕರೊಂದಿಗೆ, ಅವರ ವರದಿಯ ಬಗ್ಗೆ ಚರ್ಚಿಸುವುದು.

ಕ) ಮಂಡಳಿಯು ವಹಿಸುವ ಇತರ ಯಾವುದೇ ವಿಷಯಗಳ ಬಗ್ಗೆ ಕ್ರಮವಹಿಸುವುದು.

ಆರ್ಥಿಕ ವರ್ಷ 2019–20ರಲ್ಲಿ, ಈ ಕೆಳಗೆ ವಿವರಿಸಿದಂತೆ ಆಡಿಟ್ ಸಮಿತಿಯು ಸಭೆ ಸೇರಿರುತ್ತದೆ.

ಕ್ರ.ಸಂ	ಸಭೆಯ ಸಂಖ್ಯೆ	ಜರುಗಿದ ದಿನಾಂಕ
1	19ನೇ	07.08.2019

ಇ) ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿ:

ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಯನ್ನು ಕಂಪನಿ ಕಾಯ್ದೆ, 2013ರ ಕಲಂ 135 ಹಾಗೂ ಭಾರತ ಸರ್ಕಾರದ ಕಾರ್ಪೊರೇಟ್ ಸಚಿವಾಲಯದಿಂದ ಅಧಿಸೂಚಿಸಲ್ಪಟ್ಟಿರುವ ಕಂಪನಿಗಳು (ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ) ನಿಯಮಗಳು, 2014 ರಡಿ ಸ್ಥಾಪಿಸಲಾಗಿದೆ.

ವರದಿ ದಿನಾಂಕದಂದು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಯ ಸಂಯೋಜನೆ ಈ ಕೆಳಗಿನಂತಿದೆ.

ಕ್ರ.ಸಂ	ಸದಸ್ಯರು	ಹುದ್ದೆ
1	ವ್ಯವಸ್ಥಾಪಕ ನಿರ್ದೇಶಕರು, ಚಾವಿಸನಿನಿ, ಮೈಸೂರು	ಅಧ್ಯಕ್ಷರು
2	ನಿರ್ದೇಶಕರು(ತಾಂತ್ರಿಕ), ಚಾವಿಸನಿನಿ, ಮೈಸೂರು	ಸದಸ್ಯರು
3	ಮುಖ್ಯ ಇಂಜಿನಿಯರ್(ವಿದ್ಯುತ್) ಕೆ.ಪಿ.ಟಿ.ಸಿ.ಎಲ್, ಮೈಸೂರು	ಸದಸ್ಯರು
4	ಕಂಪನಿ ಕಾರ್ಯದರ್ಶಿ	ಸಂಚಾಲಕರು

ದಿನಾಂಕ: 21.09.2017ರಲ್ಲಿ ಜರುಗಿದ ನಿಗಮದ 65ನೇ ಮಂಡಳಿ ಸಭೆಯಲ್ಲಿ ಸಿ.ಎಸ್.ಆರ್ ನೀತಿಯನ್ನು ಅನುಮೋದಿಸಲಾಗಿದೆ. ನೀತಿಯ ಸಂಕ್ಷಿಪ್ತ ರೂಪರೇಖೆಯನ್ನು ಈ ಕೆಳಗೆ ವಿವರಿಸಲಾಗಿದೆ.

ಕಂಪನಿ ಕಾಯ್ದೆ, 2013ರ ಷೆಡ್ಯೂಲ್ VII ರಲ್ಲಿ ಉಲ್ಲೇಖಿಸಲಾದ ಕೆಳಗಿನ ವಿಭಾಗಗಳ ಅಡಿಯಲ್ಲಿ ನಿಗಮದ ಎಲ್ಲಾ ವರ್ಗಗಳ ಸಮಗ್ರ ಬೆಳವಣಿಗೆಯ ಗುರಿಯನ್ನು ಸಿ.ಎಸ್.ಆರ್ ಹೊಂದಿದೆ.

- ಶಿಕ್ಷಣ, ಗ್ರಾಹಕರ ಶಿಕ್ಷಣ ಸೇರಿದಂತೆ.
- ಪರಿಸರ ಮತ್ತು ವನ್ಯ ಜೀವಿಗಳ ರಕ್ಷಣೆ.
- ಕ್ರೀಡೆ ಮತ್ತು ಯುವ ಸಬಲೀಕರಣಕ್ಕೆ ಉತ್ತೇಜನ
- ಗ್ರಾಮೀಣ ಜನರಲ್ಲಿ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವುದು.
- ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ.
- ಕಂಪನಿ ಕಾಯ್ದೆ, 2013ರ ಶೆಡ್ಯೂಲ್ VII ರಡಿ ಕಾಲ ಕಾಲಕ್ಕೆ ಸೂಚಿಸಲ್ಪಡುವ ಯಾವುದೇ ಹೆಚ್ಚುವರಿ ವಿಷಯಗಳು.

ಸಿ.ಎಸ್.ಆರ್ ನೀತಿಯು http://cescmysore.karnataka.gov.in/ ವೆಬ್‌ಸೈಟ್‌ನಲ್ಲಿ ಲಭ್ಯವಿದೆ.

ಕಳೆದ ಮೂರು ವರ್ಷಗಳಲ್ಲಿ ನಿಗಮವು ಸರಾಸರಿ ನಿವ್ವಳ ನಷ್ಟವನ್ನು ಅನುಭವಿಸಿದೆ. ಆದ ಕಾರಣ, ಸಿಎಸ್‌ಆರ್ ಬಜೆಟ್‌ನ್ನು ಹಂಚಿಕೆ ಮಾಡಿರುವುದಿಲ್ಲ.

ಈ) ನಾಮ ನಿರ್ದೇಶನ ಮತ್ತು ಸಂಭಾವನೆ ಸಮಿತಿ:

ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿರುವ ಅಧಿಸೂಚನೆ ಸಂಖ್ಯೆ ಜಿ.ಎಸ್.ಆರ್. 463 (ಇ) ದಿನಾಂಕ. 05.06.2015ರಂತೆ, ಹಿರಿಯ ಅಧಿಕಾರಿ ಹಾಗೂ ಇತರ ಸಿಬ್ಬಂದಿಗಳ ನೇಮಕಾತಿ ಹೊರತು ಪಡಿಸಿ, ಕಂಪನಿ ಕಾಯ್ದೆ, 2013 ರ ಕಲಂ 178 ರ ಉಪ ಕಲಂ (2) (3) ಹಾಗೂ (4) ಸರ್ಕಾರಿ ಕಂಪನಿಗಳಿಗೆ ಅನ್ವಯವಾಗುವುದಿಲ್ಲ.

ನೇಮಕಾತಿಗೆ ಅರ್ಹತಾ ಮಾನದಂಡಗಳು, ಅಭ್ಯರ್ಥಿಗಳ ಆಯ್ಕೆ ವಿಧಾನ, ಸೇವಾ ಶರತ್ತುಗಳು ಸೇರಿದಂತೆ ಎಲ್ಲಾ ಸಿಬ್ಬಂದಿ ವಿಷಯಗಳನ್ನು ಕಂಪನಿಯ ನೌಕರರ ಸೇವಾ ನಿಯಮಗಳು ಮತ್ತು ನೇಮಕಾತಿ ಮತ್ತು ಬಡ್ತಿ ನಿಯಮಗಳಲ್ಲಿ ತಿಳಿಸಲಾಗಿದೆ. ಕೆ.ಪಿ.ಟಿ.ಸಿ.ಎಲ್ ಸಂಸ್ಥೆಯ ನೇಮಕಾತಿ ಮತ್ತು ಬಡ್ತಿ ನಿಯಮಗಳನ್ನು ಮಂಡಳಿ ಸಭೆಯಲ್ಲಿ ಅಂಗೀಕರಿಸಿ ಕಾಲಕಾಲಕ್ಕೆ ತಿದ್ದುಪಡಿಗಳನ್ನೊಳಗೊಂಡಂತೆ ಜಾರಿಗೊಳಿಸಲಾಗುತ್ತದೆ. ಈ ಹಿನ್ನಲೆಯಲ್ಲಿ ಪ್ರತ್ಯೇಕ ಸಮಿತಿಯನ್ನು ರಚಿಸಲಾಗಿರುವುದಿಲ್ಲ.

ಉ) ಎರವಲು ಸಮಿತಿ:

ದಿನಾಂಕ: 25.06.2020ರಂದು ಜರುಗಿದ ನಿಗಮದ 78ನೇ ಮಂಡಳಿ ಸಭೆಯ ನಿರ್ಣಯಗಳ ಪ್ರಕಾರ ಕಛೇರಿ ಆದೇಶ ಸಂಖ್ಯೆ: CS/A/ಈ-31/2020-21/7454 ದಿನಾಂಕ: 05.08.2020 ರನ್ವಯ ಎರವಲು ಸಮಿತಿಯನ್ನು ವಿಸರ್ಜಿಸಲಾಗಿದ್ದು, ಎಲ್ಲಾ ಸಾಲ ಪ್ರಸ್ತಾಪಗಳನ್ನು ಪರಿಗಣನೆ ಮತ್ತು ಅನುಮೋದನೆಗಾಗಿ ಮಂಡಳಿಯ ಮುಂದೆ ಮಂಡಿಸಲಾಗುತ್ತದೆ.

4. ಎಮ್.ಜಿ.ಟಿ-9 ವಾರ್ಷಿಕ ರಿಟರ್ನ್ಸ್‌ನ ಸಾರಗಳು:

ಕಂಪನಿ ಕಾಯ್ದೆ, 2013ರ ಕಲಂ 92(3) ಮತ್ತು 134(3) ಹಾಗೂ ಕಂಪನಿ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014ರ ನಿಯಮ 12(1) ರ ಪ್ರಕಾರ ವಾರ್ಷಿಕ ರಿಟರ್ನ್ಸ್ (ನಮೂನೆ ಎಮ್.ಜಿ.ಟಿ-

9)ನ ಸಾರಗಳು ಕಂಪನಿಯ ವೆಬ್‌ಸೈಟ್ https://cescmysore.karnataka.gov.in/ ನಲ್ಲಿ ಲಭ್ಯವಿರುತ್ತದೆ.

5. ಸೆಕ್ರೆಟೇರಿಯಲ್ ಪರಿಶೋಧಕರು:

ಕಂಪನಿ ಕಾಯ್ದೆ, 2013ರ ಕಲಂ 204 ರಡಿ ಹಣಕಾಸು ವರ್ಷ 2019-20 ನೇ ಸಾಲಿಗೆ ಶ್ರೀ. ಕೆ.ಎನ್ ನಾಗೇಶ್ ರಾವ್, ವೃತ್ತಿಪರ ಕಂಪನಿ ಕಾರ್ಯದರ್ಶಿ, ಬೆಂಗಳೂರು, ರವರನ್ನು ಸೆಕ್ರೆಟೇರಿಯಲ್ ಆಡಿಟರ್ ಆಗಿ ಸೆಸ್ಕ್ ಮಂಡಳಿಯು ನೇಮಿಸಿರುತ್ತದೆ. ಸದರಿ ಪರಿಶೋಧಕರು ಶಾಸನಬದ್ಧ ಅಗತ್ಯತೆಗನುಗುಣವಾಗಿ ಪರಿಶೋಧನೆ ಪೂರ್ಣಗೊಳಿಸಿ ವರದಿಯನ್ನು ಸಲ್ಲಿಸಿರುತ್ತಾರೆ. ವರದಿಯನ್ನು ಹಾಗೂ ವರದಿಯ ಅವಲೋಕನ / ಟೀಕೆಗಳಿಗೆ ಆಡಳಿತ ವರ್ಗದ ಉತ್ತರವನ್ನು **ಅನುಬಂಧ-1** ರಲ್ಲಿ ಲಗತ್ತಿಸಲಾಗಿದೆ.

6. ಶಾಸನಬದ್ಧ ಲೆಕ್ಕಪರಿಶೋಧಕರು:

ಕಂಪನಿ ಕಾಯ್ದೆ, 2013 ರ ಕಲಂ 139 ಹಾಗೂ ಸಂಬಂಧಿತ ನಿಯಮಗಳನ್ವಯ ಮಹಾಲೇಖಪಾಲರು ಮೇ॥ ರಮೇಶ ಎಮ್.ವೈ. ಆಂಡ್ ಕಂಪನಿ., ಚಾರ್ಟೆಡ್ ಅಕೌಂಟೆಂಟ್ಸ್, ಮೈಸೂರು, ರವರನ್ನು ವರದಿ ವರ್ಷದ ಶಾಸನಬದ್ಧ ಲೆಕ್ಕಪರಿಶೋಧಕರಾಗಿ ನೇಮಿಸಿರುತ್ತಾರೆ.

7. ವೆಚ್ಚ ಪರಿಶೋಧಕರು:

ಕಂಪನಿ ಕಾಯ್ದೆ, 2013ರ ಕಲಂ 148 ರನ್ವಯ ಹಣಕಾಸು ವರ್ಷ 2019-20ನೇ ಸಾಲಿಗೆ ನಿಗಮದ ವೆಚ್ಚ ಲೆಕ್ಕಪತ್ರಗಳನ್ನು ಪರಿಶೋಧಿಸಲು ಮೆ॥ ಎನ್.ಎಸ್. ಮತ್ತು ಅಸೋಸಿಯೇಟ್ಸ್, ಬೆಂಗಳೂರು, ರವರನ್ನು ವೆಚ್ಚ ಪರಿಶೋಧಕರನ್ನಾಗಿ ಸೆಸ್ಕ್ ಮಂಡಳಿಯು ನೇಮಿಸಿರುತ್ತಾರೆ.

8. ನಿರ್ದೇಶಕರ ಜವಾಬ್ದಾರಿ ಹೇಳಿಕೆ:

ಕಂಪನಿ ಕಾಯ್ದೆ, 2013ರ ಕಲಂ 134 (3) (ಸಿ) ರನ್ವಯ ನಿರ್ದೇಶಕರು ತಮ್ಮ ಉತ್ತಮ ತಿಳುವಳಿಕೆಗಳಿಗನು ಗುಣವಾಗಿ ಈ ಕೆಳಗಿನ ಹೇಳಿಕೆಗಳನ್ನು ದಾಖಲಿಸಲು ಇಚ್ಛಿಸುತ್ತಾರೆ.

ಅ) ವಾರ್ಷಿಕ ಲೆಕ್ಕಪತ್ರಗಳ ತಯಾರಿಕೆಯಲ್ಲಿ ಅನ್ವಯವಾಗುವ ಲೆಕ್ಕಪತ್ರ ಮಾನದಂಡಗಳನ್ನು ಅನುಸರಿಸಲಾಗಿದೆ ಮತ್ತು ಭೌತಿಕವಾಗಿ ನಿರ್ಗಮಿಸುವಲ್ಲಿ ಸೂಕ್ತ ವಿವರಣೆಗಳನ್ನು ನೀಡಲಾಗಿದೆ.

ಆ) ಲೆಕ್ಕಪತ್ರಗಳ ನೀತಿಯನ್ನು ಆಯ್ಕೆ ಮಾಡಿ ಸಮಂಜಸವಾಗಿ ಅನ್ವಯಿಸಲಾಗಿದೆ ಮತ್ತು ಆರ್ಥಿಕ ವರ್ಷದ ಕೊನೆಯಲ್ಲಿ ನಿಗಮದ ವ್ಯವಹಾರಗಳ ಸ್ಥಿತಿ ಮತ್ತು ಆ ಅವಧಿಗೆ ನಿಗಮದ ಲಾಭ ಅಥವಾ ನಷ್ಟದ ಬಗ್ಗೆ ವಾಸ್ತವಿಕ ಮತ್ತು ನ್ಯಾಯಯುತವಾದ ದೃಷ್ಟಿಕೋನವನ್ನು ನೀಡುವಂತೆ ಸಮಂಜಸವಾದ ಮತ್ತು ವಿವೇಕಯುತವಾದ ತೀರ್ಪುಗಳನ್ನು ಮತ್ತು ಅಂದಾಜುಗಳನ್ನು ಮಾಡಲಾಗಿದೆ.

ಇ) ಕಂಪನಿ ಕಾಯ್ದೆ, 2013 ರನ್ವಯ, ಕಂಪನಿಯ ಆಸ್ತಿಗಳ ರಕ್ಷಣೆ ಹಾಗೂ ಮೋಸ ಹಾಗೂ ಇತರ ಅಕ್ರಮಗಳನ್ನು ತಡೆಯುವ ಹಾಗೂ ಕಂಡುಹಿಡಿಯುವ ನಿಟ್ಟಿನಲ್ಲಿ ಅಗತ್ಯ ಲೆಕ್ಕಪತ್ರ ದಾಖಲೆಗಳ ನಿರ್ವಹಣೆಯಲ್ಲಿ ಸಾಕಷ್ಟು ನಿಗಾ ವಹಿಸಲಾಗಿದೆ.

ಈ) ಮಾರ್ಚ್, 31, 2020ಕ್ಕೆ ಅಂತ್ಯಗೊಂಡ ಹಣಕಾಸು ವರ್ಷದ ವಾರ್ಷಿಕ ಲೆಕ್ಕಪತ್ರಗಳನ್ನು ಪ್ರಚಲಿತ ಪದ್ಧತಿಯಂತೆ ತಯಾರಿಸಲಾಗಿದೆ.

ಉ) ಅನ್ವಯವಾಗುವ ಕಾನೂನುಗಳ ಪಾಲನೆಯನ್ನು ದೃಢೀಕರಿಸಲು ಸೂಕ್ತ ವ್ಯವಸ್ಥೆಯನ್ನು ರೂಪಿಸಲಾಗಿದೆ ಹಾಗೂ ಸದರಿ ವ್ಯವಸ್ಥೆಗಳು ಸಾಕಷ್ಟು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿವೆ.

9. ಸ್ವತಂತ್ರ ನಿರ್ದೇಶಕರ ಘೋಷಣೆಗಳು:

ಕಾರ್ಪೊರೇಟ್ ಸಚಿವಾಲಯದ ಅಧಿಸೂಚನೆ ಸಂಖ್ಯೆ ಜಿ.ಎಸ್.ಆರ್. 463 (ಇ) ದಿನಾಂಕ ಜೂನ್ 5, 2015 ರನ್ವಯ, ಕಂಪನಿ ಕಾಯ್ದೆ, 2013ರ ಕಲಂ 149(6) (ಸಿ) ಸರ್ಕಾರಿ ಕಂಪನಿಗಳಿಗೆ ಅನ್ವಯವಾಗುವುದಿಲ್ಲ.

ಸ್ವತಂತ್ರ ನಿರ್ದೇಶಕರ ನೇಮಕಾತಿಯ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಸರ್ಕಾರದಿಂದ ಉತ್ತರವನ್ನು ನಿರೀಕ್ಷಿಸಲಾಗಿದೆ.

10. ಅಪಾಯ ನಿರ್ವಹಣೆ

ನಿಗಮವು ವಿದ್ಯುತ್ ವಿತರಣಾ ಕಂಪನಿಯಾಗಿರುವ ಕಾರಣ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಮಾರ್ಗಸೂಚಿಗಳು/ಸೂಚನೆಗಳಿಂದ ನಿಯಂತ್ರಿತವಾಗಿದೆ. ಮಂಡಳಿಯು ಆಂತರಿಕ ಮತ್ತು ಬಾಹ್ಯ ಅಪಾಯಗಳನ್ನು ಪರಿಶೀಲಿಸಿ, ಅವುಗಳನ್ನು ನಿಯಂತ್ರಿಸಲು ಕಾಲಕಾಲಕ್ಕೆ ಸೂಕ್ತ ಕ್ರಮಗಳನ್ನು ಜಾರಿಗೊಳಿಸುತ್ತಿದೆ.

ಕಂಪನಿಯು ಅದರ ಹಣಕಾಸು ಸಾಧನಗಳ ಬಳಕೆಯಿಂದ ಕೆಳಕಂಡ ಅಪಾಯಗಳಿಗೆ ತೆರೆದುಕೊಂಡಿರುತ್ತದೆ.

ಅ) **ಸಾಲಗಳ ಅಪಾಯ:**

ಗ್ರಾಹಕರು ಅಥವಾ ಹಣಕಾಸು ಸಾಧನಗಳಿಗೆ ಸಂಬಂಧಿತ ವ್ಯಕ್ತಿಗಳು ಅವುಗಳ ಕರಾರಿನ ಕರ್ತವ್ಯಗಳನ್ನು ಪೂರೈಸಲು ವಿಮುಖರಾದಾಗ ಕಂಪನಿಗಾಗುವ ಆರ್ಥಿಕ ನಷ್ಟಗಳು ಸಾಲಗಳ ಅಪಾಯಗಳಾಗಿರುತ್ತವೆ ಹಾಗೂ ಇವುಗಳು ಪ್ರಮುಖವಾಗಿ ಕಂಪನಿಯ ವ್ಯಾಪಾರ ಸಂಬಂಧಿತ ಬರತಕ್ಕವುಗಳು, ಸಿಬ್ಬಂದಿ ಮುಂಗಡಗಳು ಹಾಗೂ ಬ್ಯಾಂಕುಗಳು ಮತ್ತು ಇತರರಲ್ಲಿ ಇರಿಸಿದ ಠೇವಣಿಗಳಿಂದ ಉದ್ಭವಿಸುತ್ತದೆ.

ವ್ಯಾಪಾರ ಸಂಬಂಧಿತ ಬರತಕ್ಕವುಗಳು ಮುಖ್ಯವಾಗಿ ವಿವಿಧ ವರ್ಗಗಳ ಗ್ರಾಹಕರಿಗೆ ವಿದ್ಯುತ್ ಮಾರಾಟದ ಬಾಬ್ತು ಸ್ವೀಕೃತಿಗಳು ಹಾಗೂ ಇತರೆ ವಿದ್ಯುತ್ ಸರಬರಾಜು ಕಂಪನಿಗಳಿಂದ ಬರಬೇಕಾದ ಮೊತ್ತಗಳನ್ನು ಒಳಗೊಂಡಿರುತ್ತದೆ. ಬರತಕ್ಕವುಗಳ ಅಪಾಯವನ್ನು ಎದುರಿಸಲು ಅಂತಹ ಗ್ರಾಹಕರಿಂದ ಕನಿಷ್ಟ 2 ತಿಂಗಳ ಭದ್ರತಾ ಠೇವಣಿ ಸ್ವೀಕರಿಸಲಾಗುತ್ತಿದೆ (ನಿಯಂತ್ರಕರಿಂದ ಕಡ್ಡಾಯಗೊಳಿಸಲ್ಪಟ್ಟ) ಬರತಕ್ಕವುಗಳ ಇನ್ನೊಂದು ಪ್ರಮುಖ ಪಾಲುದಾರನೆಂದರೆ ಇಂಧನ ಸಮನ್ವಯಗಳಿಗಾಗಿ ಇತರೆ ವಿ.ಸ ಕಂಪನಿಗಳಿಂದ ಬರಬೇಕಾಗಿರುವುದು. ಇವುಗಳು ಕರ್ನಾಟಕ ಸರ್ಕಾರದ ಸಾರ್ವಭೌಮ ಕಂಪನಿಗಳಾಗಿರುವುದರಿಂದ ಕೆಟ್ಟ ಸಾಲಗಳಾಗಿ ಪರಿವರ್ತನೆಗೊಳ್ಳುವ ಅಪಾಯವನ್ನು ಮುಂದಾಲೋಚಿಸಲಾಗಿಲ್ಲ. ಮುಂದುವರೆದು ಅನುಮಾನಾಸ್ಪದ ಸಾಲಗಳ ಬಾಬ್ತು ಒಟ್ಟು ಬರತಕ್ಕವುಗಳ ಮೇಲೆ ಅವಕಾಶವನ್ನು ಕಲ್ಪಿಸಲಾಗಿದೆ.

ಕಂಪನಿಯು ತನ್ನ ಬ್ಯಾಂಕ್ ಠೇವಣಿಗಳನ್ನು ವೈವಿಧ್ಯಗೊಳಿಸಿ ಪ್ರಸಿದ್ಧವಾದ ಹಾಗೂ ವಿಶ್ವಾಸಾರ್ಹವಾದ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಮಾತ್ರ ಠೇವಣಿಯಿರಿಸಿದೆ.

ಆ) **ದ್ರವ್ಯತಾ ಅಪಾಯ:**

ನಗದು ಅಥವಾ ಇನ್ನೊಂದು ಆರ್ಥಿಕ ಆಸ್ತಿಯನ್ನು ವಿತರಿಸುವುದರ ಮೂಲಕ ಇತ್ಯರ್ಥಗೊಳಿಸಬೇಕಾದ ಆರ್ಥಿಕ ಜವಾಬ್ದಾರಿಗಳಿಗೆ ಸಂಬಂಧಿಸಿದ ಕರ್ತವ್ಯಗಳನ್ನು ಪೂರೈಸುವಲ್ಲಿ ಕಂಪನಿಯು ಕಷ್ಟವನ್ನು ಎದುರಿಸಿದ್ದಲ್ಲಿ ಅಂತಹ ಅಪಾಯವು ದ್ರವ್ಯತಾ ಅಪಾಯವಾಗಿರುತ್ತದೆ. ಸಾಧ್ಯವಾದಷ್ಟು ಮಟ್ಟಿಗೆ, ಸಾಮಾನ್ಯ ಅಥವಾ ಒತ್ತಡದ ಪರಿಸ್ಥಿತಿಗಳಲ್ಲಿಯೂ, ಕಂಪನಿಗೆ ಒಪ್ಪಿಕೊಳ್ಳಲಾಗದ ನಷ್ಟಗಳು ಸಂಭವಿಸದಂತೆ, ಕಂಪನಿಯ ಖ್ಯಾತಿಗೆ ಚ್ಯುತಿ ಬಾರದಂತೆ ಕಂಪನಿಯ ಜವಾಬ್ದಾರಿಗಳಾದ ನಿರೀಕ್ಷಿತ ಕಾಯಾಚರಣೆ ವೆಚ್ಚಗಳು, ಹಣಕಾಸು ಹೊಣೆಗಾರಿಕೆಗಳ ಮರುಪಾವತಿಗಳಿಗೆ ಅಗತ್ಯವಿರುವಷ್ಟು ನಗದನ್ನು ಹೊಂದಲು ಸಾಕಷ್ಟು ದ್ರವ್ಯತೆಯಿರುವುದನ್ನು ಖಚಿತಪಡಿಸಿಕೊಳ್ಳುವುದು ಕಂಪನಿಯ ದ್ರವ್ಯತೆಯನ್ನು ನಿರ್ವಹಿಸುವ ಪ್ರಮುಖ ಕಾರ್ಯವಿಧಾನವಾಗಿದೆ.

ಪ್ರಾಪ್ತವಾದ ಹಣಕಾಸು ಜವಾಬ್ದಾರಿಗಳನ್ನು ಪೂರೈಸಲು, ಬ್ಯಾಂಕ್ ಠೇವಣಿಗಳನ್ನು ಒಳಗೊಂಡಂತೆ ನಗದು ಮತ್ತು ನಗದು ಸಮಾನಗಳು ಹಾಗೂ ಬದ್ಧತೆಯುಳ್ಳ ಸಾಲ ಸೌಲಭ್ಯಗಳ ಲಭ್ಯತೆಯನ್ನು ಸಾಕಷ್ಟು ಪ್ರಮಾಣದಲ್ಲಿ ಕಾಪಾಡಿಕೊಳ್ಳುವುದರ ಮೂಲಕ ಕಂಪನಿಯು ತನ್ನ ದ್ರವ್ಯತಾ ಅಪಾಯಗಳನ್ನು ನಿರ್ವಹಿಸುತ್ತದೆ. ಆರ್ಥಿಕ ಆಸ್ತಿಗಳು ಹಾಗೂ ಜವಾಬ್ದಾರಿಗಳ ಪಕ್ವತೆಯ ತುಲನೆಯಿಂದ, ಜವಾಬ್ದಾರಿಗಳನ್ನು ನಿರ್ವಹಿಸಲು ಅಗತ್ಯವಿರುವ ದ್ರವ್ಯ ಆಸ್ತಿಗಳ ಮಟ್ಟವನ್ನು ಪರಿಗಣಿಸಿ, ಪ್ರತೀ ವರ್ಷದ ಆರಂಭದಲ್ಲಿ ನಗದು ಹರಿವನ್ನು ಅಂದಾಜಿಸುವುದನ್ನೂ ಸಹ ದ್ರವ್ಯತಾ ನಿರ್ವಹಣೆಯು ಒಳಗೊಂಡಿರುತ್ತದೆ.

ಸಾಲಗಳು ಮತ್ತು ವ್ಯಾಪಾರ ಪಾವತಿಗಳನ್ನು, ಆಸ್ತಿಗಳು ಹಾಗೂ ಬರತಕ್ಕವುಗಳ ಭದ್ರತೆಗೆ ಒಳಪಡಿಸಲಾಗಿದೆ. ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು, ವಿದ್ಯುತ್ ಖರೀದಿಗಾಗಿ ಪಾವತಿಗಳ ಪ್ರಮುಖ ಪಾಲುದಾರನಾಗಿರುತ್ತದೆ.

ಇ) ಮಾರುಕಟ್ಟೆ ಅಪಾಯ

ಒಂದು ಆರ್ಥಿಕ ಸಾಧನದ ಮೌಲ್ಯದ ಬದಲಾವಣೆಯ ಕಾರಣದಿಂದ, ಭವಿಷ್ಯದ ಆದಾಯಗಳು ಅಥವಾ ವಾಸ್ತವಿಕ ಮೌಲ್ಯ ಅಥವಾ ಭವಿಷ್ಯದ ನಗದು ಹರಿವಿನಲ್ಲಾಗುವ ನಷ್ಟದ ಅಪಾಯವು ಮಾರುಕಟ್ಟೆ ಅಪಾಯವಾಗಿರುತ್ತದೆ. ಬಡ್ಡಿ ದರಗಳಲ್ಲಿನ ಬದಲಾವಣೆ, ವಿದೇಶಿ ವಿನಿಮಯ ದರಗಳಲ್ಲಿನ ಬದಲಾವಣೆ ಮತ್ತು ಮಾರುಕಟ್ಟೆ ಅಪಾಯಗಳ ಸೂಕ್ಷ್ಮ ಸಾಧನಗಳ ಮೇಲೆ ಪರಿಣಾಮ ಬೀರುವ ಇತರೆ ಮಾರುಕಟ್ಟೆ ಬದಲಾವಣೆಗಳ ಪರಿಣಾಮವಾಗಿ ಆರ್ಥಿಕ ಸಾಧನಗಳ ಮೌಲ್ಯದಲ್ಲಿ ಬದಲಾವಣೆಗಳಾಗುತ್ತದೆ. ಸ್ಥಿರ ಹಾಗೂ ಫ್ಲೋಟಿಂಗ್ ಬಡ್ಡಿ ದರಗಳಲ್ಲಿ ಸಾಲಗಳನ್ನು ಪಡೆದುಕೊಂಡಿರುವುದರಿಂದ ಕಂಪನಿಯು ಪ್ರಮುಖವಾಗಿ ಬಡ್ಡಿ ದರಗಳ ಅಪಾಯಕ್ಕೆ ತೆರೆದುಕೊಂಡಿರುತ್ತದೆ.

11. ಸಾಲಗಳು, ಖಾತರಿಗಳು ಮತ್ತು ಹೂಡಿಕೆಗಳ ವಿವರಗಳು:

ಕಂಪನಿ ಕಾಯ್ದೆ, 2013ರ ಕಲಂ 186 ರಡಿ, ವರದಿ ವರ್ಷದಲ್ಲಿ ಕಂಪನಿಯು ಯಾವುದೇ ಸಾಲಗಳು, ಖಾತರಿಗಳು ಅಥವಾ ಹೂಡಿಕೆಗಳನ್ನು ಮಾಡಿರುವುದಿಲ್ಲ.

12. ಕಂಪನಿ ಕಾಯ್ದೆ, 2013ರ ಕಲಂ 188 ರಡಿ ಸಂಬಂಧಿಕರೊಂದಿಗಿನ ವ್ಯವಹಾರಗಳು:

ಕಂಪನಿ ಕಾಯ್ದೆ, 2013ರ ಕಲಂ 188ರಡಿ ಆಕರ್ಷಿತವಾಗುವ ಯಾವುದೇ ರೀತಿಯ ಸಂಬಂಧಿಕರೊಂದಿಗಿನ ವ್ಯವಹಾರಗಳನ್ನು ಸದರಿ ಹಣಕಾಸು ವರ್ಷದಲ್ಲಿ ಜರುಗಿಸಿರುವುದಿಲ್ಲ.

13. ಮಹತ್ತರ ಬದಲಾವಣೆಗಳು ಹಾಗೂ ಬದ್ಧತೆಗಳು:

2019-20 ರ ಆರ್ಥಿಕ ವರ್ಷದ ಅಂತ್ಯ ಹಾಗೂ ವರದಿ ದಿನಾಂಕದ ನಡುವೆ ಕಂಪನಿಯ ಹಣಕಾಸು ಸ್ಥಿತಿಗತಿಯ ಮೇಲೆ ಪರಿಣಾಮ ಬೀರುವಂತಹ ಯಾವುದೇ ಮಹತ್ತರ ಬದಲಾವಣೆಗಳು ಹಾಗೂ ಬದ್ಧತೆಗಳು ಉಂಟಾಗಿರುವುದಿಲ್ಲ.

14. ಅನುಪಾಲನೆಗಳು:

2019-20ನೇ ಸಾಲಿನಲ್ಲಿ ಸೆಸ್ಕ್ ಅನ್ವಯವಾಗುವ ಎಲ್ಲಾ ಸೆಕ್ರೆಟೇರಿಯಲ್ ಸ್ಟಾಂಡರ್ಡ್‌ಗಳ ನಿಯಮಗಳನ್ನು ಪಾಲಿಸಿರುತ್ತದೆ.

ಇಂಧನ ಉಳಿತಾಯ:

i. **ಇಂಧನ ಉಳಿತಾಯಕ್ಕೆ ಕೈಗೊಂಡ ಕ್ರಮ ಮತ್ತು ಪರಿಣಾಮ:**

ಅ) ಎಲ್ಲರಿಗೂ ಕೈಗೆಟಕುವ ಎಲ್‌ಇಡಿಗಳನ್ನು ವಿತರಿಸುವ ಉನ್ನತ ಜ್ಯೋತಿ ಯೋಜನೆ (ಉಜಾಲ) (ಡಿಇಎಲ್‌ಪಿ)

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತವು (ಚಾವಿಸನಿನಿ) "ಹೊಸ ಬೆಳಕು" ಶೀರ್ಷಿಕೆಯಡಿಯಲ್ಲಿ ಜನಪ್ರಿಯವಾಗಿರುವ ಎಲ್ಲರಿಗೂ ಎಲ್‌ಇಡಿಗಳನ್ನು ದೊರಕಿಸುವ (ಉಜಾಲಾ) ಉನ್ನತ ಜ್ಯೋತಿ ಯೋಜನೆಯನ್ನು ಜಾರಿಗೊಳಿಸಿರುತ್ತದೆ.

ಇಂಧನ ಸಚಿವಾಲಯದ ಆಡಳಿತಾತ್ಮಕ ನಿಯಂತ್ರಣದಲ್ಲಿರುವ ಸಾರ್ವಜನಿಕ ಉದ್ದಿಮೆಯಾದ ಎನರ್ಜಿ ಎಫಿಷಿಯೆನ್ಸಿ ಸರ್ವಿಸಸ್ ಲಿಮಿಟೆಡ್ (ಇಇಎಸ್‌ಎಲ್) ಸಂಸ್ಥೆಯನ್ನು ರಾಜ್ಯದಲ್ಲಿ ಉಜಾಲಾ ಜಾರಿಗೊಳಿಸುವ ಏಜೆನ್ಸಿಯಾಗಿ ಇಂಧನ ಇಲಾಖೆ, ಕರ್ನಾಟಕ ಸರ್ಕಾರವು ಗೊತ್ತುಪಡಿಸಿರುತ್ತದೆ. ಈ ಕಾರ್ಯಕ್ರಮವನ್ನು ಮೈಸೂರಿನಲ್ಲಿ ದಿನಾಂಕ: 11.12.2015 ರಂದು ಕರ್ನಾಟಕದ ಮಾನ್ಯ ಮುಖ್ಯಮಂತ್ರಿಯವರು ಉದ್ಘಾಟಿಸಿರುತ್ತಾರೆ.

ಅ. ಗ್ರಾಹಕರಿಗೆ ಕೈಗೆಟಕುವ ದರದಲ್ಲಿ ಎಲ್‌ಇಡಿ ಬಲ್ಬ್, ಎಲ್‌ಇಡಿ ಟ್ಯೂಬ್ ಲೈಟ್‌ಗಳು ಮತ್ತು ಹೆಚ್ಚು ಕಾರ್ಯಕ್ಷಮತೆಯುಳ್ಳ ಫ್ಯಾನ್‌ಗಳ ಮಾರಾಟವನ್ನು ಹಮ್ಮಿಕೊಳ್ಳಲಾಗಿದೆ. ಪ್ರಸ್ತುತ ಪ್ರತಿ ಎಲ್‌ಇಡಿ ಬಲ್ಬ್‌ಗಳು ₹ 70/-, ಎಲ್‌ಇಡಿ ಟ್ಯೂಬ್ ಲೈಟ್‌ಗಳು ₹220/- ಮತ್ತು ಹೆಚ್ಚು ಕಾರ್ಯಕ್ಷಮತೆಯುಳ್ಳ ಫ್ಯಾನ್‌ಗಳು ₹ 1110/- ರಂತೆ ಲಭ್ಯವಾಗುತ್ತಿದೆ.

ಆ. ವಿದ್ಯುತ್ ಕಾರ್ಯಕ್ಷಮತೆಯುಳ್ಳ ವಸ್ತುಗಳ ವಿತರಣೆಗಾಗಿ ಎಲ್‌ಇಡಿ ಕೌಂಟರ್‌ಗಳನ್ನು ಪ್ರಮುಖವಾಗಿ ಚಾವಿಸನಿನಿ ಕಛೇರಿ ಆವರಣದೊಳಗೆ ತೆರೆಯಲಾಗಿದೆ. ₹45.02 ಲಕ್ಷ ಬಲ್ಬ್, 60,090 ಸಂಖ್ಯೆಯ ಎಲ್‌ಇಡಿ ಟ್ಯೂಬ್ ಲೈಟ್ ಮತ್ತು 14,482 ಸಂಖ್ಯೆಯ ಹೆಚ್ಚು ಕಾರ್ಯಕ್ಷಮತೆಯುಳ್ಳ ಫ್ಯಾನ್‌ಗಳನ್ನು ಸೆಸ್ಕ್ ವ್ಯಾಪ್ತಿಯಲ್ಲಿ ವಿತರಿಸಲಾಗಿದೆ. ಇದರಿಂದ ಚಾವಿಸನಿನಿಗೆ ವಾರ್ಷಿಕ ಸುಮಾರು 90.49ಎಂ.ಯೂ ವಿದ್ಯುತ್ ಉಳಿತಾಯವಾಗುತ್ತಿದೆ.

ವಿದ್ಯುತ್ ಉಳಿತಾಯದ ವಿವರಗಳು ಈ ಕೆಳಗಿನಂತಿವೆ.

ಅವಧಿ	2015-16	2016-17	2017-18	2018-19	2019-20	ಒಟ್ಟು
ಮಾರಾಟವಾಗಿರುವ 9 ವ್ಯಾ. ಎಲ್.ಇ.ಡಿ ಬಲ್ಬ್‌ಗಳು (ಸಂಖ್ಯೆ)	15,81,775	14,81,448	7,92,969	4,06,086	2,40,536	**45,02,814**
ಮಾರಾಟವಾಗಿರುವ 20 ವ್ಯಾ ಎಲ್.ಇ.ಡಿ ಟ್ಯೂಬ್ ಲೈಟ್‌ಗಳು (ಸಂಖ್ಯೆ)	-	7,394	33,640	9,901	9,155	**60,090**
ಮಾರಾಟವಾಗಿರುವ ಹೆಚ್ಚು ವಿದ್ಯುತ್ ದಕ್ಷತೆಯುಳ್ಳ 50 ವ್ಯಾ ಫ್ಯಾನ್‌ಗಳು (ಸಂಖ್ಯೆ)	-	667	4,214	5,866	3,735	**14,482**
ಅಂದಾಜು ವಾರ್ಷಿಕ ವಿದ್ಯುತ್ ಉಳಿತಾಯ (ಎಂ.ಯು ನಲ್ಲಿ)	31.22	29.42	16.46	8.36	5.03	90.49

ಮೈಸೂರಿನಲ್ಲಿ ನೆಡೆದ ಹೊಸಬೆಳಕು ಯೋಜನೆಯ ಉದ್ಘಾಟನ ಸಮಾರಂಭ

2. **ಸ್ಟಾರ್ ರೇಟೆಡ್ ಟ್ರಾನ್ಸ್ ಫಾರ್ಮರ್‌ಗಳನ್ನು ಸಂಗ್ರಹಿಸುವುದು:**

2019-20 ರ ಅವಧಿಯಲ್ಲಿ 10565 ಸಂಖ್ಯೆಯ 1/2 ಸ್ಟಾರ್ ರೇಟೆಡ್ ಟ್ರಾನ್ಸ್‌ಫಾರ್ಮರ್‌ಗಳನ್ನು ಸೇರಿಸಲಾಗಿದೆ ಮತ್ತು ಸುಮಾರು 1.32 ಎಂ.ಯು/ವಾರ್ಷಿಕ ವಿದ್ಯುತ್ ಉಳಿಸಲಾಗಿದೆ.

ಅ) ಪರ್ಯಾಯ ಮೂಲಗಳನ್ನು ಬಳಸಿಕೊಳ್ಳಲು ನಿಗಮವು ಕೈಗೊಂಡ ಕ್ರಮಗಳು

- ಸರ್ಕಾರಿ ಕಟ್ಟಡಗಳ ಮೇಲ್ಛಾವಣಿಯಲ್ಲಿ ಸೌರಶಕ್ತಿಯನ್ನು ಬಳಸಿಕೊಳ್ಳುವ ಸಲುವಾಗಿ ಸೋಲಾರ್ ಪ್ಯಾನಲ್‌ಗಳನ್ನು ಅಳವಡಿಸಲಾಗಿದೆ.
- ಸಾಂಪ್ರದಾಯಿಕ ವಿದ್ಯುತ್ ಮೂಲ ಒದಗಿಸಲು ಎಲ್ಲಿ ಕಾರ್ಯಸಾಧ್ಯವಿರುವುದಿಲ್ಲವೋ ಅಂತಹ ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ಸೋಲಾರ್ ಮೇಲ್ಛಾವಣಿ ಮೂಲಕ ವಿದ್ಯುತ್ ಒದಗಿಸುವುದು.
- ವೈಯಕ್ತಿಕ ಮನೆಗಳಿಗೆ ಇನ್ವರ್ಟರ್ ಮೂಲಕ ಸೌರ ಶಕ್ತಿಯನ್ನು ವಿಸ್ತರಿಸುವುದು.

ಆ) ಇಂಧನ ಸಂರಕ್ಷಣಾ ಸಾಧನಗಳ ಮೇಲಿನ ಬಂಡವಾಳ ಹೂಡಿಕೆ

ಇಲ್ಲ

ತಂತ್ರಜ್ಞಾನ ಹೀರಿಕೊಳ್ಳುವಿಕೆ

ಅ) ತಂತ್ರಜ್ಞಾನ ಹೀರಿಕೊಳ್ಳುವಿಕೆ ಬಗ್ಗೆ ಮಾಡಿದ ಪ್ರಯತ್ನಗಳು

ವಿದ್ಯುತ್ ಪರಿವರ್ತಕಗಳ ಪರೀಕ್ಷಣಾ ಕೇಂದ್ರಗಳು:

ಸರ್ಕಾರದ ಆದೇಶ ದಿನಾಂಕ: 05-10-2015ರ ಪ್ರಕಾರ, 2016-17 ಮತ್ತು 2017-18 ನೇ ವರ್ಷದಲ್ಲಿ ಸೆಸ್ಕ್ ವ್ಯಾಪ್ತಿಯ ಎಲ್ಲಾ ವಿಭಾಗಗಳಲ್ಲಿ ಒಟ್ಟು 15ಸಂಖ್ಯೆಯ ವಿದ್ಯುತ್ ಪರಿವರ್ತಕ ಪರೀಕ್ಷಣಾ ಕೇಂದ್ರಗಳನ್ನು ಎಲ್ಲಾ ವಿಭಾಗಗಳಲ್ಲಿ ಸುಮಾರು ರೂ.396.00 ಲಕ್ಷದ ವೆಚ್ಚದಲ್ಲಿ ಸ್ಥಾಪಿಸಲಾಗಿದ್ದು ಟಿಟಿಕೆ ಕಾರ್ಯಗಳು/ ನಿಗಮವು ಖರೀದಿಸಿರುವ ಪರಿವರ್ತಕಗಳನ್ನು ಕಡ್ಡಾಯವಾಗಿ ಪರಿವರ್ತಕಗಳ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಿಸಲಾಗಿದ್ದು, ಅಗತ್ಯವಿರುವ ಗುಣಮಟ್ಟದ ಖಾತ್ರಿ ಹೊಂದಲಾಗುತ್ತಿದೆ.

ಕ್ರ. ಸಂ	ಅವಧಿ	ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಿಸಲಾದ ಪರಿವರ್ತಕಗಳ ಸಂಖ್ಯೆ					ಮೊತ್ತ
		25 ಕೆ.ವಿ.ಎ	63ಕೆ.ವಿ.ಎ	100 ಕೆ.ವಿ.ಎ	ಇತರೆ ಸಾಮರ್ಥ್ಯ	ಒಟ್ಟು	
1	2016-17	1412	256	216	29	1913	5,29,850
2	2017-18	6130	619	484	40	7273	8,61,190
3	2018-19	5031	897	419	4	6251	6,65,623
4	2019-20	7992	991	479	0	9193	13,99,820

ಮಂಡ್ಯದಲ್ಲಿರುವ ಪರಿವರ್ತಕದ ಪರೀಕ್ಷಾ ಕೇಂದ್ರ

ಸ್ಮಾರ್ಟ್ ಗ್ರಿಡ್ ಮತ್ತು ಸ್ಮಾರ್ಟ್ ಮೀಟರಿಂಗ್

ಸ್ಮಾರ್ಟ್ ಗ್ರಿಡ್ ಮತ್ತು ಸ್ಮಾರ್ಟ್ ಮೀಟರಿಂಗ್ 21ನೇ ಶತಮಾನದ 2ನೇ ದಶಕದಲ್ಲಿ ಭಾರತದ ಇಂಧನ ವಲಯದಲ್ಲಿ ಆರಂಭವಾದ ಪರಿಕಲ್ಪನೆಯಾಗಿದೆ. ಅದರಂತೆ, ಸ್ಮಾರ್ಟ್ ಗ್ರಿಡ್‌ಗಳನ್ನು ಭಾರತದಲ್ಲಿ ಜಾರಿಗೊಳಿಸುವ ಸಲುವಾಗಿ ಭಾರತ ಸರ್ಕಾರವು ರಾಷ್ಟ್ರಿಯ ಸ್ಮಾರ್ಟ್‌ಗ್ರಿಡ್ ಮಿಷನ್(ಎನ್.ಎಸ್.ಜಿ.ಎಮ್) ಎಂಬ ಸಂಸ್ಥೆಯನ್ನು ಸ್ಥಾಪಿಸಿತು.

2012ನೇ ಇಸವಿಯಲ್ಲಿ ಅನುಮೋದಿತ ವೆಚ್ಚದ 50% ರಷ್ಟು ಹಣಕಾಸು ನೆರವಿನೊಂದಿಗೆ ಸ್ಮಾರ್ಟ್ ಗ್ರಿಡ್‌ನ ವಿಭಿನ್ನ ಕಾರ್ಯಗಳನ್ನು ಅಧ್ಯಯನ ಮಾಡಲು ಎನ್‌ಎಸ್‌ಜಿಎಮ್ ಡಿಸ್ಕಾಂಗಳಿಗೆ ಪೈಲಟ್ ಯೋಜನೆಯನ್ನು ನೀಡಿತು.

ಈ ಹೊಸ ಸವಾಲನ್ನು ಸ್ವೀಕರಿಸಲು ಉತ್ಸುಕವಾಗಿದ್ದ ಎರಡು ಸಂಸ್ಥೆಗಳಲ್ಲಿ ಸೆಸ್ಕ್ ಒಂದಾಗಿದ್ದು, 5 ಉಪ-ಕೇಂದ್ರಗಳಿಂದ ಹೊರಹೊಮ್ಮುವ 14 ಫೀಡರ್‌ಗಳಲ್ಲಿ ಹರಡಿರುವ 22000 ಗ್ರಾಹಕರನ್ನೊಳಗೊಂಡ ಡಿಪಿಆರ್ ಕಳುಹಿಸಿರುತ್ತದೆ.

ಎನ್‌ಎಸ್‌ಜಿಎಮ್ ರೂ. 32.00 ಕೋಟಿ ಮೊತ್ತಕ್ಕೆ ಡಿಪಿಆರ್ ಅನುಮೋದಿಸಿದ್ದು, 2014ರಲ್ಲಿ ರೂ. 16.00 ಕೋಟಿ ಮೊತ್ತವನ್ನು ಬಿಡುಗಡೆಗೊಳಿಸಲು ಒಪ್ಪಿರುತ್ತದೆ. 12 ಕ್ರಿಯಾತ್ಮಕತೆಯನ್ನು ಪ್ರದರ್ಶಿಸಿದ ಮತ್ತು 20000ಕ್ಕೂ ಹೆಚ್ಚು ಗ್ರಾಹಕರಿಗೆ ಸ್ಮಾರ್ಟ್‌ಗ್ರಿಡ್ ಅನ್ನು ಜಾರಿಗೆ ತಂದ ಏಕೈಕ ಸಂಸ್ಥೆ ಸೆಸ್ಕ್ ಆಗಿರುತ್ತದೆ. ಈ ಫೈಲಟ್ ಯೋಜನೆಯನ್ನು ದಿನಾಂಕ: 20.06.2018 ರಂದು ಗೋ-ಲೈವ್ ಎಂದು ಘೋಷಿಸಲಾಯಿತು.

ಆ) ಉತ್ಪನ್ನ ಸುಧಾರಣೆ, ವೆಚ್ಚ ಕಡಿತ, ಉತ್ಪನ್ನ ಅಭಿವೃದ್ಧಿ ಅಥವಾ ಆಮದು ಪರ್ಯಾಯದಂತಹ ಪ್ರಯೋಜನಗಳನ್ನು ಪಡೆದಿರುವುದು.

- ಸ್ವತ್ತುಗಳ ಸಮರ್ಥ ನಿರ್ವಹಣೆ.
- ದೋಷಗಳನ್ನು ತ್ವರಿತವಾಗಿ ಸರಿಪಡಿಸಿ ಗ್ರಾಹಕರನ್ನು ಸಂತೃಪ್ತಿಗೊಳಿಸುವುದು.
- ಪ್ರತಿ ಗ್ರಾಹಕರ ಲೋಡ್ ಪ್ರೊಫೈಲ್ ಲಭ್ಯತೆ
- ಲೋಡ್ ಶೆಡ್ಡಿಂಗ್ ಬದಲಿಗೆ ಲೋಡ್‌ಅನ್ನು ಕಡಿತಗೊಳಿಸುವ ಸಾಮರ್ಥ್ಯ ಪಡೆಯುವ ಮೂಲಕ ಗ್ರಾಹಕರಿಗೆ ಅಗತ್ಯ ಲೋಡ್‌ಗಳನ್ನು ಉಳಿಸಿಕೊಳ್ಳುವ ಆಯ್ಕೆಯನ್ನು ಹೊಂದಲು ಅನುವು ಮಾಡಿಕೊಡುವುದು.

ಈ ಯೋಜನೆಯನ್ನು ಪಿಪಿಪಿ ಮಾದರಿಯಲ್ಲಿ ಜಾರಿಗೊಳಿಸಿದ್ದು, ಸಿಸ್ಟಂ ಇಂಟಿಗ್ರೇಟರ್ ಮೆ॥ ಎನ್‌ಜೆನ್ ಸಂಸ್ಥೆಯು ಯೋಜನಾ ವೆಚ್ಚದ 26% ಅನ್ನು ಹಂಚಿಕೊಂಡಿದೆ.

ಇ) ತಂತ್ರಜ್ಞಾನವನ್ನು ಆಮದು ಮಾಡಿದ್ದಲ್ಲಿ (ಹಣಕಾಸು ವರ್ಷದ ಆರಂಭದಿಂದ ಕಳೆದ ಮೂರು ವರ್ಷದ ಅವಧಿಯಲ್ಲಿ ಮಾಡಿರುವ ಆಮದುಗಳು)

ಇಲ್ಲ

14. ವಿದೇಶಿ ವಿನಿಮಯ ಗಳಿಕೆ ಮತ್ತು ಹೊರಹೋಗುವಿಕೆ:

ಇಲ್ಲ

ಮಾನವ ಸಂಪನ್ಮೂಲ

ಎ) ದಿನಾಂಕ 31.03.2020ಕ್ಕೆ ನಿಗಮದಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ವರ್ಗಾವಾರು ವಿವರವು ಈ ಕೆಳಗಿನಂತಿವೆ.

ವರ್ಗ	31.3.2020 ರ ಅಂತ್ಯಕ್ಕೆ ಕಾರ್ಯನಿರ್ವಹಿಸುತ್ತಿರುವ ನೌಕರರ ಸಂಖ್ಯೆ		
	ಮಂಜೂರಾಗಿರುವುದು	ಕಾರ್ಯನಿರ್ವಹಿಸುತ್ತಿರುವುದು	ಖಾಲಿ ಇರುವುದು
ಎ-ವರ್ಗ ಖಾಯಂ ನೌಕರರು	278	234	44
ಎ-ವರ್ಗ ನಿಯೋಜಿತ ನೌಕರರು	5	4	1
ಎ - ವರ್ಗ ಒಟ್ಟು	**283**	**238**	**45**
ಬಿ-ವರ್ಗ ಖಾಯಂ ನೌಕರರು	332	263	69
ಬಿ-ವರ್ಗ ನಿಯೋಜಿತ ನೌಕರರು	6	2	4
ಬಿ - ವರ್ಗಒಟ್ಟು	**338**	**265**	**73**
ಸಿ-ವರ್ಗ ಖಾಯಂ ನೌಕರರು	3184	2118	1066
ಸಿ-ವರ್ಗ ನಿಯೋಜಿತ ನೌಕರರು	46	42	4
ಸಿ- ವರ್ಗಒಟ್ಟು	**3230**	**2160**	**1070**
ಡಿ-ವರ್ಗ ಖಾಯಂ ನೌಕರರು	6609	4148	2461
ಕಂಪನಿಯ ಒಟ್ಟು	**10460**	**6811**	**3649**

ಬಿ) ನೇಮಕಾತಿ ವಿವರ

2019-20ರ ಆರ್ಥಿಕ ವರ್ಷದಲ್ಲಿ ನೇರ ನೇಮಕಾತಿಯ ಮೂಲಕ ಕಂಪನಿಗೆ. ಈ ಕೆಳಕಂಡ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಮಾಡಲಾಗಿದೆ.

ಕ್ರಮ ಸಂಖ್ಯೆ	ಹುದ್ದೆಯ ಹೆಸರು	ವರ್ಗ	ಹುದ್ದೆಗಳ ಸಂಖ್ಯೆ
1	ಸಹಾಯಕ ಇಂಜಿನಿಯರ್ (ವಿ)	ಬಿ	30
2	ಕಿರಿಯ ಇಂಜಿನಿಯರ್ (ವಿ)	ಸಿ	34
3	ಕಿರಿಯ ಆಪ್ತ ಸಹಾಯಕ	ಸಿ	03
4	ಕಿರಿಯ ಸಹಾಯಕ	ಸಿ	100
5	ಕಿರಿಯ ಪವರ್ ಮ್ಯಾನ್	ಡಿ	426
ಒಟ್ಟು			**593**

ಸಿ) 2019-20 ರ ಆರ್ಥಿಕ ವರ್ಷದಲ್ಲಿ ಜರುಗಿಸಲಾದ ತರಬೇತಿ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳು

ಅಗತ್ಯವಾದ ವೃತ್ತಿ ಸಂಸ್ಕೃತಿಗೆ ಒತ್ತು ಕೊಡಲು ಇಂದಿನ ತಾಂತ್ರಿಕತೆ ನಿರ್ವಹಣಾ ವಾತಾವರಣದಲ್ಲಿ ಅಭಿವೃದ್ಧಿಯನ್ನು ಗಮನದಲ್ಲಿರಿಸಿ, ಆಂತರಿಕ ಮತ್ತು ಬಾಹ್ಯ ತರಭೇತಿ ಕಾರ್ಯಕ್ರಮಗಳನ್ನು ನೀಡುವುದು ಅತೀ ಅವಶ್ಯಕತೆ ಎನಿಸಿದ್ದು ಕಂಪನಿಯಿಂದ ಎಲ್ಲಾ ಸ್ತರದ ಪ್ರತಿಯೊಬ್ಬ ನೌಕರನಿಗೂ ತರಬೇತಿ ನೀಡಲಾಗುತ್ತಿದೆ.

ಅ) ಉದ್ಯೋಗಿಗಳ ಜ್ಞಾನವನ್ನು ಹೆಚ್ಚಿಸುವ ಮತ್ತು ನಡವಳಿಕೆ ಹಾಗೂ ಗುಣಮಟ್ಟವನ್ನು ಅಭಿವೃದ್ಧಿಪಡಿಸುವ ಸಲುವಾಗಿ ವಿವಿಧ ತೆರಿಗೆಗಳಿಗೆ ಸಂಬಂಧಪಟ್ಟ ಕಾನೂನುಗಳು, ಕಾರ್ಮಿಕ ಕಾಯ್ದೆಗಳು, ಮಾಹಿತಿ ತಂತ್ರಜ್ಞಾನ, ಸುರಕ್ಷತೆ, ವಿದ್ಯುತ್ ಉಳಿತಾಯ ಮತ್ತು ಗ್ರಾಹಕ ಸಂಬಂಧಿ ಇತ್ಯಾದಿ ವಿಷಯಗಳ ಬಗ್ಗೆ ತರಬೇತಿಯನ್ನು ನೀಡಲಾಗಿದೆ.

ಆ) 2019-20ನೇ ಸಾಲಿನಲ್ಲಿ ಕಂಪನಿಯ ವಿವಿಧ ಆಂತರಿಕ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿರುತ್ತದೆ ಮತ್ತು ಆಯ್ದ ಖಾಯಂ ಉದ್ಯೋಗಿಗಳನ್ನು ಬಾಹ್ಯ ಏಜೆನ್ಸಿಗಳು ನಡೆಸುವ ತರಬೇತಿ ಕಾರ್ಯಕ್ರಮಗಳಿಗೆ ನಿಯೋಜಿಸಲಾಗಿದೆ.

ಡಿ) 2019-20 ರಲ್ಲಿ ತರಬೇತಿ ಕಾರ್ಯಕ್ರಮಗಳ ವಿವರಗಳು

ಕ್ರಮ ಸಂಖ್ಯೆ	ಆಂತರಿಕ ತರಭೇರಿ ಕಾರ್ಯಕ್ರಮ ವರ್ಗವಾರು	ಸಂಖ್ಯೆಗಳು	ಮೊತ್ತ (ರೂ.ಗಳಲ್ಲಿ)
1	ಇಂಜಿನಿಯರ್‌ಗಳು	09	-
2	ಅಕೌಂಟ್ಸ್ ಸಿಬ್ಬಂದಿ	-	
3	ಸಿ ಮತ್ತು ಡಿ ವರ್ಗದ ನೌಕರರು	81	
ಉದ್ಯೋಗ ಪೂರ್ವ ತರಬೇತಿ 30 ದಿನಗಳು ಸಹಾಯಕ ಇಂಜಿನಿಯರ್ ರವರಿಗೆ		-	-
ಆರ್.ಇ.ಸಿ ತರಬೇತಿ ಕಾರ್ಯಕ್ರಮ ಸಿ ಮತ್ತು ಡಿ ನೌಕರರಿಗೆ (ಆರ್‌ಇಸಿಯಿಂದ ಮರುಪಾವತಿ)		477	
ಒಟ್ಟು ತರಬೇತಿ ವೆಚ್ಚ			3789760
ಭಾಗವಹಿಸಿದವರ ಸಂಖ್ಯೆ			567
ತರಬೇತಿ ಗಂಟೆಗಳು			-
ತರಬೇತಿ ದಿನಗಳು			586
ಭಾಗವಹಿಸಿದವರ ಪ್ರತಿ ದಿನದ ಖರ್ಚು			316

ಇದರ ಜೊತೆಗೆ ಆರ್‌ಇಸಿ ವತಿಯಿಂದ ಡಿಸೆಂಬರ್ 2019 ರಿಂದ ಜನವರಿ 2020ರವರೆಗೆ "ಬಿಹೇವಿಯರ್ ಸ್ಕಿಲ್ಸ್" ಕುರಿತು ಎ ಮತ್ತು ಬಿ ಮಟ್ಟದ ಅಧಿಕಾರಿಗಳಿಗೆ 3 ದಿನಗಳ ತರಬೇತಿ ಕಾರ್ಯಕ್ರಮಗಳನ್ನು ಜರುಗಿಸಿದ್ದು, ಒಟ್ಟು 76 ಸಂಖ್ಯೆಯ ಅಧಿಕಾರಿಗಳು ಭಾಗವಹಿಸಿದ್ದರು.

ತರಬೇತಿ ಕಾರ್ಯಕ್ರಮಗಳು		19-ಏಪ್ರಿಲ್	19-ಮೇ	19-ಜೂನ್	19-ಜುಲೈ	19-ಆಗಸ್ಟ್	19-ಸೆಪ್ಟಂಬರ್	19-ಅಕ್ಟೋಬರ್	19-ನವೆಂಬರ್	19-ಡಿಸೆಂಬರ್	19-ಜನವರಿ	19-ಫೆಬ್ರವರಿ	19-ಮಾರ್ಚ್	ಒಟ್ಟು
ಕ್ರ. ಸಂ	ತರಬೇತಿ ಕಾರ್ಯ ಕ್ರಮಗಳು	0	0	0	0	0	0	0	0	0	0	0	0	0
1	ಇಂಜಿನಿಯರ್ ಗಳು ಮತ್ತು ಲೆಕ್ಕಪತ್ರ ಸಿಬ್ಬಂದಿಗಳು	0	0	0	0	0	0	0	0	0	0	0	0	0
2	ಇಂಜಿನಿಯರ್ ಗಳು (ವಿತರಣಾ ನಿರ್ವಹಣೆ)	0	0	0	0	0	0	0	0	0	0	0	0	0
3	ಎ ಮತ್ತು ಬಿ ಉದ್ಯೋಗಿಗಳಿಗೆ ಪೂರ್ವ ಉದ್ಯೋಗ ತರಬೇತಿ	0	0	0	9	0	0	0	0	0	0	0	0	9
4	ಸಿ ಮತ್ತು ಡಿ ಉದ್ಯೋಗಿಗಳಿಗೆ ಪೂರ್ವ ಉದ್ಯೋಗ ತರಬೇತಿ	8	7	5	31	1	0	0	0	0	29	0	0	81

ತರಬೇತಿ ಕಾರ್ಯಕ್ರಮಗಳು		19-ಏಪ್ರಿಲ್	19-ಮೇ	19-ಜೂನ್	19-ಜುಲೈ	19-ಆಗಸ್ಟ್	19-ಸೆಪ್ಟಂಬರ್	19-ಅಕ್ಟೋಬರ್	19-ನವೆಂಬರ್	19-ಡಿಸೆಂಬರ್	19-ಜನವರಿ	19-ಫೆಬ್ರವರಿ	19-ಮಾರ್ಚ್	ಒಟ್ಟು
5	ಸಿ ಮತ್ತು ಡಿ ಉದ್ಯೋಗಿಗಳಿಗೆ ಪೂರ್ವ ಬಡ್ತಿ ತರಬೇತಿ	0	0	0	0	0	0	0	0	0	0	0	0	0
6	ಸಿ ಮತ್ತು ಡಿ ಉದ್ಯೋಗಿಗಳಿಗೆ ಆರ್ಇಸಿ ತರಬೇತಿ ಕಾರ್ಯಕ್ರಮ	341	136	0	0	0	0	0	0	0	0	0	0	477
7	ಎ ಮತ್ತು ಬಿ ಉದ್ಯೋಗಿಗಳಿಗೆ ಆರ್ಇಸಿ ತರಬೇತಿ ಕಾರ್ಯಕ್ರಮ	0	0	0	0	0	0	0	0	48	28	0	0	76
	ಇತರರು (ಕಾರ್ಯ ನಿರ್ವಾಹಕ ಮತ್ತು ಕಾರ್ಯ ನಿರ್ವಾಹಣ ಕೇತರ ನೌಕರರು)	0	0	0	0	0	0	0	0	0	0	0	0	0
ಒಟ್ಟು		349	143	5	40	1	0	0	0	48	57	0	0	643

ಇ) ಕೆಲಸದ ಸ್ಥಳದಲ್ಲಿ ಮಹಿಳೆಯ ಮೇಲೆ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧ ಮತ್ತು ಪರಿಹಾರ) ಕಾಯ್ದೆ, 2013 ರಡಿ ಪ್ರಕಟಣೆ:

ಕೆಲಸದ ಸ್ಥಳದಲ್ಲಿ ಮಹಿಳೆಯ ಮೇಲೆ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧ ಮತ್ತು ಪರಿಹಾರ) ಕಾಯ್ದೆ, 2013ರ ಅಗತ್ಯತೆಗಳಿಗೆ ಅನುಗುಣವಾಗಿ ಕಂಪನಿಯು ಲೈಂಗಿಕ ಕಿರುಕುಳ ತಡೆಗಟ್ಟುವಿಕೆಯ ನೀತಿಯನ್ನು ಅಳವಡಿಸಿಕೊಂಡಿರುತ್ತದೆ. ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದಂತೆ ಬಂದ ದೂರುಗಳನ್ನು ಪರಿಹರಿಸಲು ಆಂತರಿಕ ದೂರುಗಳ ಸಮಿತಿಯನ್ನು ರಚಿಸಲಾಗಿದೆ. ಎಲ್ಲಾ ನೌಕರರು ಈ ನೀತಿಯ ವ್ಯಾಪ್ತಿಗೆ ಒಳಪಡುತ್ತಾರೆ.

2019-20ನೇ ಸಾಲಿನಲ್ಲಿ, ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದ ಒಂದು ದೂರು ದಾಖಲಾಗಿದ್ದು, ಕಂಪನಿಯಲ್ಲಿ ಅದನ್ನು ಪರಿಹರಿಸಲಾಗಿದೆ.

ಈ) ಜಾಗರೂಕ ಕಾರ್ಯವಿಧಾನ:

ಮಂಡಳಿಯು ದಿನಾಂಕ: 16.01.2020 ರಂದು ಜರುಗಿದ 77ನೇ ಮಂಡಳ ಸಭೆಯಲ್ಲಿ ಕಂಪನಿ ಕಾಯ್ದೆ, 2013 ರ ನಿಯಮಗಳನ್ವಯ ಜಾಗರೂಕ ಕಾರ್ಯವಿಧಾನ ನೀತಿಯನ್ನು ಅನುಮೋದಿಸಿರುತ್ತದೆ. ಅದರಂತೆ ಕಛೇರಿ ಆದೇಶ ಸಂಖ್ಯೆ: ಪ್ರವ್ಯ (ಆ ಮತ್ತು ಮಾಸಂ)/ ಕಂಕಾ/ಸ/35/2019-20/ಸಿವೈಎಸ್-1505 ದಿನಾಂಕ: 11.02.2020 ರನ್ವಯ ಜಾಗರೂಕ ಕಾರ್ಯವಿಧಾನ ನೀತಿಯನ್ನು ಜಾರಿಗೊಳಿಸಲಾಗಿದೆ. 2019-20ನೇ ಸಾಲಿನಲ್ಲಿ ಜಾಗರೂಕ ಕಾರ್ಯವಿಧಾನದಡಿ ಯಾವುದೇ ದೂರುಗಳು ದಾಖಲಾಗಿರುವುದಿಲ್ಲ.

ಸಾಮಾನ್ಯ

ಮಂಡಳಿಯು ಈ ಕೆಳಗಿನವರಿಗೆ ತನ್ನ ಕೃತಜ್ಞತೆಯನ್ನು ದಾಖಲಿಸಲು ಬಯಸುತ್ತದೆ.

ಅ) ಕರ್ನಾಟಕ ಸರ್ಕಾರ, ಭಾರತ ಸರ್ಕಾರ, ಭಾರತದ ಮಹಾಲೇಖಪಾಲರು, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಕೇಂದ್ರ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ರವರ ನೆರವು, ಮಾರ್ಗದರ್ಶನ ಮತ್ತು ಸಹಕಾರಗಳಿಗಾಗಿ.

ಆ) ಹಣಕಾಸು ಏಜೆನ್ಸಿಗಳಾದ ಗ್ರಾಮೀಣ ವಿದ್ಯುದ್ದೀಕರಣ ನಿಗಮ, ಪವರ್ ಫೈನಾನ್ಸ್ ಕಾರ್ಪೋರೇಷನ್, ಸಿಂಡಿಕೇಟ್ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೆನರಾ ಬ್ಯಾಂಕ್ ಮತ್ತು ಇತರ ವಾಣಿಜ್ಯ ಬ್ಯಾಂಕುಗಳು ಹಣಕಾಸಿನ ನೆರವು ನೀಡಿರುವ ಕಾರಣಗಳಿಗಾಗಿ.

ಇ) ಪ್ರಚಾರ ಮತ್ತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿರುವ ಕಾರಣಕ್ಕಾಗಿ ಪತ್ರಿಕಾ ಹಾಗೂ ದೃಶ್ಯ ಮಾಧ್ಯಮಗಳಿಗಾಗಿ.

ಈ) ಶಾಸನಬದ್ಧ/ವೆಚ್ಚ/ಸೆಕ್ರೆಟೇರಿಯಲ್ ಲೆಕ್ಕ ಪರಿಶೋಧಕ ರವರ ಮಾರ್ಗದರ್ಶನ ಮತ್ತು ಸಹಕಾರಕ್ಕಾಗಿ.

ಉ) ಬಿಲ್ಲಿಂಗ್‌ನ ಗಣಕೀಕರಣಕ್ಕೆ ಸಂಬಂಧಿಸಿದ ಎಲ್ಲಾ ಏಜೆನ್ಸಿಗಳು.

ಊ) ನೌಕರರ ಸಂಘ/ಸಂಸ್ಥೆಗಳು ಮತ್ತು ಸಂಘಗಳ ಸಹಕಾರ ಮತ್ತು ಸಾಮೂಹಿಕ ಭಾಗವಹಿಸುವಿಕೆಗಾಗಿ.

ನಿಗಮದ ನೌಕರರು ಸಲ್ಲಿಸಿದ ಸಮರ್ಪಿತ ಸೇವೆಗಳ ಬಗ್ಗೆ ಮಂಡಳಿಯು ತನ್ನ ಮೆಚ್ಚುಗೆಯನ್ನು ದಾಖಲಿಸಲು ಬಯಸುತ್ತದೆ.

ದಿನಾಂಕ: 30.09.2020
ಸ್ಥಳ: ಬೆಂಗಳೂರು

ಸಹಿ/-
(ಮಹೇಂದ್ರ ಜೈನ್, ಭಾ.ಆ.ಸೇ.,)
ಅಧ್ಯಕ್ಷರು

ಅನುಬಂಧ-2

ಈ ಕೆಳಗಿನವರ ಅವಲೋಕನ/ಆಕ್ಷೇಪಣೆಗಳಿಗೆ ಆಡಳಿತ ಮಂಡಳಿಯ ಉತ್ತರ

ಅ. ಶಾಸನಬದ್ಧ ಲೆಕ್ಕ ಪರಿಶೋಧಕರು: (ಲೆಕ್ಕಪತ್ರಗಳಿಗೆ ಸಂಬಂಧಿಸಿದಂತೆ)

ಆ. ಸೆಕ್ರೆಟೇರಿಯಲ್ ಪರಿಶೋಧಕರು (2019-20 ರಲ್ಲಿ ಕಂಪನಿಗೆ ಅನ್ವಯವಾಗುವ ಶಾಸನಬದ್ಧ ನಿಯಮಗಳ ಪಾಲನೆಗೆ ಸಂಬಂಧಿಸಿದಂತೆ)

ಕ್ರಮ ಸಂಖ್ಯೆ	ಶಾಸನಬದ್ಧ ಲೆಕ್ಕ ಪರಿಶೋಧಕರ ಅವಲೋಕನಗಳು	ಆಡಳಿತ ವರ್ಗದ ಉತ್ತರ
1	**ಲೆಕ್ಕ ಪರಿಶೋಧನೆಯ ಸಂಚಯ ವ್ಯವಸ್ಥೆಯಿಂದ ವಿಚಲನ:** ಕಂಪನಿ ಕಾಯ್ದೆ, 2013 ರ ಕಲಂ 128(1) ರ ಪ್ರಕಾರ, ಕಂಪನಿಯ ಪುಸ್ತಕಗಳನ್ನು ಸಂಚಯದ ಆಧಾರದ ಮೇಲೆ ಮತ್ತು ಅಕೌಂಟಿಂಗ್‌ನ ಡಬಲ್ ಎಂಟ್ರಿ ಸಿಸ್ಟಮ್ ಪ್ರಕಾರ ಇರಿಸದಿದ್ದರೆ, ಸರಿಯಾದ ಖಾತೆಗಳ ಪುಸ್ತಕಗಳನ್ನು ಇರಿಸಲಾಗಿದೆ ಎಂದು ಪರಿಗಣಿಸಲಾಗುವುದಿಲ್ಲ. ಮಹತ್ವದ ಲೆಕ್ಕಪತ್ರ ನೀತಿ ಸಂಖ್ಯೆ 2 (ಹಣಕಾಸು ಪಟ್ಟಿ ತಯಾರಿಕೆಯ ಆಧಾರ)ದಲ್ಲಿ ಹೇಳಿರುವಂತೆ, ಕಂಪನಿಯು ಬಂಡವಾಳ ಸ್ವತ್ತುಗಳಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಅನುದಾನ ಮತ್ತು ಸಬ್ಸಿಡಿಗಳಿಗೆ ಸಂಬಂಧಿಸಿದ ವಹಿವಾಟುಗಳು, ಗುತ್ತಿಗೆದಾರರಿಂದ ಹಾಗೂ ಮಾರಾಟಗಾರರಿಂದ ಹಾನಿ ವಸೂಲಿ ಹಾಗೂ ದಂಡಗಳ ಸ್ವೀಕರಣೆ ಆಧಾರದಲ್ಲಿ ಗುರುತಿಸುತ್ತಿದ್ದು, ಇದು ಕಂಪನಿಗಳ ಕಾಯ್ದೆ 2013 ರ ಕಲಂ 128(1) ರ ಅಡಿಯಲ್ಲಿ ಸೂಚಿಸಿರುವ ಲೆಕ್ಕಪತ್ರದ ಸಂಚಯ ವ್ಯವಸ್ಥೆಗೆ ವಿರುದ್ಧವಾಗಿದೆ.	ವಾಸ್ತವಾಂಶ. ಬಂಡವಾಳ ಆಸ್ತಿಗಳಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಪಡೆದ ಅನುದಾನಗಳು ಮತ್ತು ಸಬ್ಸಿಡಿಗಳನ್ನು ಸ್ವೀಕರಣೆ ಆಧಾರದ ಮೇಲೆ ಮಾತ್ರ ಲೆಕ್ಕ ಹಾಕಲಾಗುತ್ತದೆ. ಏಕೆಂದರೆ ನಿಗಮವು ಪಡೆಯಬಹುದಾದ ಬಂಡವಾಳ ಅನುದಾನ/ ಬಂಡವಾಳ ಸಹಾಯಧನಗಳನ್ನು ಪ್ರಮಾಣೀಕರಿಸಲು ಸಾಧ್ಯವಿರುವುದಿಲ್ಲ. ಅಥವಾ ಸರ್ಕಾರವು ಸಂವಹನ ಮಾಡದಿರುವ ಕಾರಣ ಪ್ರಮಾಣವನ್ನು ಸಂಚಯದ ಆಧಾರದ ಮೇಲೆ ಲೆಕ್ಕ ಹಾಕಲು ಅಥವಾ ನಿರ್ಣಯಿಸಲು ಸಾಧ್ಯವಿಲ್ಲ.
2	**ಎಂಎಸ್‌ಎಂಇ ನಿಬಂಧನೆಯ ಅನುಸರಣೆ:** ಎಂಎಸ್‌ಎಂಇ ಕಾಯ್ದೆಯಡಿ ಬರುವ ಪೂರೈಕೆದಾರರನ್ನು ಕಂಪನಿಯು ಗುರುತಿಸಿಲ್ಲ ಎಂದು ಲೆಕ್ಕಪರಿಶೋಧನೆಯ ಸಮಯದಲ್ಲಿ ನಾವು ಗಮನಿಸಿದ್ದೇವೆ. ವಿದ್ಯುತ್ ಕಂಬ ಸರಬರಾಜುದಾರರ ಟೆಂಡರ್ ದಾಖಲೆಗಳ ಪರಿಶೀಲನೆಯಲ್ಲಿ, ಎಲ್ಲಾ ವಿದ್ಯುತ್ ಕಂಬ ಪೂರೈಕೆದಾರರು ಎಂಎಸ್‌ಎಂಇ ನಿಬಂಧನೆಗಳ ಅಡಿಯಲ್ಲಿವೆ ಎಂದು ತೋರಿಸುವ ದಾಖಲೆಗಳನ್ನು ಸಲ್ಲಿಸಿದ್ದಾರೆ ಎಂದು ನಾವು ಗಮನಿಸಿದ್ದೇವೆ. ಕಂಪನಿಯು 2019-20 ನೇ ಸಾಲಿಗೆ ಎಂಎಸ್‌ಎಂಇ-1 ರಿಟರ್ನ್ ಅನ್ನು ಆರ್‌ಓಸಿಗೆ ಸಲ್ಲಿಸಿದೆ. ಕಂಪನಿಯು ಎಂಎಸ್‌ಎಂಇ ಪೂರೈಕೆದಾರರನ್ನು ಮಾತ್ರ ಗುರುತಿಸಿದ್ದು,	ಎಂಎಸ್‌ಎಂಇಗೆ ಪಾವತಿಸಬೇಕಾದ ಬಾಕಿ ಯಾವುದು ಇಲ್ಲ ಎಂದು ಕಂಪನಿ ಈಗಾಗಲೇ ತನ್ನ ಸಾಮಾನ್ಯ ಟಿಪ್ಪಣಿಯ ಕ್ರಮ ಸಂಖ್ಯೆ-43 ರಲ್ಲಿ ಘೋಷಿಸಿದೆ.

ಕ್ರಮ ಸಂಖ್ಯೆ	ಶಾಸನಬದ್ಧ ಲೆಕ್ಕ ಪರಿಶೋಧಕರ ಅವಲೋಕನಗಳು	ಆಡಳಿತ ವರ್ಗದ ಉತ್ತರ
	ಎಂಎಸ್‌ಎಂಇ ಪೂರೈಕೆದಾರರಿಗೆ ಪಾವತಿಸಬೇಕಾದ ಮೊತ್ತ ಮತ್ತು ಬಡ್ಡಿಯನ್ನು ಗುರುತಿಸಿಲ್ಲದ ಕಾರಣ ಕಂಪನಿಯ ಸ್ವತಂತ್ರ ಹಣಕಾಸು ಹೇಳಿಕೆಗಳಿಗೆ ಪರಿಣಾಮಕಾರಿಯಾದ ಪರಿಣಾಮವನ್ನು ನಾವು ಪ್ರಮಾಣೀಕರಿಸಲು ಸಾಧ್ಯವಿಲ್ಲ.	
3	**ಸರ್ಕಾರ / ಸರ್ಕಾರದ ಅಧೀನ ಸಂಸ್ಥೆಗಳು/ ಘಟಕಗಳು:** ಸರ್ಕಾರ/ಸರ್ಕಾರದ ಅಧೀನ ಸಂಸ್ಥೆಗಳಿಂದ ಬರಬೇಕಾದ ಐಪಿ ಸೆಟ್ ಬಾಕಿ, ನೀರು ಸರಬರಾಜು ಬಾಕಿ, ಬೀದಿ ದೀಪ ಬಾಕಿ ಮುಂತಾದ ದೀರ್ಘಾವಧಿಯ ಬಾಕಿಗಳಿಗೆ ಸೂಕ್ತ ಉತ್ತೇಜನ ಮಾಡದಿರುವುದನ್ನು ನಾವು ಗಮನಿಸಿದ್ದೇವೆ ಸದರಿ ಬಾಕಿಗಳು ಈಗಿನ ಬಾಕಿಗಳಾಗಿರುವುದಿಲ್ಲ ಮತ್ತು ಏಜ್ ವೈಸ್ ವಿವರಗಳು ಮತ್ತು ವಸೂಲಿ ಸ್ಥಿತಿಗತಿಗಳ ಅನುಪಸ್ಥಿತಿಯಲ್ಲಿ, ಕಂಪನಿಯ ಸ್ವತಂತ್ರ ಹಣಕಾಸು ಮೇಲೆ ಅದರ ಪರಿಣಾಮದ ಕುರಿತು ಪ್ರತಿಕ್ರಿಯಿಸಲು ನಮಗೆ ಸಾಧ್ಯವಾಗುತ್ತಿಲ್ಲ.	ವಾಸ್ತವಾಂಶ. ಪ್ಯಾರಾ 2.21 ರಲ್ಲಿ ಪ್ರಕಟವಾದ ಲೆಕ್ಕಪತ್ರ ನೀತಿಗೆ ಸಂಬಂಧಿಸಿದಂತೆ ಕೆಟ್ಟ ಮತ್ತು ಅನುಮಾನಸ್ಪದ ಸಾಲಗಳಿಗಾಗಿ ಚಾವಿಸನಿನಿ ಲೆಕ್ಕಾಚಾರ ಮಾಡುತ್ತಿದೆ.
4	**ಮೈಸೂರು ಷುಗರ್ಸ್ ಕಂಪನಿಯಿಂದ ಬರಬೇಕಾದ ಬಾಕಿ ಟಿಪ್ಪಣಿಗಳು ಸಂಖ್ಯೆ 12 ವ್ಯಾಪಾರ ಬಾಕಿ:** 31.03.2020 ರಂತೆ ಬಾಕಿ ಉಳಿದಿರುವ ಮೊತ್ತ ರೂ. 27.31 ಕೋಟಿ, ಪಿಪಿಎ ಅವಧಿಯ ಹಿಂದಿನ ಹಳೆಯ ಬಾಕಿ ಮೊತ್ತ ರೂ.8,60,66,757/- ಒಳಗೊಂಡಿರುತ್ತದೆ. ಸದರಿ ಮೊತ್ತವು ಮೂರು ವರ್ಷಗಳಿಗಿಂತಲೂ ಹೆಚ್ಚಿನ ಅವಧಿಗೆ ಬಾಕಿಯಿದ್ದು ನಿಯಮಿತ ಪಾವತಿ ಸ್ವೀಕರಣೆಯಾಗಿರುವುದಿಲ್ಲ, ಅಗತ್ಯವಾದ ಪ್ರಾವಿಷನ್ ಮಾಡಬೇಕಾಗಿತ್ತು ಅನುಪಸ್ಥಿತಿಯಲ್ಲಿ ಸ್ವತಂತ್ರ ಹಣಕಾಸು ಪಟ್ಟಿಗಳ ಮೇಲಿನ ಪರಿಣಾಮವನ್ನು ಪ್ರಮಾಣೀಕರಿಸಲು ನಮಗೆ ಸಾಧ್ಯವಾಗುವುದಿಲ್ಲ.	ಮೆ॥ ಮೈಸೂರು ಷುಗರ್ಸ್ ಸರ್ಕಾರಿ ಸ್ವಾಮ್ಯದ ಕಂಪನಿಯಾಗಿರುವುದರಿಂದ ಚಾವಿಸನಿನಿ ಯು ಮೈಸೂರು ಷುಗರ್ಸ್ ನಿಂದ ಪಡೆಯಬಹುದಾದ ಮೊತ್ತವೆಂದು ಲೆಕ್ಕೀಕರಿಸಿದೆ ಆದರೆ ಕೆಟ್ಟ ಮತ್ತು ಅನುಮಾನಾಸ್ಪದ ಬಾಕಿಯೆಂದು ಪರಿಗಣಿಸಿಲ್ಲ. ಆದ್ದರಿಂದ ಅವಕಾಶ ಕಲ್ಪಿಸಲಾಗಿಲ್ಲ.
5	**ಬ್ಯಾಂಕ್ ಬ್ಯಾಲೆನ್ಸ್, ಸಾಲ ಮತ್ತು ಎಲ್‌ಸಿ ಠೇವಣಿ ದೃಢೀಕರಣ:** ನಮ್ಮ ಲೆಕ್ಕಪರಿಶೋಧನೆಯ ಅವಧಿಯಲ್ಲಿ ಈ ಕೆಳಗೆ ತಿಳಿಸಲಾದ ಸಾಲ ಮತ್ತು ಎಲ್‌ಸಿ ಠೇವಣಿಗಳ ದೃಢೀಕರಣವನ್ನು ಪಡೆಯಲಾಗಿರುವುದಿಲ್ಲ ಎಂಬುದನ್ನು ನಾವು ಗಮನಿಸಿದ್ದೇವೆ.	ಎಪಿಡಿಆರ್‌ಪಿ ಯಿಂದ ಬಾಕಿ ಇರುವ ಸಾಲ ಹಾಗೂ ಕರ್ನಾಟಕ ಸರ್ಕಾರದಿಂದ ಬಡ್ಡಿ ರಹಿತ ಸಾಲಗಳಿಗೆ ಚಾವಿಸನಿನಿಯು 2020-21 ನೇ ಆರ್ಥಿಕ ವರ್ಷದಲ್ಲಿ ಬಾಕಿ ದೃಢೀಕರಣವನ್ನು ಪಡೆಯಲು ಎಲ್ಲಾ ಪ್ರಯತ್ನಗಳನ್ನು ಮಾಡುತ್ತದೆ.

<table>
<tr><th>ಕ್ರಮ ಸಂಖ್ಯೆ</th><th>ಶಾಸನಬದ್ಧ ಲೆಕ್ಕ ಪರಿಶೋಧಕರ ಅವಲೋಕನಗಳು</th><th>ಆಡಳಿತ ವರ್ಗದ ಉತ್ತರ</th></tr>
<tr><td></td><td>(ರೂ ಲಕ್ಷಗಳಲ್ಲಿ)
<table>
<tr><th>ಬ್ಯಾಂಕಿನ ಹೆಸರು</th><th>ಪುಸ್ತಕದ ಪ್ರಕಾರ ಬಾಕಿ</th><th>ಬ್ಯಾಂಕ್/ ಸಾಲ ಗಾರರ ಪ್ರಕಾರ ಬಾಕಿ</th><th>ವ್ಯತ್ಯಾಸ/ ಷರಾ</th></tr>
<tr><td>ಎಪಿಡಿಆರ್‌ಪಿ ಯಿಂದ ಸಾಲ</td><td>784.42</td><td>-</td><td>ಬಾಕಿ ಧೃಡೀಕರಣ ಗೊಂಡಿಲ್ಲ</td></tr>
<tr><td>ಕರ್ನಾಟಕ ಸರ್ಕಾರದಿಂದ ಬಡ್ಡಿ ರಹಿತ ಸಾಲ</td><td>60,000</td><td>-</td><td>ಬಾಕಿ ಧೃಡೀಕರಣ ಗೊಂಡಿಲ್ಲ</td></tr>
</table>
ಆಯಾ ಬ್ಯಾಂಕುಗಳಿಂದ ಮುಕ್ತಾಯದ ಮೊತ್ತಗಳನ್ನು ನೇರವಾಗಿ ದೃಢೀಕರಿಸಲು ನಾವು ವಿನಂತಿಸಿದ್ದೇವೆ, ಆದರೆ ನಾವು ಕೆಲವು ಬ್ಯಾಂಕುಗಳಿಂದ ದೃಢೀಕರಣವನ್ನು ಸ್ವೀಕರಿಸಿದ್ದೇವೆ ಮತ್ತು ಅವುಗಳಲ್ಲಿ ಬಹುತೇಕ ಮೊತ್ತದ ದೃಢೀಕರಣವನ್ನು ನಮಗೆ ಕಳುಹಿಸಿಲ್ಲ.</td><td></td></tr>
<tr><td>6</td><td>ಟಿಡಿಎಸ್ ಅನುಸರಿಸದಿರುವುದು ಟಿಪ್ಪಣಿ ಸಂಖ್ಯೆ 36.2.1 ರೂ.9404.91 ಲಕ್ಷಗಳು: ವಿದ್ಯುತ್ ಖರೀದಿಯನ್ನು ವಿಳಂಬವಾಗಿ ಪಾವತಿಸುವಾಗ ಪಾವತಿಸಬೇಕಾದ ಬಡ್ಡಿಯ ಮೇಲೆ ಕಡಿತಗೊಳಿಸಿದ ರೂ.200.21 ಲಕ್ಷಗಳ ಟಿಡಿಎಸ್ ಅನ್ನು ನಮ್ಮ ಲೆಕ್ಕಪರಿಶೋಧನೆಯ ಸಮಯದಲ್ಲಿ ನಾವು ಗಮನಿಸಿದ್ದೇವೆ, ಸದರಿ ಮೊತ್ತವನ್ನು ನಿಗದಿತ ದಿನಾಂಕದೊಂದಿಗೆ ಸರ್ಕಾರಕ್ಕೆ ಪಾವತಿಸಿರುವುದಿಲ್ಲ ಇದರಿಂದಾಗಿ ಆದಾಯ ತರಿಗೆ ಇಲಾಖೆಯು ಬಡ್ಡಿ ವೆಚ್ಚವನ್ನು 30% ರಷ್ಟು ತಿರಸ್ಕರಿಸಿದ್ದು , ಇದರ ಪರಿಣಾಮವಾಗಿ ರೂ.200.21 ಲಕ್ಷಗಳ ಮೇಲೆ ರೂ.187.40 ಲಕ್ಷಗಳ ತೆರಿಗೆಯನ್ನು ಕಡಿಮೆ ಮಾಡಲಾಗಿದೆ ಮತ್ತು ಇದರ ಪರಿಣಾಮವಾಗಿ ನಷ್ಟವು ಆ ಮೊತ್ತದಷ್ಟು ಕಡಿಮೆಯಾಗಿ ಪ್ರಕಟವಾಗಿದ್ದು ತೆರಿಗೆಯ ಪ್ರಾವಿಷನ್ ಸಹ ಕಡಿಮೆ ಮಾಡಲಾಗಿದೆ.</td><td>ವಿದ್ಯುತ್ ಖರೀದಿ ಬಿಲ್‌ಗಳನ್ನು ತಡವಾಗಿ ಪಾವತಿಸಿದ್ದಲ್ಲಿ, ಹೆಚ್ಚುವರಿ ಶುಲ್ಕ ವಿಧಿಸಲಾಗುತ್ತದೆ. ಈ ಹೆಚ್ಚುವರಿ ಶುಲ್ಕದಲ್ಲಿ (ಬಡ್ಡಿ) ಟಿಡಿಎಸ್ ಅನ್ನು ಲೆಕ್ಕ ಹಾಕಲಾಗುತ್ತದೆ. ಆದರೆ ಟಿಡಿಎಸ್ ಪಾವತಿ ಮಾಡಿಲ್ಲ, ಏಕೆಂದರೆ ಕೆಲವು ಉತ್ಪಾದಕರುಗಳು ಮತ್ತು ಮೊತ್ತವು ಸಾಮಾನ್ಯವಾಗಿ ಅಂತಹ ಟಿಡಿಎಸ್ ನ ನಿಜವಾದ ಪಾವತಿಯ ಸಮಯದಲ್ಲಿ ಬದಲಾಗಬಹುದು.

ವಾಸ್ತವಾಂಶ.</td></tr>
<tr><td>7</td><td>ಗ್ರಾಹಕರ ಭದ್ರತಾ ಠೇವಣಿ ಟಿಪ್ಪಣಿ ಸಂಖ್ಯೆ 22.1 ರೂ.75302.13 ಲಕ್ಷಗಳು : ತಂತ್ರಾಂಶದಲ್ಲಿ ನಿರ್ವಹಿಸಲಾಗುವ ಸಾಮಾನ್ಯ ಲೆಡ್ಜರ್ ಮತ್ತು ಸಬ್ಸಿಡರಿ ಲೆಡ್ಜರ್ ಪ್ರಕಾರ ಗ್ರಾಹಕರಿಂದ ಭದ್ರತಾ</td><td>ಆಸ್ತಿ ಹೊಣೆ ಪಟ್ಟಿ ಪುನರ್ ರಚನೆ ಯೋಜನೆ III ರ ಸಮಯದಲ್ಲಿ, ಸರ್ಕಾರದ ನಿರ್ದೇಶನದ ಪ್ರಕಾರ ಮಾಪಕ ಭದ್ರತಾ ಠೇವಣಿಯ ಒಂದು ಭಾಗವನ್ನು ಬಂಡವಾಳೀಕರಿಸಲಾಯಿತು. ಸದರಿ</td></tr>
</table>

ಕ್ರಮ ಸಂಖ್ಯೆ	ಶಾಸನಬದ್ಧ ಲೆಕ್ಕ ಪರಿಶೋಧಕರ ಅವಲೋಕನಗಳು	ಆಡಳಿತ ವರ್ಗದ ಉತ್ತರ
	ಠೇವಣಿಗಳ ಹೊಂದಾಣಿಕೆ ಬಾಕಿ ಉಳಿದಿದೆ, ಅಂತಹ ಠೇವಣಿಗಳ ಮೇಲೆ ಗುರುತಿಸಲ್ಪಟ್ಟ ಬಡ್ಡಿಯ ನಿಖರತೆಯ ಬಗ್ಗೆ ನಮಗೆ ಪ್ರತಿಕ್ರಿಯಿಸಲು ಸಾಧ್ಯವಾಗುವುದಿಲ್ಲ.	ಮೊತ್ತವನ್ನು ಬಂಡವಾಳೀಕರಿಸಿದ್ದರೂ, ಗ್ರಾಹಕರ ಲೆಡ್ಜರ್ ಖಾತೆಯಲ್ಲಿ ಈ ಮೊತ್ತವು ಇನ್ನೂ ಬಾಕಿ ಉಳಿದಿದೆ. ಆದರೆ ಖಾತೆಗಳ ಪ್ರಕಾರ ಮಾಪಕ ಭದ್ರತಾ ಠೇವಣಿಯನ್ನು ಕಂಪನಿಯ ಖಾತೆಗಳಲ್ಲಿ ಆ ಮಟ್ಟಕ್ಕೆ ಇಳಿಸಲಾಯಿತು, ಇದು ಉಪ ವಿಭಾಗಗಳಲ್ಲಿ ನಿರ್ವಹಿಸಲಾದ ಗ್ರಾಹಕರ ಲೆಡ್ಜರ್ ಖಾತೆಯ ಪ್ರಕಾರ ಮತ್ತು ವಿಭಾಗ ಅಧಿಕಾರಿಗಳ ಖಾತೆಗಳ ಪ್ರಕಾರ ಬಾಕಿ ನಡುವಿನ ವ್ಯತ್ಯಾಸಕ್ಕೆ ಕಾರಣವಾಗುತ್ತದೆ. ಇದಲ್ಲದೆ, ಠೇವಣಿ ರೆಜಿಸ್ಟರ್‌ಗಳನ್ನು ಉಪ ವಿಭಾಗೀಯ / ವಿಭಾಗ ಮಟ್ಟದಲ್ಲಿ ನಿರ್ವಹಿಸಲಾಗುತ್ತಿದೆ ಮತ್ತು ಖಾತೆಗಳನ್ನು ವಿಭಾಗೀಯ ಮಟ್ಟದಲ್ಲಿ ನಿರ್ವಹಿಸಲಾಗುತ್ತದೆ. ಹಣಕಾಸು ವರ್ಷದಲ್ಲಿ ಠೇವಣಿ ರೆಜಿಸ್ಟರ್‌ಗಳು ಮತ್ತು ಖಾತೆಗಳ ನಡುವಿನ ಬಾಕಿಗಳನ್ನು ಸಮನ್ವಯಗೊಳಿಸಲು ಕಂಪನಿಯು ಪ್ರಯತ್ನಗಳನ್ನು ಮಾಡಿದೆ. ಕಾರ್ಯವು ದೊಡ್ಡದಾಗಿರುವುದರಿಂದ, ಅದನ್ನು ಪೂರ್ಣಗೊಳಿಸಲು ಪ್ರಯತ್ನಗಳು ನಡೆಯುತ್ತಿವೆ.
8	**ವ್ಯಾಪಾರ ಬಾಕಿಗಳು, ಸಾಲಗಳು ಮತ್ತು ಮುಂಗಡ ಮತ್ತು ಠೇವಣಿಗಳು / ವ್ಯಾಪಾರ ಪಾವತಿಗಳು / ಇತ್ಯಾದಿ ಟಿಪ್ಪಣಿ ಸಂಖ್ಯೆ 12, 14, 22.2, 22.4 ಮತ್ತು 26:** ಮುಖ್ಯ ವ್ಯಾಪಾರ ಬಾಕಿಗಳ / ವ್ಯಾಪಾರ ಪಾವತಿಗಳ ಅಡಿಯಲ್ಲಿನ ಬಾಕಿಗಳ ದೃಢೀಕರಣಗಳ ಅನುಪಸ್ಥಿತಿಯಲ್ಲಿ ಕಂಪನಿಯ ಹಣಕಾಸಿನ ಪಟ್ಟಿಗಳ ಮೇಲೆ ಅದರ ಪರಿಣಾಮದ ಕುರಿತು ಪ್ರತಿಕ್ರಿಯಿಸಲು ನಮಗೆ ಸಾಧ್ಯವಾಗುವುದಿಲ್ಲ. ಠೇವಣಿ, ಸಾಲ ಮತ್ತು ಮುಂಗಡಗಳು, ಗುತ್ತಿಗೆದಾರರು ಹೊಂದಿರುವ ದಾಸ್ತಾನುಗಳ ಅಡಿಯಲ್ಲಿರುವ ಮೊತ್ತಗಳು ದೃಢೀಕರಣಕ್ಕೆ ಒಳಪಟ್ಟಿರುತ್ತದೆ. ಅಂತಹ ದೃಢೀಕರಣಗಳ ಅನುಪಸ್ಥಿತಿಯಲ್ಲಿ ಕಂಪನಿಯ ಹಣಕಾಸಿನ ಪಟ್ಟಿಗಳ ಮೇಲೆ ಅದರ ಪರಿಣಾಮದ ಬಗ್ಗೆ ಪ್ರತಿಕ್ರಿಯಿಸಲು ನಮಗೆ ಸಾಧ್ಯವಾಗುವುದಿಲ್ಲ.	ಟಿಪ್ಪಣಿ 55 ರ ಅಡಿಯಲ್ಲಿ ಬಹಿರಂಗಪಡಿಸಿದಂತೆ, ಸಾಲದಾತರು, ಸಾಲಗಾರರು ಮತ್ತು ಸರಬರಾಜುದಾರರಿಗೆ ಮುಂಗಡಗಳು ಮತ್ತು ಇತರೆ ಸಾಲಗಳಿಗೆ ಸಂಬಂಧಿಸಿದ ಬಾಕಿಗಳ ದೃಢೀಕರಣಕ್ಕೆ ಒಳಪಡಿಸಬೇಕಾಗಿರುತ್ತದೆ. ಆದಾಗ್ಯೂ ಹೆಚ್ ಟಿ ಗ್ರಾಹಕರಿಂದ ದೃಢೀಕರಣವನ್ನು ಪಡೆಯಲು ಕ್ರಮವನ್ನು ಪ್ರಾರಂಭಿಸಲಾಗಿದೆ. ಪತ್ರಗಳು ವೈಯಕ್ತಿಕ ಸಾಲಗಾರರಿಗೆ (ಬಹುಪಾಲು ವಿದ್ಯುತ್ ಖರೀದಿ ಮಸೂದೆಗಳಿಗೆ ಸಂಬಂಧಿಸಿದ ಬಿಲ್‌ಗಳಿಗೆ ಮಾತ್ರ) ಬರೆಯಲಾಗಿದೆ ಆದರೆ ಸಾಲಗಾರರಿಂದ ಪ್ರತಿಕ್ರಿಯೆ ಕಳಪೆಯಾಗಿದೆ ಮತ್ತು 31.03.2020 ರಂದು ಎಸ್ಕಾಂಗಳಲ್ಲಿ ಎನರ್ಜಿ ಬ್ಯಾಲೆನ್ಸಿಂಗ್ ಬಾಕಿ ಹೊಂದಾಣಿಕೆ ಮಾಡಲಾಗಿದೆ. ಕೆಪಿಟಿಸಿಎಲ್ ಮತ್ತು ಎಸ್ಕಾಂಗಳೊಂದಿಗೆ ಇತರೆ ಬ್ಯಾಲೆನ್ಸ್‌ಗಳ ಹೊಂದಾಣಿಕೆ ಪ್ರಕ್ರಿಯೆಯಲ್ಲಿದೆ.

<table>
<tr><th>ಕ್ರಮ ಸಂಖ್ಯೆ</th><th>ಶಾಸನಬದ್ಧ ಲೆಕ್ಕ ಪರಿಶೋಧಕರ ಅವಲೋಕನಗಳು</th><th>ಆಡಳಿತ ವರ್ಗದ ಉತ್ತರ</th></tr>
<tr><td>9</td><td>ಈ ಕೆಳಗಿನ ಖಾತೆಗಳ ಬಾಕಿ ಮೊತ್ತವು ಬಹಳ ಹಿಂದಿನಿಂದಲೂ ಸರಿಹೊಂದಿಸದೆ ಮುಂದುವರಿಯುತ್ತಿದೆ, ಅಂದರೆ ಈ ಖಾತೆಗಳನ್ನು ಸರಿಪಡಿಸಲು ಮತ್ತು ಸಂಬಂಧಪಟ್ಟವರೊಂದಿಗೆ ಖಾತೆಯನ್ನು ಹೊಂದಾಣಿಕೆ ಮಾಡಿಕೊಳ್ಳಲು ಮತ್ತು ಈ ಕೆಳಗೆ ಸಂಬಂಧಪಟ್ಟವರಿಂದ ದೃಢೀಕರಣವನ್ನು ಪಡೆಯಲು ಕೆಪಿಟಿಸಿಎಲ್ / ಬೆಸ್ಕಾಂ/ ಮೆಸ್ಕಾಂ ಮತ್ತು ಹೆಸ್ಕಾಂ ಕ್ರಮಗಳನ್ನು ತೆಗೆದು ಕೊಳ್ಳಬೇಕಾಗಿದೆ.
<table>
<tr><th>ಟಿಪ್ಪಣಿ ಸಂಖ್ಯೆ</th><th>ಬಾಕಿ</th><th>ಮೊತ್ತ ಲಕ್ಷಗಳಲ್ಲಿ</th></tr>
<tr><td rowspan="3">15- ಇತರೆ ಪ್ರಸ್ತುತ ಹಣಕಾಸು ಸ್ವತ್ತುಗಳು</td><td>ಕೆಪಿಟಿಸಿಎಲ್‌ನಿಂದ ಸ್ವೀಕೃತಿಯಾಗ ಬೇಕಾಗಿರುವುದು</td><td>2606.60</td></tr>
<tr><td>ಹೆಸ್ಕಾಂನಿಂದ ಸ್ವೀಕೃತಿಯಾಗ ಬೇಕಾಗಿರುವುದು</td><td>720.19</td></tr>
<tr><td>ಮೆಸ್ಕಾಂನಿಂದ ಸ್ವೀಕೃತಿಯಾಗ ಬೇಕಾಗಿರುವುದು</td><td>1871.63</td></tr>
<tr><td rowspan="2">16 – ಇತರೆ ಪ್ರಸ್ತುತ ಆಸ್ತಿಗಳು</td><td>ಜೆಸ್ಕಾಂನಿಂದ ಸ್ವೀಕೃತಿಯಾಗ ಬೇಕಾಗಿರುವುದು</td><td>2162</td></tr>
<tr><td>ಹೆಸ್ಕಾಂನಿಂದ ಸ್ವೀಕೃತಿಯಾಗ ಬೇಕಾಗಿರುವುದು</td><td>149</td></tr>
<tr><td>27 – ಇತರೆ ಪ್ರಸ್ತುತ ಹೊಣೆಗಾರಿಕೆಗಳು</td><td>ಬೆಸ್ಕಾಂ ಗೆ ನಿವ್ವಳ ಪಾವತಿಸ ಬೇಕಾಗಿರುವುದು</td><td>55.70</td></tr>
</table></td><td>ಸಮನ್ವಯೀಕರಣ ಪ್ರಗತಿಯಲ್ಲಿದೆ.</td></tr>
<tr><td>10.</td><td>ಇತರೆ ಹಣಕಾಸಿನ ಹೊಣೆಗಾರಿಕೆಗಳು:
(ಟಿಪ್ಪಣಿ ಸಂಖ್ಯೆ 22-ರೂ.1,22,235.01 ಲಕ್ಷಗಳು) ಈ ಮೊತ್ತವು ಇಂಟರ್ ಯೂನಿಟ್ ಅಕೌಂಟ್ಸ್ (ನೆಟ್)/ (ಐಯುಎ) ಶೀರ್ಷಿಕೆಯಡಿಯಲ್ಲಿ ರೂ.23650.83 ಲಕ್ಷಗಳನ್ನು ಒಳಗೊಂಡಿದೆ. ಚಾವಿಸನಿನಿ ತಿಳಿಸಿದಂತೆ ಈ ಮೊತ್ತವು ಸಂಯೋಜನೆಗೆ</td><td>ಕಂಪನಿಯ ಆರಂಭಿಕ ಬ್ಯಾಲೆನ್ಸ್ ಶೀಟ್ ನಲ್ಲಿ ರೂ.224.77 ಕೋಟಿಗಳನ್ನು ಮೆಸ್ಕಾಂನಿಂದ ಐಯುಎ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ವರ್ಗಾಯಿಸಲಾಗಿದೆ. ಈ ವಿಷಯವನ್ನು ಕರ್ನಾಟಕ ಸರ್ಕಾರದ ಬಳಿ ಟಿಒ ಸಂಖ್ಯೆ 27920 ದಿನಾಂಕ 30.03.2019 ರಂತೆ ಇದರಲ್ಲಿ ಚಾವಿಸನಿನಿ ಯು ಬಾಕಿ ಮೊತ್ತವನ್ನು ಬಂಡವಾಳ ಮೀಸಲು ಎಂದು ಪರಿಗಣಿಸುವಂತೆ</td></tr>
</table>

ಕ್ರಮ ಸಂಖ್ಯೆ	ಶಾಸನಬದ್ಧ ಲೆಕ್ಕ ಪರಿಶೋಧಕರ ಅವಲೋಕನಗಳು	ಆಡಳಿತ ವರ್ಗದ ಉತ್ತರ
10	ಮುಂಚಿತವಾಗಿ ಮತ್ತು ಈ ಬಾಕಿ ಇತ್ಯರ್ಥಕ್ಕೆ ಸಂಬಂಧಿಸಿದಂತೆ ಮೆಸ್ಕಾಂಗೆ ಪಾವತಿಸಬೇಕಾದ ರೂ.224.77 ಕೋಟಿಗಳನ್ನು ಒಳಗೊಂಡಿದೆ. ಈ ವಿಷಯವನ್ನು ಮೆಸ್ಕಾಂ ಮತ್ತು ಸರ್ಕಾರದೊಂದಿಗೆ ಸೂಕ್ತ ಕ್ರಮಕ್ಕೆ ಕೈಗೆತ್ತಿಕೊಳ್ಳಲಾಗಿದೆ. ಕಂಪನಿಯು ಐಯುಎ ಸಮತೋಲನವನ್ನು ಸಮನ್ವಯ ಗೊಳಿಸಲು ಮತ್ತು ಇತ್ಯರ್ಥಗೊಳಿಸಲು ಕ್ರಮ ಕೈಗೊಂಡಿದೆ ಮತ್ತು ನಿಗಮವು ಅದರ ಸಂಯೋಜನೆಯ ನಂತರ ಖಾತೆಗಳ ಪುಸ್ತಕಗಳಲ್ಲಿ ರೂ.224.77 ಕೋಟಿಗಿಂತ ಹೆಚ್ಚಿನ ಬಾಹ್ಯ ಹೊಣೆಗಾರಿಕೆಯನ್ನು ಮುಂದುವರಿಸಿದೆ, 31.03.2020 ರಂತೆ ಖಾತೆಗಳು ಬಗೆಹರಿಯದ ಕಾರಣ ಇದು ಐಯುಎ ಅಡಿಯಲ್ಲಿ ರೂ.224.77 ಕೋಟಿಗಳ ಬಾಹ್ಯ ಹೊಣೆಗಾರಿಕೆಯನ್ನು ತೋರಿಸುತ್ತದೆ.	ಕೋರಿದೆ. ಚಾರ್ಟರ್ಡ್ ಅಕೌಂಟೆಂಟ್ಸ್ ಅಭಿಪ್ರಾಯವನ್ನು ಲಗತ್ತಿಸಿದೆ.
11	**ವಿಮೆ:** ಕಂಪನಿಯ ಸ್ಥಿರ ಸ್ವತ್ತುಗಳು, ದಾಸ್ತಾನುಗಳು ಮತ್ತು ನಗದು ಮೊತ್ತಗಳನ್ನು ವಿಮೆ ಮಾಡಲಾಗಿಲ್ಲ. ಮಾನವ ನಿರ್ಮಿತ ಅಥವಾ ನೈಸರ್ಗಿಕ ವಿಪತ್ತುಗಳ ಕಾರಣದಿಂದಾಗಿ ಕಂಪನಿಯು ನಷ್ಟದ ಅಪಾಯಕ್ಕೆ ಗುರಿಯಾಗುವುದರಿಂದ, ವಿಮೆಯಿಂದ ಅಪಾಯವನ್ನು ಸರಿದೂಗಿಸಲು ಸಲಹೆ ನೀಡಲಾಗಿದೆ.	ವಾಸ್ತವಾಂಶ.
12	ಕೆಪಿಸಿಎಲ್ ಮತ್ತು ಆರ್‌ಪಿಸಿಎಲ್‌ಗೆ ಪಾವತಿಸಬೇಕಾದ ಬಡ್ಡಿ: ಎ) ಕಂಪನಿಯು 2019-20 ನೇ ಸಾಲಿಗೆ ಕೆಪಿಸಿಎಲ್‌ಗೆ ಪಾವತಿಸಬೇಕಾದ ಬಡ್ಡಿಯನ್ನು ನೀಡಿಲ್ಲ ಮತ್ತು ಮಾರ್ಚ್ 2020 ರ ವೇಳೆಗೆ ಬಾಕಿ ಉಳಿದಿರುವ ಮೊತ್ತ ₹101910.19 ಲಕ್ಷಗಳನ್ನು ನೋಟ್ ಸಂಖ್ಯೆ-49(ಬಿ) ನಲ್ಲಿ ಉಲ್ಲೇಖಿಸಿರುವಂತೆ ನಾವು ಇಂಡ್ ಎಎಸ್ ಹಣಕಾಸು ಹೇಳಿಕೆ ಮೇಲೆ ಪರಿಣಾಮವನ್ನು ಪ್ರಮಾಣೀಕರಿಸಲು ಸಾಧ್ಯವಿಲ್ಲ	ವಾಸ್ತವಾಂಶ.
	ಬಿ) ಟಿಪ್ಪಣಿ ಸಂಖ್ಯೆ 50(ಜಿ) ನಲ್ಲಿ ಉಲ್ಲೇಖಿಸಿರುವಂತೆ ಕಂಪನಿಯು 2019-20 ನೇ ಸಾಲಿಗೆ ಆರ್‌ಪಿಸಿಎಲ್ ಗೆ ಪಾವತಿಸಬೇಕಾದ ಬಡ್ಡಿ ಮೊತ್ತ ರೂ.1577.75 ಲಕ್ಷಗಳಷ್ಟು ಕಡಿಮೆ ಪ್ರಕಟಗೊಳಿಸಲಾಗಿದೆ ಆದ್ದರಿಂದ ಇಂಡ್ ಎಎಸ್ ಹಣಕಾಸು ಹೇಳಿಕೆ ಮೇಲೆ ಪರಿಣಾಮವನ್ನು ಪ್ರಮಾಣೀಕರಿಸಲು ಸಾಧ್ಯವಿಲ್ಲ	ವಾಸ್ತವಾಂಶ. ಇದನ್ನು ಅನಿಶ್ಚಿತ ಹೊಣೆಗಾರಿಕೆ ಎಂದು ಪರಿಗಣಿಸಲಾಗಿದೆ ಮತ್ತು ಟಿಪ್ಪಣಿ-51 ರಲ್ಲಿ ಘೋಷಿಸಲಾಗಿದೆ.

ಕ್ರಮ ಸಂಖ್ಯೆ	ಶಾಸನಬದ್ಧ ಲೆಕ್ಕ ಪರಿಶೋಧಕರ ಅವಲೋಕನಗಳು	ಆಡಳಿತ ವರ್ಗದ ಉತ್ತರ
13	**ಟಿಪ್ಪಣಿ ಸಂಖ್ಯೆ 16.17 ಹಳೆಯ ಬಾಕಿಗಳಿಗಾಗಿ ಪ್ರಾವಿಷನ್:** ವಸೂಲಾತಿಯ ಅನುಮಾನವಿರುವ ಹಳೆಯ ಬಾಕಿ (ದಾಸ್ತಾನುಗಳಲ್ಲಿನ ಕೊರತೆಗೆ ಸಂಬಂಧಿಸಿದಂತೆ ವಿಚಾರಣೆ ಬಾಕಿಯಿರುವ ಮೊತ್ತ ರೂ.68.82 ಲಕ್ಷ) ಬಾಕಿಗಳಿಗೆ ಪ್ರಾವಿಷನ್ ಮಾಡದ ಕಾರಣ ಈಗಿನ ಆಸ್ತಿ ಹೆಚ್ಚಳವಾಗಿದ್ದು ನಷ್ಟ ಕಡಿಮೆ ಪ್ರಕಟವಾಗಿದೆ.	ದಾಸ್ತಾನುಗಳಲ್ಲಿನ ಕೊರತೆಗೆ ಸಂಬಂಧಿಸಿದ ವಿಧಾನವನ್ನು ಪ್ರಾರಂಭದಿಂದಲೂ ಅನುಸರಿಸಲಾಗುತ್ತದೆ.
14	**ಟಿಪ್ಪಣಿ ಸಂಖ್ಯೆ 12 ವಿವಾದಿತ ಗ್ರಾಮಗಳಿಂದ ಬರಬೇಕಾಗಿರುವುದು** ವಿವಾದಾತ್ಮಕ ಹಳ್ಳಿಗಳಿಂದ ಬರಬೇಕಾದ ರೂ.2079 ಲಕ್ಷಗಳಿಗೆ ಪ್ರಾವಿಷನ್ ಮಾಡದಿರುವ ಕಾರಣ ಸ್ವೀಕೃತಿ ಪಟ್ಟಿಯಲ್ಲಿ ಮೊತ್ತವು ಹೆಚ್ಚಳವಾಗಿದ್ದು ಮತ್ತು ನಷ್ಟವು ಕಡಿಮೆ ಪ್ರಕಟವಾಗಿದೆ.	ಈಗಾಗಲೇ ಕರ್ನಾಟಕ ಸರ್ಕಾರದೊಂದಿಗೆ ಪತ್ರ ವ್ಯವಹಾರ ಮಾಡಲಾಗಿದೆ. ಆರ್ಥಿಕ ವರ್ಷ 2021 ರಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು.
15	**ಬಂಡವಾಳ ಮತ್ತು ಇತರೆ ಬದ್ಧತೆಗಳನ್ನು ಬಹಿರಂಗಪಡಿಸದಿರುವುದು:** ಈ ವರ್ಷದಲ್ಲಿ ಕಂಪನಿಯು ಬಂಡವಾಳ ಖಾತೆಯಲ್ಲಿ ಕಾರ್ಯಗತಗೊಳಿಸಲು ಉಳಿದಿರುವ ಅಂದಾಜು ಮೊತ್ತದ ಒಪ್ಪಂದಗಳ ವಿವರಗಳನ್ನು ಬಹಿರಂಗಪಡಿಸಿಲ್ಲ ಮತ್ತು ಕಂಪನಿಗಳ ಕಾಯ್ದೆ, 2013 ರ ವೇಳಾಪಟ್ಟಿ III ರ ಪ್ರಕಾರ ಪ್ರಾವಿಷನ್ ಮಾಡಲಾಗಿಲ್ಲ.	ವಾಸ್ತವಾಂಶ.
16	**ಟಿಪ್ಪಣಿ ಸಂಖ್ಯೆ:28.16 ರಿಂದ 28.19, ಮತ್ತು 16.1 ಮತ್ತು 16.2** ಗಂಗಾ ಕಲ್ಯಾಣ ಯೋಜನೆ ಮತ್ತು ಡಿಸಿಡಬ್ಲ್ಯು ಕಾಮಗಾರಿಗಳಿಗೆ ಸಂಬಂಧಿಸಿದಂತೆ ಡೆಬಿಟ್ ಮತ್ತು ಕ್ರೆಡಿಟ್ ಮೊತ್ತಗಳೆರಡರ ಸಮನ್ವಯೀಕರಣ ಮತ್ತು ಮೊತ್ತಗಳ ದೃಢೀಕರಣವು ದೀರ್ಘಕಾಲದಿಂದ ಬಾಕಿ ಉಳಿದಿವೆ, ಸಮನ್ವಯೀಕರಣ ಮತ್ತು ಮೊತ್ತಗಳ ದೃಢೀಕರಣದ ಅನುಪಸ್ಥಿತಿಯಲ್ಲಿ ಕಂಪನಿಯ ಹಣಕಾಸು ಹೇಳಿಕೆಗಳ ಮೇಲಿನ ಪರಿಣಾಮವನ್ನು ಪ್ರಮಾಣೀಕರಿಸಲು ಸಾಧ್ಯವಾಗಿರುವುದಿಲ್ಲ.	ಬಹುತೇಕ ಬಾಕಿಗಳು ಹಳೆದಾಗಿರುವುದರಿಂದ ಬಾಕಿಗಳನ್ನು ತೆರವುಗೊಳಿಸಲು/ಸರಿಪಡಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲು ಕೆಲವು ವಿವರವಾದ ವಿಶ್ಲೇಷಣೆ ಅಗತ್ಯವೆಂದು ಅಭಿಪ್ರಾಯಪಟ್ಟಿದೆ. ಚಾವಿಸನಿನಿಯಾದ್ಯಂತ ಡಿಸಿಡಬ್ಲ್ಯು ಕಾರ್ಯಗಳ ಅಡಿಯಲ್ಲಿ ಸಂಪೂರ್ಣ ಬಾಕಿ ಇರುವ ಮೊತ್ತಗಳನ್ನು ಪರಿಶೀಲಿಸಲು ತಜ್ಞರ ಸಮಿತಿಯನ್ನು ರಚಿಸಲಾಗುವುದೆಂದು ನಿಗಮವು ಭರವಸೆ ನೀಡುತ್ತದೆ ಮತ್ತು ಸಮಿತಿ ರಚನೆಯಾದ 2 ತಿಂಗಳೊಳಗೆ ವಿವರವಾದ ವರದಿಯನ್ನು ನಿಗಮ ಕಛೇರಿಗೆ ಸಲ್ಲಿಸುವಂತೆ ಸಮಿತಿಗೆ ಕೋರಲಾಗುತ್ತದೆ. ತಜ್ಞರ ಸಮಿತಿಯಿಂದ ವರದಿಯನ್ನು ಪಡೆದ ನಂತರ 2020-21 ನೇ

ಕ್ರಮ ಸಂಖ್ಯೆ	ಶಾಸನಬದ್ಧ ಲೆಕ್ಕ ಪರಿಶೋಧಕರ ಅವಲೋಕನಗಳು	ಆಡಳಿತ ವರ್ಗದ ಉತ್ತರ
		ಸಾಲಿನಲ್ಲಿ ಸೂಕ್ತ ಲೆಕ್ಕ ವಿಧಾನವನ್ನು ನೀಡಲಾಗುವುದು.
1	ಕಂಪನಿ ಕಾಯಿದೆ 2013ರ ಪರಿಚ್ಛೇದ 149ರ ಪ್ರಕಾರ ಕಂಪನಿಯು ತನ್ನ ಮಂಡಳಿಯಲ್ಲಿ ಯಾವುದೇ ಸ್ವತಂತ್ರ ನಿರ್ದೇಶಕರನ್ನು ನೇಮಿಸಿಕೊಂಡಿಲ್ಲ. ಸ್ವತಂತ್ರ ನಿರ್ದೇಶಕರನ್ನು ನೇಮಕ ಮಾಡುವಂತೆ ಕಂಪನಿಯು ಕರ್ನಾಟಕ ಸರ್ಕಾರಕ್ಕೆ ನಿರಂತರವಾಗಿ ಮನವಿಯನ್ನು ಸಲ್ಲಿಸಿದೆ. ಸ್ವತಂತ್ರ ನಿರ್ದೇಶಕರ ಅನುಪಸ್ಥಿತಿಯಲ್ಲಿ, ಕಂಪನಿಯು ಲೆಕ್ಕಪರಿಶೋಧನಾ ಸಮಿತಿ, ನಾಮನಿರ್ದೇಶನ & ಸಂಭಾವನೆ ಸಮಿತಿ ಹಾಗೂ ಸಿ.ಎಸ್.ಆರ್ ಸಮಿತಿ ಸಭೆಗಳನ್ನು ಮಾನ್ಯವಾಗಿ ರೂಪಿಸಲು ಮತ್ತು ನಡೆಸಲು ಸಾಧ್ಯವಾಗಿರುವುದಿಲ್ಲ.	ಚಾವಿಸನಿನಿಯು ಸರ್ಕಾರಿ ನಿಗಮವಾಗಿರುವುದರಿಂದ ಎಲ್ಲಾ ನಿರ್ದೇಶಕರನ್ನು ಕರ್ನಾಟಕ ಸರ್ಕಾರವೇ ನೇಮಿಸಲಾಗುತ್ತದೆ. ಚಾವಿನಿನಿಯ ಮಂಡಳಿಗೆ ಸ್ವತಂತ್ರ ನಿರ್ದೇಶಕರ ನೇಮಕಕ್ಕಾಗಿ ಕಂಪನಿಯು ಕರ್ನಾಟಕ ಸರ್ಕಾರಕ್ಕೆ ಪ್ರಸ್ತಾವನೆಗಳು ಮತ್ತು ಪತ್ರಗಳನ್ನು ಕಳುಹಿಸಲಾಗಿದೆ. ಸರ್ಕಾರದಿಂದ ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ.

ಸಹಿ /-

ಅಧ್ಯಕ್ಷರು

ಸ್ಥಳ : ಮೈಸೂರು

ದಿನಾಂಕ: 30.09.2020

ಸ್ವತಂತ್ರ ಲೆಕ್ಕಪರಿಶೋಧಕರ ವರದಿ(ಪರಿಷ್ಕೃತ)

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ಮಂಡಳಿಯ ಸದಸ್ಯರುಗಳಿಗೆ

ಸ್ವತಂತ್ರ ಹಣಕಾಸು ಪಟ್ಟಿಗಳ ಲೆಕ್ಕ ಪರಿಶೋಧನೆಯ ಪರಿಷ್ಕೃತ ವರದಿ

ಅರ್ಹತಾ ಅಭಿಪ್ರಾಯ

ಈ ವರದಿಯು ದಿನಾಂಕ: 20-08-2020 ರ ನಮ್ಮ ಮೂಲ ವರದಿಯನ್ನು ಅಧಿಕ್ರಮಿಸುತ್ತದೆ. ಕಂಪನಿಯ ಕಾಯಿದೆ 2013 ರ ಕಲಂ 143(6)(ಎ) ರಡಿಯಲ್ಲಿ ಮಹಾಲೇಖಪಾಲರು ಮಾಡಿರುವ ಆಕ್ಷೇಪಣೆಗಳನುಸಾರ ದಿನಾಂಕ: 19.08.2020 ರಂದು ಮಂಡಳಿಯ ನಿರ್ದೇಶಕರು ಅನುಮೋದಿಸಿರುವ ಲೆಕ್ಕಪತ್ರಗಳನ್ನು ಮಹಾಲೇಖಪಾಲರು ನಿಗಮದ ಹಣಕಾಸಿನ ತ:ಖ್ತೆಗಳ ಮತ್ತು ಲೆಕ್ಕ ಪತ್ರಗಳ ಪುಸ್ತಕದ ಮೇಲೆ ಮಾಡಲಾಗಿರುವ ಆಕ್ಷೇಪಣೆಗಳನ್ನು ಸೇರಿಸುವ ಸಂಬಂಧ ಪರಿಷ್ಕರಿಸಲಾಗಿದೆ. ಲೆಕ್ಕಪತ್ರಗಳ ಪರಿಷ್ಕರಣೆಯಿಂದ ಉಂಟಾಗಿರುವ ಪರಿಣಾಮಗಳನ್ನು ಲೆಕ್ಕಪತ್ರಗಳ ಟಿಪ್ಪಣಿ 59 ರಲ್ಲಿ ತಿಳಿಸಲಾಗಿರುತ್ತದೆ. ಮೂಲ ವರದಿಯ ದಿನಾಂಕದ ನಂತರದ ಸಂಗತಿಗಳ ಮೇಲಿನ ನಮ್ಮ ಲೆಕ್ಕ ಪರಿಶೋಧನೆಯನ್ನು ಲೆಕ್ಕಪತ್ರಗಳ ಭಾಗವಾಗಿ ರೂಪುಗೊಂಡಿರುವ ಟಿಪ್ಪಣಿ 59 ರಲ್ಲಿ ಮಾಡಲಾಗಿರುವ ತಿದ್ದುಪಡಿಗಳಿಗೆ ಮಾತ್ರ ಸೀಮಿತಗೊಳಿಸಲಾಗಿರುತ್ತದೆ.

ನಾವುಗಳು 31 ನೇ ಮಾರ್ಚ್ 2020 ಕ್ಕೆ ಕೊನೆಗೊಂಡಂತೆ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ (ಕಂಪನಿ)ಯ ಆಸ್ತಿ ಹೊಣೆ ಪಟ್ಟಿ, ಲಾಭ & ನಷ್ಟ, ಇತರೆ ಸಮಗ್ರ ಆದಾಯ, ನಗದು ಹರಿವು ಪಟ್ಟಿ ಮತ್ತು ಈಕ್ವಿಟಿಯಲ್ಲಿನ ಬದಲಾವಣೆಯ ವಿವರಣಾ ಪಟ್ಟಿಯನ್ನೊಳಗೊಂಡ ಪ್ರಮುಖವಾದ ಲೆಕ್ಕಗಳ ನಿಯಮಾವಳಿಗಳು ಮತ್ತು ಇತರೆ ವಿವರಣಾ ಮಾಹಿತಿಗಳನ್ನು ಒಳಗೊಂಡ ಭಾರತೀಯ ಲೆಕ್ಕ ಮಾನದಂಡದನ್ವಯದ ಸ್ವತಂತ್ರ ಹಣಕಾಸು ಪಟ್ಟಿಗಳನ್ನು ಪರಿಶೋಧಿಸಿರುತ್ತೇವೆ.

ನಮ್ಮ ಅಭಿಪ್ರಾಯದಲ್ಲಿ ಮತ್ತು ನಮ್ಮ ಮಾಹಿತಿಯ ಅತ್ಯುತ್ತಮ ಮತ್ತು ನಮಗೆ ನೀಡಿದ ವಿವರಣೆಗಳ ಪ್ರಕಾರ, ನಮ್ಮ ವರದಿಯ ಅರ್ಹ ಅಭಿಪ್ರಾಯದ ಆಧಾರದ ಮೇಲೆ ವಿವರಿಸಿದ ವಿಷಯಗಳ ಪರಿಣಾಮಗಳನ್ನು ಹೊರತುಪಡಿಸಿ, ಮೇಲಿನ ಹಣಕಾಸು ಪಟ್ಟಿಗಳು ಕಂಪನಿ ಕಾಯ್ದೆ 2013 ರಲ್ಲಿ ಅಗತ್ಯವಿರುವ ಮಾಹಿತಿ ಒದಗಿಸುತ್ತಿದ್ದು, ಭಾರತದಲ್ಲಿ ಸಾಮಾನ್ಯವಾಗಿ ಒಪ್ಪಿರುವ ಲೆಕ್ಕಪತ್ರ ನೀತಿಗಳಿಗನುಸಾರವಾಗಿ ನಿಜ ಹಾಗೂ ನ್ಯಾಯಯುತ ನೋಟವನ್ನು ಮಾರ್ಚ್ 31, 2020 ರಂತೆ ಕಂಪನಿಯ ವ್ಯವಹಾರಗಳ ಸ್ಥಿತಿ ಮತ್ತು ಅದರ ನಷ್ಟ, ಇತರೆ ಸಮಗ್ರ ಆದಾಯ, (ಈಕ್ವಿಟಿಯಲ್ಲಿನ ಬದಲಾವಣೆಗಳು) ಮತ್ತು ಅದರ ಆ ದಿನಾಂಕದಂದು ಕೊನೆಗೊಂಡ ವರ್ಷದ ಹಣದ ಹರಿವಿನ ಮಾಹಿತಿಯನ್ನು ನೀಡುತ್ತದೆ.

ಎ. ಅರ್ಹ ಅಭಿಪ್ರಾಯಕ್ಕಾಗಿ ಆಧಾರ

ನಾವು ಕಂಪನಿ ಕಾಯ್ದೆ ಪರಿಚ್ಛೇದ 143(10) ರಲ್ಲಿ ನಿರ್ದಿಷ್ಟಪಡಿಸಿದ ಲೆಕ್ಕಪರಿಶೋಧನೆ ಮಾನದಂಡಗಳ ಅನುಗುಣವಾಗಿ ಸ್ವತಂತ್ರ ಇಂಡ್ ಎಎಸ್ ಹಣಕಾಸು ಪಟ್ಟಿಗಳ ಲೆಕ್ಕ ಪರಿಶೋಧನೆ ನಡೆಸಿರುತ್ತೇವೆ. ನಮ್ಮ ಜವಾಬ್ದಾರಿಗಳನ್ನು ಸ್ವತಂತ್ರ ಇಂಡ್ ಎಎಸ್ ಹಣಕಾಸು ಪಟ್ಟಿಗಳ ಲೆಕ್ಕ ಪರಿಶೋಧನೆ ವರದಿಯಲ್ಲಿನ ಲೆಕ್ಕಪರಿಶೋಧಕರ ಜವಾಬ್ದಾರಿಗಳಲ್ಲಿನ ಆಯಾ ಮಾನದಂಡಗಳಡಿಯಲ್ಲಿ ಇದರೊಂದಿಗೆ ಮತ್ತಷ್ಟು ವಿವರಿಸಲಾಗಿದೆ. ನಾವು ಕಂಪನಿಯ ಸ್ವತಂತ್ರರಾಗಿ, ಇನ್ಸ್ಟಿಟ್ಯೂಟ್ ಆಫ್ ಚಾಟರ್ಡ್ ಆಫ್ ಅಕೌಂಟಂಟ್ಸ್ ಆಫ್ ಇಂಡಿಯಾ ರವರು ನೀಡಿರುವ "ನೀತಿ ಸಂಹಿತೆ" ಅನುಸಾರ ಮತ್ತು ನಮ್ಮ ಸ್ವತಂತ್ರ ಇಂಡ್ ಎಎಸ್ ಹಣಕಾಸು ಪಟ್ಟಿಗಳ ಲೆಕ್ಕ ಪರಿಶೋಧನೆಗೆ ಸಂಬಂಧಿತ ನೈತಿಕ ಅವಶ್ಯಕತೆಗಳ ಜೊತೆಗೆ ಕಾಯ್ದೆಯ ನಿಬಂಧನೆಗಳು ಮತ್ತು ನಿಯಮಾನುಸಾರ, ಹಾಗೂ ನಾವು ಇನ್ನಿತರ ನೈತಿಕ ಜವಾಬ್ದಾರಿಗಳನ್ನು ಇದರ ಅವಶ್ಯಕತೆಗಳು ಮತ್ತು ನೀತಿ ಸಂಹಿತೆಯನ್ವಯ ಪೂರೈಸಿದ್ದೇವೆ. ನಾವು ಸಾಕಷ್ಟು ಮತ್ತು ಸೂಕ್ತ ಲೆಕ್ಕ ಪರಿಶೋಧನಾ ಪುರಾವೆಗಳನ್ನು ಪಡೆದು , ಅದರ ಆಧಾರದ ಮೇಲೆ ಸ್ವತಂತ್ರ ಇಂಡ್ ಎಎಸ್ ಹಣಕಾಸು ಪಟ್ಟಿಗಳ ಲೆಕ್ಕ ಪರಿಶೋಧನೆಯ ಅರ್ಹತಾ ಅಭಿಪ್ರಾಯ ನೀಡಿರುವೆವೆಂದು ನಂಬಿರುತ್ತೇವೆ.

1. **ಲೆಕ್ಕ ಪರಿಶೋಧನೆಯ ಸಂಚಯ ವ್ಯವಸ್ಥೆಯಿಂದ ವಿಚಲನ:** ಕಂಪನಿ ಕಾಯ್ದೆ, 2013 ರ ಕಲಂ 128(1)ರ ಪ್ರಕಾರ, ಪುಸ್ತಕಗಳನ್ನು ಸಂಚಯದ ಆಧಾರದ ಮೇಲೆ ಮತ್ತು ಅಕೌಂಟಿಂಗ್‌ನ ಡಬಲ್ ಎಂಟ್ರಿ ಸಿಸ್ಟಮ್ ಪ್ರಕಾರ ಇರಿಸದಿದ್ದರೆ, ಸರಿಯಾದ ಖಾತೆಗಳ ಪುಸ್ತಕಗಳನ್ನು ಇರಿಸಲಾಗಿದೆ ಎಂದು ಪರಿಗಣಿಸಲಾಗುವುದಿಲ್ಲ. ಮಹತ್ವದ ಲೆಕ್ಕಪರಿಶೋಧಕ ನೀತಿ ಸಂಖ್ಯೆ 2 (ಹಣಕಾಸು ಪಟ್ಟಿ ತಯಾರಿಕೆಯ ಆಧಾರ)ದಲ್ಲಿ ಹೇಳಿರುವಂತೆ, ಕಂಪನಿಯು ಬಂಡವಾಳ ಸ್ವತ್ತುಗಳಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಅನುದಾನ ಮತ್ತು ಸಬ್ಸಿಡಿಗಳಿಗೆ ಸಂಬಂಧಿಸಿದ ವಹಿವಾಟುಗಳು ಗುತ್ತಿಗೆದಾರರು ಹಾಗೂ ಮಾರಾಟಗಾರರಿಂದ ಹಾನಿ ವಸೂಲಿ ಹಾಗೂ ದಂಡಗಳನ್ನು ಸ್ವೀಕರಣೆ ಆಧಾರದಲ್ಲಿ ಗುರುತಿಸುತ್ತದೆ, ಇದು ಕಂಪನಿಗಳ ಕಾಯ್ದೆ 2013 ರ ಕಲಂ 128(1) ರ ಅಡಿಯಲ್ಲಿ ಸೂಚಿಸಿರುವ ಲೆಕ್ಕಪತ್ರದ ಸಂಚಯ ವ್ಯವಸ್ಥೆಗೆ ವಿರುದ್ಧವಾಗಿದೆ.

2. **ಎಂಎಸ್‌ಎಂಇ ನಿಯಮಗಳನ್ನು ಪಾಲಿಸುವುದು:** ಸ್ವತಂತ್ರ ಇಂಡ್ ಎಎಸ್ ಹಣಕಾಸು ಪಟ್ಟಿಗಳ ಟಿಪ್ಪಣಿ 26 – ವ್ಯಾಪಾರ ಸಂಬಂಧಿತ ಕೊಡತಕ್ಕವುಗಳಲ್ಲಿ ಉಲ್ಲೇಖಿಸಿರುವಂತೆ ಎಂಎಸ್‌ಎಂಇ ಕಾಯ್ದೆಯಡಿ ಬರುವ ಪೂರೈಕೆದಾರರನ್ನು ಕಂಪನಿಯು ಗುರುತಿಸಿಲ್ಲ ಎಂದು ಲೆಕ್ಕಪರಿಶೋಧನೆಯ ಸಮಯದಲ್ಲಿ ನಾವು ಗಮನಿಸಿದ್ದೇವೆ. ವಿದ್ಯುತ್ ಕಂಬ ಸರಬರಾಜುದಾರರ ಟೆಂಡರ್ ದಾಖಲೆಗಳ ಪರಿಶೀಲನೆಯಲ್ಲಿ, ಎಲ್ಲಾ ವಿದ್ಯುತ್ ಕಂಬ ಪೂರೈಕೆದಾರರು ಎಂಎಸ್‌ಎಂಇ ನಿಬಂಧನೆಗಳ ಅಡಿಯಲ್ಲಿವೆ ಎಂದು ತೋರಿಸುವ ದಾಖಲೆಗಳನ್ನು ಸಲ್ಲಿಸಿದ್ದಾರೆ ಎಂದು ನಾವು ಗಮನಿಸಿದ್ದೇವೆ. ಕಂಪನಿಯು 2019-20 ನೇ ಸಾಲಿಗೆ ಎಂಎಸ್‌ಎಂಇ-1 ರಿಟರ್ನ್ ಅನ್ನು ಆರ್‌ಓಸಿಗೆ ಸಲ್ಲಿಸಿರುತ್ತದೆ. ಕಂಪನಿಯು ಎಂಎಸ್‌ಎಂಇ ಪೂರೈಕೆದಾರರನ್ನು ಗುರುತಿಸಿದೆ ಆದರೆ ಎಂಎಸ್‌ಎಂಇ ಸರಬರಾಜಿಗೆ ವಿಳಂಬವಾದ ಪಾವತಿ ಮತ್ತು ಪಾವತಿಸಬೇಕಾದ ಬಡ್ಡಿಯನ್ನು ಗುರುತಿಸಿಲ್ಲದ ಕಾರಣ, ಕಂಪನಿಯ ಸ್ವತಂತ್ರ ಹಣಕಾಸು ಹೇಳಿಕೆಗಳಿಗೆ ಪರಿಣಾಮಕಾರಿಯಾದ ಪರಿಣಾಮವನ್ನು ನಾವು ಪ್ರಮಾಣೀಕರಿಸಲು ಸಾಧ್ಯವಿಲ್ಲ.

3. **ಸರ್ಕಾರ / ಸರ್ಕಾರದಿಂದ ಕರಾರು ಕೈಗೆತ್ತಿಕೊಂಡ ಸಂಸ್ಥೆಗಳು/ ಘಟಕಗಳು:** ಐಪಿ ಸೆಟ್ ಬಾಕಿ, ನೀರು ಸರಬರಾಜು ಬಾಕಿ, ಬೀದಿ ದೀಪ ಬಾಕಿ ಮುಂತಾದ ಎಲ್ಲಾ ಬಾಕಿಗಳಿಗೆ ಸಂಬಂಧಿಸಿದಂತೆ ಕಂಪನಿಯು ಸರ್ಕಾರದಿಂದ/ ಸರ್ಕಾರದ ಸಂಸ್ಥೆಗಳು /ಸಂಸ್ಥೆಗಳನ್ನು ಅವಕಾಶಮಾಡಿಲ್ಲವೆಂದು ಎಂದು ನಾವು ಗಮನಿಸಿದ್ದೇವೆ. ಬಾಕಿಗಳೆಲ್ಲವು, ಪ್ರಸ್ತುತ ಬಾಕಿಗಳಾಗದಿರುವುದರಿಂದ ಮತ್ತು ಏಜ್ ವೈಸ್ ವಿವರಗಳು ಮತ್ತು ಕರಾರುಗಳ ಚೇತರಿಕೆಯ ಸ್ಥಿತಿಯ ಅನುಪಸ್ಥಿತಿಯಲ್ಲಿ, ಕಂಪನಿಯ ಸ್ವತಂತ್ರ ಹಣಕಾಸು ಮೇಲೆ ಅದರ ಪರಿಣಾಮದ ಕುರಿತು ಪ್ರತಿಕ್ರಿಯಿಸಲು ನಮಗೆ ಸಾಧ್ಯವಾಗುತ್ತಿಲ್ಲ.

4. **ಮೈಸೂರು ಶುಗರ್ಸ್ ಕಂಪನಿಯಿಂದ ಪಡೆಯಬಹುದಾದ ಟಿಪ್ಪಣಿಗಳು ಸಂಖ್ಯೆ 12 ವ್ಯಾಪಾರ ಸ್ವೀಕಾರಾರ್ಹ:** 31.03.2020 ರ ಅಂತ್ಯಕ್ಕೆ ಬಾಕಿ ಉಳಿದಿರುವ ಮೊತ್ತ ರೂ.27.31 ಕೋಟಿಯಲ್ಲಿ ವಿದ್ಯುತ್ ಖರೀದಿ ಒಪ್ಪಂದದ ಮೊದಲಿನ ಬಾಕಿ ಮೊತ್ತ ರೂ.8,60,66,757 ನ್ನು ಒಳಗೊಂಡಿರುತ್ತದೆ. 3 ವರ್ಷಕ್ಕಿಂತ ಹಳೆಯ ಬಾಕಿಯಾಗಿದ್ದು ಮತ್ತು ನಿಯಮಿತ ಪಾವತಿಯನ್ನು ಸ್ವೀಕರಿಸಿಲ್ಲವಾದ್ದರಿಂದ ಅಗತ್ಯ ಅವಕಾಶವನ್ನು ಒದಗಿಸಬೇಕಾಗಿತ್ತದೆ. ಅಗತ್ಯವಾದ ಅವಕಾಶದ ಅನುಪಸ್ಥಿತಿಯಲ್ಲಿ ಸ್ವತಂತ್ರ ಹಣಕಾಸು ಹೇಳಿಕೆಗಳ ಮೇಲಿನ ಪರಿಣಾಮವನ್ನು ಪ್ರಮಾಣೀಕರಿಸಲು ನಮಗೆ ಸಾಧ್ಯವಾಗುವುದಿಲ್ಲ.

5. **ಬ್ಯಾಂಕ್ ಬ್ಯಾಲೆನ್ಸ್, ಸಾಲ ಮತ್ತು ಎಲ್‌ಸಿ ಠೇವಣಿ ಪರಿವರ್ತನೆ:** ನಮ್ಮ ಲೆಕ್ಕಪರಿಶೋಧನೆಯ ಅವಧಿಯಲ್ಲಿ ಈ ಕೆಳಗೆ ತಿಳಿಸಲಾದ ಸಾಲ ಮತ್ತು ಎಲ್‌ಸಿ ಠೇವಣಿ ಅನುಸರಣೆಯನ್ನು ಪಡೆಯಲಾಗುವುದಿಲ್ಲ ಎಂದು ನಾವು ಗಮನಿಸಿದ್ದೇವೆ.

₹ಲಕ್ಷ ಗಳಲ್ಲಿ)

ಬ್ಯಾಂಕಿನ ಹೆಸರು	ಪುಸ್ತಕದ ಪ್ರಕಾರ ಬಾಕಿ	ಬ್ಯಾಂಕ್/ಸಾಲಗಾರರ ಪ್ರಕಾರ ಬಾಕಿ	ವ್ಯತ್ಯಾಸ/ಷರಾ
ಎಪಿಡಿಆರ್‌ಪಿ ಯಿಂದ ಸಾಲ	784.42/-	-	ಬಾಕಿ ದೃಢೀಕರಣಗೊಂಡಿಲ್ಲ
ಕರ್ನಾಟಕ ಸರ್ಕಾರದಿಂದ ಬಡ್ಡಿರಹಿತ ಸಾಲ	60000/-	-	ಬಾಕಿ ದೃಢೀಕರಣಗೊಂಡಿಲ್ಲ

ಆಯಾ ಬ್ಯಾಂಕುಗಳಿಂದ ಮುಕ್ತಾಯದ ಬಾಕಿಗಳನ್ನು ನೇರವಾಗಿ ಅನುಸರಿಸಲು ನಾವು ವಿನಂತಿಸಿದ್ದೇವೆ, ಆದರೆ ನಾವು ಕೆಲವು ಬ್ಯಾಂಕುಗಳಿಂದ ಅನುಸರಣೆಯನ್ನು ಸ್ವೀಕರಿಸಿದ್ದೇವೆ ಮತ್ತು ಅವುಗಳಲ್ಲಿ ಬಹುಪಾಲು ಸಮತೋಲನದ ದೃಢೀಕರಣವನ್ನು ನಮಗೆ ಕಳುಹಿಸಿಲ್ಲ.

6. ಟಿಡಿಎಸ್ ಅನುಸರಣೆಯಿಲ್ಲದ ಟಿಪ್ಪಣಿ ಸಂಖ್ಯೆ 36.2.1 ರೂ. 9404.91ಲಕ್ಷ: ₹2002.15 ಲಕ್ಷಗಳ ವಿದ್ಯುತ್ ಖರೀದಿಯನ್ನು ವಿಳಂಬವಾಗಿ ಪಾವತಿಸುವಾಗ ಪಾವತಿಸಬೇಕಾದ ಬಡ್ಡಿಯ ಮೇಲೆ ಕಡಿತಗೊಳಿಸಿದ ₹200.21 ಲಕ್ಷ ಟಿಡಿಎಸ್ ಅನ್ನು ನಮ್ಮ ಲೆಕ್ಕಪರಿಶೋಧನೆಯ ಸಮಯದಲ್ಲಿ ನಾವು ಗಮನಿಸಿದ್ದೇವೆ, ಆದ್ದರಿಂದ ನಿಗದಿತ ದಿನಾಂಕದೊಂದಿಗೆ ಸರ್ಕಾರಕ್ಕೆ ರವಾನಿಸಲಾಗುವುದಿಲ್ಲ ಮತ್ತು ಇದು ₹2002.15 ಲಕ್ಷಕ್ಕೆ ಆದಾಯ ತೆರಿಗೆ ಇಲಾಖೆಯಿಂದ ಬಡ್ಡಿ ವೆಚ್ಚವನ್ನು 30% ರಷ್ಟಕ್ಕೆ ಅನುಮತಿಸುವುದಿಲ್ಲ, ಇದರ ಪರಿಣಾಮವಾಗಿ ₹187.40ಲಕ್ಷಗಳ ಮೇಲೆ ಅನ್ವಯವಾಗುವ ತೆರಿಗೆಯನ್ನು ಕಡಿಮೆ ತೋರಿಸಲಾಗಿದೆ ಮತ್ತು ಇದರ ಪರಿಣಾಮವಾಗಿ ನಷ್ಟವು ಮತ್ತು ತೆರಿಗೆಯ ಅವಕಾಶವನ್ನು ಕಡಿಮೆ ತೋರಿಸಲಾಗಿದೆ.

7. ಗ್ರಾಹಕರ ಭದ್ರತಾ ಠೇವಣಿ ಟಿಪ್ಪಣಿ ಸಂಖ್ಯೆ 22.1 ₹75302.13 ಲಕ್ಷಗಳು : ತಂತ್ರಾಂಶದಲ್ಲಿ ನಿರ್ವಹಿಸಲಾಗುವ ಸಾಮಾನ್ಯ ಲೆಡ್ಜರ್ ಮತ್ತು ಅಂಗಸಂಸ್ಥೆ ಲೆಡ್ಜರ್ ಪ್ರಕಾರ ಗ್ರಾಹಕರಿಂದ ಭದ್ರತಾ ಠೇವಣಿಗಳ ಹೊಂದಾಣಿಕೆ ಬಾಕಿ ಉಳಿದಿದೆ, ಅಂತಹ ಠೇವಣಿಗಳ ಮೇಲೆ ಗುರುತಿಸಲ್ಪಟ್ಟ ಬಡ್ಡಿಯ ನಿಖರತೆಯ ಬಗ್ಗೆ ನಮಗೆ ಪ್ರತಿಕ್ರಿಯಿಸಲು ಸಾಧ್ಯವಾಗುವುದಿಲ್ಲ.

8. ವ್ಯಾಪಾರ ಕರಾರುಗಳು, ಸಾಲಗಳು ಮತ್ತು ಮುಂಗಡ ಮತ್ತು ಠೇವಣಿಗಳು / ವ್ಯಾಪಾರ ಪಾವತಿಗಳು / ಇತ್ಯಾದಿ ಟಿಪ್ಪಣಿ ಸಂಖ್ಯೆ 12, 14, 22.2, 22.4 ಮತ್ತು 26: ಮುಖ್ಯ ವ್ಯಾಪಾರ ಕರಾರು / ವ್ಯಾಪಾರ ಪಾವತಿಗಳ ಅಡಿಯಲ್ಲಿನ ಬಾಕಿಗಳು ದೃಢೀಕರಣಗಳ ಅನುಪಸ್ಥಿತಿಯಲ್ಲಿ ಕಂಪನಿಯ ಹಣಕಾಸಿನ ಹೇಳಿಕೆಗಳ ಮೇಲೆ ಅದರ ಪರಿಣಾಮದ ಕುರಿತು ಪ್ರತಿಕ್ರಿಯಿಸಲು ನಮಗೆ ಸಾಧ್ಯವಾಗುವುದಿಲ್ಲ.

ಮುಖ್ಯ ಠೇವಣಿ, ಸಾಲ ಮತ್ತು ಮುಂಗಡಗಳು, ಗುತ್ತಿಗೆದಾರರು ಹೊಂದಿರುವ ದಾಸ್ತಾನುಗಳ ಅಡಿಯಲ್ಲಿ ಬಾಕಿ ಇರುವುದು ದೃಢೀಕರಣಕ್ಕೆ ಒಳಪಟ್ಟಿರುತ್ತದೆ. ಅಂತಹ ದೃಢೀಕರಣಗಳ ಅನುಪಸ್ಥಿತಿಯಲ್ಲಿ ಕಂಪನಿಯ ಹಣಕಾಸಿನ ಹೇಳಿಕೆಗಳ ಮೇಲೆ ಅದರ ಪರಿಣಾಮದ ಬಗ್ಗೆ ಪ್ರತಿಕ್ರಿಯಿಸಲು ನಮಗೆ ಸಾಧ್ಯವಾಗುವುದಿಲ್ಲ.

9. ಈ ಕೆಳಗಿನ ಖಾತೆಗಳ ಬಾಕಿ ಮೊತ್ತವು ಬಹಳ ಹಿಂದಿನಿಂದಲೂ ಸರಿಹೊಂದಿಸದೆ ಮುಂದುವರಿಯುತ್ತಿದೆ: ಅಂದರೆ ಈ ಖಾತೆಗಳನ್ನು ತೆರವುಗೊಳಿಸಲು ಮತ್ತು ಸಂಬಂಧಪಟ್ಟವರೊಂದಿಗೆ ಖಾತೆಯನ್ನು ಹೊಂದಾಣಿಕೆ ಮಾಡಿಕೊಳ್ಳಲು ಮತ್ತು ಸಂಬಂಧಪಟ್ಟ ಎಲ್ಲಾ ವಿವರಗಳಿಂದ ಸಮತೋಲನ ದೃಢೀಕರಣವನ್ನು ಪಡೆಯಲು ಕೆಪಿಟಿಸಿಎಲ್ / ಬೆಸ್ಕಾಂ/ ಮೆಸ್ಕಾಂ ಮತ್ತು ಹೆಸ್ಕಾಂ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ.

ಟಿಪ್ಪಣಿ ಸಂಖ್ಯೆ	ಬಾಕಿ	ಮೊತ್ತ ರೂ. ಲಕ್ಷಗಳಲ್ಲಿ
15– ಇತರೆ ಪ್ರಸ್ತುತ ಹಣಕಾಸು ಸ್ವತ್ತುಗಳು	ಕೆಪಿಟಿಸಿಎಲ್‌ನಿಂದ ಸ್ವೀಕೃತಿಯಾಗಬೇಕಾಗಿರುವುದು	2606.60
	ಹೆಸ್ಕಾಂನಿಂದ ಸ್ವೀಕೃತಿಯಾಗಬೇಕಾಗಿರುವುದು	720.19
	ಮೆಸ್ಕಾಂನಿಂದ ಸ್ವೀಕೃತಿಯಾಗಬೇಕಾಗಿರುವುದು	1871.63
16 – ಇತರೆ ಪ್ರಸ್ತುತ ಆಸ್ತಿಗಳು	ಜೆಸ್ಕಾಂನಿಂದ ಸ್ವೀಕೃತಿಯಾಗಬೇಕಾಗಿರುವುದು	2162.00
	ಹೆಸ್ಕಾಂನಿಂದ ಸ್ವೀಕೃತಿಯಾಗಬೇಕಾಗಿರುವುದು	149.00
27 – ಇತರೆ ಪ್ರಸ್ತುತ ಹೊಣೆಗಾರಿಕೆಗಳು	ಬೆಸ್ಕಾಂ ಗೆ ನಿವ್ವಳ ಪಾವತಿಸಬೇಕಾಗಿರುವುದು	55.70

10. ಇತರೆ ಹಣಕಾಸಿನ ಹೊಣೆಗಾರಿಕೆಗಳು:

(ಟಿಪ್ಪಣಿ ಸಂಖ್ಯೆ 22- ರೂ.1,22,235.01 ಲಕ್ಷಗಳು) ಈ ಮೊತ್ತವು ಇಂಟರ್ ಯೂನಿಟ್ ಅಕೌಂಟ್ಸ್ (ನೆಟ್)/ (ಐಯುಎ) ಶೀರ್ಷಿಕೆಯಡಿಯಲ್ಲಿ ರೂ.23650.83 ಲಕ್ಷಗಳನ್ನು ಒಳಗೊಂಡಿದೆ. ಸೆಸ್ಕಾಂ ತಿಳಿಸಿದಂತೆ ಈ ಮೊತ್ತವು ಸಂಯೋಜನೆಗೆ ಮುಂಚಿತವಾಗಿ ಮತ್ತು ಈ ಬಾಕಿ ಇತ್ಯರ್ಥಕ್ಕೆ ಸಂಬಂಧಿಸಿದಂತೆ ಮೆಸ್ಕಾಂಗೆ ಪಾವತಿಸಬೇಕಾದ ರೂ.224.77 ಕೋಟಿಗಳನ್ನು ಒಳಗೊಂಡಿದೆ. ಈ ವಿಷಯವನ್ನು ಮೆಸ್ಕಾಂ ಮತ್ತು ಸರ್ಕಾರದೊಂದಿಗೆ ಕೈಗೆತ್ತಿಕೊಳ್ಳಲಾಗಿದೆ. ಕಂಪನಿಯು ಐಯುಎ ಸಮತೋಲನವನ್ನು ಸಮನ್ವಯಗೊಳಿಸಲು ಮತ್ತು ಇತ್ಯರ್ಥಗೊಳಿಸಲು ಕ್ರಮ ಕೈಗೊಂಡಿದೆ ಮತ್ತು ನಿಗಮವು ಅದರ ಸಂಯೋಜನೆಯ ನಂತರ ಖಾತೆಗಳ ಪುಸ್ತಕಗಳಲ್ಲಿ ರೂ.224.77 ಕೋಟಿಗಿಂತ ಹೆಚ್ಚಿನ ಬಾಹ್ಯ ಹೊಣೆಗಾರಿಕೆಯನ್ನು ಮುಂದುವರಿಸಿದೆ 31.03.2020 ರಂತೆ ಖಾತೆಗಳು ಬಗೆಹರಿಯದ ಕಾರಣ. ಇದು ಐಯುಎ ಅಡಿಯಲ್ಲಿ ರೂ.224.77 ಕೋಟಿಗಳ ಬಾಹ್ಯ ಹೊಣೆಗಾರಿಕೆಯನ್ನು ತೋರಿಸುತ್ತದೆ.

11. ವಿಮೆ: ಕಂಪನಿಯ ಸ್ಥಿರ ಸ್ವತ್ತುಗಳು, ದಾಸ್ತಾನುಗಳು ಮತ್ತು ನಗದು ಬಾಕಿಗಳ ವಿಮೆ ಮಾಡಲಾಗಿಲ್ಲ. ಮಾನವ ನಿರ್ಮಿತ ಅಥವಾ ನೈಸರ್ಗಿಕ ವಿಪತ್ತುಗಳ ಕಾರಣದಿಂದಾಗಿ ಕಂಪನಿಯು ನಷ್ಟದ ಅಪಾಯಕ್ಕೆ ಗುರಿಯಾಗುವುದರಿಂದ, ವಿಮೆಯಿಂದ ಅಪಾಯವನ್ನು ಸರಿದೂಗಿಸಲು ಸಲಹೆ ನೀಡಲಾಗುತ್ತದೆ. ಕಂಪನಿಯು ವಿಮೆಯ ಅನುಪಸ್ಥಿತಿಯಿಂದ ಪರಿಣಾಮಕಾರಿ ನಷ್ಟಕ್ಕೆ ಗುರಿಯಾಗಬಹುದು.

12. ಕೆಪಿಸಿಎಲ್ ಮತ್ತು ಆರ್‌ಪಿಸಿಎಲ್‌ಗೆ ಪಾವತಿಸಬೇಕಾದ ಬಡ್ಡಿ:

ಎ) ಟಿಪ್ಪಣಿ ಸಂಖ್ಯೆ 49(ಬಿ) ನಲ್ಲಿ ಉಲ್ಲೇಖಿಸಿದಂತೆ ಕಂಪನಿಯು 2019-20 ನೇ ಸಾಲಿಗೆ, ಕೆಪಿಸಿಎಲ್‌ಗೆ 31.03.2020 ರ ಅಂತ್ಯಕ್ಕೆ ಬಾಕಿ ಇರುವ ರೂ.101910.19 ಲಕ್ಷ ಬಡ್ಡಿಗೆ ಇಂಡ್ ಎಎಸ್ ಪ್ರಕಾರ ಅಗತ್ಯ ಹೊಂದಾಣಿಕೆಗಳನ್ನು ನೀಡಿಲ್ಲದಿರುವುದರಿಂದ ಕಂಪನಿಯ ಹಣಕಾಸಿನ ಹೇಳಿಕೆಗಳ ಮೇಲೆ ಅದರ ಪರಿಣಾಮದ ಬಗ್ಗೆ ಪ್ರತಿಕ್ರಿಯಿಸಲು ನಮಗೆ ಸಾಧ್ಯವಾಗುವುದಿಲ್ಲ.

ಬಿ) ಟಿಪ್ಪಣಿ ಸಂಖ್ಯೆ 49(ಜಿ) ನಲ್ಲಿ ಉಲ್ಲೇಖಿಸಿದಂತೆ ಕಂಪನಿಯು 2019-20 ನೇ ಸಾಲಿಗೆ, ಆರ್‌ಪಿಸಿಎಲ್‌ಗೆ 31.03.2020 ರ ಅಂತ್ಯಕ್ಕೆ ಬಾಕಿ ಇರುವ ರೂ.1577.75 ಲಕ್ಷ ಬಡ್ಡಿಗೆ ಇಂಡ್ ಎಎಸ್ ಪ್ರಕಾರ ಅಗತ್ಯ ಹೊಂದಾಣಿಕೆಗಳನ್ನು ನೀಡಿಲ್ಲದಿರುವುದರಿಂದ ಕಂಪನಿಯ ಹಣಕಾಸಿನ ಹೇಳಿಕೆಗಳ ಮೇಲೆ ಅದರ ಪರಿಣಾಮದ ಬಗ್ಗೆ ಪ್ರತಿಕ್ರಿಯಿಸಲು ನಮಗೆ ಸಾಧ್ಯವಾಗುವುದಿಲ್ಲ.

13. ಟಿಪ್ಪಣಿ ಸಂಖ್ಯೆ 16.17 - ಹಳೆಯ ಕರಾರುಗಳಿಗಾಗಿ ಅವಕಾಶ: ಚೇತರಿಕೆಯ ಅನುಮಾನವಿರುವ ಹಳೆಯ ಕರಾರು (ದಾಸ್ತಾನುಗಳಲ್ಲಿನ ಕೊರತೆಗೆ ಸಂಬಂಧಿಸಿದಂತೆ ತನಿಖೆ ಬಾಕಿ ಇರುವ ರೂ.68.82 ಲಕ್ಷ) ಅಗತ್ಯ ಹೊಂದಾಣಿಕೆಗಳನ್ನು ನೀಡಿಲ್ಲದಿರುವುದರಿಂದ ಇತರೆ ಪ್ರಸ್ತುತ ಸ್ವತ್ತುಗಳನ್ನು ಅತಿಯಾಗಿ ಅಂದಾಜಾಗಿದೆ ಮತ್ತು ನಷ್ಟವು ಕಡಿಮೆಯಾಗಿದೆ.

14. ಟಿಪ್ಪಣಿ ಸಂಖ್ಯೆ 12 ವಿವಾದಿತ ಗ್ರಾಮಗಳಿಂದ ಬರಬೇಕಾಗಿರುವುದು: ಅನುಮಾನಾಸ್ಪದ ಮೊತ್ತವು ವಿವಾದಾತ್ಮಕ ಹಳ್ಳಿಗಳಿಂದ ಬರಬೇಕಾದ ರೂ.2456.92 ಲಕ್ಷಗಳಿಗೆ ಅವಕಾಶ ಕಲ್ಪಿಸದಿರುವುದರಿಂದ ಸ್ವೀಕೃತಿ ಪಟ್ಟಿಯಲ್ಲಿ ಮೊತ್ತವು ಹೆಚ್ಚಾಯಿತು ಮತ್ತು ನಷ್ಟವು ಕಡಿಮೆಯಾಯಿತು.

15. ಬಂಡವಾಳ ಮತ್ತು ಇತರೆ ಬದ್ಧತೆಗಳನ್ನು ಬಹಿರಂಗಪಡಿಸದಿರುವುದು: ವರ್ಷದಲ್ಲಿ ಕಂಪನಿಯು ಬಂಡವಾಳ ಖಾತೆಯಲ್ಲಿ ಕಾರ್ಯಗತಗೊಳಿಸಲು ಉಳಿದಿರುವ ಒಪ್ಪಂದಗಳ ಅಂದಾಜು ಮೊತ್ತದ ವಿವರಗಳನ್ನು ಬಹಿರಂಗಪಡಿಸಿಲ್ಲ ಮತ್ತು ಕಂಪನಿಗಳ ಕಾಯ್ದೆ, 2013 ರ ವೇಳಾಪಟ್ಟಿ III ರ ಪ್ರಕಾರ ಅವಕಾಶ ಕಲ್ಪಿಸಿರುವುದಿಲ್ಲ.

16. ಟಿಪ್ಪಣಿ ಸಂಖ್ಯೆ:28.16 ರಿಂದ 28.19 , 16.1 ಮತ್ತು 16.2 -ಗಂಗಾ ಕಲ್ಯಾಣ ಕಾಮಗಾರಿ ಮತ್ತು ಇತರ ಡಿಸಿಡಬ್ಲ್ಯೂ ಕಾಮಗಾರಿಯ ಜಮೆ ಮತ್ತು ಖರ್ಚು ತುಂಬಾ ಹಳೆಯ ಬಾಕಿಗಳು ಸಮನ್ವಯೀಕರಣಕ್ಕೆ ಮತ್ತು ಬಾಕಿ ದೃಢೀಕರಣಕ್ಕೆ ಒಳಪಟ್ಟಿರುತ್ತದೆ ಹಾಗೂ ಬಾಕಿ ಸಮನ್ವಯೀಕರಣ ಮತ್ತು ಬಾಕಿ ದೃಢೀಕರಣದ ಅನುಪಸ್ಥಿಯಲ್ಲಿ ಕಂಪನಿಯ ಹಣಕಾಸಿನ ಹೇಳಿಕೆಗಳ ಮೇಲೆ ಅದರ ಪರಿಣಾಮದ ಬಗ್ಗೆ ಪ್ರತಿಕ್ರಿಯಿಸಲು ನಮಗೆ ಸಾಧ್ಯವಾಗುವುದಿಲ್ಲ.

ಬಿ. ಕಂಪನಿಯು ಲೆಕ್ಕಪತ್ರಗಳ ಟಿಪ್ಪಣಿಗಳಲ್ಲಿ ಲೆಕ್ಕಪತ್ರಗಳ ಪಟ್ಟಿಯನ್ನು ಯಾವ ಆಧಾರದಲ್ಲಿ ತಯಾರಿಸಲಾಗಿದೆ ಎಂದು ತಿಳಿಸಿದ್ದರೂ ಸಹ ಕೆಳಗಿನ ಸಂದರ್ಭಗಳಲ್ಲಿ ಅಕೌಂಟಿಂಗ್ ಮಾನದಂಡಗಳಿಂದ ವಿಚಲನವಾಗಿದೆ:

I) ತಪಶೀಲು ಪಟ್ಟಿ ಮೇಲೆ ಇಂಡ್ ಎಎಸ್-2ಕ್ಕೆ ಸಂಬಂಧಪಟ್ಟಂತೆ ಅನುಪಾಲನೆಯನ್ನು ಸಲ್ಲಿಸದಿರುವುದು:

31.03.2016 ರ ದಾಸ್ತಾನುಗಳನ್ನು 01.04.2016 ರ ಪುಸ್ತಕಗಳಿಗೆ ಸ್ಟ್ಯಾಂಡರ್ಡ್ ದರದಲ್ಲಿ ವರ್ಗಾಯಿಸಲಾಯಿತು ಮತ್ತು ಇದು ಬಳಕೆಗೆ ಯೋಗ್ಯವಾದ ಸರಾಸರಿ ದರದ ದರ ಮತ್ತು ತಪಶೀಲುಗಳ ಮೌಲ್ಯವನ್ನು ತೆಗೆದುಕೊಳ್ಳುವಲ್ಲಿ ಕಾರಣವಾಗಿದೆ. ಮೇಲಿನ ಫಲಿತಾಂಶದ ಪರಿಣಾಮವು ಆಸ್ತಿ-ಹೊಣೆ ಪಟ್ಟಿಯಲ್ಲಿ ತೆಗೆದುಕೊಂಡಿರುವ ದಾಸ್ತಾನಿರುವ ಸಾಮಗ್ರಿಗಳ ಬೆಲೆ ಬಗ್ಗೆ ತಪ್ಪು ಹೇಳಿಕೆಗಳಿಗೆ ಅವಕಾಶವಾಗಿ ಇದು ಲಾಭ ಮತ್ತು ನಷ್ಟ ಪಟ್ಟಿಯಲ್ಲಿ ಪ್ರತಿಫಲಿಸಿರುವುದನ್ನು ಗುರುತಿಸಲು ಆಗುವುದಿಲ್ಲ.

II) ಆಸ್ತಿ, ಸ್ಥಾವರ ಮತ್ತು ಉಪಕರಣಗಳ ಮೇಲೆ ಇಂಡ್ ಎಎಸ್-16 ನ್ನು ಮತ್ತು ಸಾಲದ ವೆಚ್ಚಕ್ಕೆ ಇಂಡ್ ಎಎಸ್-23 ನ್ನು ಅನುಕರಣೆ ಮಾಡಿರುವುದಿಲ್ಲ:

(ಎ) ಆಸ್ತಿಗಳನ್ನು ಬಂಡವಾಳೀಕರಣ ಮತ್ತು ಪೂರ್ಣಗೊಂಡ ಕಾಮಗಾರಿಗಳ ಸಮಾಪನಾ ವರದಿಗಳನ್ನು ಸ್ವೀಕರಿಸದಿರುವುದರಿಂದ ಚಾಲ್ತಿಯಲ್ಲಿರುವ ಬಂಡವಾಳ ಕಾಮಗಾರಿಗಳಲ್ಲಿ ಸೇರಿಸಲಾಗಿರುವ ಆಸ್ತಿಗಳನ್ನು ಉಪಯೋಗಿಸುತ್ತಿದ್ದರೂ ಸಹ ಅವುಗಳನ್ನು ಬಂಡವಾಳೀಕರಿಸುವಲ್ಲಿ ಗಣನೀಯ ಪ್ರಮಾಣದ ವಿಳಂಬವಾಗಿರುವುದನ್ನು ಗಮನಿಸಲಾಗಿದೆ. ಇದರ ಫಲಶೃತಿ ಆಸ್ತಿ, ಸ್ಥಾವರ ಉಪಕರಣ ಮತ್ತು ಸವಕಳಿಯ ಲೆಕ್ಕೀಕರಣ ಅವಾಸ್ತವವಾಗುತ್ತದೆ.

(ಬಿ) ಆಸ್ತಿ, ಸ್ಥಾವರ ಮತ್ತು ಉಪಕರಣಗಳ ಚಾರಿತ್ರಿಕ ಬೆಲೆಯ ಮೇಲಿನ ಹೊಂದಾಣಿಕೆಯ ಮೇಲೆ ಯಾವುದೇ ಸವಕಳಿಯನ್ನು ಭವಿಷ್ಯಕ್ಕೆ ಅನ್ವಯಿಸುವಂತೆ ಆಸ್ತಿಯ ಉಳಿಕೆಯ ಕಾರ್ಯ ಸಾಮರ್ಥ್ಯದ ಅವಧಿಗೆ ಲೆಕ್ಕ ಹಾಕಲಾಗಿಲ್ಲ ಮತ್ತು ಹೊಸ ಆಸ್ತಿಯೆಂಬುದಾಗಿ ಹೊಂದಾಣಿಕೆಯನ್ನು ಭವಿಷ್ಯಕ್ಕೆ ಅನ್ವಯಿಸುವಂತೆ ಲೆಕ್ಕ ಹಾಕಲಾಗಿದೆ.

(ಸಿ) ಸಕ್ರಿಯ ಉಪಯೋಗದಿಂದ ಹಿಂಪಡೆಯಲಾದ ಆಸ್ತಿ ಮತ್ತು ವಿಫಲ/ಕಳಚಿದ ಆಸ್ತಿಗಳನ್ನು ಮರು ಸುಸ್ಥಿತಿಗೆ ತಂದು ಅವುಗಳನ್ನು ಭವಿಷ್ಯದಲ್ಲಿ ಮರು ಉಪಯೋಗಿಸಲು ಸಕ್ಷಮವಾಗಿದ್ದರೂ ಸಹ ಕಂಪನಿಯು ಅಂತಹ ಬಾಬ್ತುಗಳನ್ನು ಅವುಗಳು ಹೊಂದಿರುವ ಬೆಲೆಯ ಮೇಲೆ ಸ್ಥಿರ ಆಸ್ತಿಗಳೆಂದು ಗುರುತಿಸಿರುವುದಿಲ್ಲ ಮತ್ತು ಅವುಗಳನ್ನು ರದ್ದಿ ಅಥವಾ ಮರು ಉಪಯೋಗಕ್ಕೆ ಬಳಸುವಂತಹವು ಎಂಬುದಾಗಿ ವರ್ಗೀಕರಿಸುವವರೆಗೆ ಇತರೆ ಚಾಲ್ತಿ ಆಸ್ತಿ ಅಡಿಯಲ್ಲಿ ವಿಫಲ/ಕಳಚಿದ ಆಸ್ತಿ ಕಡಿಮೆಗೊಳಿಸಿದ ಬೆಲೆಯ ಲೆಕ್ಕ ಶೀರ್ಷಿಕೆಯಲ್ಲಿ ವರ್ಗೀಕರಿಸಲಾಗಿರುತ್ತದೆ. ಆಸ್ತಿಗಳ ಮೊತ್ತ, ಕ್ರೋಢೀಕೃತ ಸವಕಳಿ, ಪ್ರತಿ ಆಸ್ತಿಯು ಹೊಂದಿರುವ ಬೆಲೆಯನ್ನು ನಿಷ್ಕರ್ಶಿಸಲು ಸ್ಥಿರ ಆಸ್ತಿ ರಿಜಿಸ್ಟರನ್ನು ನಿಯಮಿತವಾಗಿ ನಿರ್ವಹಿಸದಿರುವ ಕಾರಣ, ಸಕ್ರಿಯ ಉಪಯೋಗದಿಂದ ಹಿಂಪಡೆಯಲಾದ ಆಸ್ತಿಗಳು ಹೊಂದಿರುವ ಬೆಲೆಯನ್ನು ಏಕರೂಪವಾಗಿ ನಿಷ್ಕರ್ಶಿಸಿರುವುದಿಲ್ಲದಿರುವುದನ್ನು ಗಮನಿಸಲಾಗಿದೆ. ಯಾವಾಗ ಆಸ್ತಿಗಳನ್ನು ಮರು ಉಪಯೋಗಕ್ಕೆ ತೊಡಗಿಸಲಾಗಿದೆಯೋ, ಆ ಮರುಸುಸ್ಥಿತಿಗೊಳಿಸಿದ ಆಸ್ತಿಗಳನ್ನು ಸರಾಸರಿ ವಿಧಾನದಲ್ಲಿ ಮತ್ತೆ ಮೂಲ ಆಸ್ತಿಯ ಪುಸ್ತಕದ ಬೆಲೆಯ ಮೇಲೆ ಯಾವುದರಲ್ಲಿ ಅವುಗಳನ್ನು ಪ್ರಾರಂಭದಲ್ಲಿ ಚಾಲ್ತಿ ಆಸ್ತಿಗೆ ವರ್ಗಾಯಿಸಲಾಗಿರುತ್ತದೋ ಅದರಲ್ಲಿ ಬಂಡವಾಳೀಕರಿಸಲಾಗಿದೆ. ನಂತರ ಅಂತಹ ಆಸ್ತಿಗಳನ್ನು ಗುರುತಿಸದಿರುವವರೆಗೆ ಮತ್ತು ಮರು ಬಂಡವಾಳೀಕರಿಸುವವರೆಗೆ ಅವುಗಳ ಸವಕಳಿಯನ್ನು ಚಾರ್ಜ್ ಮಾಡಿರುವುದಿಲ್ಲ. ಈ ಪದ್ಧತಿಯು ಇಂಡ್ ಎ.ಎಸ್-16 ಪದ್ಧತಿಯ ಪ್ರಕಾರವಿರುವುದಿಲ್ಲ. ಇದರ ಫಲಶೃತಿ ಆಸ್ತಿ, ಸ್ಥಾವರ ಮತ್ತು ಉಪಕರಣದ ಪುಸ್ತಕದ ವೆಚ್ಚ ಮತ್ತು ಸವಕಳಿ ವೆಚ್ಚದ ವರ್ಗಾವಣೆಯು ತಪ್ಪು ಹೇಳಿಕೆ ಆಗುತ್ತದೆ. ಎರಡನೇ ಮತ್ತು ನಂತರದ ಸಮಯದಲ್ಲಿನ ಎಸ್ಎಲ್ಎಂ ಆಧಾರದ ಮೇಲೆ ಸವಕಳಿಯನ್ನು ಖರ್ಚು ಹಾಕುವ ನೀತಿ ಮತ್ತು ಕಳಚಿದ / ವಿಫಲಗೊಂಡ ಆಸ್ತಿಗಳ ಸಂಚಿತ ಸವಕಳಿ ಕಳೆದ ನಂತರದ ಮೌಲ್ಯದ (**WDV**) ಮೇಲೆ ಸೂಕ್ತವಾದ ಸವಕಳಿಯನ್ನು ಲೆಕ್ಕೀಕರಿಸದಿರುವುದರಿಂದ ಪರಿಣಮಿಸುತ್ತದೆ.

(ಡಿ) ಒಂದು ಘಟಕವು ಒಂದಕ್ಕಿಂತ ಹೆಚ್ಚು ಅವಧಿಯಲ್ಲಿ ಪ್ರಮುಖ ಬಿಡಿ ಭಾಗಗಳನ್ನು ಬಳಸಿದಾಗ ಅವುಗಳನ್ನು ಆಸ್ತಿ, ಸ್ಥಾವರ ಮತ್ತು ಉಪಕರಣಗಳು ಎಂದು ಪರಿಗಣಿಸದಿರುವುದು.

(ಇ) ದಿನಾಂಕ: 01.04.2016 ರಂದು ಇದ್ದಂತೆ ದಾಸ್ತಾನಿನಲ್ಲಿರುವ ಸಾಮಗ್ರಿಗಳ ಬೆಲೆಯನ್ನು ವಾಸ್ತವಿಕ ದರದ ಬದಲು ಪ್ರಮಾಣೀಕೃತ ದರದ ಆಧಾರದ ಮೇಲೆ ಯೋಜನಾ ಆಸ್ತಿಗಳನ್ನು ಬಂಡವಾಳೀಕರಿಸಲಾಗಿದೆ.

(ಎಫ್) ಯೋಜನೆಯ ಆಸ್ತಿಗಳ ಬಂಡವಾಳೀಕರಣ : ಸಮಾಪನಾ ವರದಿಗಳು ಸಲ್ಲಿಕೆಯಾಗದಿರುವ ಪ್ರಯುಕ್ತ ಹಲವು ಹಣಕಾಸು ವರ್ಷಗಳಿಂದಲೂ ಯೋಜನೆಗಳ ಆಸ್ತಿಗಳನ್ನು ಬಂಡವಾಳೀಕರಿಸಲು ವಿಳಂಬವಾಗಿರುವ ಕಾರಣ, ಹಿಂದಿನ ವರ್ಗಗಳಲ್ಲಿ ಚಾಲ್ತಿಯಲ್ಲಿನ ಬಂಡವಾಳ ಕಾಮಗಾರಿಗಳ ಲೆಕ್ಕ ಶೀರ್ಷಿಕೆಯಡಿಯಲ್ಲಿ ಅರ್ಹತಾದಾಯಕ ಆಸ್ತಿಯ ಮೇಲಿನ ಸಾಲದ ಮೊತ್ತಕ್ಕೆ ಸಂಬಂಧಪಟ್ಟಂತೆ, ಅವುಗಳ ನೈಜ ಚಾಲನೆಗೊಳಿಸಿದ ದಿನಾಂಕಕ್ಕಿಂತ ಹೆಚ್ಚಿನ ಅವಧಿಗೆ ಬಂಡವಾಳೀಕರಿಸಿರುವ ಬಡ್ಡಿಯನ್ನು ಚಾಲ್ತಿ ಬಂಡವಾಳ ಕಾಮಗಾರಿಯಿಂದ ಹಿಂದಕ್ಕೆ ಪಡೆದು ಕಂದಾಯಕ್ಕೆ ಲೆಕ್ಕೀಕರಿಸಿರುವುದಿಲ್ಲ, ಇದರಿಂದ ಹಣಕಾಸು ಮೊತ್ತ, ಸವಕಳಿ ಲೆಕ್ಕೀಕರಣ ಮತ್ತು ಸ್ಥಿರ ಆಸ್ತಿಗಳ ಮೊತ್ತವನ್ನು ಸಾಗಿಸುವಲ್ಲಿ ತಪ್ಪು ಹೇಳಿಕೆ ನೀಡಿದಂತಾಗಿದೆ. ಮತ್ತು ಸವಕಳಿ ವೆಚ್ಚವನ್ನು ಸಾಗಿಸುವಲ್ಲಿ ತಪ್ಪು ಹೇಳಿಕೆಯಾಗುತ್ತದೆ. ಇದಲ್ಲದೆ, ಯೋಜನೆಗಳ ಭಾಗಶಃ ಬಂಡವಾಳೀಕರಣದ ವಿಷಯದಲ್ಲಿ ಅರ್ಹತಾ ಆಸ್ತಿಗಳ ಮೌಲ್ಯದ ಆಧಾರದ ಮೇಲೆ ಸಾಲದ ವೆಚ್ಚಗಳನ್ನು ಪರಿಗಣಿಸಲಾಗಿರುವುದಿಲ್ಲ ಮತ್ತು ನಿರ್ಮಾಣದ ಹಂತದಲ್ಲಿರುವ ಸ್ವತ್ತುಗಳ ಮೇಲೆ ಈ ಅವಧಿಯಲ್ಲಿ ಹೆಚ್ಚಿನ ಪ್ರಮಾಣದ ಬಡ್ಡಿಯ ಬಂಡವಾಳೀಕರಣವಾಗಿರುತ್ತದೆ.

(ಜಿ) ಮೇಲಿನಿಂದಾಗಿ ತುಲನಾತ್ಮಕ ಪರಿಣಾಮವೇನೆಂದರೆ, ಸವಕಳಿ ವೆಚ್ಚದ ಖರ್ಚು ಮತ್ತು ಸ್ಥಿರ ಆಸ್ತಿಗಳ/ಚಾಲ್ತಿ ಆಸ್ತಿಗಳ ಮತ್ತು ಹಣಕಾಸು ತ:ಖ್ತೆಗಳಲ್ಲಿನ ಚಾಲ್ತಿ ಹೊಣೆಗಳನ್ನು ವರ್ತಮಾನದಲ್ಲಿ ಪರಿಮಾಣೀಕರಿಸಲಾಗುವುದಿಲ್ಲ.

(III) ಸರ್ಕಾರದ ಸಹಾಯ ಧನದ ಲೆಕ್ಕೀಕರಣದಲ್ಲಿ ಅಕೌಂಟಿಂಗ್ ಸ್ಟ್ಯಾಂಡರ್ಡ್ 20ರ ಅನುಪಾಲನೆ ಆಗದಿರುವ ಬಗ್ಗೆ:

ಬಂಡವಾಳ ಅನುದಾನವನ್ನು ಉಪಯೋಗಿಸಿರುವ ಪ್ರತಿ ಆಸ್ತಿಯ ಬಂಡವಾಳೀಕರಣದ ದಿನಾಂಕದ ಅಲಭ್ಯತೆಯಿಂದ ಕಂಪನಿಯು ಲಾಭ ಮತ್ತು ನಷ್ಟದ ಲೆಕ್ಕಪತ್ರಗಳಲ್ಲಿ ಆಸ್ತಿಗಳ ಉಪಯುಕ್ತ ಜೀವಿತದ ಅವಧಿಯ ಮೇಲೆ ಆಯಾ ವೈಯಕ್ತಿಕ ಸ್ವತ್ತುಗಳ ಪೂರ್ಣಗೊಂಡ ಸ್ಥಿತಿಗೆ ಮೀಸಲು ಮತ್ತು ಹೆಚ್ಚುವರಿ ಅಡಿಯಲ್ಲಿ ಅನುದಾನದ ಹಣವನ್ನು ಸಂಗ್ರಹಿಸಿದ ಯಾವುದೇ ಮರುಪಾವತಿಸಬಹುದಾದ ಬಡ್ಡಿ ಮತ್ತು ಅನುದಾನಗಳು / ವಂತಿಗೆಗಳಿಗೆ ಸವಕಳಿಯನ್ನು ಹಿಂಪಡೆಯಲಾಗಿರುವುದನ್ನು ಇಂಡ್ ಎ.ಎಸ್-20 ರ ಪ್ರಕಾರ "ಇತರೆ ಸ್ವೀಕೃತಿ" ಅಡಿಯಲ್ಲಿ ಲಾಭ ಮತ್ತು ನಷ್ಟ ಪಟ್ಟಿಯಲ್ಲಿ ಅಂದಾಜಿಸಿ ಲೆಕ್ಕೀಕರಿಸಿರುವುದರಿಂದ ನಾವುಗಳು ರಿಸರ್ವ್ ಮತ್ತು ಸರ್‌ಪ್ಲಸ್ ಅಡಿಯಲ್ಲಿ ಮುಂದೂಡಲ್ಪಟ್ಟಿರುವ ಅನುದಾನಗಳ ಬಾಕಿ ಮತ್ತು ಆ ಮೊತ್ತವನ್ನು ಗುರುತಿಸಿ ಅವುಗಳ ಯುಕ್ತತೆ ಬಗ್ಗೆ ವಿಮರ್ಶೆ ಮಾಡಲು ಸಾಧ್ಯವಾಗಿರುವುದಿಲ್ಲ.

(IV) ಆಸ್ತಿ ದುರ್ಲಬತೆ ಲೆಕ್ಕೀಕರಿಸುವಲ್ಲಿ ಅಕೌಂಟಿಂಗ್ ಮಾನದಂಡ 36 ನ್ನು ಅನುಪಾಲನೆ ಮಾಡದಿರುವ ಬಗ್ಗೆ:

ಕಂಪನಿಯ ಆಸ್ತಿ ಮತ್ತು ಹೊಣೆ ಪಟ್ಟಿಯ ದಿನಾಂಕದಂದು ಇರತಕ್ಕಂಥಹ ದುರ್ಬಲಗೊಳಿಸುವ ಆಸ್ತಿ ದುರ್ಲಬತೆ, ಉಪಯೋಗದಿಂದ ಹಿಂಪಡೆದ ಆಸ್ತಿಯು ಒಳಗೊಂಡಂತಹ ಇತರೆ ಆಸ್ತಿಗಳು ಹಾಗೂ ರದ್ದಿಗೊಳಿಸಿದ ಆಸ್ತಿಗಳನ್ನು ಕಂಪನಿಯು ಅಂದಾಜಿಸಿರದ ಪ್ರಯುಕ್ತ ನಾವುಗಳು ಆಸ್ತಿ ದುರ್ಲಬತೆ ನಷ್ಟದ ಇರುವಿಕೆಯ ಬಗ್ಗೆ ವಿಮರ್ಶಿಸಲು ಸಾಧ್ಯವಾಗಿರುವುದಿಲ್ಲ.

(V) ನೌಕರರ ಸವಲತ್ತು - ಇಂಡ್ ಎಎಸ್ 19:

2019-20 ನೇ ಸಾಲಿನ ಪಿಂಚಣಿ ಮತ್ತು ಗ್ರ್ಯಾಚುಟಿ ಪ್ರಯೋಜನಗಳಿಗಾಗಿ ಇಂಡ್ ಎಎಸ್ 19ರ ಪ್ರಕಾರ ವಾಸ್ತವಿಕ ಮೌಲ್ಯಮಾಪನವು ಒದಗಿಸಲಾಗಿಲ್ಲ. ಇದರಿಂದಾಗಿ ನಷ್ಟವನ್ನು ಕಡಿಮೆ

ಮಾಡುವುದು ಮತ್ತು ಹೊಣೆಗಾರಿಕೆಗಳನ್ನು ಕಡಿಮೆ ಮಾಡುವುದು ಮತ್ತು 2019 ರ ಸಾಲಿಗೆ ಇತರೆ ಸಮಗ್ರ ಆದಾಯವನ್ನು ಕಡಿಮೆ ಮಾಡಿರುವ ಫಲಿತಾಂಶವನ್ನು ನೀಡಿರುತ್ತದೆ.

(VI) ಮಾರಾಟಕ್ಕಿಟ್ಟ ಹಾಗೂ ಕಾರ್ಯಾಚರಣೆ ನಿಲ್ಲಿಸಿರುವ ಪ್ರಸ್ತುತವಲ್ಲದ ಆಸ್ತಿಗಳು ಇಂಡ್ ಎಎಸ್–105:

ಕಂಪನಿಯು ವಿಲೇವಾರಿ ಆಸ್ತಿಯನ್ನು ಮಾರಾಟಕ್ಕೆ ಇಡಲಾದ ಆಸ್ತಿಗಳನ್ನು ವರ್ಗೀಕರಣ ಮಾಡುವ ಮೊದಲು ಇವುಗಳನ್ನು ಮಾರಾಟ ವೆಚ್ಚ ಕಡಿತಗೊಳಿಸಿದ ಬಳಕದ ಪುಸ್ತಕದ ವೆಚ್ಚ ಅಥವಾ ನ್ಯಾಯಯುತ ಮೌಲ್ಯ ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ಪರಿಗಣಿಸಬೇಕು. ಕಂಪನಿಯು ಈ ವಿಧಾನವನ್ನು ಅನ್ವಯಿಸುವ ಇಂಡ್ ಎಎಸ್ ನ್ನು ಅನುಸರಿಸಿರುವುದಿಲ್ಲ.

(VII) ಗ್ರಾಹಕರೊಂದಿಗಿನ ಒಪ್ಪಂದಗಳಿಂದ ಬರುವ ಕಂದಾಯ (ಇಂಡ್ ಎಎಸ್ 115):

ಹೊಸ ಆದಾಯ ಲೆಕ್ಕಪತ್ರ ಮಾನದಂಡದವು ವಿಭಿನ್ನ ಕಾರ್ಯಕ್ಷಮತೆ, ಕಟ್ಟುಪಾಡುಗಳ ಗುರುತಿಸುವಿಕೆ, ಗುರುತಿಸಲಾದ ಕಾರ್ಯಕ್ಷಮತೆ ಭಾದ್ಯತೆಗಳ ವಹಿವಾಟಿನ ಬೆಲೆಯನ್ನು ನಿರ್ಧರಿಸುವುದು, ಒಂದು ಅವಧಿಯಲ್ಲಿ ಗುರುತಿಸಲ್ಪಟ್ಟ ಆದಾಯವನ್ನು ಅಳೆಯಲು ಬಳಸುವ ಆಧಾರದ ಸೂಕ್ತತೆಗೆ ಸಂಬಂಧಿಸಿದ ಕೆಲವು ಪ್ರಮುಖ ತೀರ್ಪುಗಳನ್ನು ಒಳಗೊಂಡಿರುತ್ತದೆ. ಹೆಚ್ಚುವರಿಯಾಗಿ, ಆದಾಯ ಲೆಕ್ಕಪತ್ರ ಮಾನದಂಡವು ಬಹಿರಂಗಪಡಿಸುವಿಕೆಯನ್ನು ಒಳಗೊಂಡಿರುತ್ತದೆ. ಇದು ಒಟ್ಟು ಆದಾಯ ಮತ್ತು ಅವಧಿಗಳಿಗೆ ಸಂಬಂಧಿಸಿದಂತೆ ಮಾಹಿತಿಯ ಸಂಗ್ರಹವನ್ನು ಒಳಗೊಂಡಿರುತ್ತದೆ ಮತ್ತು ಉಳಿದ ಕಾರ್ಯಕ್ಷಮತೆಯ ಭಾಧ್ಯತೆಗಳನ್ನು ಬ್ಯಾಲೆನ್ಸ್ ಶೀಟ್ ದಿನಾಂಕದ ನಂತರ ಪೂರೈಸುವ ಅವಧಿಯ ಮಾಹಿತಿಯನ್ನು ಒಳಗೊಂಡಿರುತ್ತದೆ. ಕಂಪನಿಯು ನೀಡಿದ ಮಾಹಿತಿಯ ಪ್ರಕಾರ ಮತ್ತು ನಮ್ಮ ಲೆಕ್ಕಪರಿಶೋಧನೆಯ ಅವಧಿಯಲ್ಲಿ ಗಮನಿಸಿದಂತೆ ಕಂಪನಿಯು ಇಂಡ್ ಎಎಸ್–115 ನ್ನು ಅನುಸರಿಸಿಲ್ಲ.

(VII) ಆರ್ಥಿಕ ಸಾಧನಗಳು – ಇಂಡ್ ಎಎಸ್ 109:

ಟಿಪ್ಪಣಿ ಸಂಖ್ಯೆ 2.18 ನಲ್ಲಿ ಉಲ್ಲೇಖಿಸಿರುವಂತೆ ಆರ್ಥಿಕ ಆಸ್ತಿ ಮತ್ತು ಹೊಣೆಗಾರಿಕೆಯ ನಂತರದ ಮೌಲ್ಯಮಾಪನವು ದೀರ್ಘಾವಧಿ ಸಾಲ ಮತ್ತು ಮುಂಗಡವನ್ನು ಋಣಮುಕ್ತತೆಗೊಳಿಸಿದ ದರದಲ್ಲಿ ಮಾಡುವಂತೆ ಆಸ್ತಿ ಮತ್ತು ಹೊಣೆ ಪಟ್ಟಿ ದಿನಾಂಕಕ್ಕೆ ಮೌಲ್ಯ ಮಾಪನ ಮಾಡಬೇಕಾಗಿರುತ್ತದೆ. ಕೆಳಕಂಡ ದೀರ್ಘಾವಧಿ ಸಾಲ ಮತ್ತು ಮುಂಗಡಗಳ ಮೌಲ್ಯ ಮಾಪನವು ಋಣಮುಕ್ತತೆಗೊಳಿಸಿದ ದರದಲ್ಲಿ ಆಗಿರುವುದಿಲ್ಲ:

ಆಸ್ತಿಯ ವಿವರ	ಮೊತ್ತ	ಅನುಸರಿಸಿದ ವಿಧಾನ	ಅವಲೋಕನ
ಕರ್ನಾಟಕ ಸರ್ಕಾರದ ಬಡ್ಡಿ ರಹಿತ ಸಾಲ (ಜಿಎಲ್ :53.9787)	600 ಕೋಟಿ	ಆಸ್ತಿ ಮತ್ತು ಹೊಣೆ ಪಟ್ಟಿ ದಿನಾಂಕಕ್ಕೆ ಪ್ರಸಕ್ತ ಮೌಲ್ಯವನ್ನು ಮತ್ತು ಮಾರ್ಚ್ ಅಂತ್ಯಕ್ಕೆ ಕೊಡಬೇಕಾಗಿರುವ ಬಡ್ಡಿ ಲೆಕ್ಕೀಕರಿಸಬೇಕಾಗಿದ್ದು, ಪ್ರಸಕ್ತ ವರ್ಷದ ಬಡ್ಡಿ ವೆಚ್ಚವನ್ನು ಲೆಕ್ಕೀಕರಿಸಬೇಕು.	ವಿಧಾನದ ಅನುಪಸ್ಥಿತಿಯ ಪರಿಣಾಮ ಸಾಲದ ಮೊತ್ತವನ್ನು ಹೆಚ್ಚು ತೋರಿಸಿದೆ ಹಾಗೂ ಹೊಣೆ ಮತ್ತು ವೆಚ್ಚಗಳನ್ನು ಕಡಿಮೆ ತೋರಿಸಿದಂತಾಗಿದೆ.

(IX) ಇಂಡ್ ಎಎಸ್ 01 ರ ಅನುಪಾಲನೆ:

ಕಂಪನಿಯು ತನ್ನ ಆರ್ಥಿಕ ವಿವರಣಾ ಪಟ್ಟಿಗಳಲ್ಲಿ ಇಂಡ್ ಎಎಸ್ ಅನುಪಾಲನೆ ಬಗ್ಗೆ ಸ್ಪಷ್ಟ ಮತ್ತು ಕಾಯ್ದಿರಿಸಿಲ್ಲದ ವಿವರಗಳನ್ನು ಟಿಪ್ಪಣಿಗಳಲ್ಲಿ ತಿಳಿಸಬೇಕಾಗಿರುತ್ತದೆ ಹಾಗೂ ಕಂಪನಿಯು ಎಲ್ಲಾ ಇಂಡ್ ಎಎಸ್ ಅನುಪಾಲನೆ ಮಾಡದಿದ್ದಲ್ಲಿ, ತನ್ನ ಆರ್ಥಿಕ ವಿವರಣಾ ಪಟ್ಟಿಯ ಟಿಪ್ಪಣಿಗಳಲ್ಲಿ

ತಿಳಿಸುವುದಿಲ್ಲ. ಕಂಪನಿಯು ಇಂಡ್ ಎಎಸ್ ಅನುಪಾಲನೆ ಮಾಡದಿದ್ದಲ್ಲಿ, ತನ್ನ ಆರ್ಥಿಕ ವಿವರಣಾ ಪಟ್ಟಿಯ ಟಿಪ್ಪಣಿಗಳಲ್ಲಿ ನಿರ್ದಿಷ್ಟವಾಗಿ ಬಹಿರಂಗಪಡಿಸದಿರುವುದನ್ನು ಗಮನಿಸಿದೆ.

(X) ಲೆಕ್ಕ ಪರಿಶೋಧನಾ ವರದಿಯಲ್ಲಿ ನಮ್ಮ ಟೀಕೆಗಳ ಪರಿಣಾಮ:

ಪ್ಯಾರಾ ಎ(1) ರಿಂದ ಎ(15) ಮತ್ತು ಬಿ(1) ರಿಂದ ಬಿ (X) ರಲ್ಲಿ ಉಲ್ಲೇಖಿಸಲಾದ ನಮ್ಮ ಲೆಕ್ಕಪರಿಶೋಧನೆಯ ಅಭಿಪ್ರಾಯದಿಂದ ಹಣಕಾಸಿನ ಪಟ್ಟಿಗಳ ಮೇಲಿನ ಪರಿಣಾಮವನ್ನು ಈ ಕೆಳಗೆ ವಿವರಿಸಿದೆ.

(ಲಕ್ಷ ರೂಗಳಲ್ಲಿ)

ಕ್ರಮ ಸಂಖ್ಯೆ	ಅರ್ಹತೆ	ಮಿತಿಮೀರಿದ ಲಾಭ/ನಷ್ಟ	ಲಾಭ/ನಷ್ಟದ ಇಳಿಕೆ	ಆಸ್ತಿಯಲ್ಲಿ ಏರಿಕೆ/ಇಳಿಕೆ	ಹೊಣೆಗಾರಿಕೆಯಲ್ಲಿ ಏರಿಕೆ/ಇಳಿಕೆ
6	ಮೂಲದ ಮೇಲಿನ ತೆರಿಗೆಗೆ ಅವಕಾಶವನ್ನು ಕಲ್ಪಿಸಿರುವುದಿಲ್ಲ		(187.40)	–	(187.40)
13	ಹಳೆಯ ಸ್ವೀಕೃತಿಗಳಿಗೆ ಅವಕಾಶ		(68.82)	(68.82)	–
14	ವಿವಾದಿತ ಗ್ರಾಮಗಳ ಸ್ವೀಕೃತಿಗಳು		(2456.92)	(2456.92)	–
	ಒಟ್ಟು		(2713.14)	(2525.74)	(187.40)

ಮೇಲಿನ ಟೀಕೆಯ ಒಟ್ಟಾರೆ ಪರಿಣಾಮವು ರೂ.2713.14 ಲಕ್ಷಗಳ ನಷ್ಟವನ್ನು ಕಡಿಮೆ ಮಾಡುವುದು. ಆಸ್ತಿಗಳನ್ನು ರೂ.2525.74 ಲಕ್ಷಗಳಿಂದ ಹೆಚ್ಚಿಸುವುದು ಮತ್ತು ಬಾಧ್ಯತೆಗಳನ್ನು ರೂ.187.40 ಲಕ್ಷಗಳಿಂದ ಕಡಿಮೆ ಮಾಡುವುದು.

ಪ್ರಮುಖ ಲೆಕ್ಕಪರಿಶೋಧನೆಯ ವಿಷಯಗಳು

ಪ್ರಸ್ತುತ ಅವಧಿಯ ಹಣಕಾಸು ಪಟ್ಟಿಗಳ ನಮ್ಮ ಲೆಕ್ಕಪರಿಶೋಧನೆಯಲ್ಲಿ ಪ್ರಮುಖ ಲೆಕ್ಕಪರಿಶೋಧನೆಯ ವಿಷಯಗಳು ನಮ್ಮ ವೃತ್ತಿಪರ ತೀರ್ಪು ಹೆಚ್ಚು ಮಹತ್ವದ್ದಾಗಿವೆ. ಒಟ್ಟಾರೆಯಾಗಿ ನಮ್ಮ ಹಣಕಾಸಿನ ಪಟ್ಟಿಗಳ ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ಮತ್ತು ಅದರ ಮೇಲೆ ನಮ್ಮ ಅಭಿಪ್ರಾಯವನ್ನು ರೂಪಿಸುವಲ್ಲಿ ಈ ವಿಷಯಗಳನ್ನು ತಿಳಿಸಲಾಗಿದೆ ಮತ್ತು ಈ ವಿಷಯಗಳ ಬಗ್ಗೆ ನಾವು ಪ್ರತ್ಯೇಕ ಅಭಿಪ್ರಾಯವನ್ನು ನೀಡುವುದಿಲ್ಲ. ಅರ್ಹತಾ ಅಭಿಪ್ರಾಯ ವಿಭಾಗದಲ್ಲಿ ವಿವರಿಸಿದ ವಿಷಯದ ಜೊತೆಗೆ ನಮ್ಮ ವರದಿಯಲ್ಲಿ ಸಂವಹನ ನಡೆಸಲು ಬೇರೆ ಯಾವುದೇ ಪ್ರಮುಖ ಲೆಕ್ಕಪರಿಶೋಧನೆಯ ವಿಷಯಗಳಿಲ್ಲ ಎಂದು ನಾವು ನಿರ್ಧರಿಸಿದ್ದೇವೆ.

ಇತರೆ ಮಾಹಿತಿ:

(ಅ) ಕಂಪನಿಯ ನಿರ್ದೇಶಕರ ಮಂಡಳಿಯು ಇತರೆ ಮಾಹಿತಿಗಳಿಗೆ ಜವಾಬ್ದಾರರಾಗಿರುತ್ತಾರೆ. ಇತರೆ ಮಾಹಿತಿಯು ಮಂಡಳಿಗಳ ವರದಿ ಮತ್ತು ಸಾಂಸ್ಥಿಕ ಆಡಳಿತ ವರದಿಯನ್ನು ಒಳಗೊಂಡಿರುತ್ತದೆ. ಆದರೆ ಸ್ವತಂತ್ರ ಹಣಕಾಸು ಪಟ್ಟಿಗಳನ್ನು ಮತ್ತು ಲೆಕ್ಕಪರಿಶೋಧಕರ ವರದಿಯನ್ನು ಒಳಗೊಂಡಿರುವುದಿಲ್ಲ.

(ಆ) ಸ್ವತಂತ್ರ ಹಣಕಾಸು ಪಟ್ಟಿಗಳ ಕುರಿತು ನಮ್ಮ ಅಭಿಪ್ರಾಯವು ಇತರೆ ಮಾಹಿತಿಯನ್ನು ಒಳಗೊಂಡಿರುವುದಿಲ್ಲ ಮತ್ತು ಅದರ ಮೇಲೆ ನಾವು ಯಾವುದೇ ರೀತಿಯ ಭರವಸೆ ತೀರ್ಮಾನವನ್ನು ವ್ಯಕ್ತಪಡಿಸುವುದಿಲ್ಲ.

(ಇ) ಸ್ವತಂತ್ರ ಹಣಕಾಸು ಪಟ್ಟಿಗಳ ಮೇಲೆ ನಮ್ಮ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ, ಇತರೆ ಮಾಹಿತಿಯನ್ನು ಓದುವುದು ನಮ್ಮ ಜವಾಬ್ದಾರಿಯಾಗಿದೆ ಮತ್ತು ಹಾಗೆ ಮಾಡುವಾಗ, ಇತರೆ ಮಾಹಿತಿಯು ಸ್ವತಂತ್ರ ಹಣಕಾಸು ಪಟ್ಟಿಗಳಿಗೆ ಅಥವಾ ನಮ್ಮ ಲೆಕ್ಕಪರಿಶೋಧನೆಯ ಸಮಯದಲ್ಲಿ ಪಡೆದ ನಮ್ಮ ಜ್ಞಾನಕ್ಕೆ ಭೌತಿಕವಾಗಿ ಹೊಂದಿಕೆಯಾಗುತ್ತದೆಯೇ ಅಥವಾ ಮಹತ್ತರ ತಪ್ಪುಗಳಿವೆಯೇ ಎಂಬುದನ್ನು ಪರಿಗಣಿಸಲಾಗುವುದು.

(ಈ) ನಾವು ನಿರ್ವಹಿಸಿದ ಕೆಲಸದ ಆಧಾರದ ಮೇಲೆ, ಇತರೆ ಮಾಹಿತಿಯಲ್ಲಿ ಮಹತ್ತರ ತಪ್ಪುಗಳಿವೆ ಎಂದು ನಾವು ತೀರ್ಮಾನಿಸಿದರೆ, ನಾವು ಆ ಸಂಗತಿಯನ್ನು ವರದಿ ಮಾಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ನಾವು ವರದಿ ಮಾಡಲು ಏನೂ ಇಲ್ಲ.

ಹಣಕಾಸಿನ ತ:ಖ್ತೆಗಳ ಬಗ್ಗೆ ಆಡಳಿತ ಮಂಡಳಿಯ ಜವಾಬ್ದಾರಿಗಳು:

ಕಂಪನಿಗಳ ಲೆಕ್ಕ ಮಾನದಂಡಗಳಿರುವ ಕಲಂ 133 ರಡಿಯಲ್ಲಿ ಸೂಚಿತವಾಗಿರುವುದನ್ನೂ ಒಳಗೊಂಡಂತೆ ಭಾರತದಲ್ಲಿ ಸಾಮಾನ್ಯವಾಗಿ ಒಪ್ಪಿರುವ ಲೆಕ್ಕಗಳ ನೀತಿಗಳ ಅನುಸಾರ ಅಲ್ಲದೆ ಕಂಪನಿಯ ಕಾಯಿದೆ 2013 ರ ಕಲಂ 134(5) ರಲ್ಲಿ ಹೇಳಿರುವ ರೀತ್ಯಾ ಕಂಪನಿಯ ಸತ್ಯ ಮತ್ತು ನ್ಯಾಯೋಚಿತ ಹಣಕಾಸಿನ ಸ್ಥಿತಿಯನ್ನು, ಹಣಕಾಸಿನ ಕಾರ್ಯನಿರ್ವಹಣೆ ಮತ್ತು ಕಂಪನಿಯ ನಗದು ಹರಿವು ಇವುಗಳನ್ನು ನೀಡುವ ಜವಾಬ್ದಾರಿ ಕಂಪನಿಯ ನಿರ್ದೇಶಕ ಮಂಡಳಿಯ ಸದಸ್ಯರದ್ದಾಗಿರುತ್ತದೆ. ಸತ್ಯ ನ್ಯಾಯೋಚಿತವಾಗಿರುವಂತಹ ಅಲ್ಲದೆ ವಂಚನೆಯಿಂದ ಅಥವಾ ತಪ್ಪಿನಿಂದ ವಿಷಯದ ತಪ್ಪು ಹೇಳಿಕೆಗಳಿಂದ ಹೊರತಾಗಿರುವಂತಹ, ಕಾಯ್ದೆಯಲ್ಲಿನ ಷರತ್ತಿನ ಪ್ರಕಾರ ಸಾಕಾಗುವಷ್ಟು ಲೆಕ್ಕಗಳ ದಾಖಲೆಗಳನ್ನು ನಿರ್ವಹಿಸುವುದು, ಕಂಪನಿಯ ಆಸ್ತಿಗಳನ್ನು ಸಂರಕ್ಷಿಸುವುದು, ವಂಚನೆಯನ್ನು ಮತ್ತು ಇತರೆ ಕ್ರಮಬಾಹಿರ ಚಟುವಟಿಕೆಗಳನ್ನು ತಡೆಗಟ್ಟುವುದು ಹಾಗೂ ಕಂಡುಹಿಡಿಯುವುದು ಮತ್ತು ಸೂಕ್ತವಾದ ಲೆಕ್ಕಗಳ ನೀತಿಗಳ ಆಯ್ಕೆ ಮತ್ತು ಅನ್ವಯಿಸುವುದು, ತೀರ್ಮಾನಗಳನ್ನು ಮಾಡುವುದು ಮತ್ತು ಅಂದಾಜಿಸುವುದು, ಯುಕ್ತ ಮತ್ತು ವಿವೇಕಯುತವಾಗಿ ಯೋಜಿಸುವುದು, ಕಾರ್ಯರೂಪಕ್ಕೆ ತರುವುದು ಮತ್ತು ಸಾಕಾಗುವಷ್ಟು ಆಂತರಿಕ ಹಣಕಾಸಿನ ನಿಯಂತ್ರಣ ಅವುಗಳನ್ನು ಪರಿಣಾಮಕಾರಿಯಾಗಿ ನಡೆಸುವುದು ಆ ಬಗ್ಗೆ ಖಚಿತಪಡಿಸಿಕೊಳ್ಳುವುದು, ನಿಖರ ಮತ್ತು ಪರಿಪೂರ್ಣವಾದ ಲೆಕ್ಕಗಳ ದಾಖಲೆಗಳು, ಸಮರ್ಪಕವಾಗಿರುವ ಹಣಕಾಸಿನ ತ:ಖ್ತೆಗಳನ್ನು ತಯಾರಿಸುವ ಮತ್ತು ಒಪ್ಪಿಸುವ ಜವಾಬ್ದಾರಿಯು ಸಹ ಒಳಗೊಂಡಿರುತ್ತದೆ.

ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವಲ್ಲಿ, ನಿರ್ದೇಶಕರ ಮಂಡಳಿಯು ಮುಂದುವರಿಯುವ ಕಾಳಜಿಯಾಗಿ ಕಂಪನಿಯ ಮುಂದುವರಿಯುವ ಸಾಮರ್ಥ್ಯವನ್ನು ನಿರ್ಣಯಿಸುವುದು, ಅನ್ವಯವಾಗುವಂತೆ, ಕಳವಳಕ್ಕೆ ಸಂಬಂಧಿಸಿದ ವಿಷಯಗಳನ್ನು ಬಹಿರಂಗಪಡಿಸುವುದು ಮತ್ತು ನಿರ್ದೇಶಕರ ಮಂಡಳಿಯು. ಕಂಪನಿಯನ್ನು ದಿವಾಳಿಯಾಗಿಸಲು ಅಥವಾ ಕಾರ್ಯಾಚರಣೆಯನ್ನು ನಿಲ್ಲಿಸಲು ಅಥವಾ ಹಾಗೆ ಮಾಡಲು ವಾಸ್ತವಿಕ ಪರ್ಯಾಯವನ್ನು ಹೊಂದಿಲ್ಲದಿರುವುದನ್ನು ಹೊರತುಪಡಿಸಿದ ಸಂದರ್ಭದಲ್ಲಿ ಮುಂದುವರೆಯುವ ವಿಧಾನವನ್ನೇ ಲೆಕ್ಕಪತ್ರಕ್ಕೆ ಅಳವಡಿಸಬೇಕು.

ಕಂಪನಿಯ ಹಣಕಾಸು ವರದಿ ಪ್ರಕ್ರಿಯೆಯ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ಆ ನಿರ್ದೇಶಕರ ಮಂಡಳಿಯು ಹೊಂದಿದೆ.

ಹಣಕಾಸು ಪಟ್ಟಿಗಳ ಲೆಕ್ಕಪರಿಶೋಧನೆಯಲ್ಲಿ ಲೆಕ್ಕಪರಿಶೋಧಕರ ಜವಾಬ್ದಾರಿಗಳು

ಒಟ್ಟಾರೆ ಹಣಕಾಸಿನ ಪಟ್ಟಿಗಳು ಮಹತ್ತರ ತಪ್ಪುಗ್ರಹಿಕೆಯಿಂದ ಮುಕ್ತವಾಗಿದೆಯೇ, ವಂಚನೆ ಅಥವಾ ದೋಷದಿಂದ ಮುಕ್ತವಾಗಿದೆಯೇ ಮತ್ತು ನಮ್ಮ ಅಭಿಪ್ರಾಯವನ್ನು ಒಳಗೊಂಡಿರುವ ಲೆಕ್ಕಪರಿಶೋಧಕರ ವರದಿಯನ್ನು ನೀಡುವುದು ಎಂಬುದರ ಕುರಿತು ಸಮಂಜಸವಾದ ಭರವಸೆ ಪಡೆಯುವುದು. ಸಮಂಜಸವಾದ ಭರವಸೆ ಉನ್ನತ ಮಟ್ಟದ ಆಶ್ವಾಸನೆಯಾಗಿದ್ದರೂ ಸಹ ಎಸ್‌ಎಗಳಿಗೆ ಅನುಸಾರವಾಗಿ ನಡೆಸಿದ ಲೆಕ್ಕಪರಿಶೋಧನೆಯು ಮಹತ್ತರ ತಪ್ಪುಗಳನ್ನು ಯಾವಾಗಲೂ ಪತ್ತೆ ಮಾಡುತ್ತದೆ ಎಂಬ ಖಾತರಿಯಿಲ್ಲ. ತಪ್ಪುಗಳು ವಂಚನೆ ಅಥವಾ ದೋಷಗಳು ಉದ್ಭವಿಸಿದ್ದಲ್ಲಿ ಪ್ರತ್ಯೇಕವಾಗಿ ಅಥವಾ ಒಟ್ಟಾರೆಯಾಗಿ, ಈ ಹಣಕಾಸು ಪಟ್ಟಿಗಳ ಆಧಾರದ ಮೇಲೆ ತೆಗೆದುಕೊಳ್ಳುವ ಬಳಕೆದಾರರ ಆರ್ಥಿಕ ನಿರ್ಧಾರಗಳ ಮೇಲೆ ಅವು ಪ್ರಭಾವ ಬೀರುತ್ತವೆ ಎಂದು ಸಮಂಜಸವಾಗಿ ನಿರೀಕ್ಷಿಸಬಹುದು.

ನಾವು ಕೂಡ ಎಸ್ಎಗಳಿಗೆ ಅನುಗುಣವಾಗಿ ಲೆಕ್ಕಪರಿಶೋಧನೆಯ ಭಾಗವಾಗಿ, ನಾವು ವೃತ್ತಿಪರ ತೀರ್ಪು ನೀಡುತ್ತೇವೆ ಮತ್ತು ಲೆಕ್ಕಪರಿಶೋಧನೆಯ ಉದ್ದಕ್ಕೂ ವೃತ್ತಿಪರ ಸಂದೇಹವನ್ನು ಕಾಪಾಡಿಕೊಳ್ಳುತ್ತೇವೆ.

- ವಂಚನೆ ಅಥವಾ ದೋಷದಿಂದಾಗಿ ಸ್ವತಂತ್ರ ಹಣಕಾಸಿನ ಪಟ್ಟಿಗಳ ಮಹತ್ತರ ತಪ್ಪುಗಳನ್ನು ಅರ್ಥೈಸುವ ಹಾಗೂ ಅಪಾಯಗಳನ್ನು ಗುರುತಿಸಿ ಮತ್ತು ನಿರ್ಣಯಿಸಿ, ಆ ಅಪಾಯಗಳಿಗೆ ಸ್ಪಂದಿಸುವ ಲೆಕ್ಕಪರಿಶೋಧನೆಯ ಕಾರ್ಯವಿಧಾನಗಳನ್ನು ವಿನ್ಯಾಸಗೊಳಿಸಿ ಮತ್ತು ನಿರ್ವಹಿಸಿ ಮತ್ತು ನಮ್ಮ ಅಭಿಪ್ರಾಯಕ್ಕೆ ಒಂದು ಆಧಾರವನ್ನು ಒದಗಿಸಲು ಸಾಕಷ್ಟು ಮತ್ತು ಸೂಕ್ತವಾದ ಲೆಕ್ಕಪರಿಶೋಧಕ ಪುರಾವೆಗಳನ್ನು ಪಡೆದುಕೊಳ್ಳಲಾಗುತ್ತದೆ ವಂಚನೆಯಿಂದ ಉಂಟಾಗುವ ಮಹತ್ತರ ತಪ್ಪುಗಳನ್ನು ಪತ್ತೆ ಮಾಡದಿರುವ ಅಪಾಯವು ದೋಷದಿಂದ ಉಂಟಾಗುವ ಅಪಾಯಕ್ಕಿಂತ ಹೆಚ್ಚಾಗಿರುತ್ತದೆ, ಏಕೆಂದರೆ ವಂಚನೆಯು ಒಡನಾಟ, ಖೋಟಾ, ಉದ್ದೇಶಪೂರ್ವಕ ಲೋಪಗಳು, ತಪ್ಪಾಗಿ ನಿರೂಪಣೆ ಅಥವಾ ಆಂತರಿಕ ನಿಯಂತ್ರಣದ ಅತಿಕ್ರಮಣವನ್ನು ಒಳಗೊಂಡಿರಬಹುದು.

- ಸಂಧರ್ಭಗಳಲ್ಲಿ ಸೂಕ್ತವಾದ ಲೆಕ್ಕಪರಿಶೋಧನೆಯ ಕಾರ್ಯವಿಧಾನಗಳನ್ನು ವಿನ್ಯಾಸಗೊಳಿಸಲು ಲೆಕ್ಕಪರಿಶೋಧನೆಗೆ ಸಂಬಂಧಿಸಿದ ಆಂತರಿಕ ಹಣಕಾಸು ನಿಯಂತ್ರಣದ ತಿಳುವಳಿಕೆಯನ್ನು ಪಡೆದುಕೊಂಡು ಕಾಯಿದೆಯ ಸೆಕ್ಷನ್ 143(3) (ಐ)ಅಡಿಯಲ್ಲಿ, ಕಂಪನಿಯು ಸಾಕಷ್ಟು ಆಂತರಿಕ ಹಣಕಾಸು ನಿಯಂತ್ರಣ ವ್ಯವಸ್ಥೆಯನ್ನು ಹೊಂದಿದೆಯೇ ಮತ್ತು ಅಂತಹ ನಿಯಂತ್ರಣಗಳ ಕಾರ್ಯಚರಣೆಯ ಪರಿಣಾಮಕಾರಿತ್ವದ ಬಗ್ಗೆ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಜವಾಬ್ದಾರಿಯನ್ನು ನಾವು ಹೊಂದಿದ್ದೇವೆ.

- ಬಳಸಿದ ಲೆಕ್ಕಪರಿಶೋಧಕ ನೀತಿಗಳ ಸೂಕ್ತತೆ ಮತ್ತು ಲೆಕ್ಕಪರಿಶೋಧಕ ಅಂದಾಜುಗಳ ಸಮಂಜಸತೆ ಮತ್ತು ನಿರ್ವಹಣೆಯು ಮಾಡಿದ ಸಂಬಂಧಿತ ಬಹಿರಂಗಪಡಿಸುವಿಕೆಗಳನ್ನು ಮೌಲ್ಯಮಾಪನ ಮಾಡುವುದು.

- ಮುಂದುವರೆಯುವ ವಿಧಾನವನ್ನು ಲೆಕ್ಕಪತ್ರದಲ್ಲಿ ಆಡಳಿತ ವರ್ಗವನ್ನು ಬಳಸಿರುವ ಸಮಂಜತೆ, ಲೆಕ್ಕ ಪರಿಶೋಧನೆಯ ಸಾಕ್ಷ್ಯದ ಆಧಾರದಲ್ಲಿ ಕಂಪನಿಯ ಮುಂದುವರೆಯುವ ಸಾಮರ್ಥ್ಯ ಬಗ್ಗೆ ಮಹತ್ತರ ಅನಿಶ್ಚಿತತೆ ಅಥವಾ ಅನುಮಾನಗಳಿದ್ದಲ್ಲಿ, ಈ ಬಗ್ಗೆ ತೀರ್ಮಾನಿಸುವುದು. ಮಹತ್ತರ ಅನಿಶ್ಚಿತತೆ ಅಸ್ತಿತ್ವದಲ್ಲಿದೆ ಎಂದು ನಾವು ತೀರ್ಮಾನಿಸಿದರೆ, ಸ್ವತಂತ್ರ ಹಣಕಾಸು ಪಟ್ಟಿಗಳ ನಮ್ಮ ಲೆಕ್ಕಪರಿಶೋಧಕರ ವರದಿಯಲ್ಲಿ ನಾವು ಈ ಬಗ್ಗೆ ಗಮನ ಸೆಳೆಯಬೇಕಾಗಿದೆ ಅಥವಾ ಅಂತಹ ಬಹಿರಂಗಪಡಿಸುವಿಕೆಗಳು ಅಸಮರ್ಪಕವಾಗಿದ್ದರೆ, ನಮ್ಮ ಅಭಿಪ್ರಾಯವನ್ನು ಮಾರ್ಪಡಿಸಬೇಕಿರುತ್ತದೆ. ನಮ್ಮ ತೀರ್ಮಾನಗಳು ನಮ್ಮ ಲೆಕ್ಕಪರಿಶೋಧಕರ ವರದಿಯ ದಿನಾಂಕದವರೆಗೆ ಪಡೆದ ಲೆಕ್ಕಪರಿಶೋಧನೆಯ ಪುರಾವೆಗಳನ್ನು ಆಧರಿಸಿವೆ. ಆದಾಗ್ಯೂ, ಭವಿಷ್ಯದ ಘಟನೆಗಳು ಅಥವಾ ಷರತ್ತುಗಳು ಕಂಪನಿಯು ಮುಂದುವರಿಯುವುದನ್ನು ನಿಲ್ಲಿಸಲು ಕಾರಣವಾಗಬಹುದು.

- ಬಹಿರಂಗಪಡಿಸುವಿಕೆಗಳು ಸೇರಿದಂತೆ ಸ್ವತಂತ್ರ ಹಣಕಾಸು ಪಟ್ಟಿಗಳ ಒಟ್ಟಾರೆ ಪ್ರಸ್ತುತಿ, ರಚನೆ ಮತ್ತು ವಿಷಯವನ್ನು ಮೌಲ್ಯಮಾಪನ ಮಾಡಿ ಮತ್ತು ಸ್ವತಂತ್ರ ಹಣಕಾಸು ಪಟ್ಟಿಗಳು ನ್ಯಾಯಯುತ ಪ್ರಸ್ತುತಿಯನ್ನು ಸಾಧಿಸುವ ರೀತಿಯಲ್ಲಿ ಆಧಾರವಾಗಿರುವ ವಹಿವಾಟುಗಳು ಮತ್ತು ಘಟನೆಗಳನ್ನು ಪ್ರತಿನಿಧಿಸುತ್ತವೆಯೇ ಎಂದು ಮೌಲ್ಯ ಮಾಪನ ಮಾಡಿದೆ.

ನಮ್ಮ ಲೆಕ್ಕ ಪರಿಶೋಧನೆಯ ಸಮಯದಲ್ಲಿ ನಾವು ಗುರುತಿಸುವ ಆಂತರಿಕ ನಿಯಂತ್ರಣದಲ್ಲಿನ ಯಾವುದೇ ಗಮನಾರ್ಹ ನ್ಯೂನ್ಯತೆಗಳನ್ನು ಒಳಗೊಂಡಂತೆ, ಲೆಕ್ಕಪರಿಶೋಧನೆಯ ಯೋಜಿತ ವ್ಯಾಪ್ತಿ ಮತ್ತು ಸಮಯ ಮತ್ತು ಮಹತ್ವದ ಲೆಕ್ಕಪರಿಶೋಧನೆಯ ಆವಿಷ್ಕಾರಗಳ ಬಗ್ಗೆ ನಾವು ಆಡಳಿತದ ಜವಾಬ್ದಾರಿ ಹೊಂದಿರುವವರೊಂದಿಗೆ ಸಂವಹನ ನಡೆಸುತ್ತೇವೆ.

ಆಡಳಿತದ ಜವಾಬ್ದಾರಿ ಹೊತ್ತಿರುವವರಿಗೆ ನಾವು ಸ್ವಾತಂತ್ರ್ಯದ ಬಗ್ಗೆ ಸಂಬಂಧಿಸಿದ ನೈತಿಕ ಅವಶ್ಯಕತೆಗಳನ್ನು ಅನುಸರಿಸಿದ್ದೇವೆ ಮತ್ತು ನಮ್ಮ ಸ್ವಾತಂತ್ರ್ಯದ ಬಗ್ಗೆ ಸಮಂಜಸವಾಗಿ ಭಾವಿಸಬಹುದಾದ ಎಲ್ಲಾ

ಸಂಬಂಧಗಳು ಮತ್ತು ಇತರೆ ವಿಷಯಗಳನ್ನು ಅವರೊಂದಿಗೆ ಸಂವಹನ ನಡೆಸುತ್ತೇವೆ ಮತ್ತು ಅನ್ವಯವಾಗುವ, ಸಂಬಂಧಿತ ಸುರಕ್ಷತೆಗಳನ್ನು ಒದಗಿಸುತ್ತೇವೆ.

ಆಡಳಿತದ ಜವಾಬ್ದಾರಿ ಹೊಂದಿರುವವರೊಂದಿಗೆ ಸಂವಹನ ನಡೆಸುವ ವಿಷಯಗಳಿಂದ ಪ್ರಸ್ತುತ ಅವಧಿಯ ಸ್ವತಂತ್ರ ಹಣಕಾಸು ಪಟ್ಟಿಗಳ ಲೆಕ್ಕಪರಿಶೋಧನೆಯಲ್ಲಿ ಹೆಚ್ಚು ಮಹತ್ವದ್ದಾಗಿರುವ ವಿಷಯಗಳನ್ನು ನಾವು ನಿರ್ಧರಿಸುತ್ತೇವೆ ಮತ್ತು ಆದ್ದರಿಂದ ಅವು ಪ್ರಮುಖ ಲೆಕ್ಕಪರಿಶೋಧನೆಯ ವಿಷಯಗಳಾಗಿವೆ. ನಮ್ಮ ಲೆಕ್ಕಪರಿಶೋಧಕರ ವರದಿಯಲ್ಲಿ ಈ ವಿಷಯಗಳನ್ನು ನಾವು ವಿವರಿಸುತ್ತೇವೆ. ಕಾನೂನು ಅಥವಾ ನಿಯಮಗಳಲ್ಲಿ ಈ ವಿಷಯದ ಬಗ್ಗೆ ಸಾರ್ವಜನಿಕ ಬಹಿರಂಗಪಡಿಸುವಿಕೆಯನ್ನು ತಡೆಯಲಾಗಿದ್ದಲ್ಲಿ ಅಥವಾ ಯಾವಾಗ ಅತ್ಯಂತ ಅಪರೂಪದ ಸಂದರ್ಭಗಳಲ್ಲಿ ಮಾತ್ರ ಹೊರತುಪಡಿಸಿ. ಸಾರ್ವಜನಿಕ ಹಿತಾಸಕ್ತಿಗಳ ಮೇಲೆ ದುಷ್ಪರಿಣಾಮ ಉಂಟು ಮಾಡುವ ಸಾಧ್ಯತೆಯಿದ್ದಲ್ಲಿ ಅಂತಹ ವಿಷಯವನ್ನು ಸಂವಹನ ಮಾಡಲಾಗುವುದಿಲ್ಲ

ಇತರೆ ವಿಷಯ:

ಹಣಕಾಸು ಪಟ್ಟಿಗಳ ಟಿಪ್ಪಣಿಗಳಲ್ಲಿ ವಿವರಿಸಿದ ಕೆಳಗಿನ ವಿಷಯಗಳಿಗೆ ನಾವು ಗಮನ ಸೆಳೆಯುತ್ತೇವೆ.

ಕೆಲವು ಆಸ್ತಿಗಳ ದಾಖಲೆಗಳು ಕಂಪನಿಯ ಹೆಸರಿನಲ್ಲಿಲ್ಲದ ವಿವರಗಳಿಗೆ ಟಿಪ್ಪಣಿ ಸಂಖ್ಯೆ 3.2.14 ಅನ್ನು ನೋಡಬಹುದು.

ಇತರೆ ಕಾನೂನುಬದ್ಧ ಮತ್ತು ನಿಯಂತ್ರಣಾ ಅವಶ್ಯಕತೆಗಳ ಮೇಲಿನ ವರದಿ:

1. ಕೇಂದ್ರ ಸರ್ಕಾರ ಜಾರಿಗೊಳಿಸಿದ ಕಂಪನಿಗಳ ಲೆಕ್ಕ ಪರಿಶೋಧಕರುಗಳ ವರದಿ ಆದೇಶ 2016(ಆದೇಶ) ಕಾಯ್ದೆಯ ಸೆಕ್ಷನ್ 143 ರ ಉಪ ಸೆಕ್ಷನ್11 ರಲ್ಲಿನ ಅನುಸಾರ ಸದರಿ ಆದೇಶದ ಕಂಡಿಕೆ 3 ಮತ್ತು 4 ರಲ್ಲಿ ತಿಳಿಸಿರುವ ವಿಷಯಗಳಿಗೆ ಸಂಬಂಧಿಸಿದ ವಿವರಣಾ ಪಟ್ಟಿಯನ್ನು **ಅಡಕ-ಎ** ರಲ್ಲಿ ನೀಡಿದ್ದೇವೆ.
2. ಕಾಯ್ದೆಯ ಕಲಂ 143(3) ರ ಅಗತ್ಯತೆಯಂತೆ ನಾವು ನಮ್ಮ ಪರಿಶೋಧನೆ ಆಧರಿಸಿ ವರದಿ ಮಾಡುವುದೇನೆಂದರೆ:

ಎ) ಮೇಲಿನ ಗುಣಮಟ್ಟದ ಅಭಿಪ್ರಾಯದ ಪ್ಯಾರಾಗಳಲ್ಲಿ ವಿವರಿಸಲಾಗಿರುವ ವಿಷಯಗಳ ಪರಿಣಾಮದ ಹೊರತಾಗಿ ನಮ್ಮ ತಿಳಿವಳಿಕೆ ಮತ್ತು ನಂಬಿಕೆ ಪ್ರಕಾರ, ಲೆಕ್ಕ ಪರಿಶೋಧನೆಗೆ ಅಗತ್ಯವಾದ ಎಲ್ಲಾ ಮಾಹಿತಿ ಮತ್ತು ವಿವರಣೆಗಳನ್ನು ನಾವು ಪಡೆದಿದ್ದೇವೆ.

ಬಿ) ಮೇಲಿನ ಗುಣಮಟ್ಟದ ಅಭಿಪ್ರಾಯದ ಪ್ಯಾರಾಗಳಲ್ಲಿ ವಿವರಿಸಲಾಗಿರುವ ವಿಷಯಗಳ ಪರಿಣಾಮದ ಹೊರತಾಗಿ ನಮ್ಮ ಅಭಿಪ್ರಾಯದಂತೆ, ಕಂಪನಿಯು ಕಾನೂನಿನ ರೀತ್ಯಾ ಅಗತ್ಯವಿರುವ ಸೂಕ್ತ ಲೆಕ್ಕಪತ್ರ ಪುಸ್ತಕಗಳನ್ನು ನಿರ್ವಹಿಸಿರುತ್ತದೆ.

ಸಿ) ಈ ವರದಿಯಲ್ಲಿ ಪ್ರಸ್ತಾಪಿಸಿರುವ ಆಸ್ತಿ ಹೊಣೆ ಪಟ್ಟಿ ಮತ್ತು ಲಾಭ ನಷ್ಟ ತ:ಖ್ತೆ ಹಾಗೂ ನಗದು ಹರಿವು ಪಟ್ಟಿಗಳು ಕಂಪನಿಯ ಲೆಕ್ಕ ಪುಸ್ತಕಗಳೊಂದಿಗೆ ತಾಳೆಯಾಗಿರುತ್ತವೆ.

(ಡಿ) ಮೇಲಿನ ಅರ್ಹ ಅಭಿಪ್ರಾಯ ಕಂಡಿಕೆ ಬಿ ಯಲ್ಲಿ ವಿವರಿಸಿರುವ ವಿಷಯಗಳನ್ನು ಹೊರತುಪಡಿಸಿ, ಮೇಲಿನ ಸ್ವತಂತ್ರ ಹಣಕಾಸು ಪಟ್ಟಿಗಳು ಕಾಯಿದೆಯ ಸೆಕ್ಷನ್ 133 ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಇಂಡ್ ಎಎಸ್‌ಗೆ ಅನುಗುಣವಾಗಿರುತ್ತವೆ, [ಕಂಪನಿಗಳ(ಖಾತೆಗಳು) ನಿಯಮಗಳು, 2014 ರ ನಿಯಮ 7ರೊಂದಿಗೆ ಓದಿ].

(ಇ) ನಿರ್ದೇಶಕರ ಮಂಡಳಿಯಿಂದ 31 ನೇ ಮಾರ್ಚ್,2020 ರಿಂದ ದಾಖಲೆಯಾಗಿ ತೆಗೆದುಕೊಳ್ಳಲಾದ ನಿರ್ದೇಶಕರ ಲಿಖಿತ ಪ್ರಾತಿನಿಧ್ಯದ ಆಧಾರದ ಮೇಲೆ, ಕಾಯಿದೆ 164(2) ರ ಪ್ರಕಾರ ನಿರ್ದೇಶಕರಾಗಿ ನೇಮಕಗೊಳ್ಳಲು 2020 ರ ಮಾರ್ಚ್ 31 ರಂದು ಯಾವುದೇ ನಿರ್ದೇಶಕರು ಅನರ್ಹವಾಗಿರುವುದಿಲ್ಲ.

ಎಫ್) ಕಂಪನಿಯ ಅಗತ್ಯವಿರುವ ಆಂತರಿಕ ಹಣಕಾಸಿನ ನಿಯಂತ್ರಣ, ಕಂಪನಿಯ ಹಣಕಾಸಿನ ಪಟ್ಟಿಗಳು ಮತ್ತು ಪರಿಣಾಮಕಾರಿಯಾದ ನಿರ್ವಹಣಾ ನಿಯಂತ್ರಣದ ಬಗ್ಗೆ ಹಣಕಾಸಿನ ನಮ್ಮ ವರದಿಯನ್ನು ಪ್ರತ್ಯೇಕವಾಗಿ **ಅನುಬಂಧ - ಬಿ** ನಲ್ಲಿ ಉಲ್ಲೇಖಿಸಲಾಗಿದೆ.

ಜಿ) ಕಂಪನಿಗಳ (ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧಕರು) ನಿಯಮಗಳು, 2014 ರ ನಿಯಮ 11ರ ಪ್ರಕಾರ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆ ವರದಿಯಲ್ಲಿ ಸೇರಿಸಬೇಕಾಗಿರುವ ಬಗ್ಗೆ ನಮ್ಮ ಅಭಿಪ್ರಾಯವನ್ನು ನಮಗೆ ಒದಗಿಸಲಾಗಿರುವ ಹೇಳಿಕೆಗಳು ಮತ್ತು ನೀಡಿದ ಮಾಹಿತಿಯಂತೆ:

i) ಕಂಪನಿಯು ಹಣಕಾಸು ತ:ಖ್ತೆಗಳಲ್ಲಿ ತನ್ನ ಹಣಕಾಸಿನ ಸ್ಥಿತಿಯ ಮೇಲಿನ ಬಾಕಿಯಿರುವ ವ್ಯಾಜ್ಯಗಳ ಪರಿಣಾಮಗಳ ಬಗ್ಗೆ ಹೇಳಿಕೊಂಡಿರುತ್ತದೆ – ಟಿಪ್ಪಣಿ ಸಂಖ್ಯೆ 49(i)

ii) ಕಂಪನಿಯು ಮುಂದೆ ನಷ್ಟವಾಗುವಂತಹ ಯಾವುದೇ ದೀರ್ಘಕಾಲಿಕ ಒಪ್ಪಂದಗಳನ್ನು ಉತ್ಪನ್ನ ಒಡಂಬಡಿಕೆ ಒಳಗೊಂಡಂತೆ ಮಾಡಿಕೊಂಡಿರುವುದಿಲ್ಲ.

iii) ಯಾವುದೇ ಮೊತ್ತವನ್ನು ಹೂಡಿಕೆದಾರರ ವಿದ್ಯಾಭ್ಯಾಸ ಮತ್ತು ರಕ್ಷಣಾ ನಿಧಿಗೆ ವರ್ಗಾಯಿಸುವ ಅವಶ್ಯಕತೆಯಿರುವುದಿಲ್ಲ.

3. ಕಲಂ 143 (5) ರಲ್ಲಿನ ನಿರ್ದೇಶನದ ಅನುಪಾಲನೆಗಾಗಿ ನಾವು ಈ ಕೆಳಗಿನಂತೆ ವರದಿಸುತ್ತೇವೆ.

ಎ) ನಿರ್ದೇಶನಗಳಿಗೆ ಸಂಬಂಧಿಸಿದ ವಿಷಯಗಳು :

1. ಐ.ಟಿ ಸಿಸ್ಟಮ್ ಮೂಲಕ ಎಲ್ಲಾ ಅಕೌಂಟಿಂಗ್ ವಹಿವಾಟುಗಳನ್ನು ಪ್ರಕ್ರಿಯೆಗೊಳಿಸಲು ಕಂಪನಿಯು ವ್ಯವಸ್ಥೆಯನ್ನು ಹೊಂದಿಲ್ಲ. ಏಕೆಂದರೆ ಕಂಪನಿಯ ಐಟಿ ವ್ಯವಸ್ಥೆಗಳು ಇನ್ನೂ ದತ್ತು ಪಡೆಯುವ ಅಂತಿಮ ಹಂತದಲ್ಲಿದೆ. ಮಾರ್ಚ್ 2020 ರಂತೆ ಐಟಿ ಅನುಷ್ಠಾನ ವ್ಯವಸ್ಥೆಯ ವಿವರಗಳನ್ನು ಕೆಳಗೆ ನೀಡಲಾಗಿದೆ:

(ಅ) ಐಟಿ ವ್ಯವಸ್ಥೆಯ ಮೂಲಕ ಲೆಕ್ಕಪರಿಶೋಧಕ ವಹಿವಾಟನ್ನು ದಾಖಲಿಸಲು ಎಫ್ಎಎಂಎಸ್ (ಫೈನಾನ್ಷಿಯಲ್ ಅಕೌಂಟಿಂಗ್ ಮ್ಯಾನೇಜ್ಮೆಂಟ್ ಸಿಸ್ಟಮ್) ಪರಿಣಾಮಕಾರಿಯಾಗಿ ಪೂರ್ಣಗೊಳ್ಳುವ ಹಂತದಲ್ಲಿದೆ, ಏಪ್ರಿಲ್ 2019 ರಿಂದ ಮಾರ್ಚ್-2020 ರವರೆಗಿನ ಎಲ್ಲಾ ವಹಿವಾಟುಗಳನ್ನು ತಂತ್ರಾಂಶದಲ್ಲಿ ಯಶಸ್ವಿಯಾಗಿ ದಾಖಲಿಸಲಾಗಿದೆ ಕೆಲವು ತಾಂತ್ರಿಕ ದೋಷದಿಂದಾಗಿ ಕಂಪನಿಯು ಇನ್ನೂ ಎಫ್ಎಎಂಎಸ್ ನಿಂದ ರಚಿಸಿದ ಬಿಆರ್ಎಸ್, ಲಾಭ ಮತ್ತು ನಷ್ಟ ಪಟ್ಟಿ , ನಗದು ಹರಿವು ಪಟ್ಟಿ ಮತ್ತು ಆಸ್ತಿ ಮತ್ತು ಹೊಣಗಾರಿಕೆ ಪಟ್ಟಿ ಪಡೆಯಲಾಗಿಲ್ಲ.

(ಆ) ಇನ್ವೆಂಟರಿ ರಶೀದಿಗಳು, ಸಮಸ್ಯೆಗಳು ಮತ್ತು ಮುಕ್ತಾಯದ ಸ್ಟಾಕ್‌ನ ಲೆಕ್ಕಪತ್ರಕ್ಕೆ ಸಂಬಂಧಿಸಿದ ವಹಿವಾಟನ್ನು ದಾಖಲಿಸಲು ಎಂಎಂಎಸ್ (ಮೆಟೀರಿಯಲ್ ಮ್ಯಾನೇಜ್ಮೆಂಟ್ ಸಿಸ್ಟಮ್), ಈ ವ್ಯವಸ್ಥೆಯನ್ನು ಎಲ್ಲಾ ವಿಭಾಗಗಳಲ್ಲಿಯೂ ಲೈವ್ ಮಾಡಲಾಗಿದೆ ಆದರೆ ಎಂಎಂಎಸ್ ರಚಿಸಿದ ವರದಿಯನ್ನು ಇನ್ನೂ ಮುಕ್ತಾಯಗೊಳಿಸಿದ ಖಾತೆಗಳ ಪುಸ್ತಕಗಳೊಂದಿಗೆ ಸ್ಟಾಕ್ ಅಂಕಿ ಅಂಶಗಳೊಂದಿಗೆ ಹೊಂದಾಣಿಕೆ ಮಾಡಬೇಕಾಗಿದೆ. ಉದಾ: ಅಂತಿಮ ದಾಸ್ತಾನು ವರದಿಗಳು ಸಮನ್ವಯಗೊಂಡಿವೆ ಆದರೆ ಕೆಲವು ದಾಸ್ತಾನುಗಳ ಕೋಡಿಂಗ್ ತಪ್ಪುಗಳಿಂದ, ರದ್ದಿ ದಾಸ್ತಾನು ಮತ್ತು ದಾಸ್ತಾನುಗಳ ನಡುವೆ ವ್ಯತ್ಯಾಸವಿದೆ.

(ಇ) ಟ್ರಾನ್ಸ್‌ಫಾರ್ಮರ್‌ಗಳ ಬಾಳಿಕೆ, ಸ್ಥಿತಿ ಮತ್ತು ಸ್ಥಳವನ್ನು ಗಣಕೀಕರಿಸಲು ಡಿಟಿಎಲ್ಎಂಎಸ್ (ಡಿಸ್ಟ್ರಿಬ್ಯೂಷನ್ ಟ್ರಾನ್ಸ್‌ಫರ್ ಲೈಫ್ ಸೈಕಲ್ ಮ್ಯಾನೇಜ್‌ಮೆಂಟ್ ಸಾಫ್ಟ್‌ವೇರ್) ಕಾರ್ಯರೂಪಕ್ಕೆ ಬಂದಿದೆ ಮತ್ತು ಸಕ್ರಿಯ ಬಳಕೆಗೆ ತರಲಾಗಿದೆ ಮತ್ತು ಡಿಟಿಎಲ್ಎಂಎಸ್ ಅನುಷ್ಠಾನದಿಂದಾಗಿ ಕಂಪನಿಯು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದೆ. ಡಿಟಿಎಲ್ಎಂಎಸ್‌ನ ಅಳವಡಿಕೆಯಿಂದ ಕಂಪನಿಯು ಒಟ್ಟು ಎಷ್ಟು ಟ್ರಾನ್ಸ್‌ಫಾರ್ಮರ್‌ಗಳು ಇವೆ, ಎಷ್ಟು ಕಾರ್ಯನಿರ್ವಹಿಸುತ್ತಿವೆ, ಎಷ್ಟು ರಿಪೇರಿಗೆ ಬಂದಿದೆ, ಎಷ್ಟು ರಿಪೇರಿಗೆ ಹೋಗಿದೆ, ಎಷ್ಟು ಉಗ್ರಾಣದಲ್ಲಿವೆ, ಎಷ್ಟು ಪೂರ್ಣಗೊಂಡ ವರದಿಯನ್ನು ಪಡೆಯಲಾಗಿಲ್ಲ ಎಂಬುದನ್ನು ಕಂಪನಿಯು ಗುರುತಿಸುವಲ್ಲಿ ಯಶಸ್ವಿಯಾಗಿರುತ್ತದೆ.

2. ಪ್ರಸಕ್ತ ವರ್ಷದಲ್ಲಿ ಅಸ್ತಿತ್ವದಲ್ಲಿರುವ ಸಾಲದಲ್ಲಿ ಯಾವುದೇ ಪುನರ್ ರಚನೆ ಮತ್ತು ಡೀಫಾಲ್ಟ್ ಆಗಿರುವುದಿಲ್ಲ ಆದರೆ ದೀರ್ಘ ಸಂಪರ್ಕ ಕಡಿತಗೊಂಡ ಸ್ಥಾವರಗಳಿಗೆ ಸಂಬಂಧಿಸಿದ ಬಾಕಿ ಮೊತ್ತ

ರೂ.366.33 ಲಕ್ಷಗಳನ್ನು ಯಾವುದೇ ವಿಧದಲ್ಲಿ ಬಾರದೆ ಇರುವ ಮೊತ್ತವನ್ನು ಮನ್ನಾ / ತೊಡೆದು ಹಾಕಿರುವ ಬಗ್ಗೆ ವಿವರಣೆ ನೀಡಲಾಗಿದೆ.

3. ಕೇಂದ್ರ / ರಾಜ್ಯ ಸಂಸ್ಥೆಗಳಿಂದ ನಿರ್ದಿಷ್ಟ ಯೋಜನೆಗಾಗಿ ಸ್ವೀಕರಿಸಿದ/ ಪಡೆಯಬಹುದಾದ ಹಣವನ್ನು ಅದರ ನಿಯಮಗಳು ಮತ್ತು ಅನುದಾನದ ಷರತ್ತುಗಳ ಪ್ರಕಾರ ಸರಿಯಾಗಿ ಲೆಕ್ಕಹಾಕಲಾಗುತ್ತದೆ/ ಬಳಸಿಕೊಳ್ಳಲಾಗುತ್ತದೆ.

4. ಹೆಚ್ಚುವರಿ ಕಂಪನಿ ನಿರ್ದಿಷ್ಟ ನಿರ್ದೇಶನ:

(ಎ) ಕಂಪನಿ ಗಾತ್ರ ಮತ್ತು ಕಂಪನಿಯ ಕಾರ್ಯಾಚರಣೆಗಳ ಪ್ರಮಾಣವನ್ನು ಪರಿಗಣಿಸಿ. ಬಿಲ್ಲಿಂಗ್ ಮತ್ತು ಆದಾಯವನ್ನು ಸಂಗ್ರಹಿಸುವ ವ್ಯವಸ್ಥೆಯನ್ನು ಸಮಂಜಸವಾಗಿ ಪರಿಣಾಮಕಾರಿ ಎಂದು ಪರಿಗಣಿಸಲಾಗುತ್ತದೆ. ಪುನರ್ ರಚಿಸಿದ ವೇಗವರ್ಧಿತ ವಿದ್ಯುತ್ ಅಭಿವೃದ್ಧಿ ಮತ್ತು ಸುಧಾರಣಾ ಕಾರ್ಯಕ್ರಮ (ಆರ್ಎಪಿಡಿಆರ್ಪಿ) ವ್ಯಾಪ್ತಿಯ ಪ್ರದೇಶಗಳಲ್ಲಿ ಸಂಗ್ರಹಣೆಗಳನ್ನು ನವೀಕರಿಸುವಲ್ಲಿ ಕೆಲವು ದಿನಗಳ ವಿಳಂಬವನ್ನು ಗಮನಿಸಲಾಗಿದೆ. ಟ್ಯಾಂಪರ್ ಪ್ರೂಫ್ ಗ್ರಾಮೀಣ ಐಪಿ ಸೆಟ್‌ಗಳ ಗ್ರಾಹಕರನ್ನು ಹೊರತುಪಡಿಸಿ ಎಲ್ಲಾ ಗ್ರಾಹಕರಿಗೆ ಸ್ಥಿರ ಮೀಟರ್‌ಗಳನ್ನು ಸ್ಥಾಪಿಸಲಾಗಿದೆ. ನಮಗೆ ತಿಳಿಸಿದಂತೆ, ಆರ್ಎಪಿಡಿಆರ್ಪಿ ಪ್ರದೇಶದ ಎಲ್ಲಾ ಹೆಚ್‌ಟಿ ಸಾಲುಗಳಲ್ಲಿ, ಸ್ವಯಂಚಾಲಿತ ಮೀಟರ್ ರೀಡಿಂಗ್ (ಎಎಂಆರ್) ವ್ಯವಸ್ಥೆಗಳನ್ನು ಸ್ಥಾಪಿಸಲಾಗಿದೆ ಮತ್ತು ಇತರೆ ಪ್ರದೇಶಗಳಲ್ಲಿ, ಅಂತಹ ಮಾಪಕಗಳ ಸ್ಥಾಪನೆಯು ಪ್ರಗತಿಯಲ್ಲಿದೆ. ಹೆಚ್‌ಟಿ ಮತ್ತು ಎಲ್.ಟಿ ರೇಟಿಂಗ್ ಸಿಬ್ಬಂದಿ ಕೈಗೊಂಡ ಆವರ್ತಕ ಪರೀಕ್ಷಾ ಪರಿಶೀಲನೆಯ ಮೂಲಕ ಬಿಲ್ಲಿಂಗ್‌ನ ನಿಖರತೆಯನ್ನು ಖಚಿತಪಡಿಸಿಕೊಳ್ಳಲಾಗುತ್ತದೆ.

(ಬಿ) ಪ್ರಸ್ತುತ ಭಾರತೀಯ ಮಾನದಂಡಗಳಿಗೆ ಅನುಗುಣವಾಗಿ ವಿನ್ಯಾಸಗೊಳಿಸಲಾದ ದೇಶಿಯ / ವಾಣಿಜ್ಯ ಸ್ಥಾಪನೆಗಳಿಗೆ ಸ್ಥಾಯೀ ಮೀಟರ್ ಒದಗಿಸಲಾಗುತ್ತಿದೆ ಮತ್ತು ಭಾರತೀಯ ಮಾನದಂಡಗಳ ಪ್ರಕಾರ ಟ್ಯಾಂಪರ್ ಪತ್ತೇದಾರಿ ಘಟನೆಗಳೊಂದಿಗೆ ತಯಾರಿಸಲಾಗಿದೆ. ಯಾರಾದರೂ ಟ್ಯಾಂಪರ್ ಮಾಡಲು ಪ್ರಯತ್ನಿಸಿದರೆ, ಆ ಘಟನೆಗಳನ್ನು ಸೂಚಿಸಲಾಗುತ್ತದೆ ಮತ್ತು ಮೀಟರ್‌ನಲ್ಲಿ ಲಾಗ್ ಮಾಡಲಾಗುತ್ತದೆ. ತಪಾಸಣೆಯ ಸಮಯದಲ್ಲಿ ಎಂ.ಟಿ ಸಿಬ್ಬಂದಿ / ವಿಜಿಲೆನ್ಸ್ ಅವರಿಂದ ಪರಿಶೀಲಿಸಲಾಗುತ್ತದೆ. ಟ್ಯಾಂಪರ್ ಮಾಡಲು ಸಾಧ್ಯವಾಗುವ ಎಲೆಕ್ಟ್ರೋ ಮೆಕ್ಯಾನಿಕಲ್ ಮೀಟರ್‌ಗಳು, ಹೆಚ್ಚಿನವನ್ನು ಬದಲಾಯಿಸಲಾಗಿದೆ ಮತ್ತು ಸಮತೋಲನ ಬದಲಿಗಳು ಪ್ರಗತಿಯಲ್ಲಿವೆ.

(ಸಿ) ವಿತರಣಾ ಕಂಪನಿಗಳು ಮತ್ತು ಪ್ರಸರಣ ಕಂಪನಿಗಳೊಂದಿಗೆ ವಿದ್ಯುತ್ ಖರೀದಿ ಒಪ್ಪಂದಗಳನ್ನು ಹೊಂದಿರುವ (ಕರ್ನಾಟಕ ಪವರ್ ಕಾರ್ಪೊರೇಷನ್ ಲಿಮಿಟೆಡ್ ಮತ್ತು ಉಡುಪಿ ಪವರ್ ಕಾರ್ಪೊರೇಷನ್ ಲಿಮಿಟೆಡ್ ಹೊರತುಪಡಿಸಿ) ಉತ್ಪಾದನಾ ಕಂಪನಿಗಳೊಂದಿಗೆ ನಿಯತಕಾಲಿಕವಾಗಿ ಕರಾರು ಸ್ವೀಕೃತಿ/ಪಾವತಿಸಬೇಕಾದ ಸಾಮರಸ್ಯವನ್ನು ಮಾಡಲಾಗುತ್ತಿದೆ. ಬ್ಯಾಲೆನ್ಸ್ ದೃಢೀಕರಣಕ್ಕಾಗಿ ಎಲ್ಲಾ ಉತ್ಪಾದಕರಿಗೆ ಪತ್ರ ಬರೆಯಲಾಗಿದೆ. ಉತ್ಪಾದಕ ಕಂಪನಿಗಳನ್ನು (ಕರ್ನಾಟಕ ವಿದ್ಯುತ್ ನಿಗಮ ಹಾಗೂ ಉಡುಪಿ ಪವರ್ ಕಾರ್ಪೊರೇಷನ್ ಲಿಮಿಟೆಡ್) ಹೊರತುಪಡಿಸಿ ಉಳಿದ ಸ್ವಿಕೃತಿ/ಬಾಕಿಗಳು ಹೊಂದಾಣಿಕೆಯಾಗಬೇಕಾಗಿದೆ.

(ಡಿ) ಕೆಇಆರ್‌ಸಿ ಅನುಮೋದಿಸಿದ ಇಂಧನ ಮತ್ತು ವಿದ್ಯುತ್ ಖರೀದಿ ಹೊಂದಾಣಿಕೆ ವೆಚ್ಚವನ್ನು (ಎಫ್‌ಪಿಪಿಸಿಎ) ಗ್ರಾಹಕರಿಂದ ಬೇಡಿಕೆ ಮತ್ತು ವಸೂಲಿ ಮಾಡಲಾಗಿದೆ ಮತ್ತು ಲೆಕ್ಕೀಕರಿಸಲಾಗಿದೆ.

(ಇ) ನಮಗೆ ತಿಳಿಸಿದಂತೆ 31 ಮಾರ್ಚ್ 2020 ಕ್ಕೆ ಕೊನೆಗೊಂಡ ವರ್ಷದಲ್ಲಿ ನಿಯಮಿತ ಸುಂಕವನ್ನು ಹೊರತುಪಡಿಸಿ ಯಾವುದೇ ಸುಂಕವನ್ನು ರೋಲ್ ಬ್ಯಾಕ್ ಸಬ್ಸಿಡಿಗಳಿಗೆ ಅನುಮತಿಸಲಾಗಿಲ್ಲ.

(ಎಫ್) ಬಿಲ್ಲಿಂಗ್ ಮತ್ತು ಗ್ರಾಹಕರಿಂದ ಸಂಗ್ರಹಣೆಗೆ ಸಂಬಂಧಿಸಿದ ಕಾರ್ಯಾಚರಣೆಗಳನ್ನು ಗಣಕೀಕರಿಸಲಾಗಿದೆ.

ವರ್ಷದಲ್ಲಿ, ದಾಸ್ತಾನು ಗಣಕೀಕರಿಸಲು ಎಂ.ಎಂ.ಎಸ್(ಮೆಟೀರಿಯಲ್ ಮ್ಯಾನೇಜ್‌ಮೆಂಟ್ ಸಿಸ್ಟಮ್), ಲೆಕ್ಕ ಪತ್ರಗಳನ್ನು ಗಣಕೀಕರಿಸಲು ಎಫ್.ಎ.ಎಂ.ಎಸ್ (ಫೈನಾನ್ಷಿಯಲ್ ಅಕೌಂಟ್ಸ್ ಮ್ಯಾನೇಜ್‌ಮೆಂಟ್ ಸಿಸ್ಟಮ್) ಮತ್ತು ಟ್ರಾನ್ಸ್‌ಫಾರ್ಮರ್‌ಗಳ ಜೀವನ, ಸ್ಥಿತಿ ಮತ್ತು ಸ್ಥಳವನ್ನು ಗಣಕೀಕರಿಸಲು ಡಿಟಿಎಲ್‌ಎಂಎಸ್ (ಡಿಸ್ಟ್ರಿಬ್ಯೂಷನ್ ಟ್ರಾನ್ಸ್‌ಫಾರ್ಮರ್ ಲೈಫ್ ಸೈಕಲ್ ಮ್ಯಾನೇಜ್‌ಮೆಂಟ್ ಸಾಫ್ಟ್‌ವೇರ್) ಮಾಡಲಾಗಿದೆ. ಯಾವುದೇ ಪತ್ತೆಯಾಗದ ದೋಷಗಳು / ತೊಂದರೆಗಳನ್ನು ತಳ್ಳಿಹಾಕಲು ಯಾವುದೇ ಮಾಹಿತಿ ವ್ಯವಸ್ಥೆಗಳ ಲೆಕ್ಕಪರಿಶೋಧನೆಯನ್ನು ನಡೆಸದೆ ಕಾರ್ಯಕಾರಿ ಮತ್ತು ಸಕ್ರಿಯ ಬಳಕೆಗೆ ತರಲಾಗುತ್ತದೆ. ನಮಗೆ ವಿವರಿಸಿದಂತೆ ಗಣಕೀಕರಣಕ್ಕೆ ಸಂಬಂಧಿಸಿದಂತೆ ಡೇಟಾ ಸುರಕ್ಷತೆಯನ್ನು ಖಾತ್ರಿಪಡಿಸಿಕೊಳ್ಳಲು ಸಾಕಷ್ಟು ಅಭ್ಯಾಸಗಳು ಜಾರಿಯಲ್ಲಿವೆ ಆದರೆ ಡೇಟಾ / ಸಾಫ್ಟ್‌ವೇರ್ / ಹಾರ್ಡ್‌ವೇರ್‌ಗಾಗಿ ಕಂಪನಿಯು ಯಾವುದೇ ಔಪಚಾರಿಕ ದಾಖಲಿತ ಐಟಿ ಭದ್ರತಾ ನೀತಿಯನ್ನು ಹೊಂದಿಲ್ಲ.

ರಮೇಶ ಎಂ.ವೈ ಅಂಡ್ ಕೋ
ಚಾರ್ಟರ್ಡ್ ಅಕೌಂಟೆಂಟ್ಸ್ ಪರವಾಗಿ
ಫರ್ಮ್ ರಿಜಿಸ್ಟ್ರೇಷನ್ ಸಂಖ್ಯೆ : 006202S

ಸಹಿ/–
ರಮೇಶ ಗೌಡ ಎಂ.ವೈ
ಪಾಲುದಾರರು
ಸದಸ್ಯತ್ವ ಸಂಖ್ಯೆ 202316
ಯುಡಿಐಎನ್ ಸಂಖ್ಯೆ 20202316ಎಎಎಎಎಯು9165

ಸ್ಥಳ : ಮೈಸೂರು

ದಿನಾಂಕ:28.09.2020

ಲೆಕ್ಕ ಪರಿಶೋಧಕರ ವರದಿಗೆ ಅನುಬಂಧ-ಎ

(ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿಯ ಸದಸ್ಯರುಗಳಿಗೆ ನೀಡಿದ ದಿನಾಂಕ:31.03.2020 ಕ್ಕೆ ಕೊನೆಗೊಂಡ ವರ್ಷಕ್ಕೆ ಸಂಬಂಧಿಸಿದ, ಸಮ ದಿನಾಂಕದ ನಮ್ಮ ವರದಿಯ ಪ್ಯಾರಾ ಸಂಖ್ಯೆ 1 ಇತರೆ ಕಾನೂನುಬದ್ಧ ಹಾಗೂ ನಿಯಂತ್ರಣಾ ಅವಶ್ಯಕತೆಗಳ ಮೇಲಿನ ವರದಿಯಲ್ಲಿ ಉಲ್ಲೇಖಿಸಿದೆ).

1. ಕಂಪನಿಯ ಸ್ಥಿರಾಸ್ತಿಗಳಿಗೆ ಸಂಬಂಧಪಟ್ಟಂತೆ.

ಎ) ಕಂಪನಿಯ ಸ್ಥಿರಾಸ್ತಿಗಳಿಗೆ ಸಂಬಂಧಪಟ್ಟಂತೆ ನಿರ್ವಹಿಸಿರುವ ದಾಖಲೆಗಳಲ್ಲಿ ಸ್ಥಿರಾಸ್ತಿಗಳ ಪರಿಮಾಣ ಮತ್ತು ಸ್ಥಿತಿಗತಿಯ ಬಗ್ಗೆ ವಿವರಗಳು ಇರುವುದಿಲ್ಲ. ಕಂಪನಿಯು ನಮಗೆ ತಿಳಿಸಿದ ಪ್ರಕಾರ ಎಲ್ಲಾ ಆಸ್ತಿಗಳ ಮೂಲ ಬೆಲೆ ಮತ್ತು ಸವಕಳಿಯನ್ನು ದಾಖಲಿಸುವ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.

ಬಿ) ಕಂಪನಿಯು ಎಲ್ಲಾ ಸ್ಥಿರಾಸ್ತಿಗಳನ್ನು 3 ವರ್ಷಗಳಿಗೊಮ್ಮೆ ಭೌತಿಕವಾಗಿ ಪರಿಶೀಲಿಸುವ ಯೋಜನೆ ರೂಪಿಸಿದ್ದು, ಕಂಪನಿಯ ಗಾತ್ರ ಹಾಗೂ ಆಸ್ತಿಗಳ ರೀತಿಗಳಿಗೆ ಗಮನಿಸಿದ್ದಲ್ಲಿ, ಈ ವ್ಯವಸ್ಥೆ ನಮ್ಮ ಅಭಿಪ್ರಾಯದಲ್ಲಿ ನ್ಯಾಯಯುತವಾಗಿರುವುದಿಲ್ಲ. ಈ ಯೋಜನೆಯಂತೆ ಆಡಳಿತ ವರ್ಗವು ಹಲವು ಸ್ಥಿರಾಸ್ತಿಗಳನ್ನು ಈ ವರ್ಷದಲ್ಲಿ ಭೌತಿಕವಾಗಿ ಪರಿಶೀಲಿಸಿದ್ದು, ನಮಗೆ ನೀಡಿರುವ ಮಾಹಿತಿ ಹಾಗೂ ವಿವರಣೆಗಳ ಪ್ರಕಾರ ಯಾವುದೇ ಮಹತ್ತರ ಲೋಪದೋಷಗಳಲ್ಲಿ ಸದರಿ ಪರಿಶೀಲನೆಯಲ್ಲಿ ಕಂಡು ಬಂದಿರುವುದಿಲ್ಲ

ಸಿ) ನಮಗೆ ನೀಡಿರುವ ಮಾಹಿತಿ ಹಾಗೂ ವಿವರಣೆಗಳ ಪ್ರಕಾರ ಹಾಗೂ ನಮಗೆ ಒದಗಿಸಿರುವ ರವಾನೆ ಕ್ರಯ/ನೋಂದಾಯಿತ ಮಾರಾಟ ಒಡಂಬಡಿಕೆಗಳನ್ನು ಪರಿಶೀಲಿಸಸಿದ ಪ್ರಕಾರ ಈ ಕೆಳಗಿನವನ್ನು ಹೊರತುಪಡಿಸಿ ಉಳಿದ ಚಲನೆಯಿಲ್ಲದ ಆಸ್ತಿಗಳು, ಜಾಗ ಹಾಗೂ ಕಟ್ಟಡಗಳು ಸ್ಪಷ್ಟವಾದ ಹಕ್ಕುಪತ್ರ / ಭೋಗ್ಯ ಮತ್ತು ಉತ್ತಾರಾಧಿಕಾರವನ್ನು ಕಂಪನಿಯ ಹೆಸರಿನಲ್ಲಿ ಹೊಂದಿರುತ್ತದೆ.

ಕ್ರಮ ಸಂಖ್ಯೆ	ಲೆಕ್ಕ ನಿರ್ವಹಿಸುತ್ತಿರುವ ವಿಭಾಗ	ಸ್ಥಿರಾಸ್ತಿಯ ವಿವರ	ಆಸ್ತಿ ಯಾರ ಹೆಸರಿನಲ್ಲಿದೆ
1	ಎನ್.ಆರ್.ಮೊಹಲ್ಲಾ,	ಮೈಸೂರು ಕಡಕೊಳ ಲೈನ್‌ಮ್ಯಾನ್ ಕ್ಯಾಂಪ್	ಕೆ.ಇ.ಬಿ.
2		ಅಯ್ಯರಹಳ್ಳಿ ಲೈನ್‌ಮ್ಯಾನ್ ಕ್ಯಾಂಪ್	ಕೆ.ಇ.ಬಿ.
3	ನಂಜನಗೂಡು	ಹುಲ್ಲಳ್ಳಿ ಲೈನ್‌ಮ್ಯಾನ್ ಕ್ಯಾಂಪ್	ಕೆ.ಇ.ಬಿ.
4		ಮೂಗೂರು ಲೈನ್‌ಮ್ಯಾನ್ ಕ್ಯಾಂಪ್	ಹಕ್ಕು ಪತ್ರ ಲಭ್ಯವಿರುವುದಿಲ್ಲ
5		ಬೆಟ್ಟಹಳ್ಳಿ ಲೈನ್‌ಮ್ಯಾನ್ ಕ್ಯಾಂಪ್	ಕೆ.ಇ.ಬಿ.
6	ಹುಣಸೂರು	ಹುಣಸೂರು ಉಪ ವಿಭಾಗೀಯ ಕಛೇರಿ ಆವರಣ	ಕೆ.ಇ.ಬಿ.
7		ಕಟ್ಟಿಮಳಲವಾಡಿ ಆವರಣ	ಕೆ.ಇ.ಬಿ.
8		ಪಿರಿಯಾಪಟ್ಟಣ ಉಪವಿಭಾಗ ಕಛೇರಿ ಆವರಣ	ಕೆ.ಇ.ಬಿ.
9		ಕೆ.ಆರ್.ನಗರ ಕಲೆಕ್ಷನ್ ಸೆಂಟರ್ ಆವರಣ	ಕೆ.ಇ.ಬಿ.
10		ಬಸವರಾಜಪುರ ಕ್ಯಾಂಪ್ ಆವರಣ	ಹಕ್ಕು ಪತ್ರ ಲಭ್ಯವಿರುವುದಿಲ್ಲ
11		ಸರಗೂರು ಶಾಖಾ ಕಛೇರಿ ಆವರಣ	ಕೆ.ಇ.ಬಿ.

ಕ್ರಮ ಸಂಖ್ಯೆ	ಲೆಕ್ಕ ನಿರ್ವಹಿಸುತ್ತಿರುವ ವಿಭಾಗ	ಸ್ಥಿರಾಸ್ತಿಯ ವಿವರ	ಆಸ್ತಿ ಯಾರ ಹೆಸರಿನಲ್ಲಿದೆ
12		ಸರಗೂರು ವಸತಿ ಗೃಹಗಳ ಕಾಲೋನಿ ಆವರಣ	ಕೆ.ಇ.ಬಿ.
13	ಚಾಮರಾಜನಗರ ವಿಭಾಗ	ಹರವೆ ಎಂ.ಯು.ಎಸ್.ಎಸ್ ಸ್ಟೇಷನ್	ಕೆ.ಇ.ಬಿ.
14		ಚಂದಕವಾಡಿ ಶಾಖಾ ಕಛೇರಿ/33 ಕೆ.ವಿ., ಎಂ.ಯು.ಎಸ್.ಎಸ್	ಕೆ.ಇ.ಬಿ.
15	ಕೊಳ್ಳೇಗಾಲ ವಿಭಾಗ	ಎಂ.ಎಂ.ಹಿಲ್ಸ್ ಲೈನ್‌ಮ್ಯಾನ್ ಕ್ಯಾಂಪ್ ಆವರಣ	ಕೆ.ಇ.ಬಿ.
16		ಕಿಂಕನಹಳ್ಳಿ ಲೈನ್‌ಮ್ಯಾನ್ ಕ್ಯಾಂಪ್ ಆವರಣ	ಹಕ್ಕು ಪತ್ರ ಲಭ್ಯವಿರುವುದಿಲ್ಲ
17	ಮಡಿಕೇರಿ	ಶಾಂತಿನಿಕೇತನ ಮಡಿಕೇರಿ	ಕೆ.ಇ.ಬಿ
18		ಎಂ.ಯು.ಎಸ್.ಎಸ್.ಕಾಲೋನಿ, ಮಡಿಕೇರಿ	ಎಂ.ಯು.ಎಸ್.ಎಸ್
19		ಉಪವಿಭಾಗೀಯ ಕಛೇರಿ, ಮಡಿಕೇರಿ	ಅಧ್ಯಕ್ಷರು,ಇಂಡಿಯನ್ ಕಾರ್ಪೊರೇಷನ್ ಆ್ಯಂಡ್ ಇಂಡಿಯನ್ ಯೂನಿಯನ್
20		ಸೋಮವಾರಪೇಟೆ ಶಾಖಾ ಕಛೇರಿ ಆವರಣ	ಸರ್ಕಾರಿ ಭೂಮಿ
21		ಹಾನಗಲ್ಲು ಶೆಟ್ಟಳ್ಳಿ	ಕೆ.ಇ.ಬಿ
22		ಕೂಡಿಗೆ	ಸರ್ಕಾರಿ ಭೂಮಿ
23		ಶ್ರೀಮಂಗಲ ಶಾಖಾ ಕಛೇರಿ	ಕೆ.ಇ.ಬಿ
24		ವಿರಾಜಪೇಟೆ ಶಾಖಾ ಕಛೇರಿ	ಎಂ.ಯು.ಎಸ್.ಎಸ್
25	ಮಂಡ್ಯ	ಹುಲಿಕೆರೆ ಲೈನ್ ಮ್ಯಾನ್ ಕ್ಯಾಂಪ್	ಸರ್ಕಾರಿ ಶಾಲೆ
26	ಮದ್ದೂರು	ರಾವಣಿ ಲೈನ್‌ಮ್ಯಾನ್ ಕ್ಯಾಂಪ್	ಕೆ.ಇ.ಬಿ
27		ಕಿರಗಾವಲು ಶಾಖಾ ಕಛೇರಿ	ಕೆ.ಇ.ಬಿ
28	ಪಾಂಡವಪುರ	ಹಂಗರಹಳ್ಳಿ ಲೈನ್‌ಮ್ಯಾನ್ ಕ್ಯಾಂಪ್	ಕೆಪಿಟಿಸಿಎಲ್
29		ಬಿದರಹಳ್ಳಿ ಲೈನ್‌ಮ್ಯಾನ್ ಕ್ಯಾಂಪ್	ಕೆ.ಇ.ಬಿ
30	ಹಾಸನ	ಓಲ್ಡ್ ಎಲೆಕ್ಟ್ರಿಸಿಟಿ ಕಾಲೋನಿ	ಕೆ.ಇ.ಬಿ
31		ದುದ್ದ ಶಾಖಾ ಕಛೇರಿ	ಕೆಪಿಟಿಸಿಎಲ್
32	ಹೊಳೆನರಸೀಪುರ	ಹಳ್ಳಿಮೈಸೂರು	ಕೆ.ಇ.ಬಿ
33		ಬಾಚೇನಹಳ್ಳಿ	ಭೂಮಿ ವಿವರಗಳು ಲಭ್ಯವಿಲ್ಲ

2) ನಮಗೆ ತಿಳಿಸಿರುವ ಪ್ರಕಾರ ವ್ಯವಸ್ಥಾಪಕ ವರ್ಗವು ಸಾಮಗ್ರಿಗಳ ಭೌತಿಕ ಪರಿಶೀಲನೆಯನ್ನು ವರ್ಷದಲ್ಲಿ ಒಮ್ಮೆ ನಡೆಸಿರುತ್ತದೆ. ನಮ್ಮ ಅಭಿಪ್ರಾಯದಲ್ಲಿ ದಾಸ್ತಾನುಗಳ ಭೌತಿಕ ಪರಿಶೀಲನೆಗೆ ಅನುಸರಿಸುತ್ತಿರುವ ವಿಧಾನವು ಪರಿಶೀಲನೆಯ ಬಗ್ಗೆ ಸಮರ್ಪಕ ದಾಖಲೆಗಳ ಕೊರತೆ ಹಿನ್ನೆಲೆಯಲ್ಲಿ ದಾಸ್ತಾನಿನ ಭೌತಿಕ ಪರಿಶೀಲನೆಗೆ ವ್ಯವಸ್ಥಾಪಕ ಕಂಪನಿಯ ಗಾತ್ರ ಮತ್ತು ವ್ಯವಹಾರದ

ಸ್ವರೂಪಗಳಿಗೆ ಹೋಲಿಸಿದ್ದಲ್ಲಿ ನ್ಯಾಯಯುತವಾಗಿರುವುದಿಲ್ಲ ಭೌತಿಕ ತಪಾಸಣೆಯಿಂದ ಕಂಡು ಬಂದ ವ್ಯತಿರಿಕ್ತಗಳನ್ನು ಇನ್ನೂ ದಾಸ್ತಾನಿನಲ್ಲಿ ಹೊಂದಾಣಿಕೆ ಮಾಡಿಕೊಳ್ಳಬೇಕಾಗಿರುತ್ತದೆ.

3) ಕಂಪನಿಯ ಕಾಯಿದೆ 2013 ರ ಪರಿಚ್ಛೇದ 189 ರನ್ವಯ ನಿರ್ವಹಿಸಿರುವ ದಾಖಲೆ ಪುಸ್ತಕದಲ್ಲಿ ಒಳಗೊಂಡಿರುವಂತೆ ಕಂಪನಿಗಳು, ಸಂಸ್ಥೆಗಳಿಗೆ, ಪಾಲುದಾರಿಕೆ ಅಥವಾ ಇತರೆ ಸಂಸ್ಥೆಗಳಿಗೆ ಯಾವುದೇ ಸುರಕ್ಷಿತ ಅಥವಾ ಅಸುರಕ್ಷಿತ ಸಾಲವನ್ನು ಮಂಜೂರು ಮಾಡಿರುವುದಿಲ್ಲ ಮತ್ತು ಆದೇಶದ ಪ್ಯಾರಾ 3 ರ ಕಲಂಗಳು (iii)(J), (iii)(ಬಿ) ಮತ್ತು (iii)(ಸಿ) ಬಗ್ಗೆ ವರದಿಸುವುದು ಕಂಪನಿಗೆ ಅನ್ವಯಿಸುವುದಿಲ್ಲ.

4) ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಗಳಿಂದ ಕಂಪನಿಯು, ಕಂಪನಿಯ ಕಾಯಿದೆ 2013 ರ ಪರಿಚ್ಛೇದ 185 ಅಥವಾ 186 ಗೆ ಒಳಪಡುವ ಯಾವುದೇ ಸಾಲಗಳು, ಖಾತರಿಗಳನ್ನು ನೀಡಿರುವುದಿಲ್ಲ ಅಥವಾ ಭದ್ರತೆ ಅಥವಾ ಯಾವುದೇ ಬಂಡವಾಳ ಹೂಡಿಕೆ ಪ್ರಸಕ್ತ ವರ್ಷದಲ್ಲಿ ಮಾಡಿರುವುದಿಲ್ಲ, ಮತ್ತು ಆದೇಶದ ಪ್ಯಾರಾ 3 ರ ಕಲಂಗಳು (iv) ಬಗ್ಗೆ ವರದಿಸುವುದು ಕಂಪನಿಗೆ ಅನ್ವಯಿಸುವುದಿಲ್ಲ.

5) ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ನಿರ್ದೇಶನದ ಅನುಸಾರ ಮತ್ತು ಪರಿಚ್ಛೇದ 73 ರಿಂದ 76 ಅಥವಾ ಕಾಯಿದೆಯ ಯಾವುದೇ ಇತರೆ ಪ್ರಸಕ್ತವಾದ ಅವಕಾಶಗಳನುಸಾರ ಮತ್ತು ಅದರಡಿಯಲ್ಲಿ ರಚಿತವಾಗಿರುವ ನಿಯಮಾವಳಿಗಳನುಸಾರ 60 ದಿನಗಳಿಗಿಂತ ಹೆಚ್ಚಿನ ಅವಧಿಯಲ್ಲಿ ಹಂಚಿಕೆಯ ಬಾಕಿಯ ಆಧಾರದ ಮೇಲೆ ಷೇರು ಅರ್ಜಿ ಮೊತ್ತವನ್ನು ಕರ್ನಾಟಕ ಸರ್ಕಾರದಿಂದ ಕಂಪನಿಯು ಪಡೆದಿದ್ದು ಸಾರ್ವಜನಿಕರಿಂದ ಯಾವುದೇ ಠೇವಣಿಯನ್ನು ಪಡೆದಿರುವುದಿಲ್ಲ, ಆ ಪ್ರಕಾರ ಕಂಪನಿಯು ಭದ್ರತಾ ಠೇವಣಿಗೆ ಸಮಾನವಾದ ಷೇರು ಅರ್ಜಿಯ ಮೊತ್ತದ ಹಂಚಿಕೆಯ ಬಾಕಿ ಇತ್ಯರ್ಥವನ್ನು ನಿರೀಕ್ಷಿಸಿ ಸದರಿ ಅವಕಾಶಗಳಿಗೆ ಅನುಪಾಲನೆಯನ್ನು ಮಾಡಿರುತ್ತದೆ.

6) ಕಂಪನಿ ಕಾಯಿದೆ ಪರಿಚ್ಛೇದ 148(1) ರ ಪ್ರಕಾರ, ಕೇಂದ್ರ ಸರ್ಕಾರವು ರೂಪಿಸಿದ ನಿಯಮಗಳ ಪ್ರಕಾರ ಮೂಲ ವೆಚ್ಚ ದಾಖಲೆಗಳನ್ನು (Cost records) ಸ್ಥೂಲವಾಗಿ ಪರಿಶೀಲಿಸಿದ್ದೇವೆ ಮತ್ತು ನಮ್ಮ ಅಭಿಪ್ರಾಯದಂತೆ, ನಿಗದಿತ ಲೆಕ್ಕ ಮತ್ತು ದಾಖಲೆಗಳನ್ನು ನಿರ್ವಹಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಆದಾಗ್ಯೂ, ನಾವು ಸದರಿ ಲೆಕ್ಕ ಪತ್ರಗಳ ನಿಖರತೆ ಮತ್ತು ಪೂರ್ಣವಾಗಿರುವ ಬಗ್ಗೆ ಸುಧೀರ್ಘ ಪರಿಶೀಲನೆ ನಡೆಸಿರುವುದಿಲ್ಲ.

7) ಶಾಸನಬದ್ಧ ಬಾಕಿಗಳಿಗೆ ಸಂಬಂಧಿಸಿದಂತೆ ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ:

ಎ) ಕಂಪನಿಯು ಅವಿವಾದಿತ ಕಾನೂನುಬದ್ಧ ಬಾಕಿಗಳನ್ನು ಸಕಾಲದಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಸದರಿ ವರ್ಷದಲ್ಲಿ ಜಮೆಗೊಳಿಸಿದೆ ಮತ್ತು ದಿನಾಂಕ: 31.03.2020 ರಲ್ಲಿರುವಂತೆ, ಭವಿಷ್ಯ ನಿಧಿ, ಹೂಡಿಕೆದಾರರ ತಿಳುವಳಿಕೆ, ರಕ್ಷಣಾ ನಿಧಿ, ನೌಕರರ ವಿಮಾ ಯೋಜನೆ, ಆದಾಯ ತೆರಿಗೆ, ಮಾರಾಟ ತೆರಿಗೆ, ಸೇವಾ ತೆರಿಗೆ, ಸೀಮಾ ಸುಂಕ, ಅಬಕಾರಿ ಶುಲ್ಕ, ವ್ಯಾಟ್, ಸೆಸ್, ಮತ್ತು ಇತರೆ ಕಾನೂನುಬದ್ಧ ಪಾವತಿಗಳಿಗೆ ಸಂಬಂಧಿಸಿದ ಯಾವುದೇ ಅವಿವಾದಿತ ಬಾಕಿಗಳು ಪಾವತಿಯಾಗಬೇಕಾದ ದಿನಾಂಕದಿಂದ ಆರು ತಿಂಗಳು ಬಾಕಿ ಉಳಿದಿರುವುದಿಲ್ಲ.

ಬಿ) ಕಂಪನಿಯ ದಾಖಲೆಗಳ ಪ್ರಕಾರ, ಈ ಕೆಳಕಂಡ ಸೇವಾ ತೆರಿಗೆ ಹೊರತುಪಡಿಸಿ ಇತರೆ ಯಾವುದೇ ಅವಿವಾದಿತ ಮಾರಾಟ ತೆರಿಗೆ/ಆದಾಯ ತೆರಿಗೆ/ಸೀಮಾ ಸುಂಕ/ಸಂಪತ್ತು ತೆರಿಗೆ/ಅಬಕಾರಿ ಶುಲ್ಕ/ವ್ಯಾಟ್ ಜಮಾಗೊಳಿಸಲು ಬಾಕಿ ಇರುವುದಿಲ್ಲ.

8. ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಹಣಕಾಸು ಸಂಸ್ಥೆಗಳು, ಬ್ಯಾಂಕುಗಳು ಮತ್ತು ಸರ್ಕಾರಕ್ಕೆ ಸಾಲ ಅಥವಾ ಸಾಲವನ್ನು ಮರುಪಾವತಿಸುವಲ್ಲಿ ಕಂಪನಿಯು ಡೀಫಾಲ್ಟ್ ಆಗಿಲ್ಲ. ಕಂಪನಿಯು ಯಾವುದೇ ಡಿಬೆಂಚರ್‌ಗಳನ್ನು ನೀಡಿಲ್ಲ.

9. ಕಂಪನಿಯು ವರ್ಷದಲ್ಲಿ ಆರಂಭಿಕ ಸಾರ್ವಜನಿಕ ಕೊಡುಗೆ ಅಥವಾ ಹೆಚ್ಚಿನ ಸಾರ್ವಜನಿಕ ಕೊಡುಗೆಗಳ ಮೂಲಕ (ಸಾಲ ಉಪಕರಣಗಳು ಅಥವಾ ಅವಧಿಯ ಸಾಲಗಳನ್ನು ಒಳಗೊಂಡಂತೆ)

ಹಣವನ್ನು ಸಂಗ್ರಹಿಸಿಲ್ಲ, ಆದ್ದರಿಂದ ಆದೇಶದ ಷರತ್ತು 3(ix) ಅಡಿಯಲ್ಲಿ ವರದಿ ಮಾಡುವುದು ಕಂಪನಿಗೆ ಅನ್ವಯಿಸುವುದಿಲ್ಲ.

10. ನಮಗೆ ನೀಡಲಾಗಿರುವ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, (ಎ) ವಿಚಕ್ಷಣ ದಳದವರು ವರದಿಸಿರುವರೂ. 62.45ಲಕ್ಷ ಮೊತ್ತದ 712 ವಿದ್ಯುತ್ ಕಳ್ಳತನದ ಪ್ರಕರಣಗಳು ಅದರಲ್ಲಿ ರೂ.59.68 ಲಕ್ಷಗಳನ್ನು ದಿನಾಂಕ: 31.03.2020 ರೊಳಗೆ ವಸೂಲು ಮಾಡಲಾಗಿರುತ್ತದೆ. (ಬಿ) ನಂಜನಗೂಡು ಉಪವಿಭಾಗದ ನೌಕರರಿಂದ ತಾತ್ಕಾಲಿಕ ನಗದು ರೂ.105247 ದುರುಪಯೋಗವಾಗಿರುತ್ತದೆ. (ಸಿ) ಅರಸೀಕೆರೆ ವಿಭಾಗದ ಗಂಡಸಿ ಉಪವಿಭಾಗದ ನಗದು ರೂ.98304 ಮತ್ತು. (ಡಿ) ಕೊಳ್ಳೇಗಾಲ ಉಪ ವಿಭಾಗದಲ್ಲಿ ರೂ.97013 ಮತ್ತುರೂ.20 ತಾತ್ಕಾಲಿಕ ನಗದು ದುರುಪಯೋಗದ ಪ್ರಕರಣ ಬೆಳಕಿಗೆ ಬಂದಿದೆ.

11. ಕಂಪನಿಯು ಸರ್ಕಾರಿ ಕಂಪನಿಯಾಗಿರುವುದರಿಂದ ವ್ಯವಸ್ಥಾಪಕರ ಸಂಭಾವನೆಗೆ ಸಂಬಂಧಪಟ್ಟಂತೆ ಪರಿಚ್ಛೇದ 197ರ ನಿಯಮಗಳು ಕಂಪನಿಗೆ ಅನ್ವಯಿಸುವುದಿಲ್ಲ ಮತ್ತು ಹೀಗಾಗಿ ಆದೇಶದ ಪ್ಯಾರಾ 3 ರ ಕಲಂ (xi) ಕಂಪನಿಗೆ ಅನ್ವಯಿಸುವುದಿಲ್ಲ.

12. ನಮಗೆ ನೀಡಲಾಗಿರುವ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಕಂಪನಿಯು ನಿಧಿ ಕಂಪನಿಯಾಗಿರದ ಕಾರಣ ಆದೇಶದ ಪ್ಯಾರಾ 3 ರ ಕಲಂ (xii) ಕಂಪನಿಗೆ ಅನ್ವಯಿಸುವುದಿಲ್ಲ.

13. ನಮಗೆ ನೀಡಲಾಗಿರುವ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಕಂಪನಿಯು ಸಂಬಂಧಪಡುವ ವ್ಯಕ್ತಿಗಳೊಂದಿಗಿನ ವ್ಯವಹಾರಗಳ ಬಗ್ಗೆ ಒಪ್ಪಂದಗಳನ್ನು ಮಾಡಿಕೊಂಡಿರುವುದಿಲ್ಲ, ಹೀಗಾಗಿ ಆದೇಶದ ಪ್ಯಾರಾ 3 ರ ಕಲಂ (xiii) ರಡಿಯಲ್ಲಿ ವರದಿಸುವುದು ಕಂಪನಿಗೆ ಅನ್ವಯಿಸುವುದಿಲ್ಲ.

14. ನಮಗೆ ನೀಡಲಾಗಿರುವ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಹಾಗೂ ನಾವು ದಾಖಲೆಗಳನ್ನು ಪರಿಶೀಲಿಸಿರುವ ಪ್ರಕಾರ ಪ್ರಸಕ್ತ ವರ್ಷದಲ್ಲಿ ಕಂಪನಿಯು ಆದ್ಯತೆಯ ಹಂಚಿಕೆ, ಖಾಸಗಿ ಹಂಚಿಕೆ ಮಾಡಿರುವುದಿಲ್ಲ, ಮತ್ತು ಕಂಪನಿಯು ಯಾವುದೇ ಋಣ ಸಂಚಯ ಪತ್ರವನ್ನು ಬಿಡುಗಡೆ ಮಾಡಿರುವುದಿಲ್ಲ ಹೀಗಾಗಿ ಆದೇಶದ ಪ್ಯಾರಾ 3 ರ ಕಲಂ (xiv) ರಡಿಯಲ್ಲಿ ವರದಿಸುವುದು ಕಂಪನಿಗೆ ಅನ್ವಯಿಸುವುದಿಲ್ಲ.

15. ನಮಗೆ ನೀಡಲಾಗಿರುವ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಸಂಬಂಧಪಟ್ಟ ವ್ಯಕ್ತಿಗಳು ಅಥವಾ ನಿರ್ದೇಶಕರವರೊಂದಿಗೆ ಯಾವುದೇ ನಗದು ರಹಿತ ವ್ಯವಹಾರಗಳನ್ನು ನಡೆಸುವ ಬಗ್ಗೆ ಕರಾರು ಹೊಂದಿರುವುದಿಲ್ಲವಾದ್ದರಿಂದ ಆದೇಶದ ಪ್ಯಾರಾ 3 ರ ಕಲಂ (xv) ಕಂಪನಿಗೆ ಅನ್ವಯಿಸುವುದಿಲ್ಲ.

16. ನಮಗೆ ನೀಡಲಾಗಿರುವ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಕಾಯಿದೆ, 1934 ಪರಿಚ್ಛೇದ 45 ಐಎ ರಡಿಯಲ್ಲಿ ನೋಂದಾಯಿಸಿಕೊಳ್ಳುವುದು ಕಂಪನಿಗೆ ಅಗತ್ಯವಿರುವುದಿಲ್ಲ.

ರಮೇಶ ಎಂ.ವೈ ಅಂಡ್ ಕೋ
ಚಾರ್ಟರ್ಡ್ ಅಕೌಂಟೆಂಟ್ಸ್ ಪರವಾಗಿ
ಫರ್ಮ್ ರಿಜಿಸ್ಟ್ರೇಷನ್ ಸಂಖ್ಯೆ : 006202S

ಸಹಿ/-
ರಮೇಶ ಗೌಡ ಎಂ.ವೈ
ಪಾಲುದಾರರು
ಸದಸ್ಯತ್ವ ಸಂಖ್ಯೆ 202316
ಯುಡಿಐಎನ್ ಸಂಖ್ಯೆ 20202316ಎಎಎಎಎಯು9165

ಸ್ಥಳ : ಮೈಸೂರು

ದಿನಾಂಕ: 28.09.2020

ಅನುಬಂಧ-ಬಿ ಸ್ವತಂತ್ರ ಲೆಕ್ಕ ಪರಿಶೋಧಕರ ವರದಿ

(ಸಮ ದಿನಾಂಕದ ನಮ್ಮ ವರದಿಯು "ಇತರೆ ಕಾನೂನು ಮತ್ತು ನಿಯಂತ್ರಣ ಅವಶ್ಯಕತೆಗಳು" ಈ ಪರಿಚ್ಛೇದದಡಿಯಲ್ಲಿ ಪ್ಯಾರಾ 2 (ಎಫ್) ಗೆ ಉಲ್ಲೇಖಿಸಲ್ಪಟ್ಟಿರುತ್ತದೆ)

ಕಂಪನಿ ಕಾಯಿದೆ 2013 (ಕಾಯಿದೆ) ರ ಸೆಕ್ಷನ್ 143ರ ಉಪ ಸೆಕ್ಷನ್ 3ರ ಕಲಂ (i)ಅಧಿನಿಯಮದ ಅಡಿಯಲ್ಲಿ

ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣದ ವರದಿ

ನಾವುಗಳು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ (ಕಂಪನಿ) ಮಾರ್ಚ್,31.2019 ರಂದು ಕೊನೆಗೊಂಡ ವರ್ಷದಂದು ಕಂಪನಿಯ ಹಣಕಾಸು ತ:ಖ್ತೆಗಳ ಸಹಯೋಗದೊಂದಿಗೆ 31 ನೇ ಮಾರ್ಚ್ 2019 ಕ್ಕೆ ಕೊನೆಗೊಂಡಂತೆ ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣದ ವರದಿಯನ್ನು ಪರಿಶೋಧಿಸಿರುತ್ತೇವೆ.

ಆಂತರಿಕ ಹಣಕಾಸು ನಿಯಂತ್ರಣದ ಮೇಲೆ ಆಡಳಿತ ಮಂಡಳಿಯ ಜವಾಬ್ದಾರಿಗಳು:

ದಿ ಇನ್ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ರವರು ಹಣಕಾಸಿನ ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣದ ಮೇಲಿನ ಪರಿಶೋಧನೆ ಬಗ್ಗೆ ಹೊರಡಿಸಿರುವ ಗೈಡೆನ್ಸ್ ನೋಟ್‌ನಲ್ಲಿ ಹೇಳಿರುವಂತೆ ಕಂಪನಿಯು ಆಂತರಿಕ ನಿಯಂತ್ರಣದ ಅವಶ್ಯಕ ಅಂಶಗಳನ್ನು ಹಣಕಾಸಿನ ವರದಿಯ ಮಾನದಂಡದ ಮೇಲೆ, ಆಂತರಿಕ ಹತೋಟಿಯ ಆಧಾರದ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣವನ್ನು ಸ್ಥಾಪಿಸುವ ಜವಾಬ್ದಾರಿಯನ್ನು ಕಂಪನಿಯ ಮಂಡಳಿಯ ನಿರ್ದೇಶಕರು ಹೊಂದಿರುತ್ತಾರೆ. ಈ ಜವಾಬ್ದಾರಿಗಳೊಂದಿಗೆ ಕಂಪನಿಯ ಕಾಯಿದೆ 2013 ರಡಿಯಲ್ಲಿ ಅವಶ್ಯಕವಿರುವ ಕ್ಲುಪ್ತ ಸಮಯದಲ್ಲಿ ವಿಶ್ವಾಸನೀಯ ಹಣಕಾಸು ಮಾಹಿತಿಗಳನ್ನು ತಯಾರಿಸುವುದು, ನಿಖರ ಮತ್ತು ಪರಿಪೂರ್ಣವಾದ ಲೆಕ್ಕಗಳ ದಾಖಲೆಗಳು ನಿರ್ವಹಿಸುವುದು, ವಂಚನೆಯನ್ನು ಮತ್ತು ಇತರೆ ಕ್ರಮಬಾಹಿರ ಚಟುವಟಿಕೆಗಳನ್ನು ತಡೆಗಟ್ಟುವುದು ಹಾಗೂ ಕಂಡುಹಿಡಿಯುವುದು, ಕಂಪನಿಯ ಆಸ್ತಿಗಳನ್ನು ಸಂರಕ್ಷಿಸುವುದು, ಕಂಪನಿಯ ನಿಯಮಾವಳಿಗಳಿಗೆ ಬದ್ಧರಾಗಿರುವುದು, ಕಂಪನಿಯ ವ್ಯವಹಾರ ದಕ್ಷತೆಯಿಂದ ಮತ್ತು ಕ್ರಮಬದ್ಧವಾಗಿ ನಡೆಯುತ್ತಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವಿಕೆ, ಹೇರಳವಾಗಿರುವ ಆಂತರಿಕ ಹಣಕಾಸು ನಿಯಂತ್ರಣಗಳನ್ನು ನಿರ್ವಹಿಸುವ ಮತ್ತು ಕಾರ್ಯಗತಗೊಳಿಸಲು ಅಗತ್ಯ ವಿಧಾನಗಳನ್ನು ಹೊಂದುವುದು ಸಹ ಒಳಗೊಂಡಿರುತ್ತದೆ.

ಲೆಕ್ಕ ಪರಿಶೋಧಕರ ಜವಾಬ್ದಾರಿ:

ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇಲೆ ಹಣಕಾಸಿನ ವರದಿಗಳಿಗೆ ಸಂಬಂಧಿಸಿದಂತೆ ಕಂಪನಿಯ ಆಂತರಿಕ ಹಣಕಾಸಿನ ಹತೋಟಿಯ ಮೇಲೆ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿರುತ್ತದೆ. ಹಣಕಾಸಿನ ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಪರಿಶೋಧನೆಗೆ ಅನ್ವಯಿಸುವ ಇನ್ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ ಹೊರಡಿಸಿರುವ ಮಾರ್ಗದರ್ಶಿ ಟಿಪ್ಪಣಿ ಮತ್ತು ಕಾಯ್ದೆಯ ಭಾಗ 143(10) ರಡಿಯಲ್ಲಿ ಪರಿಶೋಧನಾ ಮಾನದಂಡಗಳ ಮಾರ್ಗದರ್ಶಿ ಸೂಚನೆಗೆ ಅನುಗುಣವಾಗಿ ನಾವು ಲೆಕ್ಕಪರಿಶೋಧನೆಯನ್ನು ಕೈಗೊಂಡಿರುತ್ತೇವೆ ಹಣಕಾಸಿನ ವರದಿಯ ಮೇಲೆ ಉಲ್ಲೇಖಿತ ಹಣಕಾಸು ವರದಿಗಳೊಂದಿಗೆ ಆಂತರಿಕ ಹಣಕಾಸು ನಿಯಂತ್ರಣ ಹೊಂದಲಾಗಿದೆಯೇ ಮತ್ತು ನಿರ್ವಹಿಸಲಾಗಿದೆಯೇ ಮತ್ತು ಎಲ್ಲಾ ರೀತಿಯಲ್ಲಿಯೂ ಪರಿಣಾಮಕಾರಿಯಾಗಿ ನಿಯಂತ್ರಿತವಾಗಿ ನಿರ್ವಹಿಸಿರುವ ಬಗ್ಗೆ ಯುಕ್ತವಾದ ಆಶ್ವಾಸನೆಯನ್ನು ಪಡೆದುಕೊಳ್ಳಲು ಯೋಜನಾಯುಕ್ತ ಪರಿಶೋಧನೆಯನ್ನು ನಿರ್ವಹಿಸಲು ಮಾರ್ಗಸೂಚಿ ಟಿಪ್ಪಣಿ ಮತ್ತು ಮಾನದಂಡದ ಅಗತ್ಯತೆ ನಮಗೆ ಇರುತ್ತದೆ. ಹಣಕಾಸು ವರದಿ ಮತ್ತು ಅವುಗಳ ಕಾರ್ಯಾಚರಣಾ ಪರಿಣಾಮಗಳ ಬಗ್ಗೆ ಆಂತರಿಕ ನಿಯಂತ್ರಣ ವ್ಯವಸ್ಥೆಯ ಅವಶ್ಯಕತೆ ಬಗ್ಗೆ ಪರಿಶೋಧನೆಯ ಸಾಕ್ಷ್ಯಗಳನ್ನು ಪಡೆದುಕೊಳ್ಳಲು ನಮ್ಮ ಪರಿಶೋಧನಾ ಕಾರ್ಯವಿಧಾನಗಳನ್ನು ಒಳಗೊಂಡಿರುತ್ತವೆ. ಹಣಕಾಸು ವರದಿಗಳಿಗೆ ಸಂಬಂಧಿಸಿದಂತೆ ಆಂತರಿಕ ಹಣಕಾಸು ನಿಯಂತ್ರಣಗಳ ನಮ್ಮ ಪರಿಶೋಧನೆಯು, ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ತಿಳುವಳಿಕೆಯನ್ನು ಹೊಂದುವುದು, ಗಂಡಾಂತರಗಳನ್ನು ಪರಿಶೀಲಿಸುವುದು, ಗಂಡಾಂತರದ ನಿರ್ಣಯದ ಆಧಾರದ ಮೇಲೆ ಆಂತರಿಕ

ನಿಯಂತ್ರಣದ ವಿನ್ಯಾಸ ಮತ್ತು ಕಾರ್ಯಕ್ಷಮತೆಯನ್ನು ಪರೀಕ್ಷಿಸುವುದು ಯೋಜನೆಯ ಪರಿಣಾಮಕಾರಿಯಾದ ನಿರ್ವಹಣೆಯ ಪರೀಕ್ಷಣೆ ಮತ್ತು, ಮೌಲ್ಯೀಕರಣ ಮಾಡುವುದಾಗಿರುತ್ತದೆ. ವಂಚನೆ ಅಥವಾ ತಪ್ಪಿನಿಂದಾಗಿ, ಹಣಕಾಸಿನ ತ:ಖ್ತೆಗಳಲ್ಲಿ ನಿರ್ಣಯಿಕರಿಸಿರುವ ಅಪಾಯದ ನಿರ್ಧರಣದ ವಿಷಯಿಕ ತಪ್ಪು ಹೇಳಿಕೆಗಳು ಒಳಗೊಂಡಂತೆ, ಲೆಕ್ಕ ಪರಿಶೋಧಕರ ನಿರ್ಣಯದ ಆಧಾರದ ಮೇಲೆ ನಿಯಮಾವಳಿಗಳನ್ನು ಆಯ್ಕೆ ಮಾಡಲಾಗಿರುತ್ತದೆ. ಹಣಕಾಸಿನ ವರದಿಯ ಮೇಲೆ ಕಂಪನಿಯ ಆಂತರಿಕ ಹಣಕಾಸಿನ ನಿಯಂತ್ರಣಗಳ ವ್ಯವಸ್ಥೆ ಮೇಲಿನ ಉಲ್ಲೇಖಿತ ಹಣಕಾಸು ವರದಿಗಳಿಗೆ ನಮ್ಮ ಪರಿಶೋಧನೆಯ ಅಭಿಪ್ರಾಯಕ್ಕೆ ಆಧಾರವನ್ನು ಒದಗಿಸಲು ನಾವು ಪಡೆದಿರುವ ಪರಿಶೋಧನೆ ಸಾಕ್ಷ್ಯಗಳು ಸಾಕಷ್ಟು ಮತ್ತು ಸಮರ್ಪಕವಾಗಿರುತ್ತವೆ ಎಂಬುದಾಗಿ ನಾವು ನಂಬಿರುತ್ತೇವೆ.

ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣದ ಅರ್ಥ:

ಸಾಮಾನ್ಯವಾಗಿ ಒಪ್ಪಿಕೊಂಡಿರುವ ಲೆಕ್ಕ ಪತ್ರಗಳ ನೀತಿಗಳಿಗೆ ಅನುಗುಣವಾಗಿ ಒಂದು ಕಂಪನಿಯ ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣವು ಉಲ್ಲೇಖಿತ ಹಣಕಾಸು ಹೇಳಿಕೆಗಳ ಕುರಿತು ವರದಿಸುವಿಕೆಯು ಬಾಹ್ಯ ಉದ್ದೇಶಕ್ಕಾಗಿ ಹಣಕಾಸು ತ:ಖ್ತೆಗಳನ್ನು ತಯಾರಿಸುವಿಕೆ ಮತ್ತು ನಂಬಿಕೆಯ ಹಣಕಾಸು ವರದಿಯ ಬಗ್ಗೆ ಸಮಂಜಸವಾದ ಭರವಸೆಯನ್ನು ಒದಗಿಸುವಲ್ಲಿ ರೂಪಿಸುವ ಒಂದು ಪ್ರಕ್ರಿಯೆಯಾಗಿರುತ್ತದೆ. ಹಣಕಾಸಿನ ಹೇಳಿಕೆಗಳಿಗೆ ಸಂಬಂಧಿಸಿದಂತೆ ಕಂಪನಿಯ ಆಂತರಿಕ ಹಣಕಾಸು ನಿಯಂತ್ರಣವು, ಈ ಕೆಳಗಿನ ನೀತಿಗಳನ್ನು ಮತ್ತು ಕಾರ್ಯವಿಧಾನಗಳನ್ನು ಒಳಗೊಂಡಿರುತ್ತದೆ.

1) ದಾಖಲೆಗಳ ನಿರ್ವಹಣೆಗೆ ಸಂಬಂಧಿಸಿದಂತೆ, ಅವು ಸಮಂಜಸವಾದ ವಿವರಗಳನ್ನು ಹೊಂದಿದ್ದು ಕಂಪನಿಯ ಆಸ್ತಿಗಳ ವ್ಯವಹಾರ ಮತ್ತು ಯೋಜನೆಗಳನ್ನು ನಿಖರವಾಗಿ ಮತ್ತು ಯುಕ್ತವಾಗಿ ಪ್ರತಿಫಲಿಸುವಂತೆ ಇರಬೇಕು.

2) ಸಾಮಾನ್ಯವಾಗಿ ಒಪ್ಪಿಕೊಂಡಿರುವ ಲೆಕ್ಕ ಪತ್ರಗಳ ನೀತಿಗಳಿಗೆ ಅನುಗುಣವಾಗಿ ಹಣಕಾಸು ತ:ಖ್ತೆಗಳನ್ನು ತಯಾರಿಸಲು ಅನುಮತಿಸಲು ಅವಶ್ಯಕವಿರುವಂತೆ ಆ ವ್ಯವಹಾರಗಳನ್ನು ದಾಖಲಿಸಲು ಸಮಂಜಸವಾದ ಆಶ್ವಾಸನೆಗಳನ್ನು ನೀಡುವುದು ಮತ್ತು ಕಂಪನಿಯ ಸ್ವೀಕೃತಿ ಮತ್ತು ವೆಚ್ಚಗಳು ಕಂಪನಿಯ ನಿರ್ದೇಶಕರುಗಳು ಮತ್ತು ಆಡಳಿತ ಮಂಡಳಿಯ ಪ್ರಮಾಣೀಕೃತ ಅನುಮೋದನೆ ಮೇರೆಗೆ ಮಾತ್ರ ಮಾಡುವಂತಿರಬೇಕು.

3) ಹಣಕಾಸು ತ:ಖ್ತೆಗಳಲ್ಲಿ ಗಣನೀಯ ಪರಿಣಾಮವನ್ನು ಬೀರಬಹುದಾದಂತಹವುಗಳಾದ ಕಂಪನಿಯ ಆಸ್ತಿಗಳನ್ನು ಅನಧಿಕೃತವಾಗಿ ಆಕ್ರಮಿಸಿಕೊಂಡಿರುವುದು, ಉಪಯೋಗಿಸುತ್ತಿರುವುದು, ಅಥವಾ ಪರಬಾರೆ ಮಾಡುವಂತಹ ಪ್ರಕರಣಗಳನ್ನು ತಡೆಗಟ್ಟುವ ಅಥವಾ ಸಕಾಲದಲ್ಲಿ ಪತ್ತೆಹಚ್ಚುವ ಬಗ್ಗೆ ಸಮಂಜಸವಾದ ಆಶ್ವಾಸನೆಯನ್ನು ನೀಡುವುದು.

ಹಣಕಾಸಿನ ವರದಿಗಳಿಗೆ ಉಲ್ಲೇಖದೊಂದಿಗೆ ಆಂತರಿಕ ಹಣಕಾಸು ನಿಯಂತ್ರಣದ ಅಂತರ್ಗತ ಮಿತಿಗಳು:

ಹಣಕಾಸಿನ ವರದಿಗಳಿಗೆ ಸಂಬಂಧಿಸಿದಂತೆ ಆಂತರಿಕ ಹಣಕಾಸು ನಿಯಂತ್ರಣಕ್ಕೆ ಅಂತರ್ಗತ ಮಿತಿಗಳು ಇರುವುದರಿಂದ, ಮೋಸದ ಒಳಸಂಚು ಅಥವಾ ನಿಯಂತ್ರಣ ಮೀರಿ ಯುಕ್ತವಲ್ಲದ ವ್ಯವಸ್ಥಾಪನೆಯು ಒಳಗೊಂಡಂತೆ ತಪ್ಪಿನಿಂದಾಗಿ ಅಥವಾ ವಂಚನೆಯಿಂದಾಗಿ ವಿಷಯಿಕ ತಪ್ಪು ಹೇಳಿಕೆಗಳು ಘಟಿಸಬಹುದು ಮತ್ತು ಪತ್ತೆಯಾಗದಿರಬಹುದು. ಅಲ್ಲದೆ, ಭವಿಷ್ಯದ ಅವಧಿಗೆ ಹಣಕಾಸು ವರದಿಗಳನ್ನು ಉಲ್ಲೇಖಿಸಿ ಆಂತರಿಕ ಹಣಕಾಸು ನಿಯಂತ್ರಣದ ಯಾವುದೇ ಅವಲೋಕನವು ಅಪಾಯಕ್ಕೆ ಒಳಪಟ್ಟಿದ್ದು, ನಿಬಂಧನೆಗಳಲ್ಲಿನ ಬದಲಾವಣೆಗಳಿಂದಾಗಿ ಅಥವಾ ನೀತಿಗಳು, ಶಿಥಿಲಗೊಳ್ಳಬಹುದಾದ ಕಾರ್ಯವಿಧಾನಗಳಿಂದಾಗಿ ಅನುಪಾಲನಾ ದೃಷ್ಟಿಕೋನವು ತೊಂದರೆಗೊಳಪಡುವ ಸಾಧ್ಯತೆಯಿದೆ.

ಅಭಿಪ್ರಾಯ:

ನಮ್ಮ ಅಭಿಪ್ರಾಯದಲ್ಲಿ, ನಮಗೆ ನೀಡಿರುವ ಅತ್ಯುತ್ತಮ ಮಾಹಿತಿಯ ಪ್ರಕಾರ ಮತ್ತು ನಮಗೆ ನೀಡಿದ ವಿವರಣೆಗಳ ಪ್ರಕಾರ, ಇನ್ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ ಆಫ್ ಇಂಡಿಯಾ ಹೊರಡಿಸಿರುವ ಮಾರ್ಗದರ್ಶಿ ಟಿಪ್ಪಣಿಯಲ್ಲಿ ತಿಳಿಸಲಾದ ಆಂತರಿಕ ನಿಯಂತ್ರಣದ ಅಗತ್ಯ ಅಂಶಗಳನ್ನು ಆಧರಿಸಿ ಅಥವಾ

ಪರಿಗಣಿಸುವ ಮಾನದಂಡಗಳ ಆಧಾರದ ಮೇಲೆ ಕಂಪನಿಯು ಹಣಕಾಸಿನ ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣವನ್ನು ಸ್ಥಾಪಿಸಿಲ್ಲ. ಈ ಕಾರಣದಿಂದಾಗಿ ಕಂಪನಿಯು ಹಣಕಾಸಿನ ವರದಿಗಾರಿಕೆಯ ಮೇಲೆ ಸಾಕಷ್ಟು ಆಂತರಿಕ ಹಣಕಾಸು ನಿಯಂತ್ರಣಗಳನ್ನು ಹೊಂದಿರುವ ಬಗ್ಗೆ ಮತ್ತು ಮಾರ್ಚ್ 31, 2019 ರಂತೆ ಅಂತಹ ಆಂತರಿಕ ಹಣಕಾಸು ನಿಯಂತ್ರಣಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದೆಯೇ ಎಂಬುದರ ಬಗ್ಗೆ ಸಾಕಷ್ಟು ಮತ್ತು ಸೂಕ್ತವಾದ ಪುರಾವೆಗಳನ್ನು ಪಡೆಯಲು ನಮಗೆ ಸಾಧ್ಯವಾಗುತ್ತಿಲ್ಲ.

ಕಂಪನಿಯ ಹಣಕಾಸು ಪಟ್ಟಿಗಳ ನಮ್ಮ ಲೆಕ್ಕಪರಿಶೋಧನೆಯಲ್ಲಿ ಅನ್ವಯಿಸಲಾದ ಲೆಕ್ಕಪರಿಶೋಧನೆಯ ಪರೀಕ್ಷೆಗಳ ಸ್ವರೂಪ, ಸಮಯ ಮತ್ತು ವ್ಯಾಪ್ತಿಯನ್ನು ನಿರ್ಧರಿಸುವಲ್ಲಿ ಮೇಲೆ ವರದಿ ಮಾಡಲಾದ ಹಕ್ಕು ತ್ಯಾಗ ನಾವು ಪರಿಗಣಿಸಿದ್ದೇವೆ ಮತ್ತು ಹಕ್ಕು ತ್ಯಾಗ ಕಂಪನಿಯ ಹಣಕಾಸು ಪಟ್ಟಿಗಳ ಬಗ್ಗೆ ನಮ್ಮ ಅಭಿಪ್ರಾಯದ ಮೇಲೆ ಪರಿಣಾಮ ಬೀರುವುದಿಲ್ಲ.

ರಮೇಶ ಎಂ.ವೈ ಅಂಡ್ ಕೋ
ಚಾರ್ಟರ್ಡ್ ಅಕೌಂಟೆಂಟ್ಸ್ ಪರವಾಗಿ
ಫರ್ಮ್ ರಿಜಿಸ್ಟ್ರೇಷನ್ ಸಂಖ್ಯೆ : 006202S

ಸಹಿ/–
ರಮೇಶ ಗೌಡ ಎಂ.ವೈ
ಪಾಲುದಾರರು
ಸದಸ್ಯತ್ವ ಸಂಖ್ಯೆ 202316
ಯುಡಿಐಎನ್ ಸಂಖ್ಯೆ 20202316ಎಎಎಎಎಯು9165

ಸ್ಥಳ : ಮೈಸೂರು

ದಿನಾಂಕ: 28.09.2020

ಅನುಬಂಧ–1

ಸೆಕ್ರೆಟೇರಿಯಲ್ ಪರಿಶೋಧನಾ ವರದಿ

31ನೇ ಮಾರ್ಚ್, 2020ರಂದು ಅಂತ್ಯಗೊಂಡ ಆರ್ಥಿಕ ವರ್ಷ

[ಕಂಪನಿ ಕಾಯ್ದೆ, 2013ರ ಕಲಂ 204(1) ಹಾಗೂ ಕಂಪನಿಗಳು (ಆಡಳಿತವರ್ಗದ ಸಿಬ್ಬಂದಿಗಳ ನೇಮಕಾತಿ ಮತ್ತು ಸಂಭಾವನೆ) ನಿಯಮಗಳು, 2014ರ ಪ್ರಕಾರ ನಿಯಮ ಸಂಖ್ಯೆ 09 ರನ್ವಯ]

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ಸದಸ್ಯರಿಗೆ,

1. ಸಿನ್ ಯು40109ಕೆಎ2004ಎಸ್‌ಜಿಸಿ035177 ಹೊಂದಿರುವ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತವು (ಇನ್ನೂ ಮುಂದೆ ಕಂಪನಿ ಎಂದು ಕರೆಯಲಾಗುವುದು) ಅನ್ವಯವಾಗುವ ಶಾಸನಬದ್ಧ ನಿಬಂಧನೆಗಳು ಮತ್ತು ಉತ್ತಮ ಕಾರ್ಪೋರೇಟ್ ಪದ್ಧತಿಗಳನ್ನು ಅನುಸರಿಸಿರುವ ಬಗ್ಗೆ ಸೆಕ್ರೆಟೇರಿಯಲ್ ಪರಿಶೋಧನೆಯನ್ನು ನಾನು ಕೈಗೊಂಡಿರುತ್ತೇನೆ. ಸೆಕ್ರೆಟೇರಿಯಲ್ ಪರಿಶೋಧನೆಯನ್ನು ಕಾರ್ಪೋರೇಟ್ ನಡತೆ / ಶಾಸನಬದ್ಧ ಅನುಸರಣೆಗಳ ಮೌಲ್ಯಮಾಪನ ಆಧಾರದಲ್ಲಿ ಹಾಗೂ ನನ್ನ ಅಭಿಪ್ರಾಯಗಳ ಆಧಾರದಲ್ಲಿ ಜರುಗಿಸಲಾಗಿದೆ.

2. ಕಂಪನಿಯ ಪುಸ್ತಕಗಳು, ಕಾಗದ ಪತ್ರಗಳು, ನಡಾವಳಿ ಪುಸ್ತಕಗಳು, ನಮೂನೆಗಳು ಹಾಗೂ ಸಲ್ಲಿಸಲಾದ ರಿಟರ್ನ್ಸ್‌ಗಳು ಹಾಗೂ ಕಂಪನಿಯು ನಿರ್ವಹಿಸುತ್ತಿರುವ ಇತರ ದಾಖಲೆಗಳ ಪರಿಶೀಲನೆ ಆಧಾರದಲ್ಲಿ ಹಾಗೂ ನಿಗಮದ ಅಧಿಕಾರಿಗಳು, ಏಜೆಂಟರು ಹಾಗೂ ಅಧಿಕೃತ ಪ್ರತಿನಿಧಿಗಳು ಸೆಕ್ರೆಟೇರಿಯಲ್ ಪರಿಶೀಲನಾ ಅವಧಿಯಲ್ಲಿ ನೀಡಿರುವ ಮಾಹಿತಿಗಳ ಆಧಾರದ ಮೇಲೆ ಹಾಗೂ ಅನುಬಂಧದಲ್ಲಿ ಲಗತ್ತಿಸಿರುವ ನನ್ನ ಪ್ರತ್ಯೇಕ ಪತ್ರಕ್ಕೆ ಒಳಪಟ್ಟು, 31ನೇ ಮಾರ್ಚ್, 2020ಕ್ಕೆ ಅಂತ್ಯವಾಗುವ ಆರ್ಥಿಕ ವರ್ಷದ ಪರಿಶೋಧನಾ ವರದಿಯಲ್ಲಿ ಈ ಕೆಳಗೆ ವಿವರಿಸಿರುವ ಶಾಸನಬದ್ಧ ನಿಯಮಗಳನ್ನು ಪಾಲನೆ ಮಾಡಿರುವ ಬಗ್ಗೆ ಮತ್ತು ಕಂಪನಿಯು ಅಗತ್ಯತೆಗೆ ಅನುಸಾರವಾಗಿ ಮಂಡಳಿ ಪ್ರಕ್ರಿಯೆಗಳ ಕಾರ್ಯವಿಧಾನಗಳನ್ನು ಮುಂದೆ ನೀಡಿರುವ ವರದಿಗಳಿಗೆ ಒಳಪಟ್ಟು, ಅಳವಡಿಸಿರುವುದನ್ನು ಈ ಮೂಲಕ ವರದಿ ಮಾಡುತ್ತಿದ್ದೇನೆ.

3. ಈ ಕೆಳಕಂಡ ಕಾನೂನುಗಳನ್ವಯ, 31ನೇ ಮಾರ್ಚ್, 2020ಕ್ಕೆ ಅಂತ್ಯವಾಗುವ ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ ಕಂಪನಿಯು ನಿರ್ವಹಿಸಿರುವ ಪುಸ್ತಕಗಳು, ಕಾಗದ ಪತ್ರಗಳು, ನಡಾವಳಿ ಪುಸ್ತಕಗಳು, ನಮೂನೆಗಳು ಮತ್ತು ಸಲ್ಲಿಸಲಾದ ರಿಟರ್ನ್ಸ್‌ಗಳು ಹಾಗೂ ಇತರೆ ದಾಖಲೆಗಳನ್ನು ನಾನು ಪರೀಕ್ಷೆ ಮಾಡಿರುತ್ತೇನೆ.

   ಅ) ಕಂಪನಿ ಕಾಯ್ದೆ, 2013 (ಕಾಯ್ದೆ) ಮತ್ತು ಅದರಡಿಯಲ್ಲಿನ ನಿಯಮಗಳು;

   ಆ) ಭದ್ರತೆ ಕರಾರು (ನಿಯಂತ್ರಣ) ಕಾಯ್ದೆ, 1956 (ಎಸ್‌ಸಿಆರ್‌ಎ) ಮತ್ತು ಅದರಡಿಯಲ್ಲಿನ ನಿಯಮಗಳು;

   ಇ) ಠೇವಣಿಗಳ ಕಾಯ್ದೆ, 1996 ಮತ್ತು ಅದರಡಿಯಲ್ಲಿನ ರೆಗ್ಯುಲೇಷನ್‌ಗಳು ಮತ್ತು ಉಯಪ ಕಾನೂನುಗಳು;

   ಉ) ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ, 1999 ಮತ್ತು ಅದರಡಿಯಲ್ಲಿ ವಿದೇಶಿ ನೇರ ಬಂಡವಾಳ, ಸಾಗರೋತ್ತರ ನೇರ ಹೂಡಿಕೆ ಮತ್ತು ಬಾಹ್ಯ ವಾಣಿಜ್ಯ ಸಾಲಗಳಿಗೆ ಸಂಬಂಧಿಸಿದ ನಿಯಮಗಳು ಮತ್ತು ರೆಗ್ಯುಲೇಷನ್‌ಗಳು;

   ಊ) ವಿದ್ಯುತ್ ಕಾಯ್ದೆ, 2003 ಮತ್ತು ಅದರಡಿಯಲ್ಲಿನ ನಿಯಮಗಳು.

4. ಭಾರತೀಯ ಕಂಪನಿ ಕಾರ್ಯದರ್ಶಿ ಸಂಸ್ಥೆಯು ಮಂಡಳಿ ನಿರ್ದೇಶಕರ ಸಭೆಗಳು ಹಾಗೂ ಸಾಮಾನ್ಯ ಸಭೆಗಳಿಗೆ ಸಂಬಂಧಿಸಿದಂತೆ ಹೊರಡಿಸಿರುವ ಸೆಕ್ರೆಟೇರಿಯಲ್ ಸ್ಟ್ಯಾಂಡರ್ಡ್ಸ್‌ಗಳ ಅನ್ವಯವಾಗುವ ನಿಯಮಗಳ ಪಾಲನೆಗಳನ್ನು ಸಹ ನಾನು ಪರಿಶೀಲಿಸಿದೇನೆ.

5. ನೇರ ಮತ್ತು ನೇರವಲ್ಲದ ತೆರಿಗೆ ಕಾನೂನುಗಳು ಇತ್ಯಾದಿ ಅನ್ವಯವಾಗುವ ಆರ್ಥಿಕ ಕಾನೂನುಗಳು ಶಾಸನಬದ್ಧ ಆರ್ಥಿಕ ಪರಿಶೋಧನೆ ಮತ್ತು ಇತರ ಸಂಬಂಧಿತ ವೃತಿಪರರಿಂದ ಪರಿಶೀಲನೆಗೆ ಒಳಪಡುವ ಕಾರಣ, ಕಂಪನಿಯು ಅವುಗಳ ಪಾಲನೆ ಮಾಡಿರುವ ಬಗ್ಗೆ ನಾನು ಪರಿಶೀಲನೆ ಮಾಡಿರುವುದಿಲ್ಲ.

6. ಕಂಡಿಕೆ 8 ರಲ್ಲಿ ತಿಳಿಸಿರುವ ಆಕ್ಷೇಪಣೆಗಳಿಗೆ ಒಳಪಟ್ಟು, ಪರಿಶೀಲನಾ ಅವಧಿಯಲ್ಲಿ ಕಂಪನಿಯು ಅನ್ವಯವಾಗುವ ಕಾಯ್ದೆ, ನಿಯಮಗಳು, ರೆಗ್ಯುಲೇಷನ್‌ಗಳು, ಮಾರ್ಗಸೂಚಿಗಳು ಇತ್ಯಾದಿಗಳನ್ನು ಪಾಲನೆ ಮಾಡಿರುತ್ತದೆ.

7. ಕಂಡಿಕೆ 8ರಲ್ಲಿ ತಿಳಿಸಿರುವ ಆಕ್ಷೇಪಣೆಗಳಿಗೆ ಒಳಪಟ್ಟು, ನಾನು ಕೆಳಕಂಡಂತೆ ಮತ್ತಷ್ಟು ವರದಿ ಮಾಡುತ್ತಿದ್ದೇನೆ.

7.1

ಅ) ವರದಿ ವರ್ಷದಲ್ಲಿ ಮಂಡಳಿ ಹಾಗೂ ಸಮಿತಿ ಸಭೆಗಳ ಬಗ್ಗೆ ಸಮರ್ಪಕವಾಗಿ ಮುಂಗಡವಾಗಿ ಸೂಚನಾ ಪತ್ರಗಳನ್ನು ಎಲ್ಲಾ ನಿರ್ದೇಶಕರಿಗೆ ನೀಡಲಾಗಿದೆ; ಸದರಿ ಸೂಚನಾ ಪತ್ರಗಳ ಜೊತೆಗೆ ಕಾರ್ಯಸೂಚಿ ವಿಷಯಗಳ ಬಗ್ಗೆ ವಿಸ್ತೃತ ಟಿಪ್ಪಣಿಗಳು ಹಾಗೂ ಸದರಿ ಸಭೆಗಳ ಕರಡು ನಡಾವಳಿಗಳನ್ನು ನೀಡಲಾಗಿದೆ; ನಿರ್ದೇಶಕರು ಕಾರ್ಯಸೂಚಿ ವಿಷಯಗಳ ಬಗ್ಗೆ ಸಭೆಯ ಪೂರ್ವದಲ್ಲಿ ಅಗತ್ಯ ಮಾಹಿತಿ ಹಾಗೂ ಸ್ಪಷ್ಟನೆಗಳನ್ನು ಪಡೆಯಲು ವ್ಯವಸ್ಥೆ ರೂಪಿಸಲಾಗಿದೆ ಮತ್ತು ಸಭೆಯಲ್ಲಿ ಅರ್ಥಪೂರ್ಣವಾಗಿ ಭಾಗವಹಿಸಲು ಕ್ರಮ ಕೈಗೊಳ್ಳಲಾಗಿದೆ. ಬಹುಮತದ ನಿರ್ಧಾರಗಳನ್ನು ಕೈಗೊಳ್ಳಲಾಗಿದ್ದು, ವಿರೋಧ ವ್ಯಕ್ತಪಡಿಸಿರುವ ಸದಸ್ಯರ ಅಭಿಪ್ರಾಯ ಇತ್ಯಾದಿಗಳನ್ನು ನಡಾವಳಿಗಳಲ್ಲಿ ದಾಖಲಿಸಲಾಗಿದೆ.

ಆ) ಸದಸ್ಯರ ಹಾಗೂ ನಿರ್ದೇಶಕರ ಸಭೆಗಳನ್ನು ಜರುಗಿಸುವ ಸಂದರ್ಭಗಳಲ್ಲಿ ಕಂಪನಿಯು ಸಮರ್ಪಕವಾದ ಮಂಡಳಿ ಪ್ರಕ್ರಿಯೆಯನ್ನು ಅನುಸರಿಸಿರುತ್ತದೆ; ಸದಸ್ಯರ ಸಾಮಾನ್ಯ ಸಭೆಗಳ ನಡಾವಳಿಗಳು, ನಿರ್ದೇಶಕರ ಮಂಡಳಿ ಮತ್ತು ಸಮಿತಿ ಸಭೆಗಳ ನಡಾವಳಿಗಳನ್ನು ದಾಖಲಿಸಲು ಕಂಪನಿಯು ಸಮರ್ಪಕ ಪುಸ್ತಕಗಳನ್ನು ನಿರ್ವಹಿಸಿರುತ್ತದೆ; ಇ-ವೋಟಿಂಗ್ ಮೂಲಕ ಹೊರಡಿಸಿರುವ ನಿರ್ಣಯಗಳು, ಇತ್ಯಾದಿಗಳನ್ನು ಸಾಮಾನ್ಯ ಸಭೆಗಳ ನಡಾವಳಿ ಪುಸ್ತಕದಲ್ಲಿ ದಾಖಲಿಸಲಾಗಿದೆ.

7.2 ಪರಿಶೀಲನಾ ಅವಧಿಯಲ್ಲಿ ನಿರ್ದೇಶಕರ ಮಂಡಳಿಯ ಸಂಯೋಜನೆಯ ಬದಲಾವಣೆಗಳನ್ನು ಕಾಯ್ದೆಯ ನಿಯಮಗಳನ್ನು ಪಾಲಿಸಿ ಮಾಡಲಾಗಿದೆ.

7.3 ಈ ಕೆಳಕಂಡ ಘಟನೆಗಳು ಜರುಗಿರುವುದಿಲ್ಲ.

i. ಸಾರ್ವಜನಿಕ, ಆದ್ಯತೆ ನೀಡುವ ಷೇರುಗಳ ಬಿಡುಗಡೆ ಅಥವಾ ಸಾಲಪತ್ರಗಳು ಅಥವಾ ಸ್ವೆಟ್ ಈಕ್ವಿಟಿ;

ii. ಭದ್ರತಾ ಪತ್ರಗಳ ಮರು ಕೊಳ್ಳುವಿಕೆ;

iii. ಕಂಪನಿ ಕಾಯ್ದೆ, 2013ರ ಕಲಂ 180 ರನ್ವಯ ಸದಸ್ಯರು ಕೈಗೊಂಡಿರುವ ಪ್ರಮುಖ ನಿರ್ಧಾರಗಳು;

iv. ವಿಲೀನಾ, ಏಕೀಕರಣ, ಪುನರ್‌ರಚನೆ ಇತ್ಯಾದಿ;

v. ವಿದೇಶಿ ತಾಂತ್ರಿಕ ಸಹಯೋಗಗಳು.

7.4 ಕಂಪನಿಯು ಅನ್ವಯವಾಗುವ ಕಾರ್ಮಿಕ ಕಾನೂನುಗಳನ್ನು ಸಾಮಾನ್ಯವಾಗಿ ಪಾಲಿಸುತ್ತಿದ್ದು, ಕೆಲವು ಲೋಪದೋಷಗಳನ್ನು ಸರಿಪಡಿಸುವ ಪ್ರಕ್ರಿಯೆಯು ಜಾರಿಯಲ್ಲಿದೆ.

8. ಆಕ್ಷೇಪಣೆ:

8.1 ಕಂಪನಿ ಕಾಯ್ದೆ, 2013ರ ಕಲಂ 149ರ ಪ್ರಕಾರ ಕಂಪನಿಯು ತನ್ನ ಮಂಡಳಿಗೆ ಸ್ವತಂತ್ರ ನಿರ್ದೇಶಕರನ್ನು ನೇಮಕ ಮಾಡಿರುವುದಿಲ್ಲ. ಸ್ವತಂತ್ರ ನಿರ್ದೇಶಕರನ್ನು ನೇಮಕ ಮಾಡಲು ಕಂಪನಿಯು ಕರ್ನಾಟಕ ಸರ್ಕಾರಕ್ಕೆ ಪದೇ ಪದೇ ಮನವಿ ಮಾಡಿರುತ್ತದೆ.

8.2 ಸ್ವತಂತ್ರ ನಿರ್ದೇಶಕರ ಅನುಪಸ್ಥಿತಿಯಲ್ಲಿ ಕಂಪನಿಯು ನಿಯಮಗಳ ಪ್ರಕಾರ ಲೆಕ್ಕಪರಿಶೋಧನಾ ಸಮಿತಿ, ನಾಮನಿರ್ದೇಶನ ಹಾಗೂ ಸಂಭಾವನೆ ಸಮಿತಿ ಮತ್ತು ಸಾಂಸ್ಥಿಕ ಸಾಮಾಜಿಕ ಜವಬ್ದಾರಿ ಸಮಿತಿಗಳನ್ನು ರಚಿಸಲು ಹಾಗೂ ಸಭೆಗಳನ್ನು ಜರುಗಿಸಲು ಸಾಧ್ಯವಾಗಿರುವುದಿಲ್ಲ.

ಸಹಿ/–
ಕೆಎನ್ ನಾಗೇಶ ರಾವ್

ಬೆಂಗಳೂರು — **ಯುಡಿಐಎನ್ ಸಂಖ್ಯೆ. ಎಫ್ 003000ಬಿ000719760**

16ನೇ ಸಪ್ಟೆಂಬರ್, 2020 — **ವೃತ್ತಿಪರ ಕಂಪನಿ ಕಾರ್ಯದರ್ಶಿ**

ಎಫ್‌ಸಿಎಸ್ 3000
ಸಿಪಿ 12861
ಪೀರ್ ರಿವ್ಯೂ
ಯೂನಿಕ್ ಐಡಿ ಸಂಖ್ಯೆ.
I2014**ಕೆಆರ್**1122000

ಆರ್ಥಿಕ ವರ್ಷ 2019–20ರ ಸೆಕ್ರೆಟೇರಿಯಲ್ ಪರಿಶೋಧನಾ ವರದಿಯ ಅನುಬಂಧ

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ಸದಸ್ಯರಿಗೆ,

ಸರಿಸಮಾನ ದಿನಾಂಕಿತ ನನ್ನ ವರದಿಯನ್ನು ಈ ಪತ್ರದೊಂದಿಗೆ ಓದಬೇಕು.

1. ಸೆಕ್ರೆಟೇರಿಯಲ್ ದಾಖಲೆಗಳ ನಿರ್ವಹಣೆ ಮತ್ತು ಅನ್ವಯವಾಗುವ ಕಾನೂನುಗಳು, ನಿಯಮಗಳು, ರೆಗ್ಯುಲೇಷನ್‌ಗಳು, ಸ್ಟ್ಯಾಂಡರ್ಡ್ಸ್‌ಗಳ ಪಾಲನೆಯ ಜವಾಬ್ದಾರಿಯು ಕಂಪನಿಯ ಆಡಳಿತವರ್ಗದ್ದಾಗಿರುತ್ತದೆ. ನನ್ನ ಪರಿಶೋಧನೆಯ ಆಧಾರದಲ್ಲಿ ಈ ಸೆಕ್ರೆಟೇರಿಯಲ್ ದಾಖಲೆಗಳು ಹಾಗೂ ಪಾಲನೆಗಳ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವುದು ನನ್ನ ಜವಾಬ್ದಾರಿಯಾಗಿರುತ್ತದೆ.

2. ಸೆಕ್ರೆಟೇರಿಯಲ್ ದಾಖಲೆಗಳಲ್ಲಿನ ಅಂಶಗಳ ನೈಜತೆಯ ಬಗ್ಗೆ ಸೂಕ್ತವಾದ ಆಶ್ವಾಸನೆಯನ್ನು ಪಡೆಯಲು ಸಮರ್ಪಕವಾದ ಪರಿಶೋಧನಾ ಪದ್ಧತಿ ಹಾಗೂ ಪ್ರಕ್ರಿಯೆಗಳನ್ನು ನಾನು ಅನುಸರಿಸಿದ್ದೇನೆ. ಸೆಕ್ರೆಟೇರಿಯಲ್ ದಾಖಲೆಗಳಲ್ಲಿ ಮಾಹಿತಿಗಳು ಸರಿಯಾಗಿ ಪ್ರತಿಬಿಂಬಿತವಾಗಿರುವುದನ್ನು ದೃಢೀಕರಿಸಲು ಟೆಸ್ಟ್ ಆಧಾರದಲ್ಲಿ ಪರಿಶೀಲನೆ ನಡೆಸಲಾಗಿದೆ. ನಾನು ಅನುಸರಿಸಿರುವ ಪ್ರಕ್ರಿಯೆಗಳು ಹಾಗೂ ವಿಧಾನಗಳು ನನ್ನ ಅಭಿಪ್ರಾಯಗಳಿಗೆ ನ್ಯಾಯಯುತ ಆಧಾರವನ್ನು ಒದಗಿಸುತ್ತವೆ ಎಂದು ನಂಬಿದ್ದೇನೆ.

3. ಕಂಪನಿಯ ಆರ್ಥಿಕ ದಾಖಲೆಗಳು ಮತ್ತು ಲೆಕ್ಕಪತ್ರಗಳ ನೈಜತೆ ಮತ್ತು ಯುಕ್ತತೆಗಳ ಬಗ್ಗೆ ನಾನು ಪರಿಶೀಲಿಸಿರುವುದಿಲ್ಲ.

4. ಕಾನೂನುಗಳು, ನಿಯಮಗಳು ಮತ್ತು ರೆಗ್ಯುಲೇಷನ್‌ಗಳು ಪಾಲನೆಯಾಗಿರುವ ಬಗ್ಗೆ ಮತ್ತು ಘಟನಾವಳಿಗಳು ಜರುಗಿರುವ ಬಗ್ಗೆ ಅಗತ್ಯವಿದ್ದಲ್ಲಿ, ಆಡಳಿತ ವರ್ಗದ ಉತ್ತರವನ್ನು ಪಡೆದಿದ್ದೇನೆ.

ಸಹಿ/–

ಬೆಂಗಳೂರು

ಕೆಎನ್ ನಾಗೇಶ ರಾವ್

16ನೇ ಸಪ್ಟೆಂಬರ್, 2020

ಯುಡಿಐಎನ್ ಸಂಖ್ಯೆ. ಎಫ್ 003000ಬಿ000719760

ವೃತ್ತಿಪರ ಕಂಪನಿ ಕಾರ್ಯದರ್ಶಿ
ಎಫ್‌ಸಿಎಸ್ 3000 ಸಿಪಿ 12861
ಪೀರ್ ರಿವ್ಯೂ ಯೂನಿಕ್ ಐಡಿ ಸಂಖ್ಯೆ.
I2014**ಕೆಆರ್**1122000

ಕಂಪನಿ ಕಾಯ್ದೆ 2013 ರ ಕಲಂ 143(6)(b)ಅಡಿಯಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ 31 ನೇ ಮಾರ್ಚ್ 2020 ರ ಅವಧಿಗೆ ಮುಕ್ತಾಯಗೊಂಡ ಲೆಕ್ಕಪತ್ರಗಳ ಕುರಿತು ಭಾರತದ ನಿಯಂತ್ರಕರು ಹಾಗೂ ಮಹಾಲೇಖಪಾಲರ ಅಭಿಪ್ರಾಯಗಳು.

ಕಂಪನಿ ಕಾಯ್ದೆ 2013ರಲ್ಲಿ ನಿಗಧಿಪಡಿಸಿರುವ ಆರ್ಥಿಕ ವರದಿ ಚೌಕಟ್ಟಿನಲ್ಲಿ **ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರು ದಿನಾಂಕ 31 ಮಾರ್ಚ್ 2020** ರಂದು ಕೊನೆಗೊಂಡ ವರ್ಷದ ಆರ್ಥಿಕ ಲೆಕ್ಕಪತ್ರಗಳನ್ನು ತಯಾರು ಮಾಡುವುದು ಕಂಪನಿಯ ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ. ಕಂಪನಿ ಕಾಯ್ದೆ **2013ರ** ಕಲಂ **139(5)**ರ ಅಡಿಯಲ್ಲಿ ಭಾರತದ ನಿಯಂತ್ರಕರು ಹಾಗೂ ಮಹಾಲೇಖಪಾಲರಿಂದ ನೇಮಕಗೊಂಡ ಶಾಸನಬದ್ಧ ಲೆಕ್ಕಪರಿಶೋಧಕರು ಅವರ ವೃತ್ತಿ ಸಂಸ್ಥೆಯಾದ ಭಾರತೀಯ ಲೆಕ್ಕಪರಿಶೋಧಕರ ಸಂಸ್ಥೆಯು ನಿಗಧಿಪಡಿಸಿರುವ ಪರಿಶೋಧನೆ ಮತ್ತು ಭರವಸೆಯ ಮಾನದಂಡದಂತೆ ಸ್ವತಂತ್ರ ತನಿಖೆಯ ಆಧಾರದ ಮೇಲೆ ಈ ಲೆಕ್ಕಪತ್ರಗಳ ಬಗ್ಗೆ ಕಂಪನಿ ಕಾಯ್ದೆ 2013ರ ಕಲಂ **143(10)** ರ ಅಡಿಯಲ್ಲಿ ಅಭಿಪ್ರಾಯವನ್ನು ವ್ಯಕ್ತಪಡಿಸುವ ಜವಾಬ್ದಾರಿಯನ್ನು ಹೊಂದಿರುತ್ತರೆ. ಹಿಂದಿನ ಪರಿಶೋಧನಾ ವರದಿ ದಿನಾಂಕ:20.08.2020 ರನ್ನು ಸೂಪರ್ ಸೀಡ್‌ಗೊಳಿಸಿ ಪರಿಷ್ಕೃತ ಲೆಕ್ಕ ಪರಿಶೋಧನಾ ವರದಿ ದಿನಾಂಕ:28.09.2020 ಈ ಕಾರ್ಯವನ್ನು ಕಾರ್ಯಗತಗೊಳಿಸಿರುತ್ತಾರೆ.

ನಾನು, ಭಾರತದ ನಿಯಂತ್ರಕರು ಮತ್ತು ಮಹಾಲೇಖಪಾಲರ ಪರವಾಗಿ **ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರು,** ಇದರ ದಿನಾಂಕ **31 ಮಾರ್ಚ್ 2020** ರಂದು ಕೊನೆಗೊಂಡ ವರ್ಷಕ್ಕೆ ಆರ್ಥಿಕ ಲೆಕ್ಕಪತ್ರಗಳನ್ನು ಕಲಂ **143 (6)** (ಎ) ರ ಅಡಿಯಲ್ಲಿ ಪೂರಕ ಪರಿಶೋಧನೆ ಮಾಡಿರುತ್ತೇನೆ. ಈ ಪೂರಕ ಪರಿಶೋಧನೆಯನ್ನು ಸ್ವತಂತ್ರವಾಗಿ ನಿರ್ವಹಿಸಿದ್ದು ಶಾಸನಬದ್ಧ ಲೆಕ್ಕಪರಿಶೋಧಕರ ಕೆಲಸದ ದಾಖಲಾತಿಗಳನ್ನು ನೋಡಿರುವುದಿಲ್ಲ ಮತ್ತು ಶಾಸನಬದ್ಧ ಲೆಕ್ಕಪರಿಶೋಧಕರ ಮತ್ತು ಕಂಪನಿಯ ಸಿಬ್ಬಂದಿಯ ವಿಚಾರಣೆ ಮತ್ತು ಕೆಲವೊಂದು ಲೆಕ್ಕಪತ್ರ ದಾಖಲಾತಿಗಳ ಆಯ್ದ ಪರೀಕ್ಷೆಗೆ ಮಾತ್ರ ಪ್ರಾಥಮಿಕವಾಗಿ ಸೀಮಿತಗೊಂಡಿರುತ್ತದೆ.

ನನ್ನ ಪೂರಕ ಪರಿಶೋಧನೆಯಲ್ಲಿ ಗಮನಿಸಲಾದ ಪರಿಶೋಧನಾ ಅಂಶಗಳ ಪರಿಣಾಮವನ್ನು ಲೆಕ್ಕಗಳ ಭಾಗವಾದ ಲೆಕ್ಕ ಟಿಪ್ಪಣಿ ಸಂಖ್ಯೆ 59 ರಲ್ಲಿ ಸೂಚಿಸಿರುವಂತೆ ಆಡಳಿತ ಮಂಡಳಿಯು ಆರ್ಥಿಕ ಲೆಕ್ಕಪತ್ರಗಳಲ್ಲಿ ಮತ್ತು ಲೆಕ್ಕಪರಿಶೋಧಕರ ವರದಿಗೆ ಮಾಡಿರುವ ಪರಿಷ್ಕರಣೆಯ ದೃಷ್ಟಿಯಿಂದ ಕಂಪನಿ ಕಾಯ್ದೆಯ ಕಲಂ 143(6)(ಬಿ)ರ ಅಡಿಯಲ್ಲಿ ಇನ್ನು ಯಾವುದೇ ಅಭಿಪ್ರಾಯಗಳಿಲ್ಲ ಅಥವಾ ಶಾಸನಬದ್ಧ ಲೆಕ್ಕಪರಿಶೋಧಕರ ವರದಿಗೆ ಸೇರಿಸಬೇಕಾದ ಯಾವುದೇ ತಿದ್ದುಪಡಿ ಇರುವುದಿಲ್ಲ.

ಭಾರತದ ನಿಯಂತ್ರಕರು ಮತ್ತು ಮಹಾಲೇಖಪಾಲರ ಪರವಾಗಿ

ಸಹಿ/–

ಸ್ಥಳ : ಬೆಂಗಳೂರು

ದಿನಾಂಕ: 05.10.2020

(ಅನುಪ್ ಫ್ರಾನ್ಸಿಸ್ ಡುಂಗ್ ಡುಂಗ್)

ಮಹಾಲೇಖಪಾಲರು

(ಲೆಕ್ಕಪರಿಶೋಧನೆ–II)

ಕರ್ನಾಟಕ, ಬೆಂಗಳೂರು.

31 ಮಾರ್ಚ್ 2020 ರಲ್ಲಿ ಇದ್ದಂತೆ ಆಸ್ತಿ–ಹೊಣೆ ಪಟ್ಟಿ

(₹ ಲಕ್ಷಗಳಲ್ಲಿ)

ಕ್ರ.ಸಂ	ವಿವರಗಳು	ಟಿಪ್ಪಣಿ ಸಂಖ್ಯೆ	ಮಾರ್ಚ್ 31, 2020 ರಲ್ಲಿದ್ದಂತೆ	ಮಾರ್ಚ್ 31, 2019 ರಲ್ಲಿದ್ದಂತೆ
I	**ಆಸ್ತಿಗಳು**			
	ನಾಚಾಲ್ತಿ ಆಸ್ತಿಗಳು			
	(ಅ) ಆಸ್ತಿ, ಸ್ಥಾವರ ಮತ್ತು ಸಲಕರಣೆಗಳು	3	3,38,603.32	3,02,065.61
	(ಆ) ಪ್ರಗತಿಯಲ್ಲಿರುವ ಬಂಡವಾಳ	4	40,852.38	42,875.93
	ಕಾಮಗಾರಿಗಳು			
	(ಇ) ಇತರೆ ಸ್ಪರ್ಶಾತೀತ ಆಸ್ತಿಗಳು	5	527.09	1,088.55
	(ಈ) ಅಭಿವೃದ್ಧಿಯಲ್ಲಿರುವ ಸ್ಪರ್ಶಾತೀತ ಆಸ್ತಿಗಳು	6	–	–
	(ಉ) ಆರ್ಥಿಕ ಆಸ್ತಿಗಳು			
	(i) ಹೂಡಿಕೆಗಳು	7	1.00	251.00
	(ii) ಇತರೆ	8	26,632.15	26,468.04
	(ಊ) ಆದಾಯ ತೆರಿಗೆ ಆಸ್ತಿಗಳು	9	356.92	340.90
	(ಋ) ಮುಂದೂಡಲ್ಪಟ್ಟ ತೆರಿಗೆ ಆಸ್ತಿಗಳು (ನಿವ್ವಳ)	24	–	–
	(ಎ) ಇತರೆ ನಾಚಾಲ್ತಿ ಆಸ್ತಿಗಳು	10	16,536.93	14,748.65
	ಒಟ್ಟು ನಾಚಾಲ್ತಿ ಆಸ್ತಿಗಳು (I)		**423,509.78**	**387,838.68**
II	**ಚಾಲ್ತಿ ಆಸ್ತಿಗಳು**			
	(ಅ) ಸರಕುಗಳು	11	3,564.82	4,187.91
	(ಆ) ಆರ್ಥಿಕ ಆಸ್ತಿಗಳು			
	(i) ವ್ಯಾಪಾರ ಸಂಬಂಧ ಬರತಕ್ಕವುಗಳು	12	133,307.47	116,098.26
	(ii) ನಗದು ಮತ್ತು ನಗದು ಸಮಾನಗಳು	13	3,681.19	7,665.94
	(iii) ಸಾಲಗಳು ಮತ್ತು ಮುಂಗಡಗಳು	14	301.02	165.83
	(iv) ಇತರೆ ಆರ್ಥಿಕ ಆಸ್ತಿಗಳು	15	140,286.87	111,277.18
	(v) ಇತರೆ ಚಾಲ್ತಿ ಆಸ್ತಿಗಳು	16	32,497.94	21,124.75
	ಉಪ ಮೊತ್ತ		**313,639.30**	**260,519.86**
	ಮಾರಾಟಕ್ಕಿರುವ ನಾಚಾಲ್ತಿ ಆಸ್ತಿಗಳು	17	1,349.93	758.59
	ಒಟ್ಟು ಚಾಲ್ತಿ ಆಸ್ತಿಗಳು (II)		**314,989.24**	**261,278.46**
	ಒಟ್ಟು ಆಸ್ತಿಗಳು (I+II)		**738,499.02**	**649,117.13**
III	**ಮುಂದೂಡಲ್ಪಟ್ಟ ನಿಯಂತ್ರಣಾ ಆಸ್ತಿಗಳು–ಖರ್ಚು ಶಿಲ್ಕು**	18	32,229.37	82,829.15
	ಒಟ್ಟು ಆಸ್ತಿಗಳು ಮತ್ತು ನಿಯಂತ್ರಣಾ ಆಸ್ತಿ ಖಾತೆಗಳ ಶಿಲ್ಕುಗಳು (I+II+III)		**770,728.39**	**731,946.28**
I	**ಈಕ್ವಿಟಿ ಮತ್ತು ಹೊಣೆಗಾರಿಕೆಗಳು**			
	ಈಕ್ವಿಟಿ			
	(ಅ) ಈಕ್ವಿಟಿ ಷೇರು ಬಂಡವಾಳ	19	99,171.54	88,836.54
	(ಆ) ಇತರೆ ಈಕ್ವಿಟಿ	20	(19,343.75)	11,409.72
	ಒಟ್ಟು ಈಕ್ವಿಟಿ (I)		**79,827.80**	**100,246.26**

ಕ್ರ.ಸಂ	ವಿವರಗಳು	ಟಿಪ್ಪಣಿ ಸಂಖ್ಯೆ	ಮಾರ್ಚ್ 31, 2020 ರಲ್ಲಿದ್ದಂತೆ	ಮಾರ್ಚ್ 31, 2019 ರಲ್ಲಿದ್ದಂತೆ
II	**ಹೊಣೆಗಾರಿಕೆಗಳು**			
	ನಾಚಾಲ್ತಿ ಹೊಣೆಗಾರಿಕೆಗಳು			
	(ಅ)ಆರ್ಥಿಕ ಹೊಣೆಗಾರಿಕೆಗಳು			
	(i) ಸಾಲಗಳು	21	187,404.91	119,695.14
	(ii) ಇತರೆ ಆರ್ಥಿಕ ಹೊಣೆಗಾರಿಕೆಗಳು	22	122,235.01	115,319.26
	(ಆ) ಅವಕಾಶಗಳು	23	8,488.50	7,419.62
	(ಇ) ಮುಂದೂಡಿದ ತೆರಿಗೆ ಹೊಣೆಗಾರಿಕೆಗಳು (ನಿವ್ವಳ)	24	–	–
	ಒಟ್ಟು ಇತರೆ ನಾಚಾಲ್ತಿ ಹೊಣೆಗಾರಿಕೆಗಳು (II)		**318,128.42**	**242,434.02**
III	**ಚಾಲ್ತಿ ಹೊಣೆಗಾರಿಕೆಗಳು**			
	(ಅ) ಆರ್ಥಿಕ ಹೊಣೆಗಾರಿಕೆಗಳು			
	(i) ಸಾಲಗಳು	25	29,734.51	29,607.15
	(ii) ವ್ಯಾಪಾರ ಸಂಬಂಧಿ ಕೊಡತಕ್ಕವುಗಳು			
	(iii) ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳು ಮತ್ತು		–	–
	(iv) ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳು ಹೊರತುಪಡಿಸಿ ಇತರೆ	26	2,54,721.83	2,67,471.04
	(ಆ) ಅವಕಾಶಗಳು	27	1,793.25	1,276.83
	(ಇ) ಇತರೆ ಪ್ರಸಕ್ತ ಹೊಣೆಗಾರಿಕೆಗಳು	28	86,433.63	90,822.04
	(ಈ) ಪ್ರಸಕ್ತ ತೆರಿಗೆ ಹೊಣೆಗಾರಿಕೆಗಳು (ನಿವ್ವಳ)	29	88.95	88.95
	ಒಟ್ಟು ಚಾಲ್ತಿ ಹೊಣೆಗಾರಿಕೆಗಳು (III)		**372,772.18**	**389,266.00**
	ಒಟ್ಟು ಹೊಣೆಗಾರಿಕೆಗಳು(II+III)		**690,900.60**	**631,700.02**
	ಒಟ್ಟು ಈಕ್ವಿಟಿ ಮತ್ತು ಹೊಣೆಗಾರಿಕೆಗಳು(I+II+III)		**770,728.39**	**731,946.28**
	1 ರಿಂದ 59 ರವರೆಗಿನ ಟಿಪ್ಪಣಿಗಳು ಆರ್ಥಿಕ ತ:ಖ್ತೆಗಳ ಅವಿಭಾಜ್ಯ ಅಂಗವಾಗಿದೆ.			

ಮಂಡಳಿಯ ಪರವಾಗಿ

ರಮೇಶ ಎಂ.ವೈ & ಕೊ
ಸನ್ನದು ಲೆಕ್ಕಿಗರು
ಸಂಸ್ಥೆ ನೋಂದಣಿ ಸಂಖ್ಯೆ:006202ಎಸ್

ಸಹಿ/–
(ರಮೇಶ ಗೌಡ.ಎಂ.ವೈ)
ಪಾಲುದಾರ
ಸದಸ್ಯತ್ವ ಸಂಖ್ಯೆ:202316

ಸಹಿ/–
(ಡಿ.ಕೋದಂಡಪಾಣಿ)
ನಿರ್ದೇಶಕರು, ಚಾವಿಸನಿನಿ
ಡಿನ್: 08567945

ಸಹಿ/–
(ಮನೋಹರ ಎಂ ಬೇವಿನಮರ)
ವ್ಯವಸ್ಥಾಪಕ ನಿರ್ದೇಶಕರು
ಡಿನ್: 08835141

ಸಹಿ/–
(ಎ.ಶಿವಣ್ಣ)
ಮುಖ್ಯ ಆರ್ಥಿಕ ಅಧಿಕಾರಿ

ಸಹಿ/–
(ಸತ್ಯ ಪ್ರಸಾದ್)
(ಕಂಪನಿ ಕಾರ್ಯದರ್ಶಿ)
ಎಸಿಎಸ್:23595

ದಿನಾಂಕ:28.09.2020
ಸ್ಥಳ: ಮೈಸೂರು

31.03.2020 ರ ವರ್ಷಾಂತ್ಯಕ್ಕೆ ಲಾಭ ಮತ್ತು ನಷ್ಟ ತ:ಖ್ತೆ

(₹ ಲಕ್ಷಗಳಲ್ಲಿ)

ಕ್ರ.ಸಂ	ವಿವರಗಳು	ಟಿಪ್ಪಣಿ ಸಂಖ್ಯೆ	ಮಾರ್ಚ್ 31, 2020 ರಲ್ಲಿದ್ದಂತೆ	ಮಾರ್ಚ್ 31, 2019 ರಲ್ಲಿದ್ದಂತೆ
I	ವ್ಯವಹಾರದಿಂದ ಬಂದ ಕಂದಾಯ	30	429,678.92	410,378.11
II	ಇತರೆ ಆದಾಯ	31	20,485.25	17,163.68
III	**ಒಟ್ಟು ಆದಾಯ (I+II)**		**450,164.17**	**427,541.79**
IV	**ವೆಚ್ಚಗಳು**			
	ವಿದ್ಯುತ್ ಖರೀದಿ	32	308,339.68	306,778.98
	ಸಿಬ್ಬಂದಿ ಸವಲತ್ತುಗಳ ವೆಚ್ಚಗಳು	33	56,909.27	52,854.42
	ಆರ್ಥಿಕ ವೆಚ್ಚಗಳು	34	15,987.86	18,418.56
	ಸವಕಳಿ ಮತ್ತು ಋಣ ಮುಕ್ತತೆಯ ವೆಚ್ಚಗಳು	35	23,438.21	20,601.20
	ಇತರೆ ವೆಚ್ಚಗಳು	36	31,433.76	24,465.65
	ಒಟ್ಟು ವೆಚ್ಚಗಳು (IV)		**436,108.79**	**423,118.81**
V	**ಅಪವಾದಾತ್ಮಕ ಹಾಗೂ ಅಸಾಧಾರಣ ಅಂಶಗಳ ಮುಂಚಿನ**		**14,055.38**	**4,422.98**
VI	**ಲಾಭ(III- IV)**			–
VII	ಅಪವಾದಾತ್ಮಕ ಅಂಶಗಳು (ಆದಾಯ)/ವೆಚ್ಚಗಳು (ನಿವ್ವಳ)		**14,055.38**	**4,422.98**
	ತೆರಿಗೆ ಮತ್ತು ದರ ನಿಯಂತ್ರಿತ ಚಟುವಟಿಕೆಗಳ ಮುಂಚಿನ ಲಾಭ/ ನಷ್ಟ (V+VI)			–
	ಏರಿಕೆ/ಇಳಿಕೆ(+/–): ನಿಯಂತ್ರಿತ ಆದಾಯ/(ವೆಚ್ಚ)(ನಿವ್ವಳ):	37	(50,599.78)	(35,367.80)
VIII	ನಿಯಂತ್ರಿತ ಆದಾಯ/(ವೆಚ್ಚ)(ನಿವ್ವಳ)			
IX	ತೆರಿಗೆ ಮುಂಚೆ ಲಾಭ/(ನಷ್ಟ) (VII+VIII)		(36,544.40)	(30,944.82)
X	**ತೆರಿಗೆ ವೆಚ್ಚಗಳು**			
	ಚಾಲ್ತಿ ತೆರಿಗೆ	38	14.37	38.57
	ಮುಂದೂಡಿದ ತೆರಿಗೆ		–	(8,903.40)
	ಮ್ಯಾಟ್ ಕ್ರೆಡಿಟ್		–	(1,158.48)
	ಒಟ್ಟು ತೆರಿಗೆ ವೆಚ್ಚಗಳು		14.37	(10,023.31)
XI	**ವರ್ಷದ ಲಾಭ/(ನಷ್ಟ)(ತೆರಿಗೆ ನಂತರ) (IX-X)**		(36,558.77)	(20,921.51)
XII	**ಇತರೆ ಸಮಗ್ರ ಆದಾಯ**			
	(I) ಲಾಭ ಮತ್ತು ನಷ್ಟಗಳಿಗೆ ಮರುವರ್ಗೀಕರಣ ಮಾಡದ ಅಂಶಗಳು			
	(ಅ) ಕುಟುಂಬ ಹಿತ ನಿಧಿಯ ಮೇಲೆ ವಾಸ್ತವಿಕ ಲಾಭಗಳು/ನಷ್ಟಗಳು		(104.09)	(13.19)
	(ಆ) ಮೇಲಿನವುಗಳ ಮೇಲೆ ತೆರಿಗೆ		–	–
	(II) ಲಾಭ ಮತ್ತು ನಷ್ಟಗಳಿಗೆ ಮರುವರ್ಗೀಕರಣ ಮಾಡುವ ಅಂಶಗಳು			
	(ಅ) ಹೂಡಿಕೆಗಳ ಮಾರುಕಟ್ಟೆಯನ್ನು ಗುರುತಿಸುವಿಕೆ		–	–
	(ಆ) ಮೇಲಿನವುಗಳ ಮೇಲೆ ತೆರಿಗೆ		–	–
	ಒಟ್ಟು ಇತರೆ ಸಮಗ್ರ ಆದಾಯ		(104.09)	(13.19)
XIII	**ವರ್ಷದ ಒಟ್ಟು ಸಮಗ್ರ ಆದಾಯಗಳು (XI+XII)**		(36,662.85)	(20,934.70)

(₹ ಲಕ್ಷಗಳಲ್ಲಿ)

ಕ್ರ.ಸಂ	ವಿವರಗಳು	ಟಿಪ್ಪಣಿ ಸಂಖ್ಯೆ	ಮಾರ್ಚ್ 31, 2020 ರಲ್ಲಿದ್ದಂತೆ	ಮಾರ್ಚ್ 31, 2019 ರಲ್ಲಿದ್ದಂತೆ
XIV	**ಷೇರುವಾರು ಗಳಕೆ:**			
	ಅಸಾಧಾರಣ ಅಂಶದ ಮೊದಲು ಈಕ್ವಿಟಿ ಷೇರಿಗೆ ಗಳಕೆಗಳು			
	ಮೂಲ (₹ ಗಳಲ್ಲಿ)		1.49	1.84
	ದುರ್ಬಲ (₹ ಗಳಲ್ಲಿ)	39	1.48	1.82
	ಅಸಾಧಾರಣ ಅಂಶದ ನಂತರ ಈಕ್ವಿಟಿ ಷೇರಿಗೆ ಗಳಕೆಗಳು			
	ಮೂಲ (₹ ಗಳಲ್ಲಿ)			
	ದುರ್ಬಲ (₹ ಗಳಲ್ಲಿ)	39	(3.89)	(2.66)
	(ಪಾವತಿಯ ಪ್ರತಿ ಷೇರಿನ ಮೌಲ್ಯ) (₹ಗಳಲ್ಲಿ)		(3.85)	(2.64)
				10.00
			10.00	
	1 ರಿಂದ 59 ರವರೆಗಿನ ಟಿಪ್ಪಣಿಗಳು ಆರ್ಥಿಕ ತ:ಖ್ತೆಗಳ ಅವಿಭಾಜ್ಯ ಅಂಗವಾಗಿದೆ.			

ಮಂಡಳಿಯ ಪರವಾಗಿ

ರಮೇಶ ಎಂ.ವೈ & ಕೊ
ಸನ್ನದು ಲೆಕ್ಕಿಗರು
ಸಂಸ್ಥೆ ನೋಂದಣಿ ಸಂಖ್ಯೆ:006202ಎಸ್

ಸಹಿ/-
(ರಮೇಶ ಗೌಡ.ಎಂ.ವೈ)
ಪಾಲುದಾರ
ಸದಸ್ಯತ್ವ ಸಂಖ್ಯೆ:202316

ಸಹಿ/-
(ಡಿ.ಕೋದಂಡಪಾಣಿ)
ನಿರ್ದೇಶಕರು, ಚಾವಿಸನಿನಿ
ಡಿನ್: 08567945

ಸಹಿ/-
(ಮನೋಹರ ಎಂ ಬೇವಿನಮರ)
ವ್ಯವಸ್ಥಾಪಕ ನಿರ್ದೇಶಕರು
ಡಿನ್: 08835141

ಸಹಿ/-
(ಎ.ಶಿವಣ್ಣ)
ಮುಖ್ಯ ಆರ್ಥಿಕ ಅಧಿಕಾರಿ

ಸಹಿ/-
(ಸತ್ಯ ಪ್ರಸಾದ್)
(ಕಂಪನಿ ಕಾರ್ಯದರ್ಶಿ)
ಎಸಿಎಸ್:23595

ದಿನಾಂಕ:28.09.2020
ಸ್ಥಳ: ಮೈಸೂರು

ವರ್ಷಾಂತ್ಯದಲ್ಲಿರುವಂತೆ ನಗದು ಹರಿವು ಪಟ್ಟಿ–2019–20

(₹ ಲಕ್ಷಗಳಲ್ಲಿ)

ವಿವರಗಳು	ಮಾರ್ಚ್ 31, 2020 ರ ವರ್ಷಾಂತ್ಯಕ್ಕೆ		ಮಾರ್ಚ್ 31, 2019 ರ ವರ್ಷಾಂತ್ಯಕ್ಕೆ	
ಅ. ಕಾರ್ಯಾಚರಣೆಯಿಂದ ಬಂದ ನಗದು ಹರಿವು		(36,544.40)		(30,944.82)
ತೆರಿಗೆಗೆ ಮುಂಚಿನ ನಿವ್ವಳ ಲಾಭ				
ಹೊಂದಾಣಿಕೆಗಳು:	(14.37)		10,023.31	
ತೆರಿಗೆ ವೆಚ್ಚಗಳು	23,438.21		20,601.20	
ಸವಕಳಿ	15,254.84		19,134.14	
ಬಡ್ಡಿ ವೆಚ್ಚಗಳು	(136.16)		(82.98)	
ಬಡ್ಡಿ ಆದಾಯ	(104.09)		(13.19)	
ಕುಟುಂಬ ಹಿತ ನಿಧಿಯ ಮೇಲೆ ವಾಸ್ತವಿಕ ಗಳಿಕೆ ಬಾಡಿಗೆಯಿಂದ ಬಂದ ಆದಾಯ	(238.83)		(307.38)	
ದುಡಿಯುವ ಬಂಡವಾಳದ ಬದಲಾವಣೆಗಿಂತ ಮುಂಚಿನ ವ್ಯಾವಹಾರಿಕ ಲಾಭ		38,199.60		49,355.10
ಕಾರ್ಯನಿರತ ಬಂಡವಾಳಗಳಲ್ಲಿನ ಚಲನೆಗಳು:				
ವ್ಯಾಪಾರ ಸಂಬಂಧ ಬರತಕ್ಕವುಗಳ ಮೊತ್ತದಲ್ಲಿನ ಏರಿಕೆ(+)/ಇಳಿಕೆ(–)	(17,209.21)		(14,421.62)	
ದಾಸ್ತಾನುಗಳಲ್ಲಿನ ಏರಿಕೆ(+)/ಇಳಿಕೆ(–)	623.09		925.04	
ಅಲ್ಪಾವಧಿ ಸಾಲ ಮತ್ತು ಮುಂಗಡಗಳಲ್ಲಿನ ಏರಿಕೆ(+)/ಇಳಿಕೆ(–)	(42,811.79)		(33,349.68)	
ನಿಯಂತ್ರಿತ ಆಸ್ತಿಗಳ ಮೇಲೆ ಏರಿಕೆ(+)/ಇಳಿಕೆ(–)	50,599.78		37,894.79	
ವ್ಯಾಪಾರ ಸಂಬಂಧಿ ಕೊಡತಕ್ಕ ಮೊತ್ತಗಳಲ್ಲಿನ ಏರಿಕೆ(+)/ಇಳಿಕೆ(–)	(12,749.21)		27278.91	
ಇತರೆ ನಾಚಾಲ್ತಿ ಹೊಣೆಗಾರಿಕೆಗಳ ಏರಿಕೆ(+)/ಇಳಿಕೆ(–)	6,915.74		9440.55	
ಧೀರ್ಘಾವಧಿ ಅವಕಾಶಗಳ ಮೊತ್ತದಲ್ಲಿನ ಏರಿಕೆ(+)/ಇಳಿಕೆ(–)	1,585.31		7,953.43	
ಚಾಲ್ತಿ ಹೊಣೆಗಾರಿಕೆಯಲ್ಲಿನ ಏರಿಕೆ(+)/ಇಳಿಕೆ(–)	(4,388.40)	(17,434.70)	11,854.75	47,576.17
ಕಾರ್ಯ ಚಟುವಟಿಕೆಗಳಿಂದ ಬಂದ ನಗದು		(15,779.50)		65,986.45
ಪಾವತಿಸಿದ ನೇರ ತೆರಿಗೆಗಳು (ಮರುಪಾವತಿಗಳ ನಿವ್ವಳ)		(16.02)		(9,364.30)
ಕಾರ್ಯಾಚರಣೆಯಿಂದ ಬಂದ ನಿವ್ವಳ ನಗದು		(15,795.52)		56,622.15
ಆ. ಹೂಡಿಕೆ ಚಟುವಟಿಕೆಗಳಿಂದ ನಗದು ಹರಿವು				
ಆಸ್ತಿ, ಸ್ಥಾವರ ಮತ್ತು ಸಲಕರಣೆಗಳ ಖರೀದಿ	(57,390.92)		(62,792.06)	
ಬಾಡಿಗೆಯಿಂದ ಬಂದ ಆದಾಯ	238.83		307.38	
ಸ್ವೀಕೃತಿಯಾದ ಬಡ್ಡಿ	136.16		82.98	
ಹೂಡಿಕೆ ಚಟುವಟಿಕೆಗಳಿಂದ ಬಂದ ನಿವ್ವಳ ನಗದು		(57,015.92)		(62,401.70)

(₹ ಲಕ್ಷಗಳಲ್ಲಿ)

ವಿವರಗಳು	ಮಾರ್ಚ್ 31, 2020 ರ ವರ್ಷಾಂತ್ಯಕ್ಕೆ		ಮಾರ್ಚ್ 31, 2019 ರ ವರ್ಷಾಂತ್ಯಕ್ಕೆ	
ಇ. ಆರ್ಥಿಕ ಚಟುವಟಿಕೆಗಳಿಂದ ಬಂದ ನಗದು ಹರಿವು				
(ಹಿಂಪಾವತಿ)/ಇತರೆ ನಾಚಾಲ್ತಿ ಸಾಲಗಳ ಸ್ವೀಕಾರ	67,709.77		(4,546.76)	
(ಹಿಂಪಾವತಿ)/ಇತರೆ ಚಾಲ್ತಿ ಸಾಲಗಳ ಸ್ವೀಕಾರ	127.37		1,049.61	
ಷೇರು ಅರ್ಜಿ ನೀಡುವಿಕೆಯಿಂದ ಬಂದ ಹಣ ಇತರೆ ಈಕ್ವಿಟಿಯಲ್ಲಿನ ಚಲನೆ	9,760.00		12,451.00	
ಪಾವತಿಸಿದ ಬಡ್ಡಿ	6,484.38		16,358.03	
	(15,254.84)		(19,134.14)	
ಆರ್ಥಿಕ ಚಟುವಟಿಕೆಗಳಲ್ಲಿ ಬಳಕೆಯಾದ ನಿವ್ವಳ ನಗದು		**68,826.69**		**6,177.73**
ನಗದು ಹಾಗೂ ನಗದು ಸಮಾನಗಳಲ್ಲಿನ ನಿವ್ವಳ ಏರಿಕೆ (ಅ+ಆ+ಇ)		(3,984.75)		398.19
ಆರಂಭಿಕ ನಗದು ಮತ್ತು ನಗದು ಸಮಾನಗಳು		7,665.94		7,267.75
ಅಂತಿಮ ನಗದು ಮತ್ತು ನಗದು ಸಮಾನಗಳು		**3,681.19**		**7,665.94**
ಇಂಡ್ ಎಎಸ್-7 ರ ಪ್ರಕಾರ ಕಂಪನಿಯು ಪರೋಕ್ಷ ವಿಧಾನವನ್ನು ಅನುಸರಿಸಿದೆ.				

ಮಂಡಳಿಯ ಪರವಾಗಿ

ರಮೇಶ ಎಂ.ವೈ & ಕೊ
ಸನ್ನದು ಲೆಕ್ಕಿಗರು
ಸಂಸ್ಥೆ ನೋಂದಣಿ ಸಂಖ್ಯೆ:006202ಎಸ್

ಸಹಿ/-
(ರಮೇಶ ಗೌಡ.ಎಂ.ವೈ)
ಪಾಲುದಾರ
ಸದಸ್ಯತ್ವ ಸಂಖ್ಯೆ:202316

ಸಹಿ/-
(ಡಿ.ಕೋದಂಡಪಾಣಿ)
ನಿರ್ದೇಶಕರು, ಚಾವಿಸನಿನಿ
ಡಿನ್: 08567945

ಸಹಿ/-
(ಮನೋಹರ ಎಂ ಬೇವಿನಮರ)
ವ್ಯವಸ್ಥಾಪಕ ನಿರ್ದೇಶಕರು
ಡಿನ್: 08835141

ಸಹಿ/-
(ಎ.ಶಿವಣ್ಣ)
ಮುಖ್ಯ ಆರ್ಥಿಕ ಅಧಿಕಾರಿ

ಸಹಿ/-
(ಸತ್ಯ ಪ್ರಸಾದ್)
(ಕಂಪನಿ ಕಾರ್ಯದರ್ಶಿ)
ಎಸಿಎಸ್:23595

ದಿನಾಂಕ:28.09.2020
ಸ್ಥಳ: ಮೈಸೂರು

ಮಾರ್ಚ್ 2020 ರಂದು ಅಂತ್ಯಗೊಂಡ ವರ್ಷಕ್ಕೆ ಈಕ್ವಿಟಿಯಲ್ಲಿನ ಬದಲಾವಣೆಯ ವಿವರಣಾ ಪಟ್ಟಿ

ಅ. ಈಕ್ವಿಟಿ ಷೇರು ಬಂಡವಾಳ

ವಿವರಗಳು	₹ ಲಕ್ಷಗಳಲ್ಲಿ
ಏಪ್ರಿಲ್ 01, 2019 ರ ಅಂತ್ಯಕ್ಕೆ ಇರುವ ಶಿಲ್ಕು	**88,836.54**
ಆರ್ಥಿಕ ವರ್ಷ 2019-20 ನೇ ಸಾಲಿನ ಈಕ್ವಿಟಿ ಷೇರು ಬಂಡವಾಳಗಳಲ್ಲಿ ಆದ ಬದಲಾವಣೆ	10,335.00
ಮಾರ್ಚ್ 31, 2020 ರ ಅಂತ್ಯಕ್ಕೆ ಇರುವ ಶಿಲ್ಕು	**99,171.54**

ಆ. ಇತರೆ ಈಕ್ವಿಟಿ

(₹ ಲಕ್ಷಗಳಲ್ಲಿ)

ವಿವರಗಳು	ಹಂಚಿಕೆಗೆ ಬಾಕಿ ಇರುವ ಷೇರು ಅರ್ಜಿ ಹಣ	ಮೀಸಲು ಮತ್ತು ಅಧಿಕ್ಯ				ಒಟ್ಟು
		ಬಂಡವಾಳ ಮೀಸಲು	ನೆಟ್‌ವರ್ತ್‌ಗೆ ಪ್ರಸ್ತಾವಿತ ಹೊಂದಾಣಿಕೆ	ಬಂಡವಾಳ ಆಸ್ತಿಗಳ ವೆಚ್ಚಕ್ಕೆ ಕೊಡುಗೆಗಳು, ಅನುದಾನಗಳು ಮತ್ತು ಸಹಾಯಧನಗಳು	ಉಳಿಸಿಕೊಂಡ ಗಳಿಕೆ	
01 ಏಪ್ರಿಲ್ 2019 ರಲ್ಲಿರುವಂತೆ ಬಾಕಿ	3,015.00	239.17	(3,401.00)	99,130.67	(87,574.12)	11,409.72
+/- ವರ್ಷದ ನಷ್ಟ	-	-	-	-	(36,662.85)	(36,662.85)
+/- ಖಾತೆಯಲ್ಲಿ ಹೊಸ ಹಂಚಿಕೆ	-	-	-	-	-	-
+ ವರ್ಷದ ಹೆಚ್ಚುವರಿಗಳು	9,760.00	-	-	6,484.38	-	16,244.38
+: ಷೇರು ಅಪ್ಲಿಕೇಷನ್ ಹಣವನ್ನು ಸ್ವೀಕರಿಸಿರುವುದು.	(10,335.00)	-	-	-	-	(10,335.00)
+/- ಷೇರುಗಳ ಹಂಚಿಕೆ	-	-	-	-	-	-
ಕಳೆಯುವಿಕೆ: ಸವಕಳಿಯ ಹಿಮ್ಮುಖ/ವರ್ಷದಲ್ಲಿ ಹಿಂತೆಗೆದುಕೊಳ್ಳುವಿಕೆ	-	-	-	-	-	-
31 ಮಾರ್ಚ್ 2020 ರಲ್ಲಿರುವಂತೆ ಬಾಕಿ	2,440.00	239.17	(3,401.00)	105,615.06	(124,236.97)	(19,343.75)

ಮಂಡಳಿಯ ಪರವಾಗಿ

ರಮೇಶ ಎಂ.ವೈ & ಕೊ
ಸನ್ನದು ಲೆಕ್ಕಿಗರು
ಸಂಸ್ಥೆ ನೋಂದಣಿ ಸಂಖ್ಯೆ:006202ಎಸ್

ಸಹಿ/-
(ರಮೇಶ ಗೌಡ.ಎಂ.ವೈ)
ಪಾಲುದಾರ
ಸದಸ್ಯತ್ವ ಸಂಖ್ಯೆ:202316

ಸಹಿ/-
(ಡಿ.ಕೋದಂಡಪಾಣಿ)
ನಿರ್ದೇಶಕರು, ಚಾವಿಸನಿನಿ
ಡಿನ್: 08567945

ಸಹಿ/-
(ಮನೋಹರ ಎಂ ಬೇವಿನಮರ)
ವ್ಯವಸ್ಥಾಪಕ ನಿರ್ದೇಶಕರು
ಡಿನ್: 08835141

ಸಹಿ/-
(ಎ.ಶಿವಣ್ಣ)
ಮುಖ್ಯ ಆರ್ಥಿಕ ಅಧಿಕಾರಿ

ಸಹಿ/-
(ಸತ್ಯ ಪ್ರಸಾದ್)
(ಕಂಪನಿ ಕಾರ್ಯದರ್ಶಿ)
ಎಸಿಎಸ್:23595

ದಿನಾಂಕ:28.09.2020
ಸ್ಥಳ: ಮೈಸೂರು

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಸಿ.ಐ.ಎನ್ ನಂ: ಯು40109ಕೆಎ2004ಎಸ್.ಜಿ.ಸಿ035177)

ಕಾರ್ಪೊರೇಟ್ ಕಛೇರಿ,# 29,ವಿಜಯನಗರ, 2ನೇ ಹಂತ, ಹಿನಕಲ್, ಮೈಸೂರು, ಕರ್ನಾಟಕ-570017

ಹಣಕಾಸು ವಿವರಣಾ ಪಟ್ಟಿಯ ಟಿಪ್ಪಣಿಗಳು

I ಕಾರ್ಪೋರೇಟ್ ಮಾಹಿತಿಗಳು:

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಕಂಪೆನಿಯು ಕರ್ನಾಟಕ ರಾಜ್ಯದ ಒಂದು ಪ್ರಮುಖ ವಿದ್ಯುತ್ ವಿತರಣಾ ಕಂಪೆನಿಯಾಗಿರುತ್ತದೆ ಮತ್ತು ಇದು ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ. ಕಂಪೆನಿಯು ಕರ್ನಾಟಕದ ಐದು ಕಂದಾಯ ಜಿಲ್ಲೆಗಳಾದ ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ ಮತ್ತು ಕೊಡಗು ಜಿಲ್ಲೆಗಳಲ್ಲಿ ವಿದ್ಯುತ್ ವಿತರಣಾ ಕಾರ್ಯದಲ್ಲಿ ತೊಡಗಿಸಿಕೊಂಡಿರುತ್ತದೆ. ಕಂಪೆನಿಯು 1956ರ ಕಂಪೆನಿಗಳ ಕಾಯ್ದೆಯ ಅವಕಾಶಗಳಡಿ ನೋಂದಾಯಿಸಲ್ಪಟಿರುತ್ತದೆ. ಈ ಕಂಪೆನಿಯು ವಿದ್ಯುಚ್ಛಕ್ತಿ ಕಾಯ್ದೆ 2003ರ ಕಲಂ 14 ರಡಿಯಲ್ಲಿ ವಿತರಣಾ ಪರವಾನಗಿದಾರನಾಗಿರುತ್ತದೆ. ಇದರ ನೋಂದಾಯಿತ ಕಛೇರಿಯು ಭಾರತದಲ್ಲಿ # 29, ವಿಜಯನಗರ, 2ನೇ ಹಂತ, ಹಿನಕಲ್, ಮೈಸೂರು, ಕರ್ನಾಟಕ-570017 ಇಲ್ಲಿ ಸ್ಥಾಪಿತವಾಗಿದೆ.

ಇದಕ್ಕೂ ಮೊದಲು ಕರ್ನಾಟಕ ರಾಜ್ಯದ ವಿದ್ಯುತ್ ಕ್ಷೇತ್ರವು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಿಂದ ನಿರ್ವಹಿಸಲ್ಪಡುತ್ತಿತ್ತು. ಬೆಳೆಯುತ್ತಿರುವ ಆರ್ಥಿಕತೆಯ ಅಗತ್ಯತೆಗಳಿಗೆ ಅನುಗುಣವಾಗಿ ಕರ್ನಾಟಕ ರಾಜ್ಯವು 1999ನೇ ವರ್ಷದಲ್ಲಿ ವಿದ್ಯುತ್ ಕ್ಷೇತ್ರದ ಸುಧಾರಣಾ ಪ್ರಕ್ರಿಯೆಯನ್ನು ಆರಂಭಿಸಿತು. ಮೊದಲನೇ ಹಂತವಾಗಿ 1999 ನೇ ವರ್ಷದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯನ್ನು ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ನಿಯಮಿತ (ಕವಿಪ್ರನಿನಿ) ಹಾಗೂ ವಿಶ್ವೇಶ್ವರಯ್ಯ ವಿದ್ಯುತ್ ನಿಗಮ ನಿಯಮಿತ (ವಿವಿಎನ್ಎಲ್)ಗಳೆಂಬ ಎರಡು ಕಂಪೆನಿಗಳಾಗಿ ವಿಭಾಗಿಸಲಾಯಿತು. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗವನ್ನೂ ಸಹ 1999 ನೇ ವರ್ಷದಲ್ಲಿ ಸ್ಥಾಪಿಸಲಾಯಿತು. ಸುಧಾರಣಾ ಪ್ರಕ್ರಿಯೆಯ ಮುಂದಿನ ಹಂತದಲ್ಲಿ ಕವಿಪ್ರನಿನಿಯು ನಿರ್ವಹಿಸುತ್ತಿದ್ದ ವಿದ್ಯುತ್ ವಿತರಣಾ ಚಟುವಟಿಕೆಯನ್ನು ಬೇರ್ಪಡಿಸಿ ಜೂನ್ 2002 ರಲ್ಲಿ ನಾಲ್ಕು ವಿದ್ಯುತ್ ವಿತರಣಾ ಕಂಪೆನಿಗಳನ್ನು ಸ್ಥಾಪಿಸಲಾಯಿತು.

ಈ ರೀತಿ ಸ್ಥಾಪಿಸಲಾದ ವಿದ್ಯುತ್ ವಿತರಣಾ ಕಂಪೆನಿಗಳಲ್ಲಿ ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿಯನ್ನು ಏಪ್ರಿಲ್ 2005 ರಲ್ಲಿ ವಿಭಾಗಿಸಿ ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ನಿಗಮವನ್ನು ಸ್ಥಾಪಿಸಲಾಯಿತು.

II ಲೆಕ್ಕಪತ್ರದ ಪ್ರಮುಖ ಕಾರ್ಯನೀತಿಗಳು

1. **ಅನುಸರಣಾ ಸಂಬಂಧಿ ಹೇಳಿಕೆಗಳು:**

ಕಂಪೆನಿಗಳ (ಭಾರತೀಯ ಲೆಕ್ಕ ಮಾನದಂಡಗಳು) ನಿಯಮ 2015 (ತಿದ್ದುಪಡಿ ಮಾಡಲಾದ) ರ ಅಡಿಯಲ್ಲಿ ರೂಪಿಸಲಾದ ಭಾರತೀಯ ಲೆಕ್ಕ ಮಾನದಂಡ ("ಇಂಡ್ ಎ.ಎಸ್.") ಗಳನ್ನು ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯವು ದಿನಾಂಕ:01.04.2018 ರಿಂದ ಅನ್ವಯವಾಗುವಂತೆ ಹೊರಡಿಸಿರುವ ದಿನಾಂಕ 16 ನೇ ಫೆಬ್ರವರಿ 2015 ರ ಅಧಿಸೂಚನೆಯ ಅನುಸಾರ, ಕಂಪೆನಿಯು ಅಳವಡಿಸಿಕೊಂಡಿದೆ.

ಭಾರತೀಯ ಲೆಕ್ಕ ಮಾನದಂಡಗಳಿಗೆ ಪರಿವರ್ತನಾ ದಿನಾಂಕವು 01.04.2017 ಆಗಿರುತ್ತದೆ.

ಭಾರತೀಯ ಲೆಕ್ಕ ಮಾನದಂಡಗಳಿಗೆ ಸರಿಹೊಂದುವಂತೆ, ಹಿಂದಿನ ವರ್ಷಗಳ ಅಂಕಿಅಂಶಗಳ ಪ್ರಸ್ತುತಿಯಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡಿಕೊಳ್ಳಲಾಗಿದೆ.

ಕಂಪೆನಿಯು ದಿನಾಂಕ 31.03.2018 ರವರೆಗೆ, ಭಾರತದಲ್ಲಿ ಚಾಲ್ತಿಯಲ್ಲಿರುವ, ಸಾಮಾನ್ಯವಾಗಿ ಸ್ವೀಕರಿಸಿದ ಹಣಕಾಸಿನ ತತ್ವಗಳು (Previous GAAP), 2013 ರ ಕಂಪೆನಿಗಳ ಕಾಯ್ದೆ ಮತ್ತು

ಕಂಪೆನಿಗಳ (ಲೆಕ್ಕಗಳ) ನಿಯಮಗಳು 2014 ಗಳಡಿಯಲ್ಲಿ ಹೊರಡಿಸಲಾದ ಲೆಕ್ಕ ಮಾನದಂಡಗಳು ಹಾಗೂ ಅನ್ವಯವಾಗುವಷ್ಟರ ಮಟ್ಟಿಗೆ ವಿದ್ಯುಚ್ಛಕ್ತಿ ಕಾಯಿದೆ 2003 ಗಳ ಅವಕಾಶಗಳಿಗೆ ಹೊಂದಿಕೆಯಾಗುವಂತೆ, ಪ್ರಾಪ್ತವಾಗುವ ಆಧಾರದ ಮೇಲೆ ಗುರುತಿಸಿ, ಐತಿಹಾಸಿಕ ವೆಚ್ಚಗಳ ನೆಲೆಗಟ್ಟಿನಲ್ಲಿ ಲೆಕ್ಕಪತ್ರಗಳನ್ನು ಸಿದ್ದಪಡಿಸಿರುತ್ತದೆ.

ಭಾರತೀಯ ಲೆಕ್ಕ ಮಾನದಂಡ 101 –''ಪ್ರಥಮ ಬಾರಿಗೆ ಭಾರತೀಯ ಲೆಕ್ಕ ಮಾನದಂಡಗಳ ಅನ್ವಯಿಸುವಿಕೆ'' ರ ಅವಶ್ಯಕತೆಯಂತೆ ದಿನಾಂಕ 31.03.2018 ಹಾಗೂ ದಿನಾಂಕ 01.04.2017 ಗಳಲ್ಲಿದ್ದಂತೆ ಹಿಂದಿನ, ಸಾಮಾನ್ಯವಾಗಿ ಸ್ವೀಕರಿಸಿದ ಹಣಕಾಸಿನ ತತ್ವಗಳ (Previous GAAP) ಪ್ರಕಾರ ಮತ್ತು ಇಂಡ್ ಎಎಸ್ ಪ್ರಕಾರ ಷೇರುದಾರರ ಈಕ್ವಿಟಿ ಸಮನ್ವಯ ಪಟ್ಟಿ ಮತ್ತು ತೆರಿಗೆ ಪೂರ್ವ ಲಾಭ/ನಷ್ಟ ಮತ್ತು ಭಾರತೀಯ ಲೆಕ್ಕ ಮಾನದಂಡಗಳ ಪ್ರಕಾರ ಒಟ್ಟು ಸಮಗ್ರ ಆದಾಯಗಳ ಸಮನ್ವಯಪಟ್ಟಿಗಳನ್ನು ಕಂಪೆನಿಯು ಪ್ರಸ್ತುತಿಪಡಿಸಿದೆ.

2. ಹಣಕಾಸು ವಿವರಣಾ ಪಟ್ಟಿ ತಯಾರಿಕೆಯ ಆಧಾರಗಳು:

ಲೆಕ್ಕನೀತಿಗಳಲ್ಲಿ ಪ್ರತ್ಯೇಕವಾಗಿ ಉಲ್ಲೇಖಿಸಲ್ಪಟಿರುವುದನ್ನು ಹೊರತುಪಡಿಸಿ, ಹಣಕಾಸು ವಿವರಣಾ ಪಟ್ಟಿಗಳನ್ನು, ಕಂಪೆನಿಗಳ(ಭಾರತೀಯ ಲೆಕ್ಕ ಮಾನದಂಡಗಳು) ನಿಯಮ 2015 ಮತ್ತು ಹಣಕಾಸು ವಿವರಣಾ ಪಟ್ಟಿಗಳಿಗೆ ಸಂಬಂಧಪಟ್ಟಂತೆ ಸದರಿ ನಿಯಮಗಳಿಗೆ ತದನಂತರದಲ್ಲಿ ಮಾಡಲಾದ ತಿದ್ದುಪಡಿಗಳನ್ನೂ ಪರಿಗಣಿಸಿ ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯವು ಹೊರಡಿಸಿರುವ ಭಾರತೀಯ ಲೆಕ್ಕ ಮಾನದಂಡಗಳು (ಇಂಡ್ ಎ.ಎಸ್) ಮತ್ತು ಅನ್ವಯವಾಗುವಷ್ಟರ ಮಟ್ಟಿಗೆ ವಿದ್ಯುಚ್ಛಕ್ತಿ ಕಾಯಿದೆ 2003 ಗಳ ಅವಕಾಶಗಳಿಗೆ ಹೊಂದಿಕೆಯಾಗುವಂತೆ, ಪ್ರಾಪ್ತವಾಗುವ ಆಧಾರದ ಮೇಲೆ ಗುರುತಿಸಿ ಐತಿಹಾಸಿಕ ವೆಚ್ಚಗಳ ನೆಲೆಗಟ್ಟಿನಲ್ಲಿ ಕಂಪೆನಿಯು ಲೆಕ್ಕಪತ್ರಗಳನ್ನು ಸಿದ್ದಪಡಿಸಿರುತ್ತದೆ.

ಕೆಳಕಂಡವುಗಳನ್ನು ಹೊರತುಪಡಿಸಿ, ಹಣಕಾಸು ವಿವರಣಾ ಪಟ್ಟಿಗಳ ಮೇಲೆ ಗಣನೀಯ ಪರಿಣಾಮಗಳನ್ನು ಬೀರುವ ಎಲ್ಲಾ ದಾಖಲೆಗಳನ್ನು ಪ್ರಾಪ್ತವಾಗುವ ಆಧಾರದ ಮೇಲೆ ಗುರುತಿಸಿ ಲೆಕ್ಕಿಸಲಾಗಿದೆ.

- ವಾಸ್ತವಿಕ ಸ್ವೀಕೃತಿ ಆಧಾರದಲ್ಲಿ ಲೆಕ್ಕಿಸಲಾಗುವ, ಸರಕಾರದಿಂದ ಬಂಡವಾಳ ಕಾಮಗಾರಿಗಳಿಗಾಗಿ ಬಿಡುಗಡೆಯಾಗುವ ಅನುದಾನಗಳು ಹಾಗೂ ಸಹಾಯಧನಗಳು.
- ವಸೂಲಿ ಮಾಡಿದಾಗ ಆದಾಯವೆಂದು ಲೆಕ್ಕಿಸಲಾಗುವ, ಗುತ್ತಿಗೆದಾರರು ಮತ್ತು ಮಾರಾಟಗಾರರಿಂದ ವಸೂಲಿ ಮಾಡಲಾಗುವ ದಂಡಗಳು ಮತ್ತು ನಷ್ಟಗಳು.

2.1 ತೀರ್ಪುಗಳು ಮತ್ತು ಅಂದಾಜುಗಳ ಬಳಕೆ:

ಆಡಳಿತ ಮಂಡಳಿಯು ಹಣಕಾಸಿನ ವರದಿ ಮಾಡಲಾದ ಅವಧಿಯಲ್ಲಿ ವಿವರಣಾ ಪಟ್ಟಿಗಳನ್ನು ತಯಾರಿಸುವಾಗ, ವರದಿ ಮಾಡಲಾದ ಆಸ್ತಿ, ಜವಾಬ್ದಾರಿ, ಕಂದಾಯ ಮತ್ತು ಖರ್ಚು ಮೊತ್ತಗಳ ಮೇಲೆ ಪರಿಣಾಮ ಬೀರಬಹುದಾದ ಅಂದಾಜುಗಳು, ತೀರ್ಪುಗಳು ಹಾಗೂ ಊಹೆಗಳನ್ನು ಪರಿಗಣಿಸುವ ಅಗತ್ಯವಿದೆ. ಲಭ್ಯವಿರುವ ಮಾಹಿತಿಗಳನ್ನು ಆಧರಿಸಿ ಅಂತಹ ಅಂದಾಜು ಹಾಗೂ ಊಹೆಗಳನ್ನು ಸಮಂಜಸವಾಗಿ ಹಾಗೂ ವಿವೇಕಯುತವಾಗಿ ಮಾಡಲಾಗಿದ್ದರೂ ಸಹ ವಾಸ್ತವಿಕ ಫಲಿತಾಂಶಗಳು ಅಂದಾಜುಗಳಿಗಿಂತ ಭಿನ್ನವಾಗಿರಬಹುದಾಗಿರುತ್ತದೆ. ಅಂದಾಜುಗಳು ಹಾಗೂ ಆಧಾರವಾಗಿರುವ ಊಹೆಗಳನ್ನು, ಮುನ್ನಡೆಯುತ್ತಿರುವ ಆಧಾರದ ಮೆಲೆ ಪರಿಶೀಲಿಸಿ ಅಗತ್ಯ ಪರಿಷ್ಕರಣೆಗಳನ್ನು ಭವಿಷ್ಯದಲ್ಲಿ ಪರಿಗಣಿಸಲಾಗುವುದು.

ಆಸ್ತಿ ಮತ್ತು ಜವಾಬ್ದಾರಿ ಖಾತೆಗಳ ಮೊತ್ತಗಳ ಮೇಲೆ ಮುಂದಿನ ಆರ್ಥಿಕ ವರ್ಷದ ಒಳಗಾಗಿ ಗಣನೀಯ ಪರಿಣಾಮಗಳನ್ನು ಬೀರಬಹುದಾದ ಅಂದಾಜುಗಳು, ತೀರ್ಪುಗಳು ಹಾಗೂ ಊಹೆಗಳು ಮುಖ್ಯವಾಗಿ ಆಸ್ತಿ, ಸ್ಥಾವರ ಮತ್ತು ಯಂತ್ರೋಪಕರಣಗಳ ಉಪಯುಕ್ತ ಕಾಲಾವಧಿ, ಸಿಬ್ಬಂದಿ

ಸೌಲಭ್ಯಗಳ ಜವಾಬ್ದಾರಿಗಳು, ಆದಾಯ ತೆರಿಗೆಗೆ ಅವಕಾಶ, ಮುಂದೂಡಲ್ಪಟ್ಟ ನಿಯಂತ್ರಣಾ ಆಸ್ತಿಗಳು, ಮುಂದೂಡಲ್ಪಟ್ಟ ತೆರಿಗೆ ಲೆಕ್ಕಾಚಾರಗಳಿಗೆ ಸಂಬಂಧಪಟ್ಟವುಗಳಾಗಿರುತ್ತದೆ.

2.2 ಆಸ್ತಿಗಳು, ಸ್ಥಾವರಗಳು ಮತ್ತು ಯಂತ್ರೋಪಕರಣಗಳು

ಅ) ಆಸ್ತಿಗಳು, ಸ್ಥಾವರಗಳು ಮತ್ತು ಯಂತ್ರೋಪಕರಣಗಳನ್ನು ಮತ್ತು ಸಂಚಿತ ಸವಕಳಿಗಳನ್ನು ದುರ್ಬಲತೆಯ ನಷ್ಟಗಳನ್ನು ಕಳೆದ ಬೆಲೆಯಲ್ಲಿ ಲೆಕ್ಕಿಸಲಾಗುವುದು. ಈ ಬೆಲೆಯು, ಖರೀದಿ ವೆಚ್ಚಗಳು, ಹಿಂಪಾವತಿಸಲಾಗದ ತೆರಿಗೆಗಳು ಹಾಗೂ ಸುಂಕಗಳು, ಅರ್ಹವಾದ ಆಸ್ತಿಗಳ ಮೇಲಿನ ಆರ್ಥಿಕ ವೆಚ್ಚಗಳು, ಆಸ್ತಿಗಳನ್ನು ಆಡಳಿತ ಮಂಡಳಿಯು ಬಯಸುವ ರೀತಿಯಲ್ಲಿ ಕಾರ್ಯನಿರ್ವಹಿಸಲು ಶಕ್ತವಾಗುವ ಸ್ಥಳ ಹಾಗೂ ಸ್ಥಿತಿಗೆ ತರಲು ನೇರವಾಗಿ ಕಾರಣವಾಗುವ ಯಾವುದೇ ರೀತಿಯ ವೆಚ್ಚಗಳನ್ನು ಒಳಗೊಂಡಿರುತ್ತದೆ. ಇದು, ಆಸ್ತಿಗಳನ್ನು ಕಳಚಿ, ತೆಗೆದು, ಆಸ್ತಿಗಳನ್ನು ಸ್ಥಾಪಿಸಲಾದ ಸ್ಥಳವನ್ನು ಮರುಸ್ಥಾಪನೆಗೊಳಿಸಲು ತಗಲುವ ಅಂದಾಜು ವೆಚ್ಚಗಳನ್ನು ಒಳಗೊಂಡಿರುವುದಿಲ್ಲ. ಸ್ವತಂತ್ರವಾಗಿ ಹೊಂದಿರುವ ಭೂಮಿಯ ಬೆಲೆಗೆ ಸವಕಳಿ ಆಕರಿಸಲಾಗುವುದಿಲ್ಲ. ಕ.ವಿ.ನಿ ಆಯೋಗದ ಜಕಾತಿ ಆದೇಶ 2009 ದಿನಾಂಕ: 25 ನವೆಂಬರ್ 2009ರಲ್ಲಿ ಅನುಮೋದಿಸಿದಂತೆ ಎಲ್ಲಾ ಆಸ್ತಿಗಳು, ಯಂತ್ರೋಪಕರಣಗಳು ಹಾಗೂ ಸಲಕರಣೆಗಳ ಮೇಲೆ ಸ್ಟ್ರೈಟ್ ಲೈನ್ ವಿಧಾನದಲ್ಲಿ ಸವಕಳಿಯನ್ನು ಆಕರಿಸಲಾಗುವುದು. ಕಂಪೆನಿಯು, ಕಂಪೆನಿಗಳ ಕಾಯಿದೆ 2013 ರ ಅನುಬಂಧ – II ರಲ್ಲಿ ನೀಡಲಾದ ದರಗಳಲ್ಲಿ ಸವಕಳಿಯನ್ನು ಆಕರಿಸುತ್ತಿಲ್ಲ. ಹೊಸದಾಗಿ ಸೇರಿಸಲಾದ ಆಸ್ತಿಗಳಿಗೆ, ಆ ಆಸ್ತಿಗಳು ಉಪಯೋಗಕ್ಕೆ ಬಂದ ತಕ್ಷಣದ ಮಾಹೆಯಿಂದ ಸಮಾನುಪಾತದಲ್ಲಿ ಸವಕಳಿಯನ್ನು ಲೆಕ್ಕ ಹಾಕಲಾಗಿದೆ. ಸೂಚಿತ ಸವಕಳಿ ದರಗಳನ್ನು ಕ.ವಿ.ನಿ ಆಯೋಗವು ಪರಿಷ್ಕರಿಸಿ ಅಧಿಸೂಚನೆ ಹೊರಡಿಸಿದಲ್ಲಿ, ಅಂತಹ ದರಗಳನ್ನು, ಕ.ವಿ.ನಿ ಆಯೋಗವು ಅಧಿಸೂಚನೆ ಹೊರಡಿಸಿದ ದಿನಾಂಕದ ನಂತರದ ದಿನಗಳಿಂದ (Prospectively) ಪರಿಗಣಿಸಿ ಲೆಕ್ಕಿಸಲಾಗುವುದು. ಕಂಪೆನಿಗಳ ಕಾಯಿದೆ 2013 ರ ಅನುಸಾರ ಎಲ್ಲಾ ಆಸ್ತಿಗಳ ಕನಿಷ್ಟ ಬೆಲೆಯು 5% ಇರಬೇಕಾಗಿದ್ದಾಗ್ಯೂ, ಕ.ವಿ.ನಿ ಆಯೋಗದ ಆದೇಶದ ಅನುಸಾರ ಎಲ್ಲಾ ಆಸ್ತಿಗಳ ಕನಿಷ್ಟ ಬೆಲೆಯನ್ನು 10%ಕ್ಕೆ ನಿಗಧಿಗೊಳಿಸಲಾಗಿದೆ.

ಆ) ಯಾವುದೇ ಆಸ್ತಿಗಳು, ಸ್ಥಾವರಗಳು ಮತ್ತು ಯಂತ್ರೋಪಕರಣಗಳನ್ನು, ವಿಲೇವಾರಿ ಮಾಡಿದಾಗ ಅಥವಾ ಅಂತಹ ಆಸ್ತಿಗಳ ಬಳಕೆಯನ್ನು ಮುಂದುವರೆಸುವುದರಿಂದ ಉದ್ಭವಿಸಬಹುದಾದ ಭವಿಷ್ಯದ ಆರ್ಥಿಕ ಪ್ರಯೋಜನಗಳು ಇಲ್ಲದಾದಾಗ, ಆಸ್ತಿ ಖಾತೆಗಳಿಂದ ಹಿಂಪಡೆಯಲಾಗುವುದು. ಆಸ್ತಿಗಳು, ಸ್ಥಾವರಗಳು ಮತ್ತು ಯಂತ್ರೋಪಕರಣಗಳ ಪುಸ್ತಕದ ಬೆಲೆ ಹಾಗೂ ಮಾರಾಟದ ಬೆಲೆಗಳ ನಡುವಿನ ವ್ಯತ್ಯಾಸದ ಮೊತ್ತವನ್ನು ಅಂತಹ ಆಸ್ತಿಗಳ ವಿಲೇವಾರಿ ಅಥವಾ ನಿವೃತ್ತಿಯಿಂದ ಉದ್ಭವಿಸಿದ ಲಾಭ ಅಥವಾ ನಷ್ಟವೆಂದು ಪರಿಗಣಿಸಲಾಗುವುದು.

ಇ) (1) ಗುತ್ತಿಗೆದಾರರಿಂದ ಅಂತಿಮ ಬಿಲ್ಲನ್ನು ಸ್ವೀಕರಿಸಿ ಮತ್ತು ಸಕ್ಷಮ ಪ್ರಾಧಿಕಾರದಿಂದ ಸ್ವೀಕರಿಸಲ್ಪಟ್ಟ/ ಅಂಗೀಕರಿಸಲ್ಪಟ್ಟ/ ಪ್ರಮಾಣೀಕರಿಸಲ್ಪಟ್ಟ ನಂತರ ಕಂಪನಿಯು ಸ್ವತ್ತುಗಳನ್ನು ಬಂಡವಾಳ ಮಾಡುವ ಅಭ್ಯಾಸವನ್ನು ಹೊಂದಿದೆ ಅರ್ಹತಾ ಸ್ವತ್ತುಗಳು ಉದ್ದೇಶಿತ ಬಳಕೆಗೆ ಸಿದ್ಧವಾಗಿರುವ ದಿನಾಂಕದವರೆಗೆ ಸ್ವಾಧೀನಕ್ಕೆ / ನಿರ್ಮಾಣಕ್ಕೆ ಕಾರಣವಾದ ಸಾಲ ವೆಚ್ಚಗಳು ಅಂತಹ ಸ್ವತ್ತುಗಳ ವೆಚ್ಚದ ಭಾಗವಾಗಿವೆ.

ಈ) ಕೆಪಿಟಿಸಿಎಲ್ ನೊಂದಿಗೆ ಹಂಚಿಕೊಂಡ ಸ್ವತ್ತುಗಳಿಗೆ ಸಂಬಂಧಿಸಿದಂತೆ, ಕೆಪಿಟಿಸಿಎಲ್ ಮಾಲೀಕತ್ವ ಮತ್ತು ಹಕ್ಕುಪತ್ರ ಅಧಿಕಾರಗಳನ್ನು ಹೊಂದಿದ್ದು ಅವುಗಳನ್ನು ನಿಗಮದ ಖಾತೆಗಳ ಪುಸ್ತಕಗಳಲ್ಲಿ ಪ್ರತಿಫಲಿಸಿರುವುದಿಲ್ಲ ಆದರೆ ಅಂತಹ ಸ್ವತ್ತುಗಳಿಗೆ ಸಂಬಂಧಿಸಿದಂತೆ ನಿರ್ವಹಣಾ ವೆಚ್ಚದ ಪಾಲನ್ನು ಲಾಭ ಮತ್ತು ನಷ್ಟ ಖಾತೆಗೆ ವಿಧಿಸಲಾಗುತ್ತದೆ ಹಾಗೂ ಅದನ್ನು ಮೇಲ್ವಿಚಾರಣೆ ಮಾಡಲು ಖಾತೆಗಳ ವ್ಯವಸ್ಥೆಯನ್ನು ರೂಪಿಸಲಾಗಿಲ್ಲ.

ಉ) "ಪೀಠೋಪಕರಣ ಮತ್ತು ಜೋಡಣೆಗಳು" ಮತ್ತು "ಕಛೇರಿ ಸಲಕರಣೆಗಳು" ಗುಂಪುಗಳಡಿಯಲ್ಲಿ ವರ್ಗೀಕರಿಸಿದ ಆಸ್ತಿಗಳನ್ನು ಹೊರತುಪಡಿಸಿ ಇತರೆ ತಲಾ ₹500 ರವರೆಗಿನ ಮೌಲ್ಯದ ಸ್ಥಿರಾಸ್ತಿಗಳನ್ನು ಪ್ರಸಕ್ತ ವರ್ಷದ ಲಾಭ ಮತ್ತು ನಷ್ಟ ಖಾತೆಗೆ ಆಕರಿಸಲಾಗಿದೆ.

ಊ) ಪ್ರತೀ ಆಸ್ತಿ ಹೊಣೆ ಪಟ್ಟಿ ದಿನಾಂಕದಲ್ಲಿರುವಂತೆ ಬಾಕಿ ಉಳಿದಿರುವ, ಆಸ್ತಿಗಳು, ಸ್ಥಾವರಗಳು ಮತ್ತು ಯಂತ್ರೋಪಕರಣಗಳ ಸ್ವಾಧೀನತೆಗಾಗಿ ಪಾವತಿಸಲಾದ ಮುಂಗಡಗಳನ್ನು ನಾಚಾಲ್ತಿ ಖಾತೆಗಳಡಿಯಲ್ಲಿ ಬಂಡವಾಳ ಮುಂಗಡಗಳೆಂದು ಲೆಕ್ಕಿಸಲಾಗುವುದು. ಸ್ಥಿರಾಸ್ತಿಗಳ ಉಪಯುಕ್ತ ಕಾಲಾವಧಿ ಮತ್ತು/ಅಥವಾ ದಕ್ಷತೆಗಳ ಸುಧಾರಣೆಗಾಗಿ ನಂತರದಲ್ಲಿ ಮಾಡಲಾದ ನವೀಕರಣ ಹಾಗೂ ಆಧುನೀಕರಣಗಳ ವೆಚ್ಚಗಳನ್ನು ಅವುಗಳಿಂದ ಕಂಪೆನಿಗೆ ಭವಿಷ್ಯದಲ್ಲಿ ಆರ್ಥಿಕ ಲಾಭವಾಗುವ ಸಂಭವವನ್ನು ಪರಿಗಣಿಸಿ, ಸಂಬಂಧಪಟ್ಟ ಆಸ್ತಿಗಳ ಮೂಲವೆಚ್ಚಕ್ಕೆ ಸೇರಿಸಲಾಗುವುದು ಅಥವಾ ಪ್ರತ್ಯೇಕ ಆಸ್ತಿಯಾಗಿ ಲೆಕ್ಕಿಸಲಾಗುವುದು.

2.3 ಸವಕಳಿ:

ಅ) ಎಲ್ಲಾ ಸ್ವತ್ತುಗಳ ಮೇಲಿನ ಸವಕಳಿ (ಭೋಗ್ಯದಲ್ಲಿ ಇರುವ ಭೂಮಿ ಮತ್ತು ಗ್ರಾಹಕ ಕೊಡುಗೆ ಮತ್ತು ಅನುದಾನದಿಂದ ರಚಿಸಲಾದ ಸ್ವತ್ತುಗಳನ್ನು ಹೊರತುಪಡಿಸಿ) ಕಾಲಕಾಲಕ್ಕೆ ಕೆಇಆರ್‌ಸಿ ಸೂಚಿಸಿದ ದರಗಳಲ್ಲಿ ಸ್ಟೈಟ್ ಲೈನ್ ವಿಧಾನದಲ್ಲಿ ಒದಗಿಸಲಾಗುತ್ತದೆ.

ಆ) ಭೋಗ್ಯದಲ್ಲಿ ಇರುವ ಭೂಮಿಗೆ, ಅವಧಿಯ ಆಧಾರದಲ್ಲಿ ದರಗಳನ್ನು ನಿಗದಿಪಡಿಸಿ ಸವಕಳಿ ನೀಡಲಾಗುತ್ತದೆ.

ಇ) 1985 ರ ಇಎಸ್‌ಎಎಆರ್‌ನ ಅನುಬಂಧ -3 ರ ಪ್ಯಾರಾ 2.37 ರ ಪ್ರಕಾರ, ₹500/- ಅಥವಾ ಅದಕ್ಕಿಂತ ಕಡಿಮೆ ವೆಚ್ಚದ ಸ್ಥಾವರ ಮತ್ತು ಯಂತ್ರೋಪಕರಣಗಳನ್ನು ಸ್ಥಾಪಿಸಿದ ಮತ್ತು ಬಳಕೆಗೆ ಹಾಕಿದ ವರ್ಷದಲ್ಲಿ 100% ರಷ್ಟು ಸವಕಳಿ ಮಾಡಲಾಗಿದೆ.

ಈ) ಕಾರ್ಯಾಚರಣೆಯ ಮೊದಲ ವರ್ಷದಿಂದ ಸವಕಳಿ ವಿಧಿಸಲಾಗುತ್ತದೆ. ವರ್ಷದಲ್ಲಿ ಬಂಡವಾಳ ಹೂಡಿದ ಸಂದರ್ಭದಲ್ಲಿ ಪ್ರಮಾಣಾನುಗುಣ(ಪ್ರೊ-ರಾಟಾ)ದ ಆಧಾರದ ಮೇಲೆ ವಿಧಿಸಲಾಗುತ್ತದೆ.

ಉ) ಸವಕಳಿಯ ದರಗಳು ಕಾಯಿದೆಯ ಖಖ ನೇ ವೇಳಾಪಟ್ಟಿಯಲ್ಲಿ ಸೂಚಿಸಲಾದ ದರಗಳಿಗೆ ಅನುಗುಣವಾಗಿಲ್ಲ ಆದರೆ ಕೆಇಆರ್‌ಸಿ ನಿಯಮಗಳನ್ನು ಅನುಸರಿಸುತ್ತವೆ.

ಊ) ಸವಕಳಿ ದರಗಳನ್ನು ಈ ಕೆಳಗಿನಂತೆ ಬಳಸಲಾಗುತ್ತದೆ:

ಆಸ್ತಿ	ಸವಕಳಿ ದರ
ಕಟ್ಟಡಗಳು	3.34%
ಹೈಡ್ರಾಲಿಕ್ ವರ್ಕ್ಸ್	5.28%
ಇತರೆ ಸಿವಿಲ್ ವರ್ಕ್ಸ್	3.34%
ಸ್ಥಾವರ ಮತ್ತು ಸಲಕರಣೆ	5.28%
ಲೈನ್ಸ್, ಕೇಬಲ್ ನೆಟ್‌ವರ್ಕ್‌ಗಳು	5.28%
ವಾಹನಗಳು	9.50%
ಪೀಠೋಪಕರಣಗಳು ಮತ್ತು ನೆಲೆವಸ್ತುಗಳು	6.33%
ಕಛೇರಿ ಪರಿಕರಗಳು	6.33%
ಕಂಪ್ಯೂಟರ್‌ಗಳು	15.00%

2.4 ಸ್ಪರ್ಶಾತೀತ ಆಸ್ತಿಗಳು

ಅ) ಸ್ಪರ್ಶಾತೀತ ಆಸ್ತಿಗಳನ್ನು ಅಂತಹ ಆಸ್ತಿಗಳ ಸ್ವಾಧೀನತೆಗೆ ಭರಿಸಲಾದ ಮೊತ್ತಗಳಲ್ಲಿ ಲೆಕ್ಕೀಕರಿಸಲಾಗಿದೆ. ಸೀಮಿತ ಉಪಯುಕ್ತ ಕಾಲಾವಧಿಯನ್ನು ಹೊಂದಿರುವ ಸ್ಪರ್ಶಾತೀತ ಆಸ್ತಿಗಳನ್ನು ಅವುಗಳ ಸಂಚಿತ ಸವಕಳಿ ಹಾಗೂ ಸಂಚಿತ ನಷ್ಟಗಳನ್ನು ಕಳೆದು ಮೂಲವೆಚ್ಚದಲ್ಲಿ ಲೆಕ್ಕೀಕರಿಸಿದೆ. ಸ್ಪರ್ಶಾತೀತ ಆಸ್ತಿಗಳ ಅಂದಾಜು ಉಪಯುಕ್ತ ಕಾಲಾವಧಿ ಅಂದರೆ, ಗುತ್ತಿಗೆ ಅವಧಿ ಅಥವಾ ಪರವಾನಗಿ ಅವಧಿ ಅಥವಾ ಪರವಾನಗಿಯ ಅನುಪಸ್ಥಿತಿಯಲ್ಲಿ ಮೂರು ವರ್ಷಗಳ ಅವಧಿಯಲ್ಲಿ ಸ್ಟ್ರೈಟ್ ಲೈನ್ ವಿಧಾನದಲ್ಲಿ ಸವಕಳಿಯನ್ನು ಆಕರಿಸಲಾಗುವುದು. ವರದಿ ಮಾಡಲಾಗುವ ಪ್ರತೀ ಅವಧಿಯ ಅಂತ್ಯದಲ್ಲಿ ಉಪಯುಕ್ತ ಕಾಲಾವಧಿ ಹಾಗೂ ಸವಕಳಿ ವಿಧಾನಗಳನ್ನು ಪುನರ್ ಪರಿಶೀಲಿಸಿ ವ್ಯತ್ಯಾಸಗಳಿದ್ದಲ್ಲಿ ಮುಂದಿನ ಅವಧಿಯಲ್ಲಿ ಲೆಕ್ಕೀಕರಿಸಲಾಗಿದೆ. ಪ್ರತ್ಯೇಕವಾಗಿ ಲೆಕ್ಕೀಕರಿಸಲಾದ ಅನಿರ್ಧಿಷ್ಟಾವಧಿಯ ಉಪಯುಕ್ತ ಕಾಲಾವಧಿಯನ್ನು ಹೊಂದಿರುವ ಸ್ಪರ್ಶಾತೀತ ಆಸ್ತಿಗಳನ್ನು, ಅನ್ವಯವಾಗಿದ್ದಲ್ಲಿ ಅವುಗಳ ಸಂಚಿತ ನಷ್ಟಗಳನ್ನು ಕಳೆದ ಮೂಲವೆಚ್ಚದಲ್ಲಿ ಲೆಕ್ಕೀಕರಿಸಿದೆ.

ಆ) ಸ್ಪರ್ಶಾತೀತ ಆಸ್ತಿಗಳನ್ನು, ವಿಲೇವಾರಿ ಮಾಡಿದಾಗ ಅಥವಾ ಅವುಗಳ ಬಳಕೆಯಿಂದ ಭವಿಷ್ಯದಲ್ಲಿ ಯಾವುದೇ ಆರ್ಥಿಕ ಲಾಭ ಇಲ್ಲದಾದಾಗ ಅವುಗಳ ಬೆಲೆಯನ್ನು ಲೆಕ್ಕಪತ್ರಗಳಿಂದ ಹಿಂಪಡೆಯಲಾಗಿದೆ. ಸ್ಪರ್ಶಾತೀತ ಆಸ್ತಿಗಳನ್ನು ವಿಲೇವಾರಿ ಮಾಡಿದಾಗ, ಆಸ್ತಿಗಳ ಪುಸ್ತಕದ ಬೆಲೆ ಹಾಗೂ ಮಾರಾಟದ ಬೆಲೆಗಳ ನಡುವಿನ ವ್ಯತ್ಯಾಸದ ಮೊತ್ತವನ್ನು ಅಂತಹ ಆಸ್ತಿಗಳ ವಿಲೇವಾರಿ ಅಥವಾ ನಿವೃತ್ತಿಯಿಂದ ಉದ್ಭವಿಸಿದ ಗಳಿಕೆ ಅಥವಾ ನಷ್ಟವೆಂದು ಪರಿಗಣಿಸಿ ಲಾಭ ಅಥವಾ ನಷ್ಟವೆಂದು ಲೆಕ್ಕಿಸಲಾಗುವುದು.

ಇ) ಭವಿಷ್ಯದ ಬಳಕೆಗಾಗಿ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸಲು ತಗುಲಿದ ವಾಸ್ತವಿಕ ವೆಚ್ಚಗಳನ್ನು ಪ್ರಗತಿಯಲ್ಲಿರುವ ಸ್ಪರ್ಶಾತೀತ ಆಸ್ತಿಗಳೆಂದು ದಾಖಲಿಸಲಾಗಿದೆ ಮತ್ತು ಸಮಾಪನಾ/ಕಾರ್ಯಾರಂಭ ಪ್ರಮಾಣ ಪತ್ರ ಸ್ವೀಕೃತಿಯಾದಾಕ್ಷಣ ಅವುಗಳನ್ನು ಆಸ್ತೀಕರಿಸಲಾಗುವುದು. ಅವುಗಳನ್ನು ಮೂಲಬೆಲೆಯಲ್ಲಿಯೇ ಲೆಕ್ಕಿಸಲಾಗಿದೆ.

2.5 ಮಾರಾಟಕ್ಕಿರುವ ನಾಚಾಲ್ತಿ ಆಸ್ತಿಗಳು (ಅಥವಾ ವಿಲೇವಾರಿ ಗುಂಪುಗಳು)

ನಾಚಾಲ್ತಿ ಆಸ್ತಿಗಳ (ಅಥವಾ ವಿಲೇವಾರಿ ಗುಂಪುಗಳು) ಪುಸ್ತಕದ ಬೆಲೆಯನ್ನು, ಮುಖ್ಯವಾಗಿ ಮಾರಾಟ ವಹಿವಾಟಿನಿಂದಲೇ ವಸೂಲಿ ಮಾಡಿಕೊಳ್ಳಬೇಕಾದಾಗ ಹಾಗೂ ಮಾರಾಟವು ಸುಲಭಸಾಧ್ಯವೆಂದು ಪರಿಗಣಿಸಲ್ಪಟ್ಟಿದ್ದಾಗ ಅಂತಹ ನಾಚಾಲ್ತಿ ಆಸ್ತಿಗಳನ್ನು ಮಾರಾಟಕ್ಕಿರುವ ನಾಚಾಲ್ತಿ ಆಸ್ತಿಗಳೆಂದು ವರ್ಗೀಕರಿಸಲಾಗಿದೆ. ಆಸ್ತಿ ಅಥವಾ ವಿಲೇವಾರಿ ಗುಂಪುಗಳು ಪ್ರಸ್ತುತ ಇರುವ ಸ್ಥಿತಿಯಲ್ಲಿಯೇ ತಕ್ಷಣದ ಮಾರಾಟಕ್ಕೆ ಲಭ್ಯವಿರುವಾಗ, ಮಾರಾಟವನ್ನು ಹಿಂಪಡೆಯುವುದು ಸಾಧ್ಯವಿಲ್ಲದಿರುವಾಗ ಮತ್ತು ವರ್ಗೀಕರಣದ ಒಂದು ವರ್ಷದ ಒಳಗಾಗಿ ಮಾರಾಟ ಮಾಡಲು ಉದ್ದೇಶಿಸಲಾದ ಸಂದರ್ಭಗಳಲ್ಲಿ ಮಾತ್ರ ಮಾರಾಟವು ಸುಲಭಸಾಧ್ಯವೆಂದು ಪರಿಗಣಿಸಲಾಗುತ್ತದೆ. ಮಾರಾಟಕ್ಕಿರುವ ನಾಚಾಲ್ತಿ ಆಸ್ತಿಗಳೆಂದು ವರ್ಗೀಕರಿಸಲಾದ ನಾಚಾಲ್ತಿ ಆಸ್ತಿಗಳು ಅಥವಾ ವಿಲೇವಾರಿ ಗುಂಪುಗಳನ್ನು ಅವುಗಳ ಮಾರಾಟ ವೆಚ್ಚವನ್ನು ಕಳೆದು ಸಾಗಿಸುವ ಮೊತ್ತಕ್ಕಿಂತ ಕಡಿಮೆ ಅಥವಾ ವೆಚ್ಚ ಹೊರತುಪಡಿಸಿದ ನಂತರದ ನ್ಯಾಯಯುತ ಮೌಲ್ಯ ಇವುಗಳಲ್ಲಿ ಯಾವುದು ಕಡಿಮೆಯೋ ಅದರಲ್ಲಿ ಲೆಕ್ಕೀಕರಿಸಲಾಗುತ್ತದೆ. ಆಸ್ತಿಗಳು, ಸ್ಥಾವರಗಳು ಮತ್ತು ಯಂತ್ರೋಪಕರಣಗಳನ್ನು ಮಾರಾಟಕ್ಕಿರುವ ನಾಚಾಲ್ತಿ ಆಸ್ತಿಗಳೆಂದು ವರ್ಗೀಕರಿಸಲಾದ ತಕ್ಷಣದಿಂದ ಸವಕಳಿ ಆಕರಿಸುವುದನ್ನು ಸ್ಥಗಿತಗೊಳಿಸಲಾಗುತ್ತದೆ. ಮಾರಾಟಕ್ಕಿರುವ ನಾಚಾಲ್ತಿ ಆಸ್ತಿಗಳು ಹಾಗೂ ಜವಾಬ್ದಾರಿಗಳನ್ನು ಹಣಕಾಸು ವಿವರಣಾ ಪಟ್ಟಿಗಳಲ್ಲಿ ಪ್ರತ್ಯೇಕವಾಗಿ ಪ್ರಸ್ತುತಪಡಿಸಲಾಗುತ್ತದೆ.

2.6 ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು

ಬಂಡವಾಳ ಕಾಮಗಾರಿಗಳಿಗೆ ನೀಡಲಾದ ಸಾಮಾಗ್ರಿಗಳನ್ನು, ಆಯಾ ಸಾಮಾಗ್ರಿಗಳನ್ನು ನೀಡುವ ಮೊದಲು ಇದ್ದ ಸರಾಸರಿ ದರಗಳಲ್ಲಿಯೇ ಮೌಲ್ಯಮಾಪನ ಮಾಡಲಾಗಿದೆ. ಕಾಮಗಾರಿಗಳ ಸಮಾಪನಾ ವರದಿಗಳು ಅಥವಾ ಕಾಮಗಾರಿ ಮುಕ್ತಾಯದ ತಾಂತ್ರಿಕ ಧೃಢೀಕರಣಗಳು ಸ್ವೀಕೃತಗೊಂಡ ನಂತರದಲ್ಲಿ ವೆಚ್ಚಗಳನ್ನು ಆಸ್ತೀಕರಿಸಲಾಗುವುದು.

2.7 ದಾಸ್ತಾನುಗಳು

ಎ) ಇನ್ವೆಂಟರಿಗಳನ್ನು ತೂಕದ ಸರಾಸರಿ ಆಧಾರದ ಮೇಲೆ ನಿರ್ಧರಿಸುವ ವೆಚ್ಚಕ್ಕಿಂತ ಕಡಿಮೆ ಮತ್ತು ಅನ್ವಯವಾಗುವಲ್ಲೆಲ್ಲಾ ನಿವ್ವಳ ನೈಜ ಮೌಲ್ಯ ಇದರಲ್ಲಿ ಯಾವುದು ಕಡಿಮೆಯೋ ಅದರಲ್ಲಿ ಮೌಲ್ಯೀಕರಿಸಲಾಗುತ್ತದೆ. ನಿವ್ವಳ ವಾಸ್ತವಿಕ ಮೌಲ್ಯವೆಂದರೆ ಮಾರಾಟ ಮಾಡಲು ಅಗತ್ಯವಾದ ಅಂದಾಜು ವೆಚ್ಚಗಳನ್ನು ಕಡಿಮೆಗೊಳಿಸಿದ ಅಂದಾಜು ಮಾರಾಟ ಮೊತ್ತ.

ಬಿ) ಕಚ್ಚಾ ವಸ್ತುಗಳನ್ನು ಖರೀದಿ ವೆಚ್ಚದಲ್ಲಿ (ತೆರಿಗೆಗಳನ್ನು ಒಳಗೊಂಡಂತೆ) ಮೌಲ್ಯೀಕರಿಸಲಾಗುತ್ತದೆ.

ಸಿ) ವಸ್ತುಗಳ ನೀಡಿಕೆಗಳನ್ನು ತೂಕದ ಸರಾಸರಿ ದರದಲ್ಲಿ ಮೌಲ್ಯೀಕರಿಸಲಾಗಿದೆ.

2.8 ಕಂದಾಯ ಗುರುತಿಸುವಿಕೆ

ಅ) ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದಿಂದ ಅನುಮೋದಿತವಾದ ಜಕಾತಿ ದರಗಳ ಆಧಾರದಲ್ಲಿ ವಿದ್ಯುತ್ ಮಾರಾಟವನ್ನು ಲೆಕ್ಕಿಸಲಾಗಿದೆ.

ಆ) ಗ್ರಾಹಕರೊಂದಿಗಿನ ಒಪ್ಪಂದಗಳಿಂದ ಬರುವ ಕಂದಾಯವನ್ನು ವಿದ್ಯುತ್ ಸರಬರಾಜಿನ ಮೇಲೆ ಗುರುತಿಸಲಾಗುತ್ತದೆ ಅಥವಾ ಕಂಪನಿಯು ಗ್ರಾಹಕರಿಗೆ ಸೇವೆಗಳನ್ನು ಸೂಕ್ತವಾದ ನಿಯಂತ್ರಕ ಚೌಕಟ್ಟಿನಡಿಯಲ್ಲಿ ಅರ್ಹತೆ ಪಡೆದಿರುವ ಪರಿಗಣನೆಯನ್ನು ಪ್ರತಿಬಿಂಬಿಸುತ್ತದೆ.

ಇ) ಕರ್ನಾಟಕ ಸರ್ಕಾರ ಬಿಡುಗಡೆ ಮಾಡಿದ ಜಕಾತಿ / ಗ್ರಾಮೀಣ ವಿದ್ಯುದ್ದೀಕರಣ ಸಬ್ಸಿಡಿಯನ್ನು ಕರ್ನಾಟಕ ಸರ್ಕಾರದ ಆದೇಶ ಇಎನ್ 48 ಪಿಎಸ್ಆರ್ 2006 ಬೆಂಗಳೂರು, ದಿನಾಂಕ 13 ಜೂನ್ 2007ರ ಪ್ರಕಾರ ಆದಾಯದ ಭಾಗವಾಗಿ ಗುರುತಿಸಲಾಗಿದೆ.

ಆಯೋಗವು ನಿರ್ಧರಿಸಿದ ಜಕಾತಿ ಪ್ರಕಾರ (ಚಾಲ್ತಿಯಲ್ಲಿರುವ ಜಕಾತಿ ಆದೇಶದ ಪ್ರಕಾರ) ಬಿಜೆ/ಕೆಜೆ ಮತ್ತು ಐಪಿ ಸೆಟ್ ವರ್ಗದವರಿಗೆ ತಿಂಗಳಿಗೆ ಪ್ರತಿ ಸ್ಥಾಪನೆಗೆ ಕ್ರಮವಾಗಿ 40 ಯೂನಿಟ್ ಗಳವರೆಗೆ ಮತ್ತು 10 ಹೆಚ್.ಪಿ ಗಳನ್ನು ಒಳಗೊಂಡಂತೆ ಜಕಾತಿ ಸಬ್ಸಿಡಿಯನ್ನು ಸರ್ಕಾರದಿಂದ ಪಡೆಯಲಾಗುತ್ತದೆ.

ಈ) ಬಿಲ್ ಮಾಡದ ಕಂದಾಯ ಬೇಡಿಕೆಯನ್ನು ಸೂಕ್ತವಾಗಿ ಅಂದಾಜು ಮಾಡುವ ಮೂಲಕ ವರ್ಷದ ಆದಾಯವನ್ನು ಸರಿಹೊಂದಿಸಲಾಗುತ್ತದೆ.

ಎ) ಹೆಚ್ಟಿ ಮತ್ತು ಎಲ್ಟಿ-5 (40 ಹೆಚ್.ಪಿ ಗಿಂತ ಹೆಚ್ಚಿನ) ಬಿಲ್ ಮಾಡದ ಕಂದಾಯ ಬೇಡಿಕೆಯನ್ನು(ಯುಬಿಆರ್) ಏಪ್ರಿಲ್1 ರಂದು ವಿಧಿಸಲಾದ ಮಾರ್ಚ್ ಬಳಕೆಯನ್ನು ಪರಿಗಣಿಸಿ ಲೆಕ್ಕಹಾಕಲಾಗುತ್ತದೆ ಮತ್ತು ಇತರೆ ಎಲ್ಟಿ ವರ್ಗಗಳಿಗೆ ಸಂಬಂಧಿಸಿದಂತೆ ಯುಬಿಆರ್ ನ್ನು ಮಾರ್ಚ್ ಮಾಹೆಯ ನಿಜವಾದ ಬಳಕೆಯನ್ನು ರೀಡಿಂಗ್ ದಿನಾಂಕಗಳ ಅನುಪಾತದ ಆಧಾರದ ಮೇಲೆ ಲೆಕ್ಕಹಾಕಲಾಗುತ್ತದೆ.

2.9 ಇತರೆ ಆದಾಯ

ಅ) ಕಾಮಗಾರಿ/ಸರಬರಾಜುಗಳ ವಿಳಂಬದ ಕಡೆಗೆ ಗುತ್ತಿಗೆದಾರರು / ಸರಬರಾಜುದಾರರಿಂದ ವಸೂಲಿ ಮಾಡಿದ ಮೊತ್ತಕ್ಕೆ ಸಂಬಂಧಿಸಿದಂತೆ, ಗುತ್ತಿಗೆದಾರ / ಸರಬರಾಜುದಾರರ ವಿಳಂಬ ಕ್ಷಮಾದಾನ ವಿನಂತಿಯನ್ನು ಸಕ್ಷಮ ಪ್ರಾಧಿಕಾರವು ತಿರಸ್ಕರಿಸಿದ ನಂತರ ಈ ಮೊತ್ತವನ್ನು ಆದಾಯವೆಂದು

ಗುರುತಿಸಲಾಗುತ್ತದೆ. ಅಂತಹ ಸಮಯದವರೆಗೆ ಪ್ರಸ್ತುತ ಹೊಣೆಗಾರಿಕೆಗಳ ಅಡಿಯಲ್ಲಿ ಇದನ್ನು ಪರಿಗಣಿಸಲಾಗುತ್ತದೆ. ಅಂತಹ ಯಾವುದೇ ವಿನಂತಿಯ ಅನುಪಸ್ಥಿತಿಯಲ್ಲಿ, ಹಾಗೆ ವಸೂಲಿ ಮಾಡಿದ ಮೊತ್ತವನ್ನು ದಂಡವೆಂದು ಪರಿಗಣಿಸಲಾಗುತ್ತದೆ ಮತ್ತು ವಿವಿಧ ಆದಾಯಕ್ಕೆ ಸಲ್ಲುತ್ತದೆ.

ಆ) ಬಡ್ಡಿ ಆದಾಯವನ್ನು ಸಮಯಾನುಪಾತದಲ್ಲಿ ಬಾಕಿ ಮೊತ್ತವನ್ನು ಗುರುತಿಸಿ ಅನ್ವಯಿಸುವ ದರಗಳಲ್ಲಿ ಲೆಕ್ಕೀಕರಿಸಲಾಗಿದೆ.

ಇ) ಪರಿಣಾಮಕಾರಿ ಸ್ವತ್ತು ವಿಧಾನವನ್ನು ಬಳಸುವುದಕ್ಕಾಗಿ ಹಣಕಾಸಿನ ಸ್ವತ್ತುಗಳಿಂದ ಉಂಟಾಗುವ ಬಡ್ಡಿ ಆದಾಯವನ್ನು ಲೆಕ್ಕಹಾಕಲಾಗುವುದು.

2.10 ನಿಯಂತ್ರಿತ ಆಸ್ತಿ/ಹೊಣೆಗಳು:

ಅ) ಕಂಪನಿಯು ತನ್ನ ವ್ಯಾಪ್ತಿಗೆ ಒಳಪಡುವ ಗ್ರಾಹಕರಿಗೆ ವಿದ್ಯುತ್ ಸರಬರಾಜು ಕಾರ್ಯಾಚರಣೆಯಲ್ಲಿ ತೊಡಗಿದೆ. ದರಗಳನ್ನು ಮಾನ್ಯ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ನಿಯಂತ್ರಿಸುತ್ತದೆ. ವಿದ್ಯುತ್ ಕಾಯ್ದೆ 2003 ರ ಸೆಕ್ಷನ್ 62 ರ ಪ್ರಕಾರ, ಜಕಾತಿಯನ್ನು ನಿರ್ಧರಿಸಲು ಚಾವಿಸನಿನಿಯು ನಿಯಂತ್ರಣ ಆಯೋಗಕ್ಕೆ ವಾರ್ಷಿಕವಾಗಿ ಜಕಾತಿ ಅರ್ಜಿಯನ್ನು ಸಲ್ಲಿಸುತ್ತಿದೆ. ನಿಯಂತ್ರಣ ಆಯೋಗ ಹೊರಡಿಸಿದ ಜಕಾತಿ ಆದೇಶದಲ್ಲಿ ಅಂಗೀಕರಿಸಿದಂತೆ ಕಂಪನಿಯು ಗ್ರಾಹಕರಿಂದ ಜಕಾತಿಯನ್ನು ಸಂಗ್ರಹಿಸುತ್ತದೆ. ಮಾನ್ಯ ಕೆಇಆರ್‌ಸಿ ತನ್ನ ಸುಂಕದ ಆದೇಶಗಳ ಮೂಲಕ ನಂತರದ ಅವಧಿಗಳಲ್ಲಿ ಕೊರತೆಗಳನ್ನು ಮರುಪಡೆಯಲು ಅವಕಾಶ ನೀಡುತ್ತದೆ.

ಆ) ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ರೂಪಿಸಿದ ಅನ್ವಯಿಕ ನಿಬಂಧನೆಯ ಬಗ್ಗೆ ಕಂಪನಿಯ ತಿಳುವಳಿಕೆಯ ಆಧಾರದ ಮೇಲೆ ನಂತರದ ಅವಧಿಗಳಲ್ಲಿ ಲಾಭ ಮತ್ತ ನಷ್ಟದ ಹೇಳಿಕೆಯಲ್ಲಿನ ವೆಚ್ಚ ಮತ್ತು ಆದಾಯವನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಗುರುತಿಸಲಾಗಿದೆ. ಅಥವಾ ಅವುಗಳ ಘೋಷಣೆಗಳು /ಆದೇಶಗಳು, ಅನುಗುಣವಾದ ಬಾಕಿಗಳನ್ನು ಬ್ಯಾಲೆನ್ಸ್ ಶೀಟ್‌ನಲ್ಲಿ ನಿಯಂತ್ರಕ ಡೆಫರಲ್ ಖಾತೆಯ ಬಾಕಿಗಳಂತೆ ತೋರಿಸಲಾಗುತ್ತದೆ.

2.11 ಸಾಲ ಸಂಬಂಧಿ ವೆಚ್ಚಗಳು:

ಅ) ಸಾಲ ಸಂಬಂಧಿ ವೆಚ್ಚಗಳು ಆರ್ಥಿಕ ಸಾಲಗಳಿಗೆ ಕಂಪೆನಿಯು ಭರಿಸಿದ ಬಡ್ಡಿಯ ಮೊತ್ತ ಹಾಗೂ ಇತರ ವೆಚ್ಚಗಳನ್ನು, ಒಳಗೊಂಡಿರುತ್ತವೆ. ಉದ್ದೇಶಿತ ಬಳಕೆ ಅಥವಾ ಮಾರಾಟಕ್ಕೆ ಸಿದ್ಧತೆಗೊಳ್ಳಲು ಗಣನೀಯ ಕಾಲಾವಕಾಶ ತೆಗೆದುಕೊಳ್ಳುವ ಆಸ್ತಿಗಳ ಸ್ವಾಧೀನ, ನಿರ್ಮಾಣ ಅಥವಾ ಉತ್ಪಾದನೆಗೆ ನೇರವಾಗಿ ಕಾರಣವಾಗುವ ಸಾಲ ಸಂಬಂಧಿ ವೆಚ್ಚಗಳನ್ನು ಸಂಬಂಧಪಟ್ಟ ಆಸ್ತಿಗಳ ವೆಚ್ಚದ ಭಾಗವಾಗಿ ಬಂಡವಾಳೀಕರಿಸಲಾಗುವುದು. ಇತರೆ ಎಲ್ಲಾ ಸಾಲದ ವೆಚ್ಚಗಳನ್ನು ಅವುಗಳನ್ನು ಭರಿಸಲಾದ ಅವಧಿಯ ವೆಚ್ಚಗಳೆಂದು ಪರಿಗಣಿಸಲಾಗುವುದು.

ಆ) ಸಾಲ ಸಂಬಂಧಿ ವೆಚ್ಚಗಳ ಬಂಡವಾಳೀಕರಣದಲ್ಲಿ ಮಾಡಬೇಕಾದ, ವ್ಯಾವಹಾರಿಕ ವೆಚ್ಚಗಳು, ಪ್ರೀಮಿಯಂಗಳು/ ರಿಯಾಯಿತಿಗಳ ಹೊಂದಾಣಿಕೆ ನಂತರ ಪರಿಣಾಮಕಾರಿ ಬಡ್ಡಿ ದರದಲ್ಲಿ ಸಾಲ ಸಂಬಂಧಿ ವೆಚ್ಚಗಳನ್ನು ಬಂಡವಾಳೀಕರಣಗೊಳಿಸಲಾಗುವುದು.

2.12 ಆದಾಯದ ಮೇಲೆ ತೆರಿಗೆಗಳು:

ಆದಾಯ ತೆರಿಗೆ ವೆಚ್ಚವು, ಪ್ರಸ್ತುತ ಪಾವತಿಸಬೇಕಾದ ಪ್ರಚಲಿತ ತೆರಿಗೆ ಹಾಗೂ ಮುಂದೂಡಿದ ತೆರಿಗೆಗಳ ಒಟ್ಟು ಮೊತ್ತವನ್ನು ಪ್ರತಿನಿಧಿಸುತ್ತದೆ.

ಅ) ಪ್ರಚಲಿತ ತೆರಿಗೆ:

ಪಾವತಿಸಬೇಕಾದ ಪ್ರಚಲಿತ ತೆರಿಗೆಯು, ತೆರಿಗೆ ಯೋಗ್ಯ ಲಾಭದ ಮೊತ್ತದ ಮೇಲೆ ಆಧರಿತವಾಗಿರುತ್ತದೆ. ಇತರೆ ವರ್ಷಗಳ, ತೆರಿಗೆ ವಿಧಿಸಬಹುದಾದ ಅಥವಾ ಕಳೆಯಬಹುದಾದ ಆದಾಯ ಅಥವಾ ವೆಚ್ಚಗಳಿಂದಾಗಿ ಮತ್ತು ತೆರಿಗೆ ವಿಧಿಸಲೇಬಾರದ ಅಥವಾ ಕಳೆಯಬಾರದ

ಅಂಶಗಳಂದಾಗಿ, ತೆರಿಗೆ ಯೋಗ್ಯ ಲಾಭದ ಮೊತ್ತವು ಲಾಭ ಮತ್ತು ನಷ್ಟಗಳ ಖಾತೆಯಲ್ಲಿನ ತೆರಿಗೆ ಪೂರ್ವ ಲಾಭದ ಮೊತ್ತಕ್ಕಿಂತ ಭಿನ್ನವಾಗಿರುತ್ತದೆ. ಜಾರಿ ಮಾಡಲಾಗಿರುವ ತೆರಿಗೆ ದರಗಳಲ್ಲಿ ಅಥವಾ ವರದಿ ಮಾಡಲಾದ ಅವಧಿಯ ಅಂತ್ಯದಲ್ಲಿ ಮೂಲಭೂತವಾಗಿ ಜಾರಿಗೊಳಿಸಲಾದ ತೆರಿಗೆ ದರಗಳನ್ನು ಬಳಸಿ ಕಂಪೆನಿಯ ಪ್ರಚಲಿತ ತೆರಿಗೆಗಳನ್ನು ಲೆಕ್ಕಾಚಾರ ಮಾಡಲಾಗುತ್ತದೆ.

ಆ) ಮುಂದೂಡಲಾದ ತೆರಿಗೆಗಳು

ಹಣಕಾಸು ವಿವರಣಾ ಪಟ್ಟಿಗಳ ಪ್ರಕಾರ ಆಸ್ತಿಗಳು ಮತ್ತು ಜವಾಬ್ದಾರಿಗಳ ಪ್ರಚಲಿತ ಮೌಲ್ಯ ಮತ್ತು ಅದಕ್ಕನುಗುಣವಾಗಿ, ತೆರಿಗೆ ಯೋಗ್ಯ ಲಾಭವನ್ನು ನಿರ್ಧರಿಸಲು ಬಳಸಲಾದ ತೆರಿಗೆ ಮೂಲಗಳ ನಡುವಿನ ತಾತ್ಕಾಲಿಕ ವ್ಯತ್ಯಾಸದ ಮೊತ್ತದ ಆಧಾರದ ಮೇಲೆ ಮುಂದೂಡಲಾದ ತೆರಿಗೆಗಳನ್ನು ಲೆಕ್ಕಹಾಕಲಾಗುವುದು. ಕಂಪೆನಿಯ ಮುಂದೂಡಲಾದ ತೆರಿಗೆ ಆಸ್ತಿಗಳು ಮತ್ತು ಜವಾಬ್ದಾರಿಗಳನ್ನು, ಜಾರಿ ಮಾಡಲಾಗಿರುವ ತೆರಿಗೆ ದರಗಳು (ಮತ್ತು ತೆರಿಗೆ ಕಾನೂನುಗಳು) ಅಥವಾ ವರದಿ ಮಾಡಲಾದ ಅವಧಿಯ ಅಂತ್ಯದಲ್ಲಿ ಮೂಲಭೂತವಾಗಿ ಜಾರಿಗೊಳಿಸಲಾದ ತೆರಿಗೆ ದರಗಳನ್ನು ಆಧರಿಸಿ, ಜವಾಬ್ದಾರಿಗಳು ಪಾವತಿಯಾಗುವ ಅಥವಾ ಆಸ್ತಿಗಳು ಸ್ವೀಕೃತವಾಗುವ ಅವಧಿಯಲ್ಲಿ ಅನ್ವಯವಾಗಬಹುದೆಂದು ಅಂದಾಜಿಸಲಾದ ತೆರಿಗೆ ದರಗಳಲ್ಲಿ ಮೌಲ್ಯಮಾಪನ ಮಾಡಲಾಗುವುದು.

ಸಾಮಾನ್ಯವಾಗಿ, ಕಳೆಯಬಹುದಾದ ತಾತ್ಕಾಲಿಕ ವ್ಯತ್ಯಾಸಗಳಿಗೆ ಎದುರಾಗಿ ಬಳಸಬಹುದಾದ, ತೆರಿಗೆ ಯೋಗ್ಯ ಲಾಭಗಳಿರುವ ಸಂಭವನೀಯತೆಯಿದ್ದಲ್ಲಿ ಅಷ್ಟಕ್ಕೆ ಮಿತಿಗೊಳಿಸಿ ಎಲ್ಲಾ ತೆರಿಗೆಯೋಗ್ಯ ತಾತ್ಕಾಲಿಕ ವ್ಯತ್ಯಾಸಗಳಿಗೆ ಮುಂದೂಡಲಾದ ತೆರಿಗೆ ಜವಾಬ್ದಾರಿಗಳನ್ನು ಗುರುತಿಸಲಾಗುವುದು. ತಾತ್ಕಾಲಿಕ ವ್ಯತ್ಯಾಸಗಳಿಗೆ ಎದುರಾಗಿ ಬಳಸಬಹುದಾದ, ಭವಿಷ್ಯದ ತೆರಿಗೆ ಯೋಗ್ಯ ಲಾಭಗಳಿರುವ ಸಂಭವನೀಯತೆಯಿದ್ದಲ್ಲಿ ಅಷ್ಟಕ್ಕೆ ಮಿತಿಗೊಳಿಸಿ ಮುಂದೂಡಲಾದ ತೆರಿಗೆ ಆಸ್ತಿಗಳನ್ನು ಗುರುತಿಸಲಾಗುವುದು. ಪ್ರಚಲಿತ ಮೌಲ್ಯಗಳನ್ನು ಪ್ರತೀ ವರದಿ ಮಾಡಲಾಗುವ ಅವಧಿಯ ಅಂತ್ಯದಲ್ಲಿ ವಿಮರ್ಶಿಸಿ, ಅವುಗಳಿಗೆ ಸಂಬಂಧಪಟ್ಟ ತೆರಿಗೆ ಪ್ರಯೋಜನಗಳು ಮುಂದೆಂದೂ ಸ್ವೀಕೃತಿಯಾಗದಿರುವ ಸಂಭವನೀಯತೆಯಿರುವಲ್ಲಿ, ಅಷ್ಟರ ಮಟ್ಟಿಗೆ ಅವುಗಳನ್ನು ಕಡಿಮೆಗೊಳಿಸಿಕೊಳ್ಳಲಾಗುವುದು. ಕಾಲಿಕ ವ್ಯತ್ಯಾಸವು ತೆರಿಗೆ ರಜಾ ಅವಧಿ ಅಥವಾ ವಿನಾಯಿತಿ ಅವಧಿಯಲ್ಲಿ ಹೊಂದಾಣಿಕೆಯಾಗುವ ನಿರೀಕ್ಷೆಯಿದ್ದು ಆದಾಯವು ತೆರಿಗೆ ಮುಕ್ತವಾಗಿದ್ದಲ್ಲಿ, ತಾತ್ಕಾಲಿಕ ಕಾಲಿಕ ವ್ಯತ್ಯಾಸಕ್ಕೆ ಮುಂದೂಡಿದ ತೆರಿಗೆ ಆಸ್ತಿ/ ಜವಾಬ್ದಾರಿಗಳನ್ನು ಸೃಷ್ಟಿಸಲಾಗುವುದಿಲ್ಲ.

ಪ್ರಚಲಿತ ತೆರಿಗೆ ಹಾಗೂ ಮುಂದೂಡಿದ ತೆರಿಗೆಗಳಿಗೆ ಅನ್ವಯವಾಗುವ ಅಂಶಗಳು ಹಾಗೂ ಅವುಗಳು ಇತರ ಸಮಗ್ರ ಆದಾಯಗಳಲ್ಲಿ ಅಥವಾ ನೇರವಾಗಿ ಬಂಡವಾಳದಲ್ಲಿ ಗುರುತಿಸಲಾಗಿರುವ ಪ್ರಕರಣಗಳನ್ನು ಹೊರತುಪಡಿಸಿ, ಉಳಿದವುಗಳನ್ನು ಲಾಭ ಮತ್ತು ನಷ್ಟ ಖಾತೆಯಲ್ಲಿ ಲೆಕ್ಕಿಸಲಾಗುವುದು. ಪಾವತಿಸಬೇಕಾದ ಕನಿಷ್ಟ ಪರ್ಯಾಯ ತೆರಿಗೆ ಮೊತ್ತವನ್ನು ಪ್ರಚಲಿತ ತೆರಿಗೆಯಾಗಿ ಲೆಕ್ಕಿಸಲಾಗುವುದು ಹಾಗೂ ಅದೇ ಸಂದರ್ಭದಲ್ಲಿ, ಭವಿಷ್ಯದ ತೆರಿಗೆ ಜವಾಬ್ದಾರಿಗಳಿಗೆ ಹೊಂದಾಣಿಕೆ ಮಾಡಲಾಗುವ ಸಾಧ್ಯತೆಯನ್ನು ಪರಿಗಣಿಸಿ, ಈ ಮೊತ್ತವನ್ನು ಲಾಭ ಮತ್ತು ನಷ್ಟ ಖಾತೆಯಲ್ಲಿ ಜಮೆ ತೆಗೆದುಕೊಳ್ಳಲಾಗುವುದು.

2.13 ವಿಭಾಗ ವರದಿ:

ಅ) ಕಂಪನಿಯು ವಿದ್ಯುತ್ ವಿತರಣೆಯ ಚಟುವಟಿಕೆಯಲ್ಲಿ ತೊಡಗಿದೆ.

ಆ) ಕಂಪನಿಯ ಕಾರ್ಯಾಚರಣೆಗಳ ಮೇಲೆ ಪರಿಣಾಮ ಬೀರುವ ಭೌಗೋಳಿಕ ಕಾರ್ಯಾಚರಣೆಗಳು, ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿಗಳನ್ನು ಪರಿಗಣಿಸಿದ ನಂತರ ಕಂಪನಿಯ ಮುಖ್ಯ ಕಾರ್ಯಾಚರಣಾ ನಿರ್ಧಾರ ತಯಾರಕ ("ಸಿಒಡಿಎಂ") ಪ್ರಕಾರ ಯಾವುದೇ ಗುರುತಿಸಬಹುದಾದ ವರದಿ ವಿಭಾಗವಿಲ್ಲ. ಆದ್ದರಿಂದ ವಿಭಾಗವಾರು ವರದಿಯನ್ನು ಒದಗಿಸಲಾಗಿಲ್ಲ.

2.14 ಆಸ್ತಿಗಳ ಮೌಲ್ಯ ಕುಗ್ಗುವಿಕೆ

ಕಂಪೆನಿಯು ತನ್ನ ಆಸ್ತಿಗಳ ಮೌಲ್ಯ ಕುಗ್ಗಿರುವ ಸೂಚನೆಯನ್ನು ನಿರ್ಧರಿಸಲು, ಒಂದು ನಗದು ಉತ್ಪಾದನಾ ಘಟಕದ ಸ್ಪರ್ಶಾತೀತ ಆಸ್ತಿಗಳು ಮತ್ತು ಆಸ್ತಿ, ಸ್ಥಾವರ ಮತ್ತು ಯಂತ್ರೋಪಕರಣಗಳು (ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳನ್ನೂ ಒಳಗೊಂಡು) ಹೊಂದಿರುವ ಮೌಲ್ಯವನ್ನು ಪರಿಶೀಲಿಸುತ್ತದೆ. ಅಂತಹ ಸೂಚನೆಗಳೇನಾದರೂ ಇದ್ದಲ್ಲಿ, ಆಸ್ತಿಯ ದುರ್ಬಲ ನಷ್ಟದ ವ್ಯಾಪ್ತಿಯನ್ನು (ಯಾವುದಾದರೂ ಇದ್ದಲ್ಲಿ) ನಿರ್ಧರಿಸಲು ಆಸ್ತಿಯ ಮರುಗಳಿಕೆ ಮೊತ್ತವನ್ನು ಅಂದಾಜಿಸಲಾಗುವುದು. ಒಂದು ನಿರ್ಧಿಷ್ಟ ಆಸ್ತಿಯ ಮರುಗಳಿಕೆ ಮೊತ್ತವನ್ನು ಅಂದಾಜಿಸಲು ಸಾಧ್ಯವಾಗದಿದ್ದಲ್ಲಿ ಅಂತಹ ಆಸ್ತಿಯು ಒಳಗೊಂಡಿರುವ ನಗದು ಉತ್ಪಾದನಾ ಘಟಕದ ಮರುಗಳಿಕೆ ಮೊತ್ತವನ್ನು ಕಂಪೆನಿಯು ಅಂದಾಜಿಸುತ್ತದೆ. ಹಿಂದೆ ದುರ್ಬಲ ನಷ್ಟವನ್ನು ಗುರುತಿಸದೇ ಇದ್ದಲ್ಲಿ, ಆಸ್ತಿಯು ಹೊಂದಿರುವ ಮೌಲ್ಯವು, ಸವಕಳಿ ಅಥವಾ ಋಣ ಮುಕ್ತತೆಯನ್ನು ಕಳೆದು ಬಂದ ಮೌಲ್ಯವನ್ನು ಮೀರದೇ ಇದ್ದಾಗ ಮಾತ್ರ ದುರ್ಬಲ ನಷ್ಟವನ್ನು ಹಿಂಪಡೆಯಲಾಗುವುದು.

2.15 ಅವಕಾಶಗಳು, ಅನಿಶ್ಚಿತ ಹೊಣೆಗಾರಿಕೆಗಳು ಹಾಗೂ ಅನಿಶ್ಚಿತ ಆಸ್ತಿಗಳು

ಹಿಂದಿನ ಅವಧಿಯಲ್ಲಿ ನಡೆದ ಘಟನೆಗಳ ಪರಿಣಾಮವಾಗಿ ಕಂಪೆನಿಯು ಪ್ರಸ್ತುತ ಯಾವುದೇ ಜವಾಬ್ದಾರಿಗಳನ್ನು ಹೊಂದಿದ್ದಲ್ಲಿ ಹಾಗೂ ಈ ಜವಾಬ್ದಾರಿಗಳನ್ನು ಪಾವತಿಸಲು ಹಣಕಾಸಿನ ಹೊರಹರಿವಿನ ಅವಶ್ಯಕತೆಯು ಸಂಭವನೀಯವಾಗಿದ್ದಲ್ಲಿ, ತಾಂತ್ರಿಕ ಮೌಲ್ಯಮಾಪನ ಹಾಗೂ ಹಿಂದಿನ ಅನುಭವಗಳ ಆಧಾರದಲ್ಲಿ ವಿಶ್ವಾಸಾರ್ಹವಾಗಿ ಅಂದಾಜಿಸಿ ಅವಕಾಶಗಳನ್ನು ಕಲ್ಪಿಸಲಾಗಿದೆ. ಅವಕಾಶ ಕಲ್ಪಿಸಲಾದ ಮೊತ್ತವು, ಜವಾಬ್ದಾರಿಯನ್ನು ಆವರಿಸಿರುವ ಅಪಾಯ ಹಾಗೂ ಅನಿಶ್ಚಿತತೆಗಳನ್ನು ಪರಿಗಣಿಸಿ, ವರದಿ ಮಾಡಲಾದ ಅವಧಿಯ ಅಂತ್ಯದಲ್ಲಿರುವ ಜವಾಬ್ದಾರಿಯನ್ನು ಪಾವತಿಸಲು ಅಗತ್ಯವಿರುವ, ಸಂಪನ್ಮೂಲದ ಅತ್ಯುತ್ತಮ ಅಂದಾಜಾಗಿರುತ್ತದೆ.

ಪ್ರಸ್ತುತ ಜವಾಬ್ದಾರಿಯನ್ನು ಪಾವತಿಸಲು ಅಗತ್ಯವಿರುವ ನಗದು ಹರಿವನ್ನು ಬಳಸಿ ಅವಕಾಶವನ್ನು ಅಳೆಯಲಾಗಿದ್ದರೆ, ಅದರ ಪ್ರಚಲಿತ ಮೊತ್ತವು ನಗದು ಹರಿವಿನ ವರ್ತಮಾನದ ಮೌಲ್ಯವಾಗಿರುತ್ತದೆ (ಹಣದ ಸಮಯ ಮೌಲ್ಯದ ಪರಿಣಾಮವು ಗಣನೀಯವಾಗಿರುವಾಗ) ರಿಯಾಯಿತಿಯನ್ನು ಬಳಸಿದಾಗ, ಸಮಯದ ಹರಿವಿನ ಪರಿಣಾಮವಾಗಿ ಅವಕಾಶಗಳ ಮೊತ್ತದಲ್ಲಿ ಆದ ಏರಿಕೆಯನ್ನು ಆರ್ಥಿಕ ವೆಚ್ಚವಾಗಿ ಗುರುತಿಸಿ ಲೆಕ್ಕಿಸಲಾಗುವುದು.

ಆರ್ಥಿಕ ಪ್ರಯೋಜನಗಳ ಒಳಹರಿವು ಸಂಭವನೀಯವಾಗಿರುವಾಗ ಅನಿಶ್ಚಿತ ಆಸ್ತಿಗಳನ್ನು ಗುರುತಿಸಿ, ಹಣಕಾಸು ವಿವರಣಾ ಪಟ್ಟಿಗಳಲ್ಲಿ ಟಿಪ್ಪಣಿಗಳ ಮುಖಾಂತರ ಬಹಿರಂಗಪಡಿಸಲಾಗುವುದು.

ಆಡಳಿತ ವರ್ಗದ ನಿರ್ಧಾರದ ಆಧಾರದಲ್ಲಿ, ಸಂಪನ್ಮೂಲಗಳ ಹೊರ ಹರಿವಿನ ಸಂಭವನೀಯತೆಯು ವಿರಳವಾಗಿದ್ದಾಗ, ಅನಿಶ್ಚಿತ ಹೊಣೆಗಾರಿಕೆಗಳನ್ನು ಗುರುತಿಸಿ, ಹಣಕಾಸು ವಿವರಣಾ ಪಟ್ಟಿಗಳಲ್ಲಿ ಟಿಪ್ಪಣಿಗಳ ಮುಖಾಂತರ ಬಹಿರಂಗಪಡಿಸಲಾಗುವುದು ಹಾಗೂ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಪುನರ್‌ಪರಿಶೀಲಿಸಿ ನಿರ್ವಹಣಾ ಮಂಡಳಿಯ ಪ್ರಸಕ್ತ ಅಂದಾಜುಗಳಲ್ಲಿ ಪ್ರತಿಫಲಿಸುವಂತೆ ಹೊಂದಾಣಿಕೆ ಮಾಡಲಾಗುವುದು.

2.16 ಸಿಬ್ಬಂದಿ ಸವಲತ್ತುಗಳು

ಅಲ್ಪಾವಧಿ ಸಿಬ್ಬಂದಿ ಸವಲತ್ತುಗಳು:

ನೌಕರರು ಸಲ್ಲಿಸಿದ ಸೇವೆಯ ಬದಲಾಗಿ ಪಾವತಿಸಬೇಕೆಂದು ನಿರೀಕ್ಷಿಸಿದ ಅಲ್ಪಾವಧಿ ಸಿಬ್ಬಂದಿ ಸವಲತ್ತು ಮೊತ್ತಗಳನ್ನು ನೌಕರರು ಸೇವೆ ಸಲ್ಲಿಸಿದ ವರ್ಷದಲ್ಲಿಯೇ ಗುರುತಿಸಿ ಲೆಕ್ಕಿಸಲಾಗಿದೆ. ಈ ಸವಲತ್ತುಗಳು, ನೌಕರರು ಸಂಬಂಧಿತ ಸೇವೆಗಳನ್ನು ಸಲ್ಲಿಸಿದ ಅವಧಿಯ ನಂತರದ ಹನ್ನೆರಡು ತಿಂಗಳ ಒಳಗೆ ಸಂಭವಿಸಬಹುದೆಂದು ನಿರೀಕ್ಷಿಸಿದ ಪ್ರೋತ್ಸಾಹ ಧನಗಳು ಹಾಗೂ ಗೈರು ಪರಿಹಾರಗಳನ್ನೂ ಒಳಗೊಂಡಿದೆ.

ಅಲ್ಪಾವಧಿ ಗೈರು ಪರಿಹಾರ ವೆಚ್ಚಗಳನ್ನು ಕೆಳಕಂಡಂತೆ ಲೆಕ್ಕಿಸಲಾಗಿದೆ:

ಸಂಚಯವಾಗುವ ಗೈರು ಪರಿಹಾರಗಳ ಪ್ರಕರಣಗಳಲ್ಲಿ, ನೌಕರರು ತಮ್ಮ ಭವಿಷ್ಯದ ಗೈರು ಪರಿಹಾರಗಳ ಮೇಲಿನ ಅರ್ಹತೆಯನ್ನು ಹೆಚ್ಚಿಸುವ ಸೇವೆಗಳನ್ನು ಸಲ್ಲಿಸಿದ ಸಂದರ್ಭಗಳಲ್ಲಿ; ಹಾಗೂ

ಸಂಚಯವಾಗದ ಗೈರು ಪರಿಹಾರಗಳ ಪ್ರಕರಣಗಳಲ್ಲಿ, ಗೈರು ಸಂಭವಿಸಿದಾಗ.

ದೀರ್ಘಾವಧಿ ಸಿಬ್ಬಂದಿ ಸವಲತ್ತುಗಳು:

ಗಳಿಕೆ ರಜೆ ಯೋಜನೆ ಹಾಗೂ ಕುಟುಂಬ ಸಹಾಯ ನಿಧಿಗಳನ್ನು ಒಳಗೊಂಡ ದೀರ್ಘಾವಧಿ ಸಿಬ್ಬಂದಿ ಸವಲತ್ತುಗಳನ್ನು, ವ್ಯಾಖ್ಯಾನಿಸಿದ ಸವಲತ್ತು ಹೊಣೆಗಾರಿಕೆಗಳ ಪ್ರಸಕ್ತ ಮೌಲ್ಯದ ಆಧಾರದಲ್ಲಿ ಗುರುತಿಸಲಾಗಿದೆ ಮತ್ತು ಪ್ರತೀ ವರ್ಷದ ವರದಿ ಮಾಡಲಾಗುವ ಅವಧಿಯ ಅಂತ್ಯಕ್ಕೆ ಇರುವಂತೆ ಕೈಗೊಂಡ ವಾಸ್ತವಿಕ ಮೌಲ್ಯಮಾಪನಗಳೊಂದಿಗೆ ಯೋಜಿತ ಘಟಕ ಜಮಾ ವಿಧಾನವನ್ನು ಬಳಸಿ ಲೆಕ್ಕಾಚಾರ ಮಾಡಲಾಗಿದೆ ಮತ್ತು ಅದೇ ವರ್ಷದ ಲಾಭ ಮತ್ತು ನಷ್ಟಗಳ ಖಾತೆಯಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ.

ಉದ್ಯೋಗ ನಂತರದ ಸವಲತ್ತುಗಳು:

ವ್ಯಾಖ್ಯಾನಿಸಿದ ವಂತಿಗೆ ಯೋಜನೆಗಳು

ದಿನಾಂಕ 01.4.2006 ರ ನಂತರ ಸೇವೆಗೆ ಸೇರಿದ ನೌಕರರ ಪಿಂಚಣಿ ನಿಧಿ ಹಾಗೂ ಉಪದಾನ ನಿಧಿಗಳನ್ನು ಒಳಗೊಂಡಿರುವ ವ್ಯಾಖ್ಯಾನಿಸಿದ ವಂತಿಗೆ ಯೋಜನೆಗಳಡಿಯ ಉದ್ಯೋಗ ನಂತರದ ಸಿಬ್ಬಂದಿ ಸವಲತ್ತುಗಳನ್ನು, ಈ ಯೋಜನೆಗೆ ಕಂಪೆನಿಯ ಪಾವತಿ ಜವಾಬ್ದಾರಿಗಳ ಆಧಾರದಲ್ಲಿ ಗುರುತಿಸಿ ಲೆಕ್ಕಿಸಿದೆ ದಿನಾಂಕ 31.03.2019 ರವರೆಗೆ(ಮೂಲವೇತನ + ಡಿಯರ್‌ನೆಸ್ಸ್ ವೇತನ + ತುಟ್ಟಿ ಭತ್ಯೆಗಳ ಶೇಕಡ 10% ರಷ್ಟು ಮೊತ್ತ ನೌಕರರ ಸಮಾನ ವಂತಿಗೆ,ದಿನಾಂಕ 01.04.2019 ರಿಂದ ಕಂಪನಿ ವಂತಿಗೆಯು ಮೂಲ ವೇತನ+ ಡಿಯರ್‌ನೆಸ್ಸ್ ವೇತನ+ತುಟ್ಟಿ ಭತ್ಯೆಗಳ ಮೇಲೆ ಶೇಕಡ 14% ರಷ್ಟು). ಈ ಮೊತ್ತವನ್ನು ಕೆಇಎನ್‌ಡಿಸಿಪಿಎಸ್ ಸೆಲ್ (ಕವಿಪ್ರನಿನಿ/ಎಸ್ಕಾಂಗಳ ಹೊಸ ವ್ಯಾಖ್ಯಾನಿಸಿದ ಪಿಂಚಣಿ ಯೋಜನೆ ಸೆಲ್) ಗೆ ಪಾವತಿಸಿ ಅದೇ ವರ್ಷದ ಲಾಭ ಮತ್ತು ನಷ್ಟಗಳ ಖಾತೆಯಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ.

ದಿನಾಂಕ 01.04.2006 ರ ಮೊದಲು ಸೇವೆಗೆ ಸೇರಿದ ನೌಕರರಿಗೆ ಸಂಬಂಧಪಟ್ಟಂತೆ, ಕವಿಪ್ರನಿನಿ ಎಸ್ಕಾಂಗಳ ಪಿಂಚಣಿ ಹಾಗೂ ಉಪದಾನ ಪ್ರತಿಷ್ಠಾನವು ವಾಸ್ತವಿಕ ಮೌಲೀಕರಣದ ಆಧಾರದಲ್ಲಿ ನಿಗಧಿಪಡಿಸಿದ ದರದಲ್ಲಿ ಪಿಂಚಣಿ ಮತ್ತು ಉಪದಾನದ ಬಾಬ್ತು ಪಾವತಿಗೆ ಕಂಪೆನಿಯಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ. ವಾಸ್ತವಿಕ ಮೌಲ್ಯಮಾಪನದ ಕಾರಣದಿಂದ ಕೊಡುಗೆ ದರಗಳಲ್ಲಿ ಯಾವುದೇ ಪರಿಷ್ಕರಣೆಯಾದಲ್ಲಿ, ಪ್ರತಿಷ್ಠಾನವು ಕಂಪೆನಿಗೆ ಮಾಹಿತಿ ನೀಡಿದ ಆರ್ಥಿಕ ವರ್ಷದಲ್ಲಿಯೇ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿರುತ್ತದೆ.

ಕಂಪೆನಿಯ ವಂತಿಗೆ ಮೊತ್ತಗಳನ್ನು ಪ್ರತಿಷ್ಠಾನವು ಸಂಗ್ರಹಿಸಿ ನಿರ್ವಹಿಸುತ್ತಿರುವುದರಿಂದ ಹಾಗೂ ಕಂಪೆನಿಯಿಂದ ವಂತಿಗೆಯನ್ನು "ಪೇ ಆ್ಯಸ್ ಯು ಗೋ" ಆಧಾರದಲ್ಲಿ ಪಾವತಿಸಲಾಗುತ್ತಿರುವುದರಿಂದ, ಈ ಯೋಜನೆಯನ್ನು ಇಂಡ್ ಎ.ಎಸ್-19 ಕ್ಕೆ ಅನುಗುಣವಾಗಿ ವ್ಯಾಖ್ಯಾನಿಸಿದ ವಂತಿಗೆ ಯೋಜನೆ ಎಂದು ಪರಿಗಣಿಸಿದೆ.

2.17 ನಗದು ಹರಿವು ಪಟ್ಟಿ

ನಗದು ಹರಿವನ್ನು ಪರೋಕ್ಷ ವಿಧಾನವನ್ನು ಬಳಸಿ ವರದಿ ಮಾಡಲಾಗಿದೆ. ಇಲ್ಲಿ ನಗದಲ್ಲದ ವ್ಯವಹಾರಗಳ ಪರಿಣಾಮಗಳನ್ನು, ಹಿಂದಿನ ಅಥವಾ ಭವಿಷ್ಯದ ಕಾರ್ಯಚಟುವಟಿಕೆಗಳ ನಗದು ಸ್ವೀಕೃತಿ ಅಥವಾ ಪಾವತಿಗಳು ಮತ್ತು ಹೂಡಿಕೆ ಅಥವಾ ಆರ್ಥಿಕ ನಗದು ಹರಿವಿಗೆ ಸಂಬಂಧಿಸಿದ, ಆದಾಯ ಅಥವಾ ವೆಚ್ಚಗಳ ಮುಂದೂಡುವಿಕೆ ಅಥವಾ ಸಂಚಯಗಳನ್ನು, ತೆರಿಗೆ ಪೂರ್ವ ಲಾಭ/ನಷ್ಟಗಳಿಗೆ ಹೊಂದಾಣಿಕೆ ಮಾಡಲಾಗಿದೆ. ನಗದು ಹರಿವುಗಳನ್ನು ಹೂಡಿಕೆ, ಕಾರ್ಯಚಟುವಟಿಕೆ ಮತ್ತು ಆರ್ಥಿಕ ಚಟುವಟಿಕೆಗಳೆಂದು ಪ್ರತ್ಯೇಕಿಸಿದೆ.

2.18 ಆರ್ಥಿಕ ಸಾಧನಗಳು

ಉತ್ಪನ್ನವಲ್ಲದ ಆರ್ಥಿಕ ಸಾಧನಗಳನ್ನು ಕೆಳಕಂಡಂತೆ ವಿಂಗಡಿಸಲಾಗಿದೆ:–

ಆರ್ಥಿಕ ಆಸ್ತಿಗಳನ್ನು ಈ ರೀತಿ ಮೌಲ್ಯಮಾಪನ ಮಾಡಲಾಗುವುದು.

- ಋಣಮುಕ್ತತೆಗೊಳಿಸಿದ ದರ
- ಲಾಭ ಮತ್ತು ನಷ್ಟಗಳ ಮೂಲಕ ನ್ಯಾಯೋಚಿತ ಮೌಲ್ಯ
- ಇತರ ಸಮಗ್ರ ಆದಾಯದ ಮೂಲಕ ನ್ಯಾಯೋಚಿತ ಮೌಲ್ಯ

ಆರ್ಥಿಕ ಜವಾಬ್ದಾರಿಗಳನ್ನು ಈ ರೀತಿ ಮೌಲ್ಯಮಾಪನ ಮಾಡಲಾಗುವುದು:

- ಋಣಮುಕ್ತತೆಗೊಳಿಸಿದ ದರ.
- ಲಾಭ ಮತ್ತು ನಷ್ಟಗಳ ಮೂಲಕ ನ್ಯಾಯೋಚಿತ ಮೌಲ್ಯ.

ಆರಂಭಿಕ ಮಾನ್ಯತೆ ಹಾಗೂ ಮೌಲ್ಯಮಾಪನ:

ಆರ್ಥಿಕ ಸಾಧನಗಳ ಒಪ್ಪಂದದ ನಿಬಂಧನೆಗಳಿಗೆ ಕಂಪೆನಿಯು ಭಾಗಿಯಾಗಿದ್ದಾಗ, ಆರ್ಥಿಕ ಆಸ್ತಿಗಳನ್ನು ಹಾಗೂ ಆರ್ಥಿಕ ಜವಾಬ್ದಾರಿಗಳನ್ನು ಕಂಪೆನಿಯ ಆರ್ಥಿಕ ವಿವರಣಾ ಪಟ್ಟಿಗಳಲ್ಲಿ ಗುರುತಿಸಿದೆ. ಕಂಪೆನಿಯು ತನ್ನ ಆರ್ಥಿಕ ಆಸ್ತಿಗಳು ಹಾಗೂ ಆರ್ಥಿಕ ಜವಾಬ್ದಾರಿಗಳ ವರ್ಗೀಕರಣವನ್ನು ಆರಂಭಿಕ ಗುರುತಿಸುವಿಕೆಯ ರೀತ್ಯಾ ನಿರ್ಧರಿಸುತ್ತದೆ. ಲಾಭ ಮತ್ತು ನಷ್ಟಗಳ ಮೂಲಕ ನ್ಯಾಯೋಚಿತ ಮೌಲ್ಯಮಾಪನ ಮಾಡಿದ ಆರ್ಥಿಕ ಆಸ್ತಿಗಳು ಹಾಗೂ ಆರ್ಥಿಕ ಜವಾಬ್ದಾರಿಗಳನ್ನು ಹೊರತುಪಡಿಸಿ ಇತರ ಎಲ್ಲಾ ಆರ್ಥಿಕ ಆಸ್ತಿಗಳು ಹಾಗೂ ಆರ್ಥಿಕ ಜವಾಬ್ದಾರಿಗಳನ್ನು, ಅವುಗಳ ನ್ಯಾಯೋಚಿತ ಮೌಲ್ಯದಿಂದ ನೇರವಾಗಿ ವಿಧಿಸಬಹುದಾದ ವ್ಯಾವಹಾರಿಕ ವೆಚ್ಚಗಳನ್ನು ಕೂಡಿ ಅಥವಾ ಕಳೆದು ಪ್ರಾರಂಭಿಕವಾಗಿ ಗುರುತಿಸಲಾಗಿದೆ. ಲಾಭ ಮತ್ತು ನಷ್ಟಗಳ ಮೂಲಕ ನ್ಯಾಯೋಚಿತ ಮೌಲ್ಯಮಾಪನ ಮಾಡಿದ ಆರ್ಥಿಕ ಆಸ್ತಿಗಳು ಹಾಗೂ ಆರ್ಥಿಕ ಜವಾಬ್ದಾರಿಗಳನ್ನು ಪ್ರಾರಂಭಿಕವಾಗಿ ನ್ಯಾಯೋಚಿತ ಮೌಲ್ಯದಲ್ಲಿಯೇ ಗುರುತಿಸಲಾಗಿದೆ ಮತ್ತು ವ್ಯಾವಹಾರಿಕ ವೆಚ್ಚಗಳನ್ನು ಆದಾಯಗಳ ನಿರೂಪಣಾ ಪಟ್ಟಿಯಲ್ಲಿ ವೆಚ್ಚಗಳೆಂದು ದಾಖಲಿಸಲಾಗಿದೆ.

ತದನಂತರದ ಮೌಲ್ಯಮಾಪನ:

ಆರ್ಥಿಕ ಆಸ್ತಿಗಳ ತದನಂತರದ ಲೆಕ್ಕಾಚಾರಗಳು ಕೆಳಕಂಡಂತೆ ವರ್ಗೀಕರಣ ಹೊಂದಿರುತ್ತವೆ:

- **ಋಣಮುಕ್ತತೆಗೊಳಿಸಿದ ದರದಲ್ಲಿ ಲೆಕ್ಕಾಚಾರ ಮಾಡಲ್ಪಟ್ಟ ಆರ್ಥಿಕ ಆಸ್ತಿಗಳು/ಆರ್ಥಿಕ ಹೊಣೆಗಾರಿಕೆಗಳು:**

  ಬಾಕಿ ಇರುವ ಅಸಲು ಮೊಬಲಗಿನ ಕಂತು ಹಾಗೂ ಬಡ್ಡಿಯನ್ನು ಪಾವತಿಸುವ ಸಲುವಾಗಿ ನಿರ್ಧಿಷ್ಟ ದಿನಾಂಕಗಳಂದು ನಗದು ಪಾವತಿಸುವಿಕೆಯ ನಿಮಿತ್ತ, ಕರಾರುಬದ್ಧ ನಗದು ಹರಿಯುವಿಕೆ ಹಾಗೂ ಕರಾರುಬದ್ಧತೆಯ ಪ್ರಕಾರ ಆಸ್ತಿಯನ್ನು ಹೊಂದಲು, ಅಂತಹ ಆಸ್ತಿಗಳನ್ನು ವ್ಯವಹಾರಿಕ ನಮೂನೆಯಾಗಿ ಹೊಂದುವ ಉದ್ದೇಶವಿದ್ದಲ್ಲಿ, ತದನಂತರದಲ್ಲಿ ಆರ್ಥಿಕ ಆಸ್ತಿ ಅಥವಾ ಆರ್ಥಿಕ ಹೊಣೆಗಾರಿಕೆಗಳನ್ನು ಋಣಮುಕ್ತತೆಗೊಳಿಸಿದ ದರದಲ್ಲಿ ಲೆಕ್ಕಾಚಾರ ಮಾಡಲಾಗುತ್ತದೆ.

- **ಇತರ ಸಮಗ್ರ ಆದಾಯಗಳ ಮೂಲಕ ನ್ಯಾಯಸಮ್ಮತ ಮೌಲ್ಯದಲ್ಲಿ ಆರ್ಥಿಕ ಆಸ್ತಿಗಳು:**

  ಬಾಕಿ ಇರುವ ಅಸಲು ಮೊಬಲಗಿನ ಕಂತು ಹಾಗೂ ಬಡ್ಡಿಯನ್ನು ಪಾವತಿಸುವ ಸಲುವಾಗಿ ನಿರ್ಧಿಷ್ಟ ದಿನಾಂಕಗಳಂದು ನಗದು ಪಾವತಿಸುವಿಕೆಯ ನಿಮಿತ್ತ, ಆರ್ಥಿಕ ಆಸ್ತಿಗಳನ್ನು ಮಾರಾಟ ಮಾಡಿ, ಕರಾರುಬದ್ಧ ನಗದು ಹರಿಯುವಿಕೆಯನ್ನು ಹೊಂದಲು, ಅಂತಹ ಆಸ್ತಿಗಳನ್ನು ವ್ಯವಹಾರಿಕ ನಮೂನೆಯಾಗಿ ಹೊಂದುವ ಉದ್ದೇಶವನ್ನು ಸಾಧಿಸಿದ್ದಲ್ಲಿ, ತದನಂತರದಲ್ಲಿ ಆರ್ಥಿಕ ಆಸ್ತಿಗಳನ್ನು ಇತರ ಸಮಗ್ರ ಆದಾಯಗಳ ಮೂಲಕ ನ್ಯಾಯಸಮ್ಮತ ಮೌಲ್ಯದಲ್ಲಿ ಲೆಕ್ಕಾಚಾರ ಮಾಡಲಾಗುತ್ತದೆ.

- **ಲಾಭ ಅಥವಾ ನಷ್ಟದ ಮೂಲಕ ನ್ಯಾಯಸಮ್ಮತ ಮೌಲ್ಯದಲ್ಲಿ ಆರ್ಥಿಕ ಆಸ್ತಿಗಳು/ಆರ್ಥಿಕ ಹೊಣೆಗಾರಿಕೆಗಳು:**

  ಮೇಲಿನ ಯಾವುದೇ ವರ್ಗದಲ್ಲಿ ಒಳಪಡಿಸಿರದ ಆರ್ಥಿಕ ಆಸ್ತಿ ಅಥವಾ ಆರ್ಥಿಕ ಹೊಣೆಗಾರಿಕೆಗಳನ್ನು ಲಾಭ ಅಥವಾ ನಷ್ಟದ ಮೂಲಕ ನ್ಯಾಯಸಮ್ಮತ ಮೌಲ್ಯದಲ್ಲಿ ಲೆಕ್ಕಾಚಾರ ಮಾಡಲಾಗುತ್ತದೆ.

ಅಮಾನ್ಯಗೊಳಿಸುವಿಕೆ:

- **ಆರ್ಥಿಕ ಆಸ್ತಿಗಳು**

  ಆಸ್ತಿಗಳಿಂದ ನಗದು ಹರಿಯುವಿಕೆಯ ಕರಾರುಬದ್ಧ ಹಕ್ಕುಗಳು ಮುಕ್ತಾಯವಾದಾಗ ಅಥವಾ ಆರ್ಥಿಕ ಆಸ್ತಿಯ ಒಡೆತನದ ಸಹಿತ ಅದರ ಎಲ್ಲಾ ಅಪಾಯಕಾರಿ ಅಂಶಗಳು ಹಾಗೂ ಅದರ ಪ್ರತಿಫಲಗಳನ್ನು ವರ್ಗಾವಣೆಗೊಂಡಾಗ ಮಾತ್ರ ಕಂಪನಿಯು ಆರ್ಥಿಕ ಆಸ್ತಿಯನ್ನು ಅಮಾನ್ಯಗೊಳಿಸುತ್ತದೆ.

- **ಆರ್ಥಿಕ ಹೊಣೆಗಾರಿಕೆಗಳು:**

  ಹೊಣೆಗಾರಿಕೆಯಡಿಯಲ್ಲಿನ ಭಾದ್ಯತೆಯನ್ನು ನಿರ್ವಹಿಸಿದಾಗ ಅಥವಾ ರದ್ದುಗೊಳಿಸಿದಾಗ ಅಥವಾ ಮುಕ್ತಾಯಗೊಳಿಸಿದಾಗ ಆರ್ಥಿಕ ಹೊಣೆಗಾರಿಕೆಯನ್ನು ಅಮಾನ್ಯಗೊಳಿಸಲಾಗುತ್ತದೆ. ಹಾಲಿ ಆರ್ಥಿಕ ಹೊಣೆಗಾರಿಕೆಯನ್ನು ಅದೇ ನೀಡಿಕೆದಾರರಿಂದ ಬೇರೊಂದು ಷರತ್ತುಗಳೊಂದಿಗೆ ಬೇರೆ ಹೊಣೆಗಾರಿಕೆಯಿಂದ ಬದಲಾಯಿಸಿದಾಗ ಅಥವಾ ಹಾಲಿ ಹೊಣೆಗಾರಿಕೆಗಳ ಷರತ್ತುಗಳನ್ನು ಸಾಕಷ್ಟು ಮಾರ್ಪಾಡುಗೊಳಿಸಿದಾಗ, ಅಂತಹ ಬದಲಾವಣೆ ಅಥವಾ ಮಾರ್ಪಾಡುಗಳನ್ನು ಮೂಲ ಹೊಣೆಗಾರಿಕೆಯ ಅಮಾನ್ಯವಾಗಿದೆ ಎಂದು ಪರಿಗಣಿಸಲಾಗುತ್ತದೆ ಹಾಗೂ ಹೊಸ ಹೊಣೆಗಾರಿಕೆಯ ಮಾನ್ಯಗೊಳಿಸುವಿಕೆಯು ಹಾಗೂ ಆಯಾ ಹೊಣೆಗಾರಿಕೆಗಳ ನಡುವಿನ ವ್ಯತ್ಯಯಗಳ ಪ್ರಮಾಣವನ್ನು ಆದಾಯ ನಿರೂಪಣಾ ವರದಿಯಲ್ಲಿ ಮಾನ್ಯಗೊಳಿಸಲಾಗುತ್ತದೆ.

2.19 ಭೋಗ್ಯಗಳು:

ಭೋಗ್ಯದ ಷರತ್ತುಗಳು, ಮಾಲೀಕತ್ವದ ಸಂಪೂರ್ಣ ಅಪಾಯಕಾರಿ ಅಂಶಗಳನ್ನು ಹಾಗೂ ಅದರ ಪ್ರತಿಫಲಗಳನ್ನು ಗಣನೀಯವಾಗಿ ಅನುಭವದಾರರಿಗೆ ವರ್ಗಾಯಿಸುವಂತಿದ್ದಾಗ ಅಂತಹ ಭೋಗ್ಯಗಳನ್ನು ಆರ್ಥಿಕ ಭೋಗ್ಯಗಳು ಎಂದು ವರ್ಗೀಕರಿಸಲಾಗುತ್ತದೆ. ಪ್ರತೀ ಭೋಗ್ಯಗಳ ಆರಂಭದಲ್ಲಿಯೇ ನಿರ್ಧರಿಸಲಾಗುವ, ಭೋಗ್ಯದ ಆಸ್ತಿಗಳ ನ್ಯಾಯೋಚಿತ ಮೌಲ್ಯ ಅಥವಾ ಒಂದು ವೇಳೆ ಕಡಿಮೆಯಿದ್ದಲ್ಲಿ, ಕನಿಷ್ಟ ಗೇಣಿ ಪಾವತಿಯ ಪ್ರಚಲಿತ ಮೌಲ್ಯಗಳಲ್ಲಿ ಆರ್ಥಿಕ ಭೋಗ್ಯಗಳನ್ನು ಅನುಭವದಾರರು ಗುರುತಿಸಿ ಲೆಕ್ಕಿಸಬೇಕಾಗುತ್ತದೆ. ಭೋಗ್ಯಗಳ ಮೇಲಿನ ಯಾವುದೇ ಆರಂಭಿಕ ನೇರ ವೆಚ್ಚಗಳನ್ನು ಆಸ್ತಿಗಳೆಂದು ಮಾನ್ಯಗೊಳಿಸಿದ ಮೊಬಲಗಿಗೆ ಸೇರ್ಪಡಿಸತಕ್ಕದ್ದು. ಕನಿಷ್ಟ ಭೋಗ್ಯದ ಪಾವತಿಗಳನ್ನು ಆರ್ಥಿಕ ಶುಲ್ಕಗಳು ಹಾಗೂ ಬಾಕಿಯಿರುವ ಹೊಣೆಗಾರಿಕೆಗಳ ಇಳಿಕೆಗಳ ನಡುವೆ ಸಮನಾಗಿ ಹಂಚಿಕೆ ಮಾಡತಕ್ಕದ್ದು. ಪ್ರತೀ ಲೆಕ್ಕಾಚಾರದ ಅವಧಿಯಲ್ಲಿ, ಸವಕಳಿ ಯೋಗ್ಯ ಆಸ್ತಿಗಳ ಮೇಲಿನ ಸವಕಳಿ ವೆಚ್ಚ ಹಾಗೂ ಹಣಕಾಸು ವೆಚ್ಚಗಳಿಗೆ ಹಣಕಾಸು ಭೋಗ್ಯವು ಎಡೆ ಮಾಡಿಕೊಡುತ್ತವೆ. ಭೋಗ್ಯದ ವಸ್ತುವಿಗೆ ಸಂಬಂಧಿಸಿದ ಮಾಲೀಕತ್ವದ ಸಂಪೂರ್ಣ ಅಪಾಯಕಾರಿ ಅಂಶಗಳು ಹಾಗೂ ಅದರ ಪ್ರತಿಫಲಗಳನ್ನು ಗಣನೀಯವಾಗಿ ಗೇಣಿದಾರರೇ ಉಳಿಸಿಕೊಂಡಿದ್ದಲ್ಲಿ ಅಂತಹ ಭೋಗ್ಯಗಳನ್ನು ಕಾರ್ಯಾಚರಣಾ ಭೋಗ್ಯಗಳು ಎಂದು ವರ್ಗೀಕರಿಸಲಾಗುತ್ತದೆ. ಸಾಮಾನ್ಯ ಹಣದುಬ್ಬರಗಳಿಗೆ ಅನುಗುಣವಾಗಿ ಭೋಗ್ಯದ ಶುಲ್ಕಗಳು ಏರಿಕೆಯಾಗುವ ಪ್ರಕರಣಗಳನ್ನು ಹೊರತುಪಡಿಸಿ, ಕಾರ್ಯಾಚರಣಾ ಭೋಗ್ಯಗಳ ಪಾವತಿಗಳನ್ನು ಸ್ಟ್ರೈಟ್ ಲೈನ್ ವಿಧಾನದಲ್ಲಿ ಲಾಭ ಮತ್ತು ನಷ್ಟದ ಖಾತೆಗೆ ಖರ್ಚು ದಾಖಲಿಸಲಾಗುವುದು.

ಭೋಗ್ಯದ ಅವಧಿಯ ಅಂತ್ಯದಲ್ಲಿ ಭೂಮಿಯ ಮಾಲೀಕತ್ವವು ಕಂಪೆನಿಯ ಹೆಸರಿಗೆ ವರ್ಗಾವಣೆಯಾಗದ ಭೋಗ್ಯದ ಭೂಮಿಗಳನ್ನು ಕಾರ್ಯಾಚರಣಾ ಭೋಗ್ಯಗಳೆಂದು ವರ್ಗೀಕರಿಸಿದೆ. ಮುಂದೆ ಪಾವತಿಸತಕ್ಕ ಕಾರ್ಯಾಚರಣಾ ಭೋಗ್ಯದ ಪಾವತಿಗಳನ್ನು

ಪೂರ್ವಪಾವತಿಗಳೆಂದು ಗುರುತಿಸಲಾಗುವುದು ಹಾಗೂ ಭೋಗ್ಯದ ಅವಧಿಯಲ್ಲಿ ಸ್ಟ್ರೈಟ್ ಲೈನ್ ವಿಧಾನದಲ್ಲಿ ಋಣಮುಕ್ತತೆಗೊಳಿಸಲಾಗುವುದು.

ಭೋಗ್ಯದ ಅವಧಿಯ ಅಂತ್ಯದಲ್ಲಿ ಭೂಮಿಯ ಮಾಲೀಕತ್ವವು ಕಂಪೆನಿಯ ಹೆಸರಿಗೆ ವರ್ಗಾವಣೆಯಾಗುವುದಾದಲ್ಲಿ ಅಂತಹ ಭೋಗ್ಯದ ಭೂಮಿಗಳನ್ನು ಆರ್ಥಿಕ ಭೋಗ್ಯಗಳೆಂದು ವರ್ಗೀಕರಿಸಿದೆ. ಅಂತಹ ಭೋಗ್ಯದ ಭೂಮಿಗಳನ್ನು ಆಸ್ತಿಗಳು, ಸ್ಥಾವರಗಳು ಹಾಗೂ ಯಂತ್ರೋಪಕರಣಗಳಡಿಯಲ್ಲಿ ಪ್ರಸ್ತುತಪಡಿಸಲಾಗುವುದು ಹಾಗೂ ಸವಕಳಿ ಆಕರಿಸಲಾಗುವುದಿಲ್ಲ.

2.20 ಪ್ರತಿ ಷೇರಿನ ಗಳಿಕೆ:

ಕಂಪನಿಯ ಪ್ರತಿ ಷೇರಿನ ಗಳಿಕೆಯನ್ನು ಗೊತ್ತುಪಡಿಸಿಕೊಳ್ಳಲು ಪರಿಗಣಿಸಲ್ಪಟ್ಟಿರುವ ಆದಾಯದ ಗಳಿಕೆಯು ಸ್ವಾಮ್ಯ ಷೇರುದಾರರಿಗೆ ವಿಧಿಸಬೇಕಾದ ತೆರಿಗೆಯ ನಂತರದ ನಿವ್ವಳ ಲಾಭವಾಗಿರುತ್ತದೆ. ಪ್ರತಿ ಷೇರಿನ ಮೂಲ ಗಳಿಕೆಯನ್ನು ಲೆಕ್ಕಾಚಾರ ಮಾಡಲು ಗಳಿಸಿರುವ ಷೇರುಗಳ ಸಂಖ್ಯೆಯು, ಆ ವರ್ಷದಲ್ಲಿ ಬಾಕಿ ಇರುವ ಸರಾಸರಿ ಷೇರು ದರವಾಗಿರುತ್ತದೆ. ಹಾಗೆ ಆ ವರ್ಷದಲ್ಲಿ ಬಾಕಿ ಇರುವ ಸರಾಸರಿ ಷೇರುಗಳ ಸಂಖ್ಯೆಗಳನ್ನು ಬೋನಸ್ ಪಾವತಿಗಾಗಿ, ಹಾಲಿ ಷೇರುದಾರರಿಗೆ ಹಕ್ಕುಭಾದ್ಯತೆಯ ಬೋನಸ್ ಷೇರು, ಷೇರು ವಿಭಜನೆ ಹಾಗೂ ಆ ವಿಭಜನೆಯ ನಿವರ್ತನದ ಅಂಶಗಳಿಗೆ ಹೊಂದಾಣಿಕೆ ಮಾಡಲಾಗುತ್ತದೆ.

ಇಳಿತಗೊಳ್ಳಬಹುದಾದ ಸ್ವಾಮ್ಯ ಷೇರುಗಳ ಪರಿಣಾಮವನ್ನು, ಹೊಂದಾಣಿಕೆ ಮಾಡಿದ ನಂತರ ಇಳಿತಗೊಂಡ ಪ್ರತಿ ಷೇರಿನ ಗಳಿಕೆಯನ್ನು, ಷೇರು ಠೇವಣಿ ಮೊತ್ತಗಳನ್ನೂ ಒಳಗೊಂಡಂತೆ ಪ್ರತಿ ಷೇರಿನ ಮೂಲ ಗಳಿಕೆ ಎಂದು ಆಧರಿಸಿ ಲೆಕ್ಕಾಚಾರ ಮಾಡಲ್ಪಡುತ್ತದೆ.

2.21 ವ್ಯಾಪಾರ ಸಂಬಂಧಿ ಬರತಕ್ಕವುಗಳ ಮೌಲ್ಯ ಕುಗ್ಗುವಿಕೆ:

ವ್ಯಾಪಾರ ಸಂಬಂಧಿ ಬರತಕ್ಕವುಗಳಿಗೆ ಇಂಡ್ ಎಎಸ್ 109 -"ಆರ್ಥಿಕ ಸಾಧನಗಳು" ರ ಅವಶ್ಯಕತೆಯಂತೆ, ನಿರೀಕ್ಷಿತ ಪೂರ್ಣಾವಧಿ ನಷ್ಟಗಳನ್ನು ಬರತಕ್ಕವುಗಳ ಆರಂಭಿಕ ಗುರುತಿಸುವಿಕೆಯಿಂದಲೇ ಲೆಕ್ಕಿಸುವ ಅಗತ್ಯವಿದ್ದು, ಕಂಪೆನಿಯು ಈ ಸರಳೀಕೃತ ವಿಧಾನವನ್ನು ವ್ಯಾಪಾರ ಸಂಬಂಧಿ ಬರತಕ್ಕವುಗಳಿಗೆ ಅನ್ವಯಿಸಿಕೊಂಡಿದೆ. ಕಂಪೆನಿಯು ಇಂಡ್ ಎ.ಎಸ್-109ರಲ್ಲಿ ಅನುಮತಿಸಲಾದ, ಪ್ರಾಯೋಗಿಕವಾಗಿ ಅನುಕೂಲಕರವಾದ ಒಂದು ವಿಧಾನವನ್ನು ಬಳಸುತ್ತಿದೆ.

ಅ) ಎಲ್.ಟಿ.-2, ಎಲ್.ಟಿ.-3, ಎಲ್.ಟಿ.-5, ಮತ್ತು ಹೆಚ್.ಟಿ. ಜಕಾತಿಗಳಲ್ಲಿ ಸಂಪರ್ಕ ಕಡಿತಗೊಂಡು ಬಾಕಿ ಬಾರದೆ ಇರುವ ವಾಸ್ತವಿಕ ಮೊತ್ತಗಳಿಗೆ "ಬಾಕಿ ವಸೂಲಾತಿ ಖಾಯ್ದೆ" ಅನ್ವಯ ಅನುಮಾನಾಸ್ಪದ ಸಾಲಗಳನ್ನು ವಸೂಲು ಮಾಡುವ ಕ್ರಮವನ್ನು ತೆಗೆದುಕೊಂಡಿದೆ.

ಆ) ಐ.ಪಿ.ಸ್ಥಾವರಗಳ (ಸಂಪರ್ಕ ಕಡಿತವನ್ನು ಲೆಕ್ಕಿಸದೆ), ನೀರು ಸರಬರಾಜು ಸ್ಥಾವರಗಳ ಮತ್ತು ಬೀದಿ ದೀಪ ಸ್ಥಾವರಗಳ ಬಾಕಿ ಮೊತ್ತಗಳನ್ನು ಅನುಮಾನಾಸ್ಪದ ಸಾಲಗಳೆಂದು ಪರಿಗಣಿಸಲಾಗಿಲ್ಲ.

2.22 ವಿದ್ಯುತ್ ಖರೀದಿ:

ಚಾ.ವಿ.ಸ.ನಿ.ನಿ ಕಂಪನಿಗೆ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಇಎನ್ 131 ಪಿಎಸ್ಆರ್ 2003 ದಿನಾಂಕ 10ನೇ ಮೇ 2005 ಹಾಗೂ ಕಾಲಕಾಲಕ್ಕೆ ಹೊರಡಿಸುವ ತದನಂತರದ ಆದೇಶಗಳ ಪ್ರಕಾರ ವಿದ್ಯುತ್ ಉತ್ಪಾದಕರ ಪೂಲ್‌ನಿಂದ ಕರ್ನಾಟಕ ಸರ್ಕಾರ ಚಾವಿಸನಿನಿಗೆ ಶೇಕಡವಾರ ಹಂಚಿಕೆ ಮಾಡಿರುವ ಆಧಾರದ ಮೇಲೆ ವಿದ್ಯುತ್ ಉತ್ಪಾದನೆ ಸಂಸ್ಥೆಗಳು ಸಲ್ಲಿಸುವ ಬಿಲ್ಲನ್ನು ಆಧರಿಸಿ ವಿದ್ಯುತ್ ಖರೀದಿ ವೆಚ್ಚವನ್ನು ಗೊತ್ತುಪಡಿಸಲಾಗುತ್ತದೆ. ಕರ್ನಾಟಕ ಸರ್ಕಾರದಿಂದ ಹಂಚಿಕೆ ಮಾಡಿರುವ ವಿದ್ಯುತ್ ಮತ್ತು ವಾಸ್ತವಿಕ ವಿದ್ಯುತ್ತಿನ ನಡುವೆ ಇರುವ ವ್ಯತ್ಯಾಸವನ್ನು ಪ್ರತಿ ವರ್ಷ ನಡೆಸುವ ಎನರ್ಜಿ ಬ್ಯಾಲೆನ್ಸಿಂಗ್ ಮುಖಾಂತರ ಸಮನ್ವಯಗೊಳಿಸಿ ಕ.ವಿ.ನಿ.ಆ ದಿಂದ ಅನುಮೋದಿಸಿದ ವಿದ್ಯುತ್ ಖರೀದಿ ದರದಲ್ಲಿ ಹೊಂದಾಣಿಕೆಯನ್ನು ಮಾಡಲಾಗುವುದು.

ಪ್ರಸರಣಾ ಶುಲ್ಕವನ್ನು ರಾಜ್ಯದ ಸ್ಥಾಪಿಸಲಾದ ವಿದ್ಯುತ್ ಉತ್ಪಾದನ ಸಾಮರ್ಥ್ಯದ ಮೇಲೆ ನಿಯಂತ್ರಣ ಆಯೋಗವು ತನ್ನ ಜಕಾತಿ ಆದೇಶದಲ್ಲಿ ನಿರ್ಧರಿಸುತ್ತದೆ.

2.23 ಸರ್ಕಾರದ ಅನುದಾನ:

- ❖ ಬಂಡವಾಳ ವೆಚ್ಚಕ್ಕಾಗಿ ಪಡೆದ ಅನುದಾನವನ್ನು ಇತರೆ ಈಕ್ವಿಟಿಯಲ್ಲಿ ಸೇರಿಸಲಾಗಿದೆ.
- ❖ ಬಂಡವಾಳ ವೆಚ್ಚಕ್ಕಾಗಿ ಗ್ರಾಹಕರಿಂದ ಪಡೆದ ಕೊಡುಗೆಗಳನ್ನು ಇತರೆ ಈಕ್ವಿಟಿಯಲ್ಲಿ ಸೇರಿಸಲಾಗಿದೆ.
- ❖ ಇತರೆ ಕಂದಾಯ ಅನುದಾನವನ್ನು ಲಾಭ ಮತ್ತು ನಷ್ಟದ ಖಾತೆಗೆ ಜಮಾ ಮಾಡಲಾಗುತ್ತದೆ.

2.24 ಲಾಭಾಂಶ:

ಸಂಬಂಧಪಟ್ಟ ವರ್ಷಕ್ಕೆ ಪಾವತಿಸಿದ/ಪಾವತಿಸಬೇಕಾದ ಲಾಭಾಂಶವನ್ನು, ಷೇರುದಾರರು ಅಥವಾ ನಿರ್ದೇಶಕ ಮಂಡಳಿಯು ಅನುಮೋದಿಸಿದ ವರ್ಷದಲ್ಲಿ ಯುಕ್ತವಾದ ರೀತಿಯಲ್ಲಿ ಮಾನ್ಯಗೊಳಿಸಲಾಗುತ್ತದೆ.

2.25 ಇತ್ತೀಚಿನ ಲೆಕ್ಕಪತ್ರ ಪ್ರಕಟಣೆ:

ಸಾಂಸ್ಥಿಕ ವ್ಯವಹಾರಗಳ ಸಚಿವಾಲಯವು ಮಾರ್ಚ್ 30, 2019 ರಂದು ಇಂಡ್ ಎ ಎಸ್ 116 ಗುತ್ತಿಗೆಗಳನ್ನು ತಿಳಿಸಿದೆ ಮತ್ತು ಇದು ಅನುಬಂಧಗಳನ್ನೊಳಗೊಂಡಂತೆ ಇಂಡ್ ಎಎಸ್ 17 ಗುತ್ತಿಗೆಗಳನ್ನು ಬದಲಿಸುತ್ತದೆ, ಏಪ್ರಿಲ್, 01.2019 ರಿಂದ ಪ್ರಾರಂಭವಾಗುವ ವಾರ್ಷಿಕ ಅವಧಿಗಳಿಗೆ ಇಂಡ್ ಎಎಸ್-116 ಪರಿಣಾಮಕಾರಿಯಾಗಿದೆ. ಇಂಡ್ ಎಎಸ್-116 -ಗುತ್ತಿಗೆಗಳು ಗುರುತಿಸುವಿಕೆ, ಅಳತೆ, ಪ್ರಸ್ತುತಿ ಮತ್ತು ಬಹಿರಂಗಪಡಿಸುವಿಕೆಯ ತತ್ವಗಳನ್ನು ರೂಪಿಸುತ್ತದೆ ಮತ್ತು ಇಂಡ್ ಎಎಸ್-17 ರ ಮಾದರಿಯಂತೆ ಎಲ್ಲಾ ಗುತ್ತಿಗೆಗಳ ಲೆಕ್ಕೀರಣವು ಆಸ್ತಿ ಹೊಣೆ ಪಟ್ಟಿಗೆ ಹೋಲುತ್ತದೆ. ಮಾನದಂಡವು ಬಾಡಿಗೆದಾರರಿಗೆ ಎರಡು ಗುರುತಿಸುವಿಕೆ ವಿನಾಯಿತಿಗಳನ್ನು ಒಳಗೊಂಡಿದೆ- 'ಕಡಿಮೆ-ಮೌಲ್ಯದ' ಸ್ವತ್ತುಗಳ ಗುತ್ತಿಗೆಗಳು (ಉದಾ., ವೈಯಕ್ತಿಕ ಗಣಕಯಂತ್ರಗಳು) ಕಡಿಮೆ ಅವಧಿಯ ಗುತ್ತಿಗೆಗಳು (12 ತಿಂಗಳ ಅಥವಾ ಅದಕ್ಕಿಂತ ಕಡಿಮೆ ಅವಧಿಯ ಗುತ್ತಿಗೆ ಅವಧಿಯ ಗುತ್ತಿಗೆಗಳು). ಗುತ್ತಿಗೆಯ ಪ್ರಾರಂಭದ ದಿನಾಂಕದಂದು, ಬಾಡಿಗೆದಾರ ಗುತ್ತಿಗೆ ಪಾವತಿಗಳನ್ನು ಮಾಡುವ ಹೊಣೆಗಾರಿಕೆಯನ್ನು (ಗುತ್ತಿಗೆ ಹೊಣೆಗಾರಿಕೆ) ಮತ್ತು ಗುತ್ತಿಗೆ ಅವಧಿಯಲ್ಲಿ ಆಸ್ತಿಯನ್ನು ಬಳಸುವ ಹಕ್ಕನ್ನು (ಬಳಕೆಯ ಹಕ್ಕಿನ ಆಸ್ತಿ ಗುರುತಿಸುತ್ತಾನೆ) ಗುತ್ತಿಗೆ ಹೊಣೆಗಾರಿಕೆಯ ಮೇಲಿನ ಬಡ್ಡಿ ವೆಚ್ಚ ಮತ್ತು ಬಳಕೆಯ ಹಕ್ಕಿನ ಆಸ್ತಿಯ ಮೇಲಿನ ಸವಕಳಿ ವೆಚ್ಚವನ್ನು ಪ್ರತ್ಯೇಕವಾಗಿ ಗುರುತಿಸಲು ಗುತ್ತಿಗೆದಾರರಿಗೆ ಅಗತ್ಯವಿದೆ.

ಕೆಲವು ಘಟನೆಗಳು ಸಂಭವಿಸಿದ ನಂತರ ಗುತ್ತಿಗೆ ಹೊಣೆಗಾರಿಕೆಯನ್ನು ಬಾಡಿಗೆದಾರರು ಮರುಪರಿಶೀಲಿಸಲು ಸಹ ಅಗತ್ಯವಿರುತ್ತದೆ (ಉದಾ., ಗುತ್ತಿಗೆ ಅವಧಿಯ ಬದಲಾವಣೆ, ಭವಿಷ್ಯದ ಗುತ್ತಿಗೆ ಪಾವತಿಗಳಲ್ಲಿನ ಬದಲಾವಣೆ ಮತ್ತು ಆ ಪಾವತಿಗಳನ್ನು ನಿರ್ಧರಿಸಲು ಬಳಸುವ ಸೂಚ್ಯಂಕ ಅಥವಾ ದರದಲ್ಲಿನ ಬದಲಾವಣೆ). ಬಾಡಿಗೆದಾರನು ಸಾಮಾನ್ಯವಾಗಿ ಗುತ್ತಿಗೆ ಹೊಣೆಗಾರಿಕೆಯ ಮರುಮೌಲ್ಯಮಾಪನದ ಪ್ರಮಾಣವನ್ನು ಬಳಕೆಯ ಸ್ವತ್ತಿಗೆ ಹೊಂದಾಣಿಕೆಯೆಂದು ಗುರುತಿಸುತ್ತಾನೆ.

ಇಂಡ್ ಎ.ಎಸ್-116 ರ ಅಡಿಯಲ್ಲಿ, ಗುತ್ತಿಗೆದಾರನ ಗುತ್ತಿಗೆ ಲೆಕ್ಕೀಕರಣವು ಅಕೌಂಟಿಂಗ್ ಇಂಡ್ ಎ.ಎಸ್-17 ರ ಅಡಿಯಲ್ಲಿನ ಲೆಕ್ಕೀಕರಣಕ್ಕೆ ಹೋಲಿಸಿದಾಗ ಗಣನೀಯವಾಗಿ ಬದಲಾಗಿಲ್ಲ. ಇಂಡ್ ಎ.ಎಸ್-17ರ ವರ್ಗೀಕರಣ ತತ್ವವನ್ನು ಬಳಸಿಕೊಂಡು ಎಲ್ಲಾ ಗುತ್ತಿಗೆಗಳನ್ನು ಆಪರೇಟಿಂಗ್ ಮತ್ತು ಫೈನಾನ್ಸ್ ಲೀಸ್‌ಗಳಾಗಿ ವರ್ಗೀಕರಿಸುತ್ತಾರೆ.

ಕಂಪನಿಯು ಈ ಮಾನದಂಡಗಳನ್ನು ಏಪ್ರಿಲ್ 1, 2019 ರಿಂದ ಅಳವಡಿಸಿಕೊಳ್ಳಲು ಉದ್ದೇಶಿಸಿದೆ. ಕಂಪನಿಯು ಯಾವುದೇ ವಸ್ತು ಗುತ್ತಿಗೆಗಳನ್ನು ಹೊಂದಿರದ ಕಾರಣ, ಈ ಮಾನದಂಡವನ್ನು ಅಳವಡಿಸಿಕೊಳ್ಳುವುದರಿಂದ ಅದರ ಹಣಕಾಸು ಪಟ್ಟಿಗಳಲ್ಲಿ ಪರಿಣಾಮ ಬೀರುವ ಸಾಧ್ಯತೆಯಿಲ್ಲ.

ಪ್ರಸರಣಾ ಶುಲ್ಕವನ್ನು ರಾಜ್ಯದ ಸ್ಥಾಪಿಸಲಾದ ವಿದ್ಯುತ್ ಉತ್ಪಾದನ ಸಾಮರ್ಥ್ಯದ ಮೇಲೆ ನಿಯಂತ್ರಣ ಆಯೋಗವು ತನ್ನ ಜಕಾತಿ ಆದೇಶದಲ್ಲಿ ನಿರ್ಧರಿಸುತ್ತದೆ.

2.23 ಸರ್ಕಾರದ ಅನುದಾನ:

- ❖ ಬಂಡವಾಳ ವೆಚ್ಚಕ್ಕಾಗಿ ಪಡೆದ ಅನುದಾನವನ್ನು ಇತರೆ ಈಕ್ವಿಟಿಯಲ್ಲಿ ಸೇರಿಸಲಾಗಿದೆ.
- ❖ ಬಂಡವಾಳ ವೆಚ್ಚಕ್ಕಾಗಿ ಗ್ರಾಹಕರಿಂದ ಪಡೆದ ಕೊಡುಗೆಗಳನ್ನು ಇತರೆ ಈಕ್ವಿಟಿಯಲ್ಲಿ ಸೇರಿಸಲಾಗಿದೆ.
- ❖ ಇತರೆ ಕಂದಾಯ ಅನುದಾನವನ್ನು ಲಾಭ ಮತ್ತು ನಷ್ಟದ ಖಾತೆಗೆ ಜಮಾ ಮಾಡಲಾಗುತ್ತದೆ.

2.24 ಲಾಭಾಂಶ:

ಸಂಬಂಧಪಟ್ಟ ವರ್ಷಕ್ಕೆ ಪಾವತಿಸಿದ/ಪಾವತಿಸಬೇಕಾದ ಲಾಭಾಂಶವನ್ನು, ಷೇರುದಾರರು ಅಥವಾ ನಿರ್ದೇಶಕ ಮಂಡಳಿಯು ಅನುಮೋದಿಸಿದ ವರ್ಷದಲ್ಲಿ ಯುಕ್ತವಾದ ರೀತಿಯಲ್ಲಿ ಮಾನ್ಯಗೊಳಿಸಲಾಗುತ್ತದೆ.

2.25 ಇತ್ತೀಚಿನ ಲೆಕ್ಕಪತ್ರ ಪ್ರಕಟಣೆ:

ಸಾಂಸ್ಥಿಕ ವ್ಯವಹಾರಗಳ ಸಚಿವಾಲಯವು ಮಾರ್ಚ್ 30, 2019 ರಂದು ಇಂಡ್ ಎ ಎಸ್ 116 ಗುತ್ತಿಗೆಗಳನ್ನು ತಿಳಿಸಿದೆ ಮತ್ತು ಇದು ಅನುಬಂಧಗಳನ್ನೊಳಗೊಂಡಂತೆ ಇಂಡ್ ಎಎಸ್ 17 ಗುತ್ತಿಗೆಗಳನ್ನು ಬದಲಿಸುತ್ತದೆ, ಏಪ್ರಿಲ್, 01.2019 ರಿಂದ ಪ್ರಾರಂಭವಾಗುವ ವಾರ್ಷಿಕ ಅವಧಿಗಳಿಗೆ ಇಂಡ್ ಎಎಸ್-116 ಪರಿಣಾಮಕಾರಿಯಾಗಿದೆ. ಇಂಡ್ ಎಎಸ್-116 -ಗುತ್ತಿಗೆಗಳು ಗುರುತಿಸುವಿಕೆ, ಅಳತೆ, ಪ್ರಸ್ತುತಿ ಮತ್ತು ಬಹಿರಂಗಪಡಿಸುವಿಕೆಯ ತತ್ವಗಳನ್ನು ರೂಪಿಸುತ್ತದೆ ಮತ್ತು ಇಂಡ್ ಎಎಸ್-17 ರ ಮಾದರಿಯಂತೆ ಎಲ್ಲಾ ಗುತ್ತಿಗೆಗಳ ಲೆಕ್ಕೀರಣವು ಆಸ್ತಿ ಹೊಣೆ ಪಟ್ಟಿಗೆ ಹೋಲುತ್ತದೆ. ಮಾನದಂಡವು ಬಾಡಿಗೆದಾರರಿಗೆ ಎರಡು ಗುರುತಿಸುವಿಕೆ ವಿನಾಯಿತಿಗಳನ್ನು ಒಳಗೊಂಡಿದೆ- 'ಕಡಿಮೆ-ಮೌಲ್ಯದ' ಸ್ವತ್ತುಗಳ ಗುತ್ತಿಗೆಗಳು (ಉದಾ., ವೈಯಕ್ತಿಕ ಗಣಕಯಂತ್ರಗಳು) ಕಡಿಮೆ ಅವಧಿಯ ಗುತ್ತಿಗೆಗಳು (12 ತಿಂಗಳ ಅಥವಾ ಅದಕ್ಕಿಂತ ಕಡಿಮೆ ಅವಧಿಯ ಗುತ್ತಿಗೆ ಅವಧಿಯ ಗುತ್ತಿಗೆಗಳು). ಗುತ್ತಿಗೆಯ ಪ್ರಾರಂಭದ ದಿನಾಂಕದಂದು, ಬಾಡಿಗೆದಾರ ಗುತ್ತಿಗೆ ಪಾವತಿಗಳನ್ನು ಮಾಡುವ ಹೊಣೆಗಾರಿಕೆಯನ್ನು (ಗುತ್ತಿಗೆ ಹೊಣೆಗಾರಿಕೆ) ಮತ್ತು ಗುತ್ತಿಗೆ ಅವಧಿಯಲ್ಲಿ ಆಸ್ತಿಯನ್ನು ಬಳಸುವ ಹಕ್ಕನ್ನು (ಬಳಕೆಯ ಹಕ್ಕಿನ ಆಸ್ತಿ ಗುರುತಿಸುತ್ತಾನೆ) ಗುತ್ತಿಗೆ ಹೊಣೆಗಾರಿಕೆಯ ಮೇಲಿನ ಬಡ್ಡಿ ವೆಚ್ಚ ಮತ್ತು ಬಳಕೆಯ ಹಕ್ಕಿನ ಆಸ್ತಿಯ ಮೇಲಿನ ಸವಕಳಿ ವೆಚ್ಚವನ್ನು ಪ್ರತ್ಯೇಕವಾಗಿ ಗುರುತಿಸಲು ಗುತ್ತಿಗೆದಾರರಿಗೆ ಅಗತ್ಯವಿದೆ.

ಕೆಲವು ಘಟನೆಗಳು ಸಂಭವಿಸಿದ ನಂತರ ಗುತ್ತಿಗೆ ಹೊಣೆಗಾರಿಕೆಯನ್ನು ಬಾಡಿಗೆದಾರರು ಮರುಪರಿಶೀಲಿಸಲು ಸಹ ಅಗತ್ಯವಿರುತ್ತದೆ (ಉದಾ., ಗುತ್ತಿಗೆ ಅವಧಿಯ ಬದಲಾವಣೆ, ಭವಿಷ್ಯದ ಗುತ್ತಿಗೆ ಪಾವತಿಗಳಲ್ಲಿನ ಬದಲಾವಣೆ ಮತ್ತು ಆ ಪಾವತಿಗಳನ್ನು ನಿರ್ಧರಿಸಲು ಬಳಸುವ ಸೂಚ್ಯಂಕ ಅಥವಾ ದರದಲ್ಲಿನ ಬದಲಾವಣೆ). ಬಾಡಿಗೆದಾರನು ಸಾಮಾನ್ಯವಾಗಿ ಗುತ್ತಿಗೆ ಹೊಣೆಗಾರಿಕೆಯ ಮರುಮೌಲ್ಯಮಾಪನದ ಪ್ರಮಾಣವನ್ನು ಬಳಕೆಯ ಸ್ವತ್ತಿಗೆ ಹೊಂದಾಣಿಕೆಯೆಂದು ಗುರುತಿಸುತ್ತಾನೆ.

ಇಂಡ್ ಎ.ಎಸ್-116 ರ ಅಡಿಯಲ್ಲಿ, ಗುತ್ತಿಗೆದಾರನ ಗುತ್ತಿಗೆ ಲೆಕ್ಕೀಕರಣವು ಅಕೌಂಟಿಂಗ್ ಇಂಡ್ ಎ.ಎಸ್-17 ರ ಅಡಿಯಲ್ಲಿನ ಲೆಕ್ಕೀಕರಣಕ್ಕೆ ಹೋಲಿಸಿದಾಗ ಗಣನೀಯವಾಗಿ ಬದಲಾಗಿಲ್ಲ. ಇಂಡ್ ಎ.ಎಸ್-17ರ ವರ್ಗೀಕರಣ ತತ್ವವನ್ನು ಬಳಸಿಕೊಂಡು ಎಲ್ಲಾ ಗುತ್ತಿಗೆಗಳನ್ನು ಆಪರೇಟಿಂಗ್ ಮತ್ತು ಫೈನಾನ್ಸ್ ಲೀಸ್‌ಗಳಾಗಿ ವರ್ಗೀಕರಿಸುತ್ತಾರೆ.

ಕಂಪನಿಯು ಈ ಮಾನದಂಡಗಳನ್ನು ಏಪ್ರಿಲ್ 1, 2019 ರಿಂದ ಅಳವಡಿಸಿಕೊಳ್ಳಲು ಉದ್ದೇಶಿಸಿದೆ. ಕಂಪನಿಯು ಯಾವುದೇ ವಸ್ತು ಗುತ್ತಿಗೆಗಳನ್ನು ಹೊಂದಿರದ ಕಾರಣ, ಈ ಮಾನದಂಡವನ್ನು ಅಳವಡಿಸಿಕೊಳ್ಳುವುದರಿಂದ ಅದರ ಹಣಕಾಸು ಪಟ್ಟಿಗಳಲ್ಲಿ ಪರಿಣಾಮ ಬೀರುವ ಸಾಧ್ಯತೆಯಿಲ್ಲ.

ಟಿಪ್ಪಣಿ 3 : ಆಸ್ತಿ, ಸ್ಥಾವರಗಳು ಮತ್ತು ಉಪಕರಣಗಳು:

(₹.ಲಕ್ಷಗಳಲ್ಲಿ)

ಆಸ್ತಿ ವಿವರಗಳು	ಲೆಕ್ಕ ಶೀರ್ಷಿಕೆ	ಒಟ್ಟು ಬ್ಲಾಕ್					ಸವಕಳಿ					ನಿವ್ವಳ ಬ್ಲಾಕ್	
		01.04.2019 ರಂದು ಇದ್ದಂತೆ	ಪ್ರಸಕ್ತ ವರ್ಷದಲ್ಲಿ ಸೇರ್ಪಡೆ	ವರ್ಷಾವಧಿಯಲ್ಲಿ ಕಡಿತ / ನಿವೃತ್ತಿ	ಇಂಡ್ ಎಎಸ್ ಹೊಂದಾಣಿಕೆ	31.03.2020 ರಂದು ಇದ್ದಂತೆ	01.04.2019 ರಂದು ಇದ್ದಂತೆ	ಪ್ರಸಕ್ತ ವರ್ಷದಲ್ಲಿ ಸೇರ್ಪಡೆ	ವರ್ಷಾವಧಿಯಲ್ಲಿ ಕಡಿತ / ನಿವೃತ್ತಿ	ಇಂಡ್ ಎಎಸ್ ಹೊಂದಾಣಿಕೆ	31.03.2020 ರಂದು ಇದ್ದಂತೆ	01.04.2019 ರಂದು ಇದ್ದಂತೆ	31.03.2020 ರಂದು ಇದ್ದಂತೆ
ಭೂಮಿ ಮತ್ತು ಹಕ್ಕು	10.1	269.44	5.07	5.07		269.44	-	-	-		-	269.44	269.44
ಭೋಗ್ಯದಲ್ಲಿ ಇರುವ ಭೂಮಿ	10.1	313.74	4.33	-		318.07	14.45	8.95	-		23.40	299.29	294.66
ಕಟ್ಟಡಗಳು	10.2	10,012.57	2,110.88	17.22		12,106.22	2,196.53	387.88	4.35		2,580.06	7,816.03	9,526.16
ಜಲ ಕಾರ್ಯಾಗಾರಗಳು	10.3	298.09	73.43	2.05		369.47	102.12	18.57	-		120.70	195.96	248.77
ಇತರೆ ಸಿವಿಲ್ ಕಾಮಗಾರಿಗಳು	10.4	149.55	195.23	(4.23)		349.02	30.84	9.05	-		39.89	118.71	309.13
ಸ್ಥಾವರ ಮತ್ತು ಯಂತ್ರೋಪಕರಣ	10.5	89,395.17	18,251.15	9,754.76		97,891.57	17,638.11	4,729.95	1,104.90		21,263.16	71=,757.07	76,628.41
ಗಣಕ ಯಂತ್ರ	10.5	1,507.71	25.45	17.26		1,515.90	983.22	169.80	14.95		1,138.08	524.49	377.82
ಮಾರ್ಗಗಳು ಕೇಬಲ್ ಜಾಲಗಳು	10.6	310,341.66	47,155.12	2,295.46		355,201.32	96,230.33	17,099.31	1,931.49		111,398.15	214,111.33	243,803.17
ವಾಹನಗಳು	10.7	630.36	226.14	14.96		841.53	343.04	49.63	9.07		383.60	287.31	457.93
ಪೀಠೋಪಕರಣ ಮತ್ತು ಜೋಡಣೆಗಳು	10.8	4,696.87	703.51	8.73		5,391.66	637.09	327.67	6.74		958.02	4,059.78	4,433.64
ಕಛೇರಿ ಮತ್ತು ಸಲಕರಣೆಗಳು	10.9	1,300.69	25.84	2.86		1,323.67	335.57	81.50	2.39		414.68	965.12	908.99
ಉಪ ಮೊತ್ತ		**418,915.85**	**68,776.15**	**12,114.13**	-	**475,577.87**	**118,511.31**	**22,882.32**	**3,073.89**		**138,319.73**	**300,404.54**	337,258.14
ಮರು ಬಳಸಬಹುದಾದ, ಕಳಚಿದ ಯಂತ್ರೋಪಕರಣ ಗಳು ಸಲಕರಣೆಗಳು, ಮಾರ್ಗಗಳು, ಕೇಬಲ್ ಜಾಲಗಳು	16.2	1,661.07	-	315.89	-	1,345.18	-	-	-	-	-	1,661.07	1,345.18
ಸ್ಪರ್ಶಾವೇದ್ಯ ಆಸ್ತಿ ಒಟ್ಟು 2019-20		**420,576.92**	**68,776.15**	**12,430.02**	-	**476,923.05** **420,576.92**	**118,511.31**	**22,882.32**	**3,073.89** **2,726.72**		**138,319.73**	**302,065.61**	338,603.32
ಸ್ಪರ್ಶಾವೇದ್ಯ ಆಸ್ತಿ ಒಟ್ಟು 2018-19		**376,309.04**	**55,657.17**	**11,389.29**	-	**420,576.92**	**100,694.62**	**20,543.41**	**2,726.72**		**118,511.31**	**275,614.43**	302,065.61

ಟಿಪ್ಪಣಿ 3 : ಆಸ್ತಿ, ಸ್ಥಾವರ ಮತ್ತು ಯಂತ್ರೋಪಕರಣಗಳು – ಸ್ಪರ್ಶವೇಧ್ಯ ಆಸ್ತಿಗಳು:

(₹.ಲಕ್ಷಗಳಲ್ಲಿ)

ಕ್ರ. ಸಂ	ವಿವರಗಳು	ಲೆಕ್ಕ ಶೀರ್ಷಿಕೆ	31.03.2020 ರಲ್ಲಿ ಇದ್ದಂತೆ	31.03.2019 ರಲ್ಲಿ ಇದ್ದಂತೆ
3.1	ಮುಕ್ತ ಹಿಡಿತ ಹೊಂದಿರುವ ಭೂಮಿ	10.1	269.44	269.44
3.2	ಭೋಗ್ಯದಲ್ಲಿ ಇರುವ ಭೂಮಿ	10.1	294.66	299.29
3.3	ಕಟ್ಟಡಗಳು	10.2	9,526.16	7,816.03
3.4	ಜಲ ಕಾರ್ಯಾಗಾರಗಳು	10.3	248.77	195.96
3.5	ಇತರೆ ಸಿವಿಲ್ ಕಾಮಗಾರಿಗಳು	10.4	309.13	118.71
3.6	ಸ್ಥಾವರ ಮತ್ತು ಯಂತ್ರೋಪಕರಣ	10.5	76,628.41	71,757.07
3.7	ಗಣಕ ಯಂತ್ರ	10.5	377.82	524.49
3.8	ಮಾರ್ಗಗಳ ಕೇಬಲ್ ಜಾಲಗಳು	10.6	243,803.17	214,111.33
3.9	ವಾಹನಗಳು	10.7	457.93	287.31
3.10	ಪೀಠೋಪಕರಣ ಮತ್ತು ಜೋಡಣೆಗಳು	10.8	4,433.64	4,059.78
3.11	ಕಛೇರಿ ಮತ್ತು ಸಲಕರಣೆಗಳು	10.9	908.99	965.12
3.12	ಮರು ಬಳಸಬಹುದಾದ, ಕಳಚಿದ ಯಂತ್ರೋಪಕರಣಗಳು ಸಲಕರಣೆಗಳು, ಮಾರ್ಗಗಳು, ಕೇಬಲ್ ಜಾಲಗಳು	16.2	1,345.18	1,661.07
ಮೊತ್ತವನ್ನು ಆಸ್ತಿ ಹೊಣೆ ಪಟ್ಟಿಗೆ ಸಾಗಿಸಲಾಗಿದೆ			**338,603.32**	**302,065.61**

3.13 ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ನಿಯಮಿತ (ಕ.ವಿ.ಪ್ರ.ನಿ.ನಿ) ದಿಂದ ವರ್ಗಾಯಿಸಲಾದ ಆಸ್ತಿಗಳನ್ನು ಕ.ವಿ.ಪ್ರ.ನಿ.ನಿ ಯ ವರ್ಗಾವಣೆ ದಾಖಲೆಗಳಲ್ಲಿ ಸೂಚಿಸಿರುವ ಮೌಲ್ಯದಲ್ಲಿಯೇ ಪರಿಗಣಿಸಲಾಗಿದೆ.

3.14 ಕೆಪಿಟಿಸಿಎಲ್ ನಿಂದ ವರ್ಗಾವಣೆಗೊಂಡ ಸ್ಥಿರಾಸ್ತಿಗಳನ್ನು ಕಂಪನಿಯ ಹೆಸರಿಗೆ ವರ್ಗಾಯಿಸುವ ಕಾರ್ಯ ಪ್ರಗತಿಯಲ್ಲಿದೆ. ಪ್ರಸ್ತುತ 187 ಆಸ್ತಿಗಳಲ್ಲಿ 154 ಸಂಖ್ಯೆ ಚಾವಿಸನಿನಿಯ ಹೆಸರಿಗೆ ವರ್ಗಾವಣೆಗೊಂಡಿರುತ್ತದೆ. ಉಳಿದ 33 ಸಂಖ್ಯೆಯ ಆಸ್ತಿ ವಿವರಣೆಯನ್ನು ಅನುಬಂಧಿಸಿದೆ.

3.15 ಕಂಪನಿಯು, ಇಂಡ್ ಎ.ಎಸ್-101 ರ "ಪ್ರಥಮ ಬಾರಿಗೆ ಭಾರತೀಯ ಲೆಕ್ಕ ಮಾನದಂಡಗಳ ಅಳವಡಿಕೆ" ಯ ಕಂಡಿಕೆ ಡಿ7ಎಎ ಅನುಸಾರ, ದಿನಾಂಕ 01.04.2017 ರಲ್ಲಿರುವಂತೆ, ತನ್ನ ಎಲ್ಲಾ ಆಸ್ತಿಗಳು, ಸ್ಥಾವರಗಳು ಮತ್ತು ಯಂತ್ರೋಪಕರಣಗಳ ಮೌಲ್ಯವನ್ನು ಹಿಂದಿನ ಸಾಮಾನ್ಯವಾಗಿ ಸ್ವೀಕರಿಸಿದ ಲೆಕ್ಕಪತ್ರದ ತತ್ವಗಳಲ್ಲಿ ಮಾಪನಗೊಳಿಸಿದ ಮೌಲ್ಯದಲ್ಲೇ ಗುರುತಿಸಿ ಮುಂದುವರೆಸಿಕೊಂಡು ಹೋಗುವ ನಿರ್ಣಯವನ್ನು ಅಂಗೀಕರಿಸಿದೆ ಹಾಗೂ ಈ ಮೌಲ್ಯವನ್ನು ಪರಿವರ್ತನಾ ದಿನಾಂಕದಲ್ಲಿರುವಂತೆ ತನ್ನ ಸ್ವಾಯತ್ತ ವೆಚ್ಚವೆಂದು ಪರಿಗಣಿಸಿದೆ.

3.16 ಟಿಪ್ಪಣಿ ಸಂಖ್ಯೆ.21.1 ರಲ್ಲಿ ಉಲ್ಲೇಖಿಸಿರುವಂತೆ ಕಂಪನಿಯ ಸ್ಥಿರಾಸ್ತಿಗಳನ್ನು ವಿವಿಧ ಹಣಕಾಸು ಸಂಸ್ಥೆಗಳಲ್ಲಿ ಅಡಮಾನ ಇಡಲಾಗಿದೆ.

3.17 ಒಂದು ವರ್ಷದ ಸವಕಳಿ ಲೆಕ್ಕಾಚಾರ ಮಾಡಲು ಅಧಿಕ ವರ್ಷಕ್ಕೂ ಸಹ 365 ಎಂದು ಪರಿಗಣಿಸಿಲಾಗುತ್ತದೆ ಮತ್ತು ಅದರ ವ್ಯತ್ಯಾಸವು ವಿಧಿಸಲಾದ ಒಟ್ಟು ಸವಕಳಿಯ 0.27% ಆಗಿದೆ.

ಟಿಪ್ಪಣಿ 4 : ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು:

(₹.ಲಕ್ಷಗಳಲ್ಲಿ)

ಕ್ರ.ಸಂ	ವಿವರಗಳು	ಲೆಕ್ಕ ಶೀರ್ಷಿಕೆ	31.03.2020 ರಲ್ಲಿ ಇದ್ದಂತೆ	31.03.2019 ರಲ್ಲಿ ಇದ್ದಂತೆ
4.1	ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು	14 ನೇ ಶ್ರೇಣಿ	16,452.85	15,182.67
4.2	ಪೂರ್ಣಗೊಂಡ ಕಾಮಗಾರಿಗಳ ಮೇಲಿನ ಪ್ರಾವಿಷನ್	15 ನೇ ಶ್ರೇಣಿ	1,402.48	1,447.03
4.3	ಟರ್ನ್‌ಕೀ ಗುತ್ತಿಗೆದಾರರ ಕಂಟ್ರೋಲ್ ಖಾತೆ	26.6057	22,997.05	26,246.23
	ಆಸ್ತಿ ಹೊಣೆ ಪಟ್ಟಿಗೆ ಸಾಗಿಸಲಾದ ಮೊತ್ತ		**40,852.38**	**42,875.93**

4.4 ಕಂಪನಿಯು, ಇಂಡ್ ಎ.ಎಸ್-101 ರ "ಪ್ರಥಮ ಬಾರಿಗೆ ಭಾರತೀಯ ಲೆಕ್ಕ ಮಾನದಂಡಗಳ ಅಳವಡಿಕೆ" ಯ ಕಂಡಿಕೆ ಡಿ7ಎಎ ಅನುಸಾರ, ದಿನಾಂಕ 01.04.2017 ರಲ್ಲಿರುವಂತೆ, ತನ್ನ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ ಮೌಲ್ಯವನ್ನು ಹಿಂದಿನ ಸಾಮಾನ್ಯವಾಗಿ ಸ್ವೀಕರಿಸಿದ ಲೆಕ್ಕಪತ್ರದ ತತ್ವಗಳಲ್ಲಿ ಮಾಪನಗೊಳಿಸಿದ ಮೌಲ್ಯದಲ್ಲೇ ಗುರುತಿಸಿ ಮುಂದುವರೆಸಿಕೊಂಡು ಹೋಗುವ ನಿರ್ಣಯವನ್ನು ಅಂಗೀಕರಿಸಿದೆ ಹಾಗೂ ಈ ಮೌಲ್ಯವನ್ನು ಪರಿವರ್ತನಾ ದಿನಾಂಕದಲ್ಲಿರುವಂತೆ ತನ್ನ ಸ್ವಾಯತ್ತ ವೆಚ್ಚವೆಂದು ಪರಿಗಣಿಸಿದೆ.

4.5 ಬಂಡವಾಳ ಕಾಮಗಾರಿಗಳಿಗಾಗಿ ಪಡೆದ ಸಾಲದ ಮೇಲಿನ ಬಡ್ಡಿ ₹1551.52 ಲಕ್ಷಗಳನ್ನು ಪ್ರಸಕ್ತ ವರ್ಷದಲ್ಲಿ ಬಂಡವಾಳೀಕರಿಸಲಾಗಿದೆ.

ಟಿಪ್ಪಣಿ 5 : ಸ್ಪರ್ಶಾತೀತ ಆಸ್ತಿಗಳು:

(₹.ಲಕ್ಷಗಳಲ್ಲಿ)

ಕ್ರ.ಸಂ	ವಿವರಗಳು	ಲೆಕ್ಕ ಶೀರ್ಷಿಕೆ	31.03.2020 ರಲ್ಲಿ ಇದ್ದಂತೆ	31.03.2019 ರಲ್ಲಿ ಇದ್ದಂತೆ
5.1	ಗಣಕಯಂತ್ರದ ತಂತ್ರಾಂಶ	12.9 ನೇ ಶ್ರೇಣಿ 18.1 ನೇ ಶ್ರೇಣಿ	527.09	1,088.55
	ಆಸ್ತಿ ಹೊಣೆ ಪಟ್ಟಿಗೆ ಸಾಗಿಸಲಾದ ಮೊತ್ತ		**527.09**	**1,088.55**

5.2 ಕಂಪನಿಯು, ಇಂಡ್ ಎ.ಎಸ್-101 ರ "ಪ್ರಥಮ ಬಾರಿಗೆ ಭಾರತೀಯ ಲೆಕ್ಕ ಮಾನದಂಡಗಳ ಅಳವಡಿಕೆ" ಯ ಕಂಡಿಕೆ ಡಿ7ಎಎ ಅನುಸಾರ, ದಿನಾಂಕ 01.04.2017 ರಲ್ಲಿರುವಂತೆ, ತನ್ನ ಸ್ಪರ್ಶಾತೀತ ಆಸ್ತಿಗಳ ಮೌಲ್ಯವನ್ನು ಹಿಂದಿನ ಸಾಮಾನ್ಯವಾಗಿ ಸ್ವೀಕರಿಸಿದ ಲೆಕ್ಕಪತ್ರದ ತತ್ವಗಳಲ್ಲಿ ಮಾಪನಗೊಳಿಸಿದ ಮೌಲ್ಯದಲ್ಲೇ ಗುರುತಿಸಿ ಮುಂದುವರೆಸಿಕೊಂಡು ಹೋಗುವ ನಿರ್ಣಯವನ್ನು ಅಂಗೀಕರಿಸಿದೆ ಹಾಗೂ ಈ ಮೌಲ್ಯವನ್ನು ಪರಿವರ್ತನಾ ದಿನಾಂಕದಲ್ಲಿರುವಂತೆ ತನ್ನ ಸ್ವಾಯತ್ತ ವೆಚ್ಚವೆಂದು ಪರಿಗಣಿಸಿದೆ.

ಟಿಪ್ಪಣಿ 6 : ಪ್ರಗತಿಯಲ್ಲಿರುವ ಸ್ಪರ್ಶಾತೀತ ಆಸ್ತಿಗಳು:

(₹.ಲಕ್ಷಗಳಲ್ಲಿ)

ಕ್ರ.ಸಂ	ವಿವರಗಳು	ಲೆಕ್ಕ ಶೀರ್ಷಿಕೆ	31.03.2020 ರಲ್ಲಿ ಇದ್ದಂತೆ	31.03.2019 ರಲ್ಲಿ ಇದ್ದಂತೆ
6.1	ಪ್ರಗತಿಯಲ್ಲಿರುವ-ಎಂ.ಎಂ.ಎಸ್ ತಂತ್ರಾಂಶ	14.1727	-	-
	ಆಸ್ತಿ ಹೊಣೆ ಪಟ್ಟಿಗೆ ಸಾಗಿಸಲಾದ ಮೊತ್ತ		-	-

6.2 ಕಂಪನಿಯು, ಇಂಡ್ ಎ.ಎಸ್-101 ರ "ಪ್ರಥಮ ಬಾರಿಗೆ ಭಾರತೀಯ ಲೆಕ್ಕ ಮಾನದಂಡಗಳ ಅಳವಡಿಕೆ" ಯ ಕಂಡಿಕೆ ಡಿ7ಎಎ ಅನುಸಾರ, ದಿನಾಂಕ 01.04.2017 ರಲ್ಲಿರುವಂತೆ, ತನ್ನ ಪ್ರಗತಿಯಲ್ಲಿರುವ ಸ್ಪರ್ಶಾತೀತ ಆಸ್ತಿಗಳ ಮೌಲ್ಯವನ್ನು ಹಿಂದಿನ ಸಾಮಾನ್ಯವಾಗಿ ಸ್ವೀಕರಿಸಿದ ಲೆಕ್ಕಪತ್ರದ ತತ್ವಗಳಲ್ಲಿ ಮಾಪನಗೊಳಿಸಿದ ಮೌಲ್ಯದಲ್ಲೇ ಗುರುತಿಸಿ ಮುಂದುವರೆಸಿಕೊಂಡು ಹೋಗುವ ನಿರ್ಣಯವನ್ನು ಅಂಗೀಕರಿಸಿದೆ ಹಾಗೂ ಈ ಮೌಲ್ಯವನ್ನು ಪರಿವರ್ತನಾ ದಿನಾಂಕದಲ್ಲಿರುವಂತೆ ತನ್ನ ಸ್ವಾಯತ್ತ ವೆಚ್ಚವೆಂದು ಪರಿಗಣಿಸಿದೆ.

ಟಿಪ್ಪಣಿ 7 : ಪ್ರಸಕ್ತವಲ್ಲದ ಹೂಡಿಕೆಗಳು:

(₹.ಲಕ್ಷಗಳಲ್ಲಿ)

ಕ್ರ. ಸಂ	ವಿವರಗಳು	ಲೆಕ್ಕ ಶೀರ್ಷಿಕೆ	31.03.2020 ರಲ್ಲಿ ಇದ್ದಂತೆ	31.03.2019 ರಲ್ಲಿ ಇದ್ದಂತೆ
7.1	**(ಸಂಪೂರ್ಣವಾಗಿ ಪಾವತಿಸಲಾದ ಉಲ್ಲೇಖಿಸಲ್ಪಡದಿರುವ ಹೂಡಿಕೆಗಳು)** ಮೆ॥ಪವರ್ ಕಂಪನಿ ಆಫ್ ಕರ್ನಾಟಕ ಲಿ. ನ ಈಕ್ವಿಟಿ ಷೇರು ಬಂಡವಾಳದಲ್ಲಿ ಹೂಡಿಕೆ (ತಲಾ ₹1000/- ಮುಖ ಬೆಲೆಯ 100 ಷೇರುಗಳು)	20.2717 27.8117	1.00	251.00
	ಮೊತ್ತವನ್ನು ಆಸ್ತಿ ಹೊಣೆ ಪಟ್ಟಿಗೆ ಸಾಗಿಸಲಾಗಿದೆ		**1.00**	**251.00**

7.2 ಪಿ.ಸಿ.ಕೆ.ಎಲ್ ನಲ್ಲಿನ ಹೂಡಿಕೆಯ ಪ್ರಸಕ್ತ ಮೌಲ್ಯಕ್ಕೆ ಹೂಡಿಕೆಯನ್ನು ಹೊಂದಿಸದಿರಲು ಕಂಪನಿ ಆಯ್ಕೆ ಮಾಡಿದೆ.

7.3 ಪ್ರಸಕ್ತ ವರ್ಷದಲ್ಲಿ, ಪಿ.ಸಿ.ಕೆ.ಎಲ್ ಪತ್ರ ಸಂಖ್ಯೆ: PCKL/AT2/33-V4/2015-16/3514-24 dt.22.10.2019 ರನ್ವಯ ಷೇರು ಬಂಡವಾಳಕ್ಕೆ ಹೂಡಿಕೆ ಮಾಡಲಾದ ₹250 ಲಕ್ಷಗಳನ್ನು ಹಿಂದಿರುಗಿಸಿದೆ.

ಟಿಪ್ಪಣಿ 8 : ಇತರೆ ನಾಚಾಲ್ತಿ ಆರ್ಥಿಕ ಆಸ್ತಿಗಳು:

(₹.ಲಕ್ಷಗಳಲ್ಲಿ)

ಕ್ರ.ಸಂ	ವಿವರಗಳು	ಲೆಕ್ಕ ಶೀರ್ಷಿಕೆ	31.03.2020 ರಲ್ಲಿ ಇದ್ದಂತೆ	31.03.2019 ರಲ್ಲಿ ಇದ್ದಂತೆ
	(ಪ್ರತ್ಯೇಕವಾಗಿ ಉಲ್ಲೇಖಿಸಲ್ಪಡದಿದ್ದಲ್ಲಿ, ಅಸುರಕ್ಷಿತ ಆದರೆ ಸುಭದ್ರವೆಂದು ಪರಿಗಣಿಸಲಾಗಿರುವುದು)			
8.1	ಠೇವಣಿಗಳು ಇತರರೊಂದಿಗೆ, (*)	28.9337 28.9357	1,631.42	1,467.32
8.2	ಆಂಧ್ರ ಪ್ರದೇಶ್ ಪವರ್ ಜನರೇಷನ್ ಕಾರ್ಪೊರೇಷನ್ ಲಿಮಿಟೆಡ್, ಗೆ ಇರಿಸಿದ ಠೇವಣಿಗಳು (^)	28.9357	1,400.00	1,400.00
8.3	ಕರ್ನಾಟಕ ಸರ್ಕಾರದಿಂದ ಬರಬೇಕಾಗಿರುವ ಅನುದಾನ ($)	28.6257	21,738.00	21,738.00
8.4	ಕಂದಾಯ ಸಬ್ಸಿಡಿ/ಅನುದಾನ ಬರಬೇಕಾಗಿರುವುದು (%)	28.6117	1,862.73	1,862.73
	ಆಸ್ತಿ ಹೊಣೆ ಪಟ್ಟಿಗೆ ಸಾಗಿಸಲಾದ ಮೊತ್ತ		**26,632.15**	**26,468.04**

8.5 (*) ಇತರರೊಂದಿಗಿನ ಠೇವಣಿಗಳಲ್ಲಿ ಬಿ.ಎಸ್.ಎನ್.ಎಲ್ ನಲ್ಲಿ ಇರಿಸಿದ ಠೇವಣಿಗಳು, ನ್ಯಾಯಾಲಯಗಳು, ರೈಲ್ವೆ ಮತ್ತು ಪಿ.ಎಫ್ ಪ್ರಾಧಿಕಾರಗಳಿಗೆ ಪಾವತಿಸಿದ ಮೊತ್ತಗಳು ಒಳಗೊಂಡಿವೆ.

8.6 (^) ಕರ್ನಾಟಕ ಸರ್ಕಾರವು ತನ್ನ ಆದೇಶ ಸಂಖ್ಯೆ:ಇಎನ್ 58 ಪಿಎಸ್ಆರ್ 2013 ದಿನಾಂಕ 23.09.2013 ರಲ್ಲಿ, ವಿದ್ಯುತ್ ಸರಬರಾಜು ಕಂಪನಿಗಳಿಗೆ ಜುರಾಲಾ ಜಲ ವಿದ್ಯುತ್ ಯೋಜನೆಯ ವಿದ್ಯುತ್ ಬ್ಲಾಕ್ ವೆಚ್ಚದ ಶೇ 50 ರಷ್ಟು ಪಾವತಿಸಿ ₹7000 ಲಕ್ಷಗಳ ಸಮನಾದ ವಿತರಣೆಗೆ ಅನುಮೋದನೆ ನೀಡಿದ್ದು, ಈ ಮೊತ್ತವನ್ನು ಮೆ॥ಪಿಸಿಕೆಎಲ್ ಎಸ್ಕಾಂ ಗಳ ಪರವಾಗಿ ಆಂಧ್ರ ಪ್ರದೇಶ್ ವಿದ್ಯುತ್ ಉತ್ಪಾದನಾ ನಿಗಮ ನಿಯಮಿತಕ್ಕೆ ಪಾವತಿಸಲಾಗಿದೆ. ಚಾವಿಸನಿನಿಯ ಪಾಲು ₹1400 ಲಕ್ಷಗಳನ್ನು ಕರ್ನಾಟಕ ಸರ್ಕಾರದಿಂದ ಪಡೆದ ಇತರ ಠೇವಣಿ ಎಂದು ಪರಿಗಣಿಸಲಾಗುತ್ತದೆ ಮತ್ತು ಲೆಕ್ಕ ಶೇರ್ಷಿಕೆ 28.9357 ರ ಅಡಿಯಲ್ಲಿ ಆಂಧ್ರ ಪ್ರದೇಶ್ ವಿದ್ಯುತ್ ಉತ್ಪಾದನಾ ನಿಗಮ ನಿಯಮಿತಕ್ಕೆ ಠೇವಣಿ ಎಂದು ಪಾವತಿಸಲಾಗಿದೆ.

8.7 ($) ಮೇ 12, 2014 ರ ಜಕಾತಿ ಆದೇಶವು ಕರ್ನಾಟಕ ಸರ್ಕಾರದಿಂದ ಹೆಚ್ಚುವರಿ ಅನುದಾನವನ್ನು ₹12669 ಲಕ್ಷಗಳು ಮತ್ತು ಕೆಪಿಟಿಸಿಎಲ್ ಲೆಕ್ಕ ಪುಸ್ತಕಗಳಲ್ಲಿ ಕರ್ನಾಟಕ ಸರ್ಕಾರದಿಂದ ಹಿಂದಿನ ಅನುದಾನದ ಬಾಕಿ ಮತ್ತು ಕೆಪಿಸಿಎಲ್ ನ ಹಿಂದಿನ ವಿದ್ಯುತ್ ಖರೀದಿ ಬಾಕಿಗಳನ್ನು ಸರ್ಕಾರದ ಆದೇಶ ಸಂಖ್ಯೆ:ಇಎನ್ 67 ಪಿಎಸ್ ಆರ್ 2017 ದಿನಂಕ 31.07.2017 ರಂದು ₹9069 ಲಕ್ಷಗಳು ಹೆಚ್ಚುವರಿ ಅನುದಾನದ ಮೊತ್ತದಲ್ಲಿ ಒಳಗೊಂಡಿರುತ್ತದೆ.

8.8 (%) ಕರ್ನಾಟಕ ಸರ್ಕಾರದ ನಿರ್ದೇಶನದ ಪ್ರಕಾರ 31.03.2003 ರಂದು ಅಥವಾ ಅದಕ್ಕೂ ಮೊದಲು ತಮ್ಮ ವಿದ್ಯುತ್ ಬಿಲ್ ಪಾವತಿಸಿದ ಐ.ಪಿ ಸೆಟ್ ಗ್ರಾಹಕರಿಗೆ ಐ.ಪಿ ಸೆಟ್ ಬಾಕಿ ಮನ್ನಾ ಪ್ರಯೋಜನವನ್ನು ವಿಸ್ತರಿಸಿದ ಕಾರಣಕ್ಕಾಗಿ ₹1862.73 ಲಕ್ಷಗಳನ್ನು ಗ್ರಾಹಕರ ಖಾತೆಗೆ ಮರುಪಾವತಿಸಲಾಗಿದೆ. ಕರ್ನಾಟಕ ಸರ್ಕಾರದಿಂದ ಪಡೆಯಬಹುದಾದ ಬಾಕಿ ಎಂದು ಖಾತೆಗಳ ಪುಸ್ತಕಗಳಲ್ಲಿ ಇದನ್ನು ಲೆಕ್ಕೀಕರಿಸಲಾಗಿದೆ.

ಟಿಪ್ಪಣಿ 9 : ನಾಚಾಲ್ತಿ ತೆರಿಗೆ ಆಸ್ತಿಗಳು:

(₹.ಲಕ್ಷಗಳಲ್ಲಿ)

ಕ್ರ.ಸಂ	ವಿವರಗಳು	ಲೆಕ್ಕ ಶೀರ್ಷಿಕೆ	31.03.2020 ರಲ್ಲಿ ಇದ್ದಂತೆ	31.03.2019 ರಲ್ಲಿ ಇದ್ದಂತೆ
9.1	ಆದಾಯ ತೆರಿಗೆಗಾಗಿ ಮುಂಗಡ ಪಾವತಿ (ಸ್ವೀಕರಿಸುವ ಮೂಲದಲ್ಲಿ ತೆರಿಗೆ ಕಡಿತವನ್ನು ಸೇರಿಸಿ)	28.8217	356.92	340.90
	ಆಸ್ತಿ ಹೊಣೆ ಪಟ್ಟಿಗೆ ಸಾಗಿಸಲಾದ ಮೊತ್ತ		**356.92**	**340.90**

ಟಿಪ್ಪಣಿ 10 : ಇತರೆ ಪ್ರಸಕ್ತವಲ್ಲದ ಆಸ್ತಿಗಳು:

(₹.ಲಕ್ಷಗಳಲ್ಲಿ)

ಕ್ರ.ಸಂ	ವಿವರಗಳು	ಲೆಕ್ಕ ಶೀರ್ಷಿಕೆ	31.03.2020 ರಲ್ಲಿ ಇದ್ದಂತೆ	31.03.2019 ರಲ್ಲಿ ಇದ್ದಂತೆ
	(ಪ್ರತ್ಯೇಕವಾಗಿ ಉಲ್ಲೇಖಿಸಲ್ಪಡದಿದ್ದಲ್ಲಿ, ಅಸುರಕ್ಷಿತ ಆದರೆ ಸುಭದ್ರವೆಂದು ಪರಿಗಣಿಸಲಾಗಿರುವುದು)			
10.1	ಸರಬರಾಜುದಾರರು/ಗುತ್ತಿಗೆದಾರರಿಗೆ ಬಂಡವಾಳದ ಮುಂಗಡಗಳು	25.5017, 26.6027, 26.6028, 26.6037, 26.6038, 26.6067, 26.6077, 26.6087	15,378.45	13,590.17
10.2	ಕನಿಷ್ಟ ಪರ್ಯಾಯ ತೆರಿಗೆ ಜಮೆಯ ಮೇಲಿನ ಹಕ್ಕುಗಳು	28.8027	1,158.48	1,158.48
	ಒಟ್ಟು		**16,536.93**	**14,748.65**
	ಕಳೆಯಿರಿ:-ಪ್ರಸ್ತುತವಲ್ಲದ ಇತರೆ ಆಸ್ತಿಗಳಿಗೆ ಭತ್ಯೆ		-	-
	ಆಸ್ತಿ ಹೊಣೆ ಪಟ್ಟಿಗೆ ಸಾಗಿಸಲಾದ ಮೊತ್ತ		**16,536.93**	**14,748.65**

*ಸರಬರಾಜುದಾರರು ಮತ್ತು ಗುತ್ತಿಗೆದಾರರಿಗೆ ಮುಂಗಡವನ್ನು ಸಾಮಾಗ್ರಿಗಳ ಪೂರೈಕೆ/ಕಾಮಗಾರಿಗಳ ನಿರ್ವಹಣೆಗೆ ಬ್ಯಾಂಕ್ ಖಾತರಿಯ ವಿರುದ್ಧ ನೀಡಲಾಗಿದೆ.

ಟಿಪ್ಪಣಿ 11 : ತಪಶೀಲು:

(₹.ಲಕ್ಷಗಳಲ್ಲಿ)

ಕ್ರ.ಸಂ	ವಿವರಗಳು	ಲೆಕ್ಕ ಶೀರ್ಷಿಕೆ	31.03.2020 ರಲ್ಲಿ ಇದ್ದಂತೆ	31.03.2019 ರಲ್ಲಿ ಇದ್ದಂತೆ
11.1	ಉಗ್ರಾಣ ದಾಸ್ತಾನು ಲೆಕ್ಕ	22.6107	3,564.82	4,185.76
11.2	ಕೈಗಾವಲು ಸಾಮಗ್ರಿಗಳ ಲೆಕ್ಕ	22.6417	-	-
11.3	ಸಾಮಗ್ರಿಗಳ ಲೆಕ್ಕ-ತಾತ್ಕಾಲಿಕ ಕೆಲಸಕ್ಕೆ	22.7317	-	2.14
	ಆಸ್ತಿ ಹೊಣೆ ಪಟ್ಟಿಗೆ ಸಾಗಿಸಲಾದ ಮೊತ್ತ		**3,564.82**	**4,187.91**

ಟಿಪ್ಪಣಿ:

11.4 ದಾಸ್ತಾನು ಸಾಮಾಗ್ರಿಗಳ ಮೌಲ್ಯಮಾಪನ ವಿಧಾನವನ್ನು ಟಿಪ್ಪಣಿ ಸಂಖ್ಯೆ 2.7 ರಲ್ಲಿ ಮಹತ್ತರ ಲೆಕ್ಕಪತ್ರ ನೀತಿಯಲ್ಲಿ ವಿವರಿಸಲಾಗಿದೆ.

11.5 ಟಿಪ್ಪಣಿ ಸಂಖ್ಯೆ 25.2 ರಲ್ಲಿ ನಮೂದಿಸಿರುವಂತೆ ದಾಸ್ತಾನು ಸಾಮಾಗ್ರಿಗಳನ್ನು ವಿವಿಧ ಹಣಕಾಸು ಸಂಸ್ಥೆಗಳಲ್ಲಿ ಅಡಮಾನ ಮಾಡಲಾಗಿದೆ.

ಟಿಪ್ಪಣಿ 12 : ವ್ಯಾಪಾರ ಸಂಬಂಧಿತ ಸ್ವೀಕೃತಿಗಳು:

(₹.ಲಕ್ಷಗಳಲ್ಲಿ)

ಕ್ರ. ಸಂ	ವಿವರಗಳು	ಲೆಕ್ಕ ಶೀರ್ಷಿಕೆ	31.03.2020 ರಲ್ಲಿ ಇದ್ದಂತೆ	31.03.2019 ರಲ್ಲಿ ಇದ್ದಂತೆ
	ವಿದ್ಯುತ್ ಮಾರಾಟ ಬಾಬ್ತು ವಿವಿಧ ಬಾಕಿದಾರರು- ಎಲ್.ಟಿ, ಹೆಚ್.ಟಿ ಮತ್ತು ಇತರೆ (ಬಿಲ್ಲು ಮಾಡದ ಕಂದಾಯವನ್ನು ಹೊರತುಪಡಿಸಿ)			
12.1	ಸಂಪೂರ್ಣ ಸುರಕ್ಷಿತ ಮತ್ತು ಸುಭದ್ರವೆಂದು ಪರಿಗಣಿಸಲಾಗಿರುವುದು*	23 ನೇ ಶ್ರೇಣಿ	75,302.13	67,677.49
12.2	ಸಂಪೂರ್ಣ ಅಸುರಕ್ಷಿತ ಮತ್ತು ಸುಭದ್ರವೆಂದು ಪರಿಗಣಿಸಲಾಗಿರುವುದು		51,566.23	43,293.46
12.3	ಅನುಮಾನಾಸ್ಪದ ಬಾಕಿಗಳು		6,602.40	6,236.08
12.4	ವಿದ್ಯುತ್ ಮಾರಾಟ ಬಾಬ್ತು-ವಿದ್ಯುತ್ ತೆರಿಗೆ	23.3	7,723.35	6,557.29
	ಉಪ ಮೊತ್ತ		**1,41,194.12**	**123,764.32**
12.5	ಕಳೆ:- ಕಂದಾಯ ಬೇಡಿಕೆ ಹಿಂಪಡೆತಕ್ಕೆ ಅವಕಾಶ	23.8	1,284.25	1,429.98
12.6	ಕಳೆ:- ಗ್ರಾಹಕರಿಂದ ಬರಬೇಕಾದ ಅನುಮಾನಾಸ್ಪದ ಬಾಕಿಗಳು	23.9	6,602.40	6,236.08
	ಆಸ್ತಿ ಹೊಣೆ ಪಟ್ಟಿಗೆ ಸಾಗಿಸಲಾದ ಮೊತ್ತ		**1,33,307.47**	**116,098.26**

*ದಿನಾಂಕ:11.10.2007 ರಂದು ಕೆ.ಇ.ಆರ್.ಸಿ ರವರಿಂದ ಕರ್ನಾಟಕ ರಾಜ್ಯಪತ್ರದಲ್ಲಿ ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಡಿ/07/7 ದಿನಾಂಕ: 01.10.2007, ಕವಿನಿಆ (ಭದ್ರತಾ ಠೇವಣಿ) ಅಧಿನಿಯಮ 2007ರ ಪ್ರಕಾರ ಕಂಪನಿಯು 2 ತಿಂಗಳ ಬಿಲ್ ಮೊತ್ತದಷ್ಟು ಭದ್ರತಾ ಠೇವಣಿ ಇರದ ಸ್ಥಾವರಗಳಿಂದ ಹೆಚ್ಚುವರಿ ಭದ್ರತಾ ಠೇವಣಿಯನ್ನು ವಸೂಲಿ ಮಾಡುತ್ತಿದ್ದು 2020ಕ್ಕೆ ಕೊನೆಗೊಂಡ ಹಣಕಾಸಿನ ವರ್ಷದ

ಅಂತ್ಯಕ್ಕೆ ₹75302.13 ಲಕ್ಷ, ಮಾರ್ಚ್ 31,2019ರ ಅಂತ್ಯಕ್ಕೆ ₹67,677.49 ಲಕ್ಷ ಭದ್ರತಾ ಠೇವಣಿ ಇರುತ್ತದೆ. ಪ್ರಸಕ್ತ ವರ್ಷ-2020 ರವರೆಗೆ ಪಡೆಯಬಹುದಾದ ಮೊತ್ತ ₹6602.40 ಲಕ್ಷ, ಮಾರ್ಚ್31,2019ಕ್ಕೆ ₹6236.08 ಲಕ್ಷ ವಸೂಲಾಗದ ಮತ್ತು ಸಂಶಾಯಾಸ್ಪದ ಸಾಲಗಳು ಎಂಬುದಾಗಿ ಲೆಕ್ಕಪತ್ರಗಳಲ್ಲಿ ತೋರಿಸಲಾಗಿದೆ. ಉಳಿದ ವ್ಯಾಪಾರ ಸ್ವೀಕೃತಿಗಳನ್ನು ಡಿಸ್‌ಕನೆಕ್ಷನ್ ನಿಯಮಗಳನ್ನು ಜಾರಿಗೊಳಿಸಿ ವಸೂಲಿ ಮಾಡಲಾಗುವುದು. ಡಿಸ್‌ಕನೆಕ್ಟೆಡ್ ಸ್ಥಾವರಗಳಿಗೆ ಸಂಬಂಧಿಸಿದಂತೆ ಎಲ್ಲೆಲ್ಲಿ ಅನ್ವಯವಾಗುತ್ತದೋ ಅಲ್ಲಲ್ಲಿ ಬಾಕಿಯನ್ನು ಭೂ ಕಂದಾಯ ಎಂಬುದಾಗಿ ಪರಿಗಣಿಸಿ (ಬಾಕಿ ವಸೂಲಿ ಕಾಯಿದೆ 1976)ನ್ನು ಜಾರಿಗೊಳಿಸಿ ಬಾಕಿ ವಸೂಲಿ ಮಾಡಲಾಗುವುದು.

ಮಾರ್ಚ್-2020 ರ ಅಂತ್ಯದ ವೇಳೆಗೆ ಮೆ।ಮೈಷುಗರ್ ಲಿಮಿಟೆಡ್, ಮಂಡ್ಯ (ರಾಜ್ಯ ಪಿಎಸ್‌ಯು) ನಿಂದ ವಸೂಲಿ ಮಾಡಬಹುದಾದ ಒಟ್ಟು ಬಾಕಿ ₹1907.61 ಲಕ್ಷ ಮತ್ತು ಸರಬರಾಜು ನಿಯಮಗಳ ಪ್ರಕಾರ ₹823.56 ಲಕ್ಷ ಬಡ್ಡಿ ಸೇರಿದಂತೆ ಬಾಕಿ ವಸೂಲಿ ಮಾಡಲು ನಿಗಮ ಮುಂದಾಗಿದೆ.

ವ್ಯಾಪಾರ ಸಂಬಂಧಿತ ಸ್ವೀಕೃತಿಗಳಲ್ಲಿ 10 ಹೆಚ್.ಪಿ ಗಿಂತ ಕಡಿಮೆ ಇರುವ 31.07.2008 ರ ಹಿಂದಿನ ನೀರಾವರಿ ಪಂಪ್‌ಸೆಟ್ ಗ್ರಾಹಕರ ಬಾಕಿಯು ಒಳಗೊಂಡಿದೆ.

(₹.ಲಕ್ಷಗಳಲ್ಲಿ)

ವಿವರಗಳು	ಅಸಲು	ಬಡ್ಡಿ	ಒಟ್ಟು
ಅಂತಿಮ ಶಿಲ್ಕು 31.07.2008 ರವರೆಗೆ	33,158.00	10,478.00	43636.00
ಅಂತಿಮ ಶಿಲ್ಕು 31.03.2020 ರವರೆಗೆ	30,241.26	36,478.54	66,719.80

2014-15 ನೇ ಸಾಲಿನಿಂದ 10 ಹೆಚ್.ಪಿ ಗಿಂತ ಕಡಿಮೆ ಹೊರೆಯ ಪಂಪ್‌ಸೆಟ್ ಸ್ಥಾವರದ ಬಡ್ಡಿಯನ್ನು ಪರಿಗಣಿಸಿರುವುದಿಲ್ಲ.

ಟಿಪ್ಪಣಿ 13 : ನಗದು ಮತ್ತು ನಗದು ಸಮಾನಗಳು:

(₹.ಲಕ್ಷಗಳಲ್ಲಿ)

ಕ್ರ.ಸಂ	ವಿವರಗಳು	ಲೆಕ್ಕ ಶೀರ್ಷಿಕೆ	31.03.2020 ರಲ್ಲಿ ಇದ್ದಂತೆ	31.03.2019 ರಲ್ಲಿ ಇದ್ದಂತೆ
	ನಗದು ಮತ್ತು ನಗದು ಸಮಾನಗಳು:			
13.1	**ಬ್ಯಾಂಕುಗಳಲ್ಲಿರುವ ಶಿಲ್ಕುಗಳು-ಚಾಲ್ತಿ ಖಾತೆ**			
	ಬ್ಯಾಂಕುಗಳಲ್ಲಿರುವ ಶಿಲ್ಕುಗಳು(ಸಂಗ್ರಹಿಸಿದ)	24 ನೇ ಶ್ರೇಣಿ	152.34	456.55
	ಬ್ಯಾಂಕುಗಳಲ್ಲಿರುವ ಶಿಲ್ಕುಗಳು(ವಿತರಣೆ)	24 ನೇ ಶ್ರೇಣಿ	1,562.74	1,002.34
	ಇತರೆ ಖಾತೆಗಳಲ್ಲಿ (ಸಾಲಗಳು, ಖಾತರಿಗಳು, ಇತರೆ ಬದ್ಧತೆಗಳ ವಿರುದ್ಧ ಹಂಚುವ ಹಣ ಅಥವಾ ಭದ್ರತೆಯಂತೆ)	20.2807	1,874.63	5,506.52
13.2	ಕೈಯಲ್ಲಿರುವ ನಗದು	24.1107	13.17	280.70
13.3	ಕೈಯಲ್ಲಿರುವ ಚೆಕ್	24.1137	71.33	413.20
13.4	ಕೈಯಲ್ಲಿರುವ ಅಂಚೆ ಚೀಟಿ (ಸ್ಟ್ಯಾಂಪುಗಳು)	24.1207	0.93	0.81
13.5	ಸಿಬ್ಬಂದಿ ಪಡೆದಿರುವ ಕೈಹಣ	24.2107	6.05	5.81
13.6	ಮುಖ್ಯ ಕಛೇರಿಯಲ್ಲಿ ಸಾಗಾಣೆ ಖಾತೆ	24.5 & 24.6	-	-
	ಆಸ್ತಿ ಹೊಣೆ ಪಟ್ಟಿಗೆ ಸಾಗಿಸಲಾದ ಮೊತ್ತ		**3,681.19**	**7,665.94**

ಟಿಪ್ಪಣಿ 14 : ಸಾಲಗಳು ಮತ್ತು ಮುಂಗಡಗಳು:

(₹.ಲಕ್ಷಗಳಲ್ಲಿ)

ಕ್ರ.ಸಂ	ವಿವರಗಳು	ಲೆಕ್ಕ ಶೀರ್ಷಿಕೆ	31.03.2020 ರಲ್ಲಿ ಇದ್ದಂತೆ	31.03.2019 ರಲ್ಲಿ ಇದ್ದಂತೆ
	(ಪ್ರತ್ಯೇಕವಾಗಿ ಉಲ್ಲೇಖಿಸಲ್ಪಡದಿದ್ದಲ್ಲಿ, ಅಸುರಕ್ಷಿತ ಆದರೆ ಸುಭದ್ರವೆಂದು ಪರಿಗಣಿಸಲಾಗಿರುವುದು)			
14.1	ಪ್ರವಾಸ ಮುಂಗಡ	27.2027	18.26	7.69
14.2	ಹಬ್ಬದ ಮುಂಗಡ	27.2037	131.44	58.34
14.3	ವೈದ್ಯಕೀಯ ಮುಂಗಡ	27.2047	35.28	58.78
14.4	ಸಿಬ್ಬಂದಿ ವೆಚ್ಚಕ್ಕಾಗಿ ಮುಂಗಡ	27.2057	86.04	41.03
14.5	ಇತರರಿಗೆ ನೀಡಿದ ಸಾಲಗಳು ಮತ್ತು ಮುಂಗಡಗಳು	27.8007	30.00	-
	ಆಸ್ತಿ ಹೊಣೆ ಪಟ್ಟಿಗೆ ಸಾಗಿಸಲಾದ ಮೊತ್ತ		**301.02**	**165.83**

ಟಿಪ್ಪಣಿ 15 : ಇತರೆ ಚಾಲ್ತಿ ಆರ್ಥಿಕ ಆಸ್ತಿಗಳು

(₹.ಲಕ್ಷಗಳಲ್ಲಿ)

ಕ್ರ.ಸಂ	ವಿವರಗಳು	ಲೆಕ್ಕ ಶೀರ್ಷಿಕೆ	31.03.2020 ರಲ್ಲಿ ಇದ್ದಂತೆ	31.03.2019 ರಲ್ಲಿ ಇದ್ದಂತೆ
	(ಪ್ರತ್ಯೇಕವಾಗಿ ಉಲ್ಲೇಖಿಸಲ್ಪಡದಿದ್ದಲ್ಲಿ, ಅಸುರಕ್ಷಿತ ಆದರೆ ಸುಭದ್ರವೆಂದು ಪರಿಗಣಿಸಲಾಗಿರುವುದು)			
15.1	**ಕೆ.ಪಿ.ಟಿ.ಸಿ.ಎಲ್ ಹಾಗೂ ಇತರ ಎಸ್ಕಾಂಗಳಿಂದ ಬರಬೇಕಾಗಿರುವುದು**			
i)	ಮೆ॥ ಕೆ.ಪಿ.ಟಿ.ಸಿ.ಎಲ್ ನಿಂದ ಬರಬೇಕಾಗಿರುವುದು	28.8267, 28.8317, 28.8367, 28.8417, 28.8487, 28.8817, 28.8657, 28.8747	4,038.96	4,039.11
	ಕಳೆ: ಮೆ॥ ಕೆ.ಪಿ.ಟಿ.ಸಿ.ಎಲ್ ಗೆ ಪಾವತಿಸಬೇಕಾಗಿರುವುದು	42.2127, 42.2037, 42.2197, 42.2247, 42.2297	1,432.37	(1,448.02)
	ಮೆ॥ ಕೆ.ಪಿ.ಟಿ.ಸಿ.ಎಲ್ ನಿಂದ ನಿವ್ವಳ ಬರಬೇಕಾಗಿರುವುದು		**2,606.60**	**2,591.09**
ii)	ಮೆ॥ ಹೆಸ್ಕಾಂ ನಿಂದ ಬರಬೇಕಾಗಿರುವುದು	28.8397, 28.8837	720.19	720.19
	ಕಳೆ: ಮೆ॥ಹೆಸ್ಕಾಂ ಗೆ ಪಾವತಿಸಬೇಕಾಗಿರುವುದು		-	-

ಕ್ರ.ಸಂ	ವಿವರಗಳು	ಲೆಕ್ಕ ಶೀರ್ಷಿಕೆ	31.03.2020 ರಲ್ಲಿ ಇದ್ದಂತೆ	31.03.2019 ರಲ್ಲಿ ಇದ್ದಂತೆ
	ಮೆ॥ ಹೆಸ್ಕಾಂ ನಿಂದ ನಿವ್ವಳ ಬರಬೇಕಾಗಿರುವುದು		**720.19**	**720.19**
